ಗಿಡಿಂಗ್ಸ್‌ನ ಪ್ರಕಾರ ಸಮಾಜವಿಕಾಸ ಮೂಲಭೂತವಾಗಿ ವ್ಯಕ್ತಿಗಳ ಮತ್ತು ಗುಂಪುಗಳ ಶಕ್ತಿಸಾಮರ್ಥ್ಯಗಳ ಸಮತೋಲನ ಸ್ಥಿತಿಯನ್ನು ಅವಲಂಬಿಸಿದೆ. ಈ ಸಮತೋಲನ ಸ್ಥಿತಿ ಜಡವಾದುದಲ್ಲ. ಅದು ಮಾನವನ ನಿರಂತರ ಪ್ರಯತ್ನದ ಪರಿಣಾಮವಾಗಿ ಚಲನಾತ್ಮಕ ಸಮತೋಲನವನ್ನು ಹೊಂದುತ್ತದೆ. ಸಮಾಜದಲ್ಲಿ ವ್ಯಕ್ತಿಗಳೆಲ್ಲ ಸಾಮರ್ಥ್ಯ ಮತ್ತು ಸ್ಥಾನಗಳಲ್ಲಿ ಸಮತೋಲ ಇದ್ದರೆ, ಆಗ ಸಮಾಜದಲ್ಲಿ ಆಂತರಿಕ ನ್ಯಾಯ ಮತ್ತು ವ್ಯವಸ್ಥೆ ಸ್ಥಾಪಿತವಾಗುತ್ತದೆ. ಈ ಸಮತೋಲ ರಾಷ್ಟ್ರೀಯ ಜೀವನದಲ್ಲಿ ಸ್ಥಾಪಿತವಾದರೆ ಅಂತರರಾಷ್ಟ್ರೀಯ ಶಾಂತಿಗೆ ಸಹಾಯಕವಾಗುತ್ತದೆ.

ಗಿಡಿಂಗ್ಸ್‌ನ ಸುಪ್ರಸಿದ್ಧ ಗ್ರಂಥವಾದ ಸಮಾಜಶಾಸ್ತ್ರ ತತ್ತ್ವಗಳು ಎಂಬುದು 1896ರಲ್ಲಿ ಪ್ರಕಟವಾಯಿತು. ಈ ಪುಸ್ತಕ ಏಳು ಭಾಷೆಗಳಲ್ಲಿ ಭಾಷಾಂತರಗೊಂಡಿದೆ. 1922ರಲ್ಲಿ ಮಾನವ ಸಮಾಜದ ತತ್ತ್ವಗಳ ಅಧ್ಯಯನಗಳನ್ನು ಕುರಿತ ಸ್ಟೆಡೀಸ್ ಇನ್ ದಿ ಥಿಯೊರಿ ಆಫ್ ಹ್ಯೂಮನ್ ಸೊಸೈಟಿ ಎಂಬ ಪುಸ್ತಕ ಪ್ರಕಟವಾಯಿತು. ಈ ಎರಡು ಪುಸ್ತಕಗಳಲ್ಲಿ ಗಿಡಿಂಗ್ಸ್‌ನ ಸಮಾಜಶಾಸ್ತ್ರದ ತತ್ತ್ವಗಳು ಸಮಗ್ರವಾಗಿ ನಿರೂಪಿತವಾಗಿವೆ. ಆತನ ಪ್ರಕಾರ ಸಾಮಾಜಿಕ ಜೀವನ ಮಾನವನ ಸಾಮಾನ್ಯ ಸ್ವಭಾವದ ಅರಿವಿನಿಂದುಂಟಾದ ತದೇಕ ಪ್ರಜ್ಞೆಯ ಫಲ. ಮಾನವನ ಸಾಮಾಜಿಕ ಜೀವನ ಕೇವಲ ನೈಸರ್ಗಿಕವೇ ಹೊರತು ಸಾಮೂಹಿಕ ಚರ್ಯೆ ಎಂಬ ಮೂಲ ಪ್ರವೃತ್ತಿಯ ಪರಿಣಾಮವಲ್ಲ. ಅದು ಮಾನವನಲ್ಲಿರುವ ಮಾನಸಿಕ ಪ್ರಕ್ರಿಯೆಗಳ ಪರಿಣಾಮ. ಒಂದು ಗೊತ್ತಾದ ಉದ್ದೀಪನಕ್ಕೆ ಇಬ್ಬರು ಅಥವಾ ಹೆಚ್ಚು ಜನರು ಏಕರೀತಿಯ ಅನುಕ್ರಿಯೆಗಳನ್ನು ತೋರಿಸುತ್ತಾರೆ. ಇದೇ ತದೇಕ ಪ್ರಜ್ಞೆಗೆ ಅಗತ್ಯವಾದ ಮೂಲಾಧಾರ. ಒಂದು ಗೊತ್ತಾದ ಉದ್ದೀಪನಕ್ಕೆ ಏಕರೂಪವಾದ ಅನುಕ್ರಿಯೆ ಇದ್ದರೆ, ಆಗ ಸಮಾಜದಲ್ಲಿ ಐಕ್ಯ ಏರ್ಪಡುತ್ತದೆ. ಒಂದು ಉದ್ದೀಪನಕ್ಕೆ–ಅದು ಸಾಮಾಜಿಕ ಮೌಲ್ಯವಾಗಿರಬಹುದು. ಒಂದು ಅಭಿಪ್ರಾಯವಾಗಿರ ಬಹುದು–ವಿವಿಧ ಅನಿಕ್ರಿಯೆಗಳಿದ್ದರೆ ಸ್ಪರ್ಧೆ ಸಂಘರ್ಷಣೆ ಮೊದಲಾದವು ಉದ್ಭವವಾಗುತ್ತವೆ. ಸಾಮಾಜಿಕ ಜೀವನದಲ್ಲಿ ಮಾನಸಿಕ ಪ್ರಕ್ರಿಯೆಗಳಿಗೆ ಹೆಚ್ಚಿನ ಪ್ರಾಮುಖ್ಯ ಕೊಡುವ ಅಮೆರಿಕ ಸಂಯುಕ್ತಸಂಸ್ಥಾನಗಳ ಸಮಾಜಶಾಸ್ತ್ರ ಪರಂಪರೆಗೆ ಗಿಡಿಂಗ್ಸ್‌ನ ಬರೆವಣಿಗೆಗಳೂ ಸ್ಫೂರ್ತಿಯನ್ನಿತ್ತಿವೆ ಎಂಬುದು ನಿಜವಾದ ಮಾತು.

ಗಿಡಿಂಗ್ಸ್ ಮೂಲಸಂಕಲ್ಪಾನುಸಾರವಾದ ಜಗದ್ವಿಕಾಸವಾದವನ್ನು ಅನುಮೋದಿಸಿ, ವೈಜ್ಞಾನಿಕ ಅಭಿವೃದ್ಧಿ ಮಾನವನ ಸಮಾಜವಿಕಾಸವನ್ನು ಉತ್ಕೃಷ್ಟವೆಡೆಗೆ ತೆಗೆದುಕೊಂಡು ಹೋಗುವುದೆಂಬ ಆಶಾಭಾವನೆಯನ್ನು ಹೊಂದಿದ್ದ.

ದಿ ಸೈಂಟಿಫಿಕ್ ಸ್ಟಡಿ ಆಫ್ ಹ್ಯೂಮನ್ ಸೊಸೈಟಿ (1924), ಡೆಮಾಕ್ರಸಿ ಅಂಡ್ ಎಂಪೈರ್ (1900). ವೆಸ್ಟರ್ನ್ ಹೆಮಿಸ್ಫಿಯರ್ ಇನ್ ದಿ ವರ್ಲ್ಡ್ ಆಫ್ ಟುಮಾರೊ (1915), ದಿ ರೆಸ್ಪಾನ್ಸಿಬಲ್ ಸ್ಟೇಟ್ (1918), ದಿ ಮೈಟಿ ಮೆಡಿಸನ್ (1930), ಸಿವಿಲಿಜೇಷನ್ ಅಂಡ್ ಸೊಸೈಟಿ (1932)– ಇವು ಗಿಡಿಂಗ್ಸ್‌ನ ಇತರೆ ಗ್ರಂಥಗಳು. (ಎಚ್.ಎಂ.ಎಸ್.)

**ಗಿಡುಗ :** ಫಾಲ್ಕನಿಫಾರ್ಮೀಸ್ ಗಣದ ಫಾಲ್ಕನಿಡೀ ಕುಟುಂಬಕ್ಕೆ ಸೇರಿದ ಒಂದು ಹಿಂಸ್ರಪಕ್ಷಿ (ಫಾಲ್ಕನ್, ಹಾಕ್). ಡೇಗೆ ಇದರ ಪರ್ಯಾಯ ನಾಮ. ಹದ್ದು, ರಣಹದ್ದು, ಗರುಡ, ಆಸ್ಪ್ರೆ ಮುಂತಾದ ಹಕ್ಕಿಗಳಿಗೆ ಬಲು ಹತ್ತಿರದ ಸಂಬಂಧಿ. ಕ್ಯಾರಕ್ಯಾರ, ಫಾಲ್ಕೊ, ಮೈಕ್ರೊಹೀರ್ಯಾಕ್ಸ್ ಮುಂತಾದ ಜಾತಿಗಳಿಗೆ ಸೇರಿದ ಪ್ರಭೇದಗಳಿಗೆಲ್ಲ ಗಿಡುಗ ಎಂಬ ಹೆಸರೇ ಅನ್ವಯವಾಗುತ್ತದೆ. ಗಿಡುಗಗಳ ಗಾತ್ರಗಳಲ್ಲಿ ಭಿನ್ನತೆ ಉಂಟು. ಕೆಲವು ಕೇವಲ 16 ಸೆಂಮೀ ಉದ್ದವಿದ್ದರೆ (ಫಾಲ್ಕೊನೆಟ್ಸ್) ಇನ್ನು ಕೆಲವು 60 ಸೆಂಮೀ ಉದ್ದವಿರುವುದುಂಟು (ಉದಾಹರಣೆಗೆ ಉತ್ತರ ಮೇರುವಿನ ತಂಡ್ರಾಪ್ರದೇಶದಲ್ಲಿರುವ ಜರ್‌ಫಾಲ್ಕನ್). ಎಲ್ಲ ಗಿಡುಗಗಳೂ ಹಗಲಿನಲ್ಲಿ ಮಾತ್ರ ಬೇಟೆಯಾಡುತ್ತವೆ. ಇವುಗಳ ಕೊಕ್ಕು ಚೂಪಾಗಿ, ಬಲವಾಗಿ ಕೊಕ್ಕೆಯಂತೆ ಬಾಗಿದೆ. ಕೊಕ್ಕಿನ ಬುಡದಲ್ಲಿ ಮೇಲೆ ಮಾಂಸಲವಾದ ಸೆರೆ ಎಂಬ ಸಂವೇದನೀಯ ಚರ್ಮವಿದೆ. ನಾಸಿಕ ರಂಧ್ರಗಳು ಹೊರಕ್ಕೆ ತೆರೆಯುವುದು ಇದರ ಮೇಲೆಯೇ. ರೆಕ್ಕೆಗಳು ಬಲಯುತವಾಗಿಯೂ ದೇಹದ ಗಾತ್ರಕ್ಕೆ ಹೋಲಿಸಿದರೆ ಉದ್ದವಾಗಿಯೂ ಇವೆ. ಇವುಗಳ ತುದಿ ಬಲು ಚೂಪು. ಕಾಲಿನ ಹರಡು ಭಾಗದಲ್ಲಿ ಗರಿಗಳಿಲ್ಲ. ತೊಡೆಯ ಭಾಗ ಮಾತ್ರ ಸಡಿಲವಾದ ಗರಿಗಳಿಂದ ಆವೃತವಾಗಿದ್ದು ಒಂದು ರೀತಿಯ ಬಿಗಿಚಡ್ಡಿ ಧರಿಸಿದಂತೆ ಕಾಣುತ್ತದೆ.



ಒರಟುಕಾಲಿನ ಗಿಡುಗ

ರೆಂಬೆಗಳನ್ನು ಹಿಡಿಯಲು ಅನುಕೂಲವಾಗುವಂತೆ ಕಾಲಿನ ಬೆರಳು ಹಿಂದಕ್ಕೆ ತಿರುಗಿದೆ. ಬೆರಳುಗಳಲ್ಲಿ ಉದ್ದವಾದ ನಖಗಳಿವೆ.

ಅತ್ಯಂತ ಬಲಯುತವಾದ ಹಾಗೂ ವೇಗವಾದ ಹಾರಾಟಕ್ಕೆ ಗಿಡುಗ ಪ್ರಸಿದ್ಧವಾಗಿದೆ. ಹೀಗೆ ಹಾರಾಡುತ್ತಿರುವಾಗ ಅದರ ಚುರುಕು ದೃಷ್ಟಿಗೆ ಆಹಾರ ಪ್ರಾಣಿಯೇನಾದರೂ ಕಂಡರೆ ರಿವ್ವನೆ ಶರವೇಗದಿಂದ ಅದರ ಮೇಲೆರಗಿ ತನ್ನ ಅತ್ಯಂತ ಹರಿತವಾದ ನಖಗಳಿಂದ ಒಂದೇ ಏಟಿಗೆ ಅದನ್ನು ಹೊಡೆದು ಸಾಯಿಸುತ್ತದೆ. ಸತ್ತ ಪ್ರಾಣಿ ನೆಲಕ್ಕೆ ಬಿದ್ದಮೇಲೆ ಮತ್ತೊಮ್ಮೆ ಸುತ್ತುಹಾಕಿ ಕೆಳಕ್ಕಿಳಿದು ಅದನ್ನು ವಿರಾಮವಾಗಿ ತಿನ್ನುತ್ತದೆ. ಪ್ರಾಣಿಗಳ ಮೇಲೆ ಎರಗುವಾಗ ಇದರ ಹಾರಾಟದ ವೇಗ ಗಂಟೆಗೆ ಸು. 280 ಕಿಮೀ ಇರುತ್ತದೆ ಎಂದು ಅಂದಾಜು ಮಾಡಲಾಗಿದೆ. ಗಿಡುಗವೊಂದು ತನ್ನ ಎರೆಯ ಮೇಲೆ ಎರಗುವ ದೃಶ್ಯ ಪ್ರಕೃತಿಯಲ್ಲಿನ ಅತ್ಯಂತ ರೋಮಾಂಚಕ ನೋಟಗಳಲ್ಲೊಂದು.



ಜರ್‌ಫಾಲ್ಕನ್

ಗಿಡುಗಗಳು ಗೂಡುಗಳನ್ನು ಕಟ್ಟುವುದಿಲ್ಲ. ಕೆಲವು ನೆಲದ ಮೇಲೆಯೆ ಮೊಟ್ಟೆಗಳನ್ನಿಡುವು ವಾದರೆ ಇನ್ನು ಕೆಲವು ಬೆಟ್ಟಗಳ ಪ್ರಪಾತಗಳ ಚಾಚುಗಳಲ್ಲಿ ಮೊಟ್ಟೆ ಯಿಡುತ್ತವೆ. ಅನೇಕ ಸಲ ಕಾಗೆ, ಹದ್ದು ಮುಂತಾದವು ತ್ಯಜಿಸಿದ ಹಳೆಯ ಗೂಡುಗಳನ್ನು ಇವು ಬಳಸುತ್ತವೆ. ಮೊಟ್ಟೆಗಳ ಸಂಖ್ಯೆ 2–5ರ ವರೆಗೆ ವ್ಯತ್ಯಾಸವಾಗುತ್ತದೆ. ಕಾವು ಕೂಡುವ ಅವಧಿ ಸುಮಾರು 4 ವಾರಗಳು. ಕಾವುಕೂರುವ ಕೆಲಸ ಹೆಣ್ಣಿನದು. ಅಪರೂಪ ವಾಗಿ ಗಂಡು ಗಿಡುಗವೂ ಕಾವು ಕೂಡಬಹುದು. ಮರಿ ಗಿಡುಗಗಳು 4–6 ವಾರಗಳ ಅನಂತರ ಸ್ವತಂತ್ರ ಜೀವನ ನಡೆಸಲು ಸಮರ್ಥವಾಗುತ್ತವೆ.




ಬ್ಯೂಟಿಯೊ ಗಿಡುಗ

ಗಿಡುಗಗಳನ್ನು ಸಾಕಿ, ಶಿಕ್ಷಣ ಕೊಟ್ಟು ಜಿಂಕೆ, ಗೆಜ್ಜೆಲ್ ಮುಂತಾದ ಪ್ರಾಣಿಗಳ ಮತ್ತು ಕೆಲವು ಬಗೆಯ ಹಕ್ಕಿಗಳ ಬೇಟೆಗೆ ಬಳಸುವುದು ಹಿಂದಿನ ಕಾಲದಲ್ಲಿ ಜನಪ್ರಿಯ ವಿಹಾರವಾಗಿತ್ತು. ಇದರ ವಿವರಗಳಿಗೆ **ನೋಡಿ– ಗಿಡುಗ ಸಾಕಣೆ.** (ಎಚ್.ಬಿ.ಡಿ.)

ಗಿಡುಗಗಳಲ್ಲಿ ಮುಖ್ಯವಾದ ಬಗೆಗಳನ್ನು ಮುಂದೆ ವಿವರಿಸಲಾಗಿದೆ. 1 ಫಾಲ್ಕೊ ಬಯಾರ್ಮಿಕಸ್ ಜಗರ್ (ಲಗರ್ ಫಾಲ್ಕನ್) : ಭಾರತದಲ್ಲಿ ಕಾಣಬರುವ ಗಿಡುಗ ಇದು. ಕಾಡುಕಾಗೆಯ ಗಾತ್ರಕ್ಕಿದೆ. ಇದರ ದೇಹದ ಬಣ್ಣ ಬೂದಿಮಿಶ್ರಿತ ಕಂದು. ಹೊಟ್ಟೆಯ ಭಾಗದಲ್ಲಿ ಕಂದುಮಚ್ಚೆಗಳುಳ್ಳ ಬಿಳಿಯ ಬಣ್ಣ ಉಂಟು. ಬಯಲು ಭೂಮಿಯಲ್ಲಿ ಕೃಷಿ ಭೂಮಿಯ ಬಳಿ ಇದರ ವಾಸ. ಪಾರಿವಾಳಗಳೇ ಇದರ ಪ್ರಮುಖ ಆಹಾರ. ಇಲಿ, ಓತಿಕೇತ, ಮಿಡತೆ, ಕೊಡತಿ ಕೀಟ ಮುಂತಾದವನ್ನೂ ತಿನ್ನುತ್ತದೆ. ಮರಗಳ ಮೇಲೆ ಇಲ್ಲವೆ ಪ್ರಪಾತಗಳ ಸಂದುಗಳಲ್ಲಿ ಗೂಡುಕಟ್ಟಿ ಮೊಟ್ಟೆಯಿಡುತ್ತದೆ. ಗೂಡು ಕಟ್ಟುವ ಕಾಲ ಜನವರಿಯಿಂದ ಏಪ್ರಿಲ್‌ವರೆಗೆ.


ಕೂಪರ್ ಗಿಡುಗ

2 ಫಾಲ್ಕೊ ಚಿಕ್ವೇರ (ರೆಡ್ ಹೆಡೆಡ್‌ಮರ್ಲಿನ್) : ಭಾರತದಲ್ಲಿನ ಇನ್ನೊಂದು ಬಗೆಯ ಗಿಡುಗ. ಗಾತ್ರ ಪಾರಿವಾಳದಷ್ಟು. ಇದರ ದೇಹದ ಬೆನ್ನು ಭಾಗ ನೀಲಿಮಿಶ್ರಿತ ಬೂದು ಬಣ್ಣಕ್ಕೂ ಉದರಭಾಗ ಬೆಳ್ಳಗೂ ಇವೆ. ಪಕ್ಕಗಳಲ್ಲಿ ಕರಿಯಬಣ್ಣದ ಪಟ್ಟಿಗಳಿವೆ. ತಲೆ ಮಾತ್ರ ಕಗ್ಗಂದು ಬಣ್ಣದ್ದು. ಇದು ಕೂಡ ಬಯಲು ಪ್ರದೇಶಗಳ ನಿವಾಸಿ. ಗಂಡು ಹೆಣ್ಣುಗಳೆರಡೂ ಜೊತೆಯಾಗಿ ಆಹಾರವನ್ನು ಬೇಟೆಯಾಡುತ್ತವೆ. ಸಣ್ಣ ಪುಟ್ಟ ಹಕ್ಕಿಗಳು, ಇಲಿ, ಓತಿಕೇತ ಮುಂತಾದವು ಇದರ ಆಹಾರ. ದೊಡ್ಡ ಮರಗಳಲ್ಲಿ ಒರಟು ರೀತಿಯ ಗೂಡುಕಟ್ಟುತ್ತದೆ. ಇದು ಬರ್ಮ, ಶ್ರೀಲಂಕಾ ಮತ್ತು ಪಾಕಿಸ್ತಾನ ಗಳಲ್ಲೂ ಕಂಡುಬರುತ್ತದೆ.


ಕಪ್ಪುಕತ್ತಿನ ಗಿಡುಗ

3 ಫಾಲ್ಕೊ ಟಿನನ್‌ಕ್ಯುಲಸ್ (ಕೆಸ್ಟ್ರೆಲ್) : ಭಾರತದಲ್ಲಿ ಕಾಣಬರುವ ಮತ್ತೊಂದು ಗಿಡುಗ. ದೇಹದ ಬಣ್ಣ ಇಟ್ಟಿಗೆಗೆಂಪು; ತಲೆ ಮಾತ್ರ ಬೂದಿ ಬಣ್ಣಕ್ಕಿದೆ. ಹೊಟ್ಟೆಯಮೇಲೆ ಕಂದುಬಣ್ಣದ ಮಚ್ಚೆಗಳಿವೆ. ಹಿಮಾಲಯ ಪರ್ವತಗಳಲ್ಲಿ ವಾಸಿಸುವ ಇದು ಚಳಿಗಾಲದಲ್ಲಿ ಬಯಲು ಪ್ರದೇಶಗಳಿಗೆ ಬರುತ್ತದೆ. ಇದರ ಬೇಟೆಯ ರೀತಿ ವಿಶಿಷ್ಟವಾಗಿದೆ. ಹಾರಾಡುತ್ತಿರುವಾಗ ಆಗಿಂದಾಗ್ಗೆ ಅಂತರಿಕ್ಷದಲ್ಲಿ ಹಲವಾರು ಸೆಕೆಂಡುಗಳ ಕಾಲ ನಿಶ್ಚಲವಾಗಿ ನಿಂತಿದ್ದು ನೆಲದಮೇಲೆ ತನ್ನ ತೀಕ್ಷ್ಣ ದೃಷ್ಟಿಯನ್ನು ಹರಿಸುತ್ತದೆ. ಇಲಿ, ಹಲ್ಲಿ ಮುಂತಾದ ಆಹಾರ ಪ್ರಾಣಿಗಳೇನಾದರೂ ಕಣ್ಣಿಗೆ ಬಿದ್ದರೆ ಕ್ಷಣಾರ್ಧದಲ್ಲಿ ಅವುಗಳ ಮೇಲೆ ಸದ್ದುಮಾಡದೆ ಎರಗಿ ತನ್ನ ಚೂಪುನಖಗಳಿಂದ ಹಿಡಿದು ಹಾರಿಹೋಗುತ್ತದೆ. ಇದು ಪ್ರಪಾತಗಳ ಸಂದುಗಳಲ್ಲಿ ಕಡ್ಡಿ, ಹಳೆಬಟ್ಟೆ ಮುಂತಾದವನ್ನು ಬಳಸಿ ಒರಟುಗೂಡು ಕಟ್ಟುತ್ತದೆ.

4 ಆಕ್ಸಿಪಿಟರ್ ಬೇಡಿಯಸ್ (ಶಿಕ್ರ) : ಇದು ಕೂಡ ಭಾರತದಲ್ಲಿ ವಾಸಿಸುವಂಥದು. ಗಾತ್ರದಲ್ಲಿ ಪಾರಿವಾಳದಷ್ಟಿದೆ. ದೇಹದ ಬೆನ್ನುಭಾಗ ಬೂದುಮಿಶ್ರಿತ ನೀಲಿ. ಹೊಟ್ಟೆಭಾಗ ಬಿಳಿ. ಕಂದು ಬಣ್ಣದ ಪಟ್ಟೆಗಳಿವೆ. ಬಯಲು ಪ್ರದೇಶಗಳ ನಿವಾಸಿ ಇದು. ಸಾಮಾನ್ಯವಾಗಿ ಅಲ್ಲಿನ ದೊಡ್ಡ ಮರಗಳ ರೆಂಬೆಗಳಲ್ಲಿ ಅಡಗಿದ್ದು ಎರೆಪ್ರಾಣಿಗಳು ಕಂಡರೆ ಅವುಗಳ ಮೇಲೆರಗಿ ಕೊಲ್ಲುತ್ತದೆ. ಮಾವಿನ ಮರ ಮುಂತಾದ ದೊಡ್ಡ ಗಾತ್ರದ ಮರಗಳಲ್ಲಿ ಒರಟು ರೀತಿಯ ಗೂಡು ಕಟ್ಟಿ ಮೊಟ್ಟೆಯಿಡುತ್ತದೆ.


ಕಂದು ಗಿಡುಗ

5 ಫಾಲ್ಕೊ ಪೆರಿಗ್ರಿನಸ್ (ಪೆರಿಗ್ರಿನ್ ಫಾಲ್ಕನ್): ನ್ಯೂಜಿಲೆಂಡ್ ಬಿಟ್ಟು ಪ್ರಪಂಚದ ಉಳಿದ ದೇಶಗಳಲ್ಲೆಲ್ಲ ಇರುವ ಗಿಡುಗ ಇದು. ತನ್ನ ಗಾಂಭೀರ್ಯಕ್ಕೂ ಬೇಟೆಯಾಡುವ ಕುಶಲತೆಗೂ ಹೆಸರಾಗಿದೆ. ಗಿಡುಗ ಸಾಕಣೆಯಲ್ಲಿ ಬಳಸಲಾಗುವ ಗಿಡುಗಗಳಲ್ಲಿ ಇದು ಅತ್ಯಂತ ಮುಖ್ಯವಾದುದು.

6 ಫಾಲ್ಕೊ ರಸ್ಟಿಕಾಲಸ್ (ಜರ್‌ಫಾಲ್ಕನ್) : ಉತ್ತರ ಮೇರು ಪ್ರದೇಶಗಳ ನಿವಾಸಿ. ಗಿಡುಗಗಳಲ್ಲೆಲ್ಲ ಅತ್ಯಂತ ದೊಡ್ಡಗಾತ್ರದ್ದು. ರಾಜಮಹಾರಾಜರುಗಳು ಸಾಕುತ್ತಿದ್ದ ಗಿಡುಗಗಳಲ್ಲೊಂದು. *

**ಗಿಡುಗ ಸಾಕಣೆ :** ಗಿಡುಗ ಇಲ್ಲವೆ ಡೇಗ ಜಾತಿಯ ಪಕ್ಷಿಗಳನ್ನು ಹಿಡಿದು ಪಳಗಿಸಿ, ತರಬೇತಿ ನೀಡಿ ಅವನ್ನು ಛೂ ಬಿಟ್ಟು ಇತರ ಪಕ್ಷಿ, ಪ್ರಾಣಿಗಳ ಬೇಟೆಯಾಡುವ ಪದ್ಧತಿ (ಫ್ಯಾಲ್ಕನ್ರಿ). ಇದು ಅತ್ಯಂತ ಪ್ರಾಚೀನ ಕಾಲದಿಂದಲೂ ಎಂದರೆ, ಮಾನವ ಬರೆವಣಿಗೆಯನ್ನು ಕಲಿಯುವುದಕ್ಕೆ ಎಷ್ಟೋ ಕಾಲ ಮುಂಚಿನಿಂದಲೇ ಬಳಕೆಯಲ್ಲಿದೆ. ಡೇಗೆಗಾರ ಛೂ ಬಿಟ್ಟಾಗ ನುಗ್ಗಿ, ಎದುರಿಗಿನ ಪಕ್ಷಿ, ಇಲ್ಲವೆ ಪ್ರಾಣಿಯನ್ನು ಕೊಂದು ಇಲ್ಲವೆ ಗಾಯಗೊಳಿಸಿ ಅವನು ಕರೆಯುವವರೆಗೂ ಬೇಟೆಯ ಬಳಿಯೇ ಇದ್ದು ಅವನ್ನು ಬೇಟೆಗಾರನಿಗೆ ದೊರಕಿಸಿ ಕೊಡುವುದೇ ಈ ಗಿಡುಗಗಳ ಕೆಲಸ.

ಆರಂಭದಿಂದಲೂ ಗಿಡುಗ ಬೇಟೆ ಒಂದು ಸಾಹಸಿ ಕಾಲಕ್ಷೇಪವಾಗಿ ಬೆಳೆದು ಬಂತು. ಪ್ರ.ಶ.ಪೂ.722–705ರಲ್ಲಿ ಅಸ್ಸಿರಿಯದ ಎರಡನೆಯ ಸಾರ್‌ಗಾನನ ಕಾಲದಲ್ಲಿ ಗಿಡುಗಶಿಕ್ಷಣ ಜೀವಂತವಾಗಿದ್ದುದಕ್ಕೆ ದಾಖಲೆಗಳಿವೆ. ಪ್ರ.ಶ.875ರಲ್ಲಿದು ಯುರೋಪ್ ಮತ್ತು ಬ್ರಿಟಿಷ್ ದ್ವೀಪಗಳಲ್ಲಿ ಉನ್ನತಿಗೆ ಬಂತು. ಪೌರಸ್ತ್ಯ ದೇಶಗಳಲ್ಲಿ ವ್ಯಾಪಾರಕ್ಕಾಗಿ ಸಂಚರಿಸುತ್ತಿದ್ದ ವರ್ತಕರು, ಸಾಹಸಿ ಸಮುದ್ರಯಾನಿಗಳು ಹಾಗೂ ಧರ್ಮಪ್ರಚಾರಕರು, ತಾವು ಸಂಚರಿಸಿದ ದೇಶಗಳಲ್ಲಿ ಈ ಕ್ರೀಡೆಯ ಅಭಿವೃದ್ಧಿಯನ್ನು ಕಂಡು ತಾವು ಹಿಂತಿರುಗುವಾಗ ತಮ್ಮೊಂದಿಗೆ ಡೇಗೆಗಳನ್ನೂ ಡೇಗೆಗಾರನನ್ನೂ ಕೊಂಡೊಯ್ದು, ಅವರಿಗೆ ಆಶ್ರಯವಿತ್ತು ಯುರೋಪ್ ದೇಶಗಳಲ್ಲೂ ಈ ಕ್ರೀಡೆಯನ್ನು ಅಸ್ತಿತ್ವಕ್ಕೆ ತಂದರು. ಮಧ್ಯ ಯುಗದಲ್ಲಿದು ಪ್ರತಿಷ್ಠಿತ ವರ್ಗದವರ ಮನೋರಂಜನೆಯ ಕಾಲಕ್ಷೇಪವಾಗಿ ಪರಿಣಮಿಸಿತು.


ತಲೆ ಮುಸುಕು – ಸಾಕಿದ ಗಿಡುಗನಿಗೊಂದು ಅಲಂಕರಣ

ಗಿಡುಗಶಿಕ್ಷಣವೂ ಒಂದು ಸೂಕ್ಷ್ಮವಾದ ಕಲೆ. ಇದರ ಶಿಕ್ಷಕನಿಗೆ ಅಪಾರವಾದ ಬುದ್ಧಿಸೂಕ್ಷ್ಮತೆ, ತಾಳ್ಮೆ, ಶ್ರಮಸಹಿಷ್ಣುತೆ ಇರಬೇಕಾಗುತ್ತದೆ. ಎಲ್ಲ ಡೇಗೆಗಳೂ ಯಶಸ್ವೀ ಬೇಟೆಯ ಪಕ್ಷಿಗಳಾಗಲಾರವು. ಗಿಡುಗ, ಗೂಬೆ ಮತ್ತು ಹದ್ದುಗಳು ಸ್ವಭಾವತಃ ಹಿಂಸ್ರ ಪಕ್ಷಿಗಳೇನೋ ಸರಿ. ಅವೆಲ್ಲವೂ ಬೇಟೆಯಾಡಿಯೇ ಜೀವಿಸುತ್ತವೆ. ಆದರೆ ಅವೆಲ್ಲವೂ ಈ ಕೆಲಸವನ್ನು ನಿರ್ವಹಿಸಲಾರವು. ಡೇಗೆಗಾರ ಈ ಎಲ್ಲ ಪಕ್ಷಿಗಳ ಸ್ವಭಾವ ಲಕ್ಷಣಗಳನ್ನರಿತು, ವಿಶಿಷ್ಟ ವರ್ಗದ ಹಕ್ಕಿಮರಿಗಳನ್ನು ಮಾತ್ರ ಆಯ್ದು ಶಿಕ್ಷಣ ಕೊಡಬೇಕಾಗುತ್ತದೆ. ಪೆರಿಗ್ರಿನ್ ಡೇಗೆ ಪ್ರಪಂಚಾದ್ಯಂತ ವಾಸಿಸುತ್ತದೆ. ಇದು ಶ್ರೇಷ್ಠ ಬೇಟೆಯ ಪಕ್ಷಿಯೆಂದು ಹೆಸರುಗೊಂಡಿದೆ. ಡೇಗೆಗಾರ ಬಯಸುವ ಎಲ್ಲ ಲಕ್ಷಣಗಳೂ ಸ್ವಭಾವಗಳೂ ಗುಣಗಳೂ ಈ ಡೇಗೆಯಲ್ಲಿವೆ. ಇದು ಯಾವುದೇ ದೇಶದ ಹವಾ ವೈಪರೀತ್ಯಗಳನ್ನೂ ಸಹಿಸಿಕೊಂಡು ಹೊಂದಿಕೊಳ್ಳಬಲ್ಲದು. ಪಕ್ಷಿ ಬಲಿಷ್ಠ, ತೀವ್ರವಾಗಿ ಚಲಿಸಬಲ್ಲದು. ಅಗತ್ಯಕ್ಕನುಗುಣವಾಗಿ ಸೌಮ್ಯವಾಗಿಯೂ ಉಗ್ರವಾಗಿಯೂ ಇರಬಲ್ಲದು. ಡೇಗೆಗಳು ಶಿಕ್ಷಕನ ಮನಸ್ಸನ್ನು ಬಹುಬೇಗ ತಿಳಿಯಬಲ್ಲವುಗಳಾಗಿರುವುದರಿಂದ ಅವುಗಳ

ಶಿಕ್ಷಣ ಸುಲಭ. ಡೇಗೆಗಳಲ್ಲಿ ಹನ್ನೆರಡು ವರ್ಗಗಳಿವೆ. ಅವುಗಳಲ್ಲಿ ಎರಡು ವರ್ಗದ ಡೇಗೆಗಳು ಮಾತ್ರ ಈ ಕೆಲಸಕ್ಕೆ ಯೋಗ್ಯವೆನಿಸಿವೆ. ನೀಳ ರೆಕ್ಕೆಯ ಡೇಗೆ ಮತ್ತು ಗಿಡ್ಡರೆಕ್ಕೆಯ ಡೇಗೆಗಳು ವಿಶೇಷವಾಗಿ ಡೇಗೆಗಾರರ ಮನಸ್ಸನ್ನು ಸೆಳೆದಿವೆ.

ದೊಡ್ಡ ಹೆಣ್ಣು ಗಿಡುಗವನ್ನು ಮಾತ್ರ ಡೇಗೆಯೆಂದು ಕರೆಯುತ್ತಾರೆ. ಗಂಡು ಇದಕ್ಕಿಂತ ತುಂಬ ಚಿಕ್ಕದು. ಪೂರ್ಣ ಬೆಳೆದಿದ್ದು ಇನ್ನೂ ಹಾರಲು ಬಾರದಿರುವ ಡೇಗೆ ಮರಿಯನ್ನು ಐಯಸ್ (ಗೂಡಿನಲ್ಲಿನ ಮರಿ) ಎಂದೂ ಅರಣ್ಯದ ಮರದ ಪೊಟರೆಯಿಂದ ಹೊರತೆಗೆದ ಮರಿಯನ್ನು ದಾರಿ ಹೋಕ ಹಕ್ಕಿ ಎಂದೂ ಕರೆಯುತ್ತಾರೆ. ವಲಸೆ ಹೋಗುತ್ತಿದ್ದ ಗಿಡುಗನ ಮರಿಯಾಗಿದ್ದರಿಂದ ಎರಡನೆಯದಕ್ಕೆ ದಾರಿ ಹೋಕ ಹಕ್ಕಿ ಎಂಬ ಹೆಸರು ಬಂದಿದೆ. ಯುರೋಪು ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಐಯಸ್‌ಗಳ ಬಳಕೆ ಹೆಚ್ಚು. ಆಫ್ರಿಕ ಮತ್ತು ಭಾರತಗಳಲ್ಲಿ ಅರಣ್ಯ ಡೇಗೆಗಳನ್ನೇ ಹಿಡಿದು ಪಳಗಿಸುತ್ತಾರೆ.

ಡೇಗೆಗಾರ ತನ್ನ ಪ್ರದೇಶ ಪರಿಸ್ಥಿತಿಗಳಿಗನುಸಾರವಾಗಿ ಡೇಗೆಯ ಮರಿಗಳನ್ನು ಆರಿಸಬೇಕಾಗುತ್ತದೆ. ನೀಳ ರೆಕ್ಕೆಯ ಗಿಡುಗಗಳು ಬಯಲು ಪ್ರದೇಶದಲ್ಲೂ ಗಿಡ್ಡ ರೆಕ್ಕೆಯ ಗಿಡುಗಗಳು ಅರಣ್ಯ ಹಾಗೂ ಕುರುಚಲು ಗಿಡಗಳ ಪ್ರದೇಶಗಳಲ್ಲೂ ಚೆನ್ನಾಗಿ ಕೆಲಸ ನಿರ್ವಹಿಸುತ್ತವೆ. ನೀಳರೆಕ್ಕೆಯ ಗಿಡುಗ ಬಯಲು ಪ್ರದೇಶದಲ್ಲಿ ಅತಿ ಎತ್ತರದಲ್ಲಿ ಹಾರಾಡುತ್ತಿದ್ದು, ಶಿಕಾರಿ ಕಣ್ಣಿಗೆ ಬೀಳುತ್ತಿದಂತೆ ಶರವೇಗದಲ್ಲಿ ಆಕ್ರಮಣ ಮಾಡಿ ಕೊಲ್ಲುತ್ತದೆ. ಗಿಡ್ಡ ರೆಕ್ಕೆಯ ಡೇಗೆ ಎತ್ತರವಾದ ಮರಗಳ ಮೇಲೆ ಸುರಕ್ಷಿತ ಸ್ಥಳದಲ್ಲಿ ಕುಳಿತು ಬೇಟೆಗೆ ನಾಯಿ ಹಾಗೂ ಸೋಹುಗಾರರು ಎಬ್ಬಿಸಿದ ಪ್ರಾಣಿಗಳ ಮೇಲೆ ಒಂದೆ ಬಾರಿಗೆ ಎರಗಿ, ತನ್ನ ತೀವ್ರ ನಖಗಳಿಂದ ಅದನ್ನು ಹಿಡಿದು ಮೇಲಕ್ಕೆ ಹಾರಿ ನಿಧಾನವಾಗಿ ಕೆಳಕ್ಕೆ ತರುತ್ತದೆ.

ಹವ್ಯಾಸಿ ಡೇಗೆಗಾರ ಐಯಸ್‌ಗಳನ್ನೇ ಆಯ್ದುಕೊಂಡು ಶಿಕ್ಷಣ ನೀಡುತ್ತಾನೆ. ಅನುಭವಿ ಶ್ಯೇನಗಾರ ಕಾಡು ಗಿಡುಗವನ್ನು ಹಿಡಿದು ಪಳಗಿಸುತ್ತಾನೆ. ಕಾಡು ಗಿಡುಗವನ್ನು ಹಿಡಿಯುವುದು ಸ್ವಲ್ಪ ಕಷ್ಟದ ಕೆಲಸ. ಬಲೆಯೊಡ್ಡಿ ಅದನ್ನು ಹಿಡಿಯಬೇಕಾಗುತ್ತದೆ.



ತಲೆಮುಸುಕು ಧರಿಸಿರುವ ಸಾಕಿದ ಗಿಡುಗಗಳು

ಹಿಡಿದ ಅನಂತರ ಡೇಗೆಯ ಕಾಲಿನ ಚರ್ಮದ ಪಟ್ಟಿ ಕಟ್ಟಿ, ಮೃದುಚರ್ಮದ ಮುಖ ಕವಚ ತೊಡಿಸುತ್ತಾರೆ; ಕಾಲಿಗೆ ಕಿರುಗಂಟೆಗಳನ್ನು ಕಟ್ಟುತ್ತಾರೆ. ಈ ಗಂಟೆಗಳಿಂದ ಒಂದು ಅನುಕೂಲವಿದೆ. ಕಾಡಿನಲ್ಲಿ ಗಿಡುಗ ಬೇಟೆಗಾಗಿ ನುಗ್ಗಿದಾಗ ಅದು ಯಾವ ಕಡೆ ಇದೆ ಎಂಬುದನ್ನು ಗಂಟೆಯ ದನಿಯಿಂದ ತಿಳಿಯಲು ಸಾಧ್ಯ.

ಅನಂತರ ಡೇಗೆಯ ಶಿಕ್ಷಣ ಆರಂಭವಾಗುತ್ತದೆ. ಡೇಗೆಯ ಉಗುರುಗಳು ಅತಿ ಚೂಪಾಗಿರುವುದರಿಂದ ಶಿಕ್ಷಣ ಸಮಯದಲ್ಲಿ ಶಿಕ್ಷಕ ತನ್ನ ಕೈಗಳಿಗೆ ಚರ್ಮದ ಕವಚ ಧರಿಸುತ್ತಾನೆ. ಒಂದು ಕೈಯಲ್ಲಿ ಪಕ್ಷಿಯನ್ನು ಹಿಡಿದು ಮತ್ತೊಂದು ಕೈಯಿಂದ ಬೆನ್ನಮೇಲೆ ಮೃದುವಾಗಿ ಕೈಯಾಡಿಸುತ್ತ ಅದನ್ನು ಒಗ್ಗಿಸಿಕೊಳ್ಳುತ್ತಾನೆ. ತನ್ನ ಕೈಯಿಂದಲೇ ಅದಕ್ಕೆ ಆಹಾರ ಉಣಿಸುತ್ತಾನೆ. ಒಮ್ಮೊಮ್ಮೆ ಕಣ್ಣವಚವನ್ನು ತೆಗೆದು, ಮುಚ್ಚಿ ಮಾಡುತ್ತಾನೆ. ಬಹುಕಾಲ ಹೀಗೆ ಮಾಡಿದ ಮೇಲೆ ಡೇಗೆ ಅವನ ವಿಶಿಷ್ಟ ಭಾಷೆಗೆ, ಸಹವಾಸಕ್ಕೆ ಹೊಂದಿಕೊಳ್ಳುತ್ತದೆ. ಹೀಗೆ ಹೊಂದಿಕೊಂಡ ಮೇಲೆ ಕಣ್ಣವಚ ತೆಗೆದು ಆಹಾರ ಕೊಡುತ್ತಾನೆ. ಮುಂದೆ ಬೇಟೆಯ ಶಿಕ್ಷಣ ಆರಂಭವಾಗುತ್ತದೆ. ಹಸಿ ಮಾಂಸಕ್ಕೆ ಪಕ್ಷಿಯಾಕಾರದಲ್ಲಿ ಪುಕ್ಕಗಳನ್ನು ಸಿಕ್ಕಿಸಿ, ಉದ್ದವಾದ ತೊಗಲು ಭಾರವನ್ನು ಹೊಂದಿಸಿ ಡೇಗೆಯ ಎದುರಿಗೆ ಅದನ್ನು ಮೇಲೆ ಎಸೆದು ಡೇಗೆಯನ್ನು ಬಿಡುತ್ತಾನೆ. ಡೇಗೆ ಅದರತ್ತ ಹಾರಿ ಅದು ನೆಲಕ್ಕೆ ಬೀಳುವ ಮುಂಚೆಯೇ ಅದನ್ನು ಕಾಲುಗಳಿಂದ ಹಿಡಿದು ಶಿಕ್ಷಕನ ಬಳಿಗೆ ಬರುತ್ತದೆ. ಈ ರೀತಿ ಪೂರ್ಣ ಪಳಗಿದ ಮೇಲೆ ಅದು ಬೇಟೆಯಾಡಲು ತಯಾರಾಯಿತು ಎಂದು ಅರ್ಥ. ಸರಿಸುಮಾರಾಗಿ ಐಯಸ್ ಮರಿಗಳಿಗೂ ಇದೇ ಬಗೆಯ ಶಿಕ್ಷಣ ಕೊಡುತ್ತಾರೆ. ಇದು ಪ್ರಾಚೀನ ಕಾಲದಿಂದಲೂ ನಡೆದು ಬಂದಿರುವ ಶ್ಯೇನಶಿಕ್ಷಣ ಪದ್ಧತಿ.

ಆಧುನಿಕ ಜಗತ್ತಿನಲ್ಲಿ, ಬಂದೂಕ ಬಂದು, ಜನ ಬಯಲು ಪ್ರದೇಶಗಳನ್ನು ವಸತಿಗೋ ವ್ಯವಸಾಯಕ್ಕೋ ಆಕ್ರಮಣ ಮಾಡತೊಡಗಿದಾಗ ಹಾಗೂ ಪುರಾತನ ರಾಷ್ಟ್ರಗಳಲ್ಲುಂಟಾದ ಸಾಮಾಜಿಕ ಬದಲಾವಣೆಗಳಿಂದಾಗಿ ಶ್ಯೇನಶಿಕ್ಷಣ ಕೇಳಿ ಕಣ್ಮರೆಯಾಗುತ್ತ ಬಂತು. ಇದರಲ್ಲಿ ಅಲ್ಪಸ್ವಲ್ಪ ಆಸಕ್ತಿ ಮತ್ತೆ ಕುದುರಿದ್ದು ಎರಡನೆಯ ಮಹಾಯುದ್ಧದ ತರುವಾಯ. ಶ್ಯೇನಶಿಕ್ಷಣಪದ್ಧತಿ ಹಾಗೂ ಸಾಹಿತ್ಯಗಳ ಬಗ್ಗೆ ವಿಶೇಷ ಆಸಕ್ತಿಹೊಂದಿದ ಸಾವಿರದ ಐನೂರಕ್ಕಿಂತ ಹೆಚ್ಚು ಜನ ಈಗ ಸಂಯುಕ್ತ ಸಂಸ್ಥಾನ ಒಂದರಲ್ಲೇ ಇದ್ದಾರೆ. ಈ ಹೊಸ ಆಸಕ್ತಿಯಿಂದಾಗಿ ಯುರೋಪಿನ ವಿವಿಧ ರಾಷ್ಟ್ರಗಳಲ್ಲಿ ಹೊಸ ಹೊಸ ಡೇಗೆಗಾರ ಕ್ಲಬ್ಬುಗಳು ಹುಟ್ಟಿಕೊಂಡುವು. 1770ರಲ್ಲಿ ಬ್ರಿಟಿಷ್ ದ್ವೀಪಗಳಲ್ಲಿ ಫಾಲ್ಕನರ್ಸ್ ಸೊಸೈಟಿ ಹುಟ್ಟಿಕೊಂಡಿತು. ಆದರೆ ಇದರ ಮೇಲ್ವಿಚಾರಕ ಲಾರ್ಡ ಬರ್ನರ್ಸ್ ನಿಧನಾನಂತರ ಈ ಸೊಸೈಟಿಯೂ ಕಣ್ಮರೆಯಾಯಿತು. ಇಂಗ್ಲೆಂಡಿನ ಡೇಗೆಗಾರ ಕೇಂದ್ರ ಈಸ್ಟ್ ಆಂಗ್ಲಿಯ ಪ್ರದೇಶದಲ್ಲಿ ಹೆರಾನ್ ಪಕ್ಷಿಗಳ ಅಭಾವದಿಂದಾಗಿಯೂ ಬಂಜರು ಭೂಮಿಯ ಉಳುವಿಕೆಯಿಂದಾಗಿಯೂ ನೆದರ್‌ಲೆಂಡ್ಸ್‌ಗೆ ವರ್ಗಾವಣೆ ಗೊಂಡಿತು. 1839ರಲ್ಲಿ ನೆದರ್‌ಲೆಂಡ್ಸಿನ ದೊರೆ ಎರಡನೆಯ ವಿಲಿಯಂನ ಪೋಷಕತ್ವದಲ್ಲಿ ಲೂ ಹಾಕಿಂಗ್ ಕ್ಲಬ್ ಸ್ಥಾಪಿತವಾಯಿತು. ಈ ಕ್ಲಬ್ಬಿನ ಮೊದಲ ಎಂಟು ವರ್ಷಗಳ ಅವಧಿಯಲ್ಲಿ, ಸಂಸ್ಥೆಗೆ ಸೇರಿದ ಡೇಗೆಗಳು ಸಾವಿರದ ಐನೂರು ಶಿಕಾರಿಗಳನ್ನು ಹಿಡಿದಿದ್ದವಂತೆ. 1853ರ ಹೊತ್ತಿಗೆ ರಾಜಾಶ್ರಯವನ್ನು ಕಳೆದುಕೊಂಡ ಈ ಕ್ಲಬ್ಬು ಕಣ್ಮರೆಯಾಯಿತು.

ಕೆಲವು ವಿಲಾಸಿ ಡೇಗೆಗಾರರ ಹಾಗೂ ಉದ್ಯೋಗಸ್ಥರ ಸತತ ಪ್ರಯತ್ನದ ಫಲವಾಗಿ ಇಂಗ್ಲೆಂಡಿನಲ್ಲಿ ಮತ್ತೆ ಗಿಡುಗರಕ್ಷಕಸಂಘಗಳು ಹುಟ್ಟಿಕೊಂಡವು. 1864ರಲ್ಲಿ ವಿಲ್ಟ್‌ಶಿರ್ ನಗರ ಪ್ರದೇಶದ ರೂಕ್ ಪಕ್ಷಿಗಳನ್ನು ಬೇಟೆಯಾಡಲು ಓಲ್ಡ್ ಹಾಕಿಂಗ್ ಕ್ಲಬ್ ಸ್ಥಾಪಿತವಾಗಿ 1926ರ ವರೆಗೂ ನಡೆದು ಬಂತು. ಪುನಃ 1927ರಲ್ಲಿ ಬ್ರಿಟಿಷ್ ಫಾಲ್ಕನರ್ಸ್ ಕ್ಲಬ್ ಆರಂಭವಾಯಿತು. ಇಪ್ಪತ್ತನೆಯ ಶತಮಾನದ ದ್ವಿತಿಯಾರ್ಧದಲ್ಲಿ ಕ್ಲಬ್ಬಿನ ಸದಸ್ಯ ನೂರ ಐವತ್ತಕ್ಕಿಳಿಯಿತು. ಇವರಲ್ಲಿ ಅರ್ಧದಷ್ಟು ಜನ ಸಂಯುಕ್ತ ಸಂಸ್ಥಾನಗಳಿಗೆ ವಲಸೆ ಹೋದರು. ಅಲ್ಲಿಯೂ ಈ ಕೇಳಿಯನ್ನು ಸ್ವಲ್ಪ ಜನ ಉಳಿಸಿಕೊಂಡು ಬಂದರು.

ಕ್ರಮೇಣ ಬೇಟೆಯ ವಿಚಾರದಲ್ಲಿಯೇ ಜನತೆಯ ಅಭಿಪ್ರಾಯ ವ್ಯತ್ಯಾಸವಾಗುತ್ತ ಬಂತು. ವನ ಮತ್ತು ವನ್ಯಮೃಗಗಳ ಸಂರಕ್ಷಣೆಗೆ ಪ್ರಾಮುಖ್ಯ ಬಂತು. ಡೇಗೆಯ ಬೇಟೆಗೆ ಗುರಿಯಾಗಿದ್ದ ಹಲವಾರು ಪಕ್ಷಿ, ಪ್ರಾಣಿಗಳು ಸಾಮ್ರಾಜ್ಯದ ಸಂರಕ್ಷಕ ಪ್ರಾಣಿ ಪಕ್ಷಿಗಳ ಪಟ್ಟಿಯನ್ನು ಸೇರಿದವು. ಡೇಗೆಗಾರರು ಗೃಹ ಇಲಾಖೆಯ ರಹದಾರಿ ಪಡೆದೇ ಬೇಟೆಯಾಡ 'ಬೇಕೆಂಬ ನಿಯಮ ಜಾರಿಗೆ ಬಂತು. ಡೇಗೆಗಾರರ ಆಸಕ್ತಿ ಕಡಿಮೆಯಾಗಲು ಇದು ಪ್ರಮುಖ ಕಾರಣವಾಯಿತು. ಯುರೋಪಿನ ಹಲವಾರು ರಾಷ್ಟ್ರಗಳಲ್ಲಿ ಡೇಗೆಗಾರರ ಕ್ಲಬ್ಬುಗಳು ಅಸ್ತಿತ್ವದಲ್ಲಿವೆಯಾದರೂ ಅವುಗಳ ಕಾರ್ಯಕಲಾಪಗಳಿಗೆ ಅನೇಕ ಕಾರಣಗಳಿಂದಾಗಿ ಒಂದು ಮಿತಿ ಏರ್ಪಟ್ಟಿದೆ. ಫ್ರಾನ್ಸಿನ ಡೇ ಫ್ಯಾಂಪೇನ್ 1870ರಲ್ಲಿ ಕಣ್ಮರೆಯಾಯಿತು. ಅನಂತರ ಫ್ರಾನ್ಸಿನ ಡೇಗೆಗಾರರು ಅಸೋಸಿಯೇಷನ್ ನ್ಯಾಷನಲೆ ಡೆಸ್ ಫಾಕನಿಯರ್ಸ್ ಎಟ್ ಡೆಟೋರ್ಸಿರ್ಸ್ ಫ್ರಾಂಕಾಯ್ ಸಂಘದ ಮೂಲಕ ಒಂದು ಗೂಡಿದರು. ಜರ್ಮನಿಯಲ್ಲಿ ಆಯಟ್‌ಶರ್ ಫಾಲ್ಕೆನೋರ್ಡೆನ್ 1923ರಲ್ಲಿ ಆರಂಭವಾಗಿ ಇಂದಿಗೂ ಅಸ್ಥಿತ್ವದಲ್ಲಿದೆ. ಇಟಲಿ ಮತ್ತು ಆಸ್ಟ್ರಿಯಗಳಲ್ಲೂ ಇಂಥ ಕ್ಲಬ್ಬುಗಳು ಉಳಿದು ಬಂದಿವೆ.

ಸಿರೆನೇಯಿಕದ ಅರಬರು, ಪರ್ಷಿಯನ್ ಕೊಲ್ಲಿ ಹಾಗೂ ಸೌದೀ ಅರೇಬಿಯದ ತೈಲ ಶ್ರೀಮಂತ ಷೇಕರು ಇಂದಿಗೂ ಡೇಗೆ ಸಾಕಣೆ, ಶಿಕ್ಷಣ ಹಾಗೂ ಬೇಟೆಗಳಿಗೆ ಪ್ರೋತ್ಸಾಹ ಕೊಡುತ್ತಿದ್ದಾರೆ. ಭಾರತ ಮತ್ತು ಪಾಕಿಸ್ತಾನಗಳ ಪಂಜಾಬ್ ಹಾಗೂ

ವಾಯುವ್ಯ ಗಡಿ ಪ್ರದೇಶಗಳಲ್ಲಿ ಇಂದಿಗೂ ಡೇಗೆಗಳನ್ನು ಪಳಗಿಸಿ ಬಾತುಕೋಳಿಗಳನ್ನು ಹಿಡಿಯುತ್ತಾರೆ. ವಿಶ್ವವಿಖ್ಯಾತ ಗಿಡುಗಗಂಟೆಗಳನ್ನು ಭಾರತ ಪಾಕಿಸ್ತಾನಗಳ ಅಮೃತಸರ ಹಾಗೂ ಲಾಹೋರ್‌ಗಳಲ್ಲಿ ಇಂದಿಗೂ ತಯಾರಿಸುತ್ತಿದ್ದಾರೆ.

ಭರತಖಂಡದಲ್ಲಿ ಈ ಕ್ರೀಡೆ ಅತ್ಯಂತ ಪ್ರಾಚೀನ ಕಾಲದಿಂದಲೂ ಇದ್ದು, ಮೊಗಲರ ಮತ್ತು ರಜಪೂತ ದೊರೆಗಳ ಕಾಲದಲ್ಲಿ ರಾಜಾಶ್ರಯ ಪಡೆದಿತ್ತೆಂದು ತಿಳಿದುಬರುತ್ತದೆ. ಇಂದಿಗೂ ಬಹು ಮಂದಿ ಅರಣ್ಯವಾಸಿಗಳು, ಬೇಟೆಗಾರ ಜನಾಂಗಗಳು ಡೇಗೆ ಜಾತಿಯ ಹಲವು ಪಕ್ಷಿಗಳನ್ನು ಸಾಕಿ, ಬೇಟೆಯಾಡಿಸುವ ಕಸುಬನ್ನು ಉಳಿಸಿಕೊಂಡು ಬಂದಿದ್ದಾರೆ.

(ಜಿ.ಎಸ್.ಪಿ.ಎಂ.)

**ಗಿಣ್ಣು :** ಹಾಲನ್ನು ಗರಣೆಗಟ್ಟಿಸಿ, ದ್ರವಾಂಶವನ್ನು ತೆಗೆದುಹಾಕಿ ಉಳಿಯುವ ಹೆಪ್ಪಿನಿಂದ ತಯಾರಿಸಲಾಗುವ ಒಂದು ಆಹಾರ (ಚೀಸ್). ಗರಣೆ ಗಟ್ಟಿಸಲು ರೆನಿನ್ ಎಂಬ ಕಿಣ್ವವನ್ನೊ ಇಲ್ಲವೆ ಆಮ್ಲವನ್ನೂ ಅಥವಾ ಇವೆರಡರ ಮಿಶ್ರಣವನ್ನೊ ಬಳಸಲಾಗುತ್ತದೆ. ಕೆಲವು ಸಲ ವಿವಿಧ ಬಗೆಯ ಶಿಲೀಂಧ್ರ ಜಾತಿಯ ಸೂಕ್ಷ್ಮಜೀವಿಗಳನ್ನು ಬಳಸುವುದುಂಟು. ಗಿಣ್ಣು ತಯಾರು ಮಾಡುವ ಕಲೆ ಬಹು ಪ್ರಾಚೀನವಾದುದು. ಹಳೆ ಒಡಂಬಡಿಕೆಯಲ್ಲಿ ಇದರ ಉಲ್ಲೇಖವಿದೆ. ಇದರಿಂದ ಪ್ರಸಕ್ತಶಕದ ಆರಂಭಕ್ಕೆ ಸಾವಿರ ವರ್ಷಗಳ ಮೊದಲೇ ಗಿಣ್ಣು ಮಾಡುವುದನ್ನು ಒಬ್ಬ ಅರಬ್ಬೀ ಕುರುಬ ಕಂಡುಹಿಡಿದನೆಂದು ಹೇಳುವ ಹಳೆಯ ಕತೆಯೊಂದಿದೆ. ಪ್ರಾಚೀನ ರೋಮನರು, ಗ್ರೀಕರು ಈ ಕಲೆಯಲ್ಲಿ ನಿಷ್ಣಾತರಾಗಿದ್ದರಲ್ಲದೆ ಗಿಣ್ಣು ಬಹಳ ಪೌಷ್ಟಿಕ ಆಹಾರವೆಂಬುದನ್ನು ಕೂಡ ಕಂಡುಕೊಂಡಿದ್ದರು. ಪ್ರ.ಶ 1000ದ ವೇಳೆಗೆ ಯುರೋಪಿಯನರ ಆಹಾರದಲ್ಲಿ ಗಿಣ್ಣು ಒಂದು ಮುಖ್ಯ ಸ್ಥಾನವನ್ನು ಗಳಿಸಿಕೊಂಡಿತು. ಗಿಣ್ಣು ಇಷ್ಟು ಮುಖ್ಯ ಆಹಾರವಾಗಿದ್ದರೂ ಬಹಳ ವರ್ಷಗಳ ಕಾಲ ಇದರ ತಯಾರಿಕೆ ಗೃಹಕೈಗಾರಿಕೆ ಮಾತ್ರ ಆಗಿತ್ತು. ಕ್ರಮೇಣ ಸಾಕಾಣಿಕೆಯ ಸೌಲಭ್ಯ, ಹಾಲಿನ ಗುಣನಿಯಮತ್ರಣ ಸಾಧನಗಳು, ಗಿಣ್ಣು ಮಾಡುವ ಕಲೆಯಲ್ಲಿ ಉಂಟಾದ ಹೆಚ್ಚಿನ ಜ್ಞಾನ ಮತ್ತು ಯಾಂತ್ರಿಕ ಸಾಧನ–ಇವುಗಳ ಹೆಚ್ಚಳದಿಂದ ಗಿಣ್ಣು ಮಾಡುವುದು ಒಂದು ಪ್ರಮುಖ ಮತ್ತು ಲಾಭದಾಯಕ ಉದ್ಯಮವಾಯಿತು. ಗಿಣ್ಣು ತಯಾರಿಕೆಯಲ್ಲಿ ಬಹಳ ಮುಖ್ಯವಾದ ದೇಶಗಳು ಅಮೆರಿಕ ಸಂಯುಕ್ತಸಂಸ್ಥಾನ, ಫ್ರಾನ್ಸ್, ಇಟಲಿ, ಜರ್ಮನಿ, ನೆದರ್ಲೆಂಡ್ಸ್ ಮತ್ತು ಇಂಗ್ಲೆಂಡ್, ದಕ್ಷಿಣ ಅಮೆರಿಕದ ಬ್ರೆಜಿಲ್, ಅರ್ಜಂಟೀನಗಳಲ್ಲೂ ನ್ಯೂಜಿಲೆಂಡ್, ಸಿರಿಯ ಮುಂತಾದ ದೇಶಗಳಲ್ಲೂ ಗಿಣ್ಣು ತಯಾರಿಕೆಯ ಉದ್ಯಮ ಇದೆ.

**ಗಿಣ್ಣನ್ನು ತಯಾರಿಸುವ ವಿಧಾನ :** ಗಿಣ್ಣನ್ನು ತಯಾರಿಸುವ ಮುಖ್ಯೋದ್ದೇಶವೆಂದರೆ ಹಾಲಿಗೆ ಹೆಪ್ಪು ಹಾಕಿ ಅದರಲ್ಲಿರುವ ಪೌಷ್ಟಿಕಾಂಶಗಳನ್ನು ಉಳಿಸಿಕೊಳ್ಳುವುದು ಮತ್ತು ನೀರಿನ ಸ್ವಲ್ಪ ಭಾಗವನ್ನು ಹೊರಹಾಕುವುದು. ಗಿಣ್ಣನ್ನು ತಯಾರಿಸಲು ಹಸು, ಕುರಿ, ಮೇಕೆಗಳ ಹಾಲನ್ನೆ ಮುಖ್ಯವಾಗಿ ಉಪಯೋಗಿಸುವುದು. ಆದರೆ ಎಮ್ಮೆ, ಕುದುರೆ, ಲಾಮ, ಯಾಕ್ ಮುಂತಾದ ಪ್ರಾಣಿಗಳ ಹಾಲನ್ನೂ ಬಳಸಬಹುದು. ಗಿಣ್ಣು ತಯಾರಿಕೆಯ ಮೊದಲ ಹಂತ ಹಾಲನ್ನು ಗರಣೆಗಟ್ಟಿಸುವುದು. ಇದಕ್ಕಾಗಿ ರೆಸಿನ್ ಎಂಬ ಕಿಣ್ವವನ್ನು ಹಾಲಿಗೆ ಸೇರಿಸಲಾಗುತ್ತದೆ. ಹಾಲುಣ್ಣುವ ಕರುಗಳ ಜೀರ್ಣಾಂಗವ್ಯವಸ್ಥೆಯಲ್ಲಿನ ಭಾಗವಾದ ಅಬೊಮೇಸಂನಿಂದ (ನಾಲ್ಕನೆಯ ಇಲ್ಲವೆ ನಿಜವಾದ ಜಠರ) ಇದನ್ನು ಪಡೆಯಲಾಗುತ್ತದೆ. ಇದಕ್ಕೆ ರೆನೆಟ್ ಎಂಬ ಹೆಸರೂ ಉಂಟು. ಇದನ್ನು ಹಾಲಿಗೆ ಸೇರಿಸಿದಾಗ ಅದರಲ್ಲಿನ ಕೇಸೀನಿನ ಕಣಗಳು ಕ್ಯಾಲ್ಸಿಯಂ ಲವಣಗಳ ಸಾನ್ನಿಧ್ಯದಲ್ಲಿ ಒಂದುಗೂಡಿ ಹಾಲು ಗರಣೆಯಾಗುವಂತೆ ಮಾಡುತ್ತದೆ. ಇದರಿಂದ ಮೊಸರಿನಂತಾದ ಹಾಲಿನ ಗಟ್ಟಿಭಾಗ ದ್ರವಭಾಗದಿಂದ ಬೇರೆಯಾಗುತ್ತದೆ. ಗಟ್ಟಿಭಾಗದಲ್ಲಿ ಹಾಲಿನಲ್ಲಿದ್ದ ಕೊಬ್ಬು, ಕೇಸೀನ್, ಲ್ಯಾಕ್ಟೋಸ್, ಆಲ್ಬ್ಯುಮಿನ್ ಇವೆಲ್ಲವೂ ಉಳಿದಿರುತ್ತವೆ. ಉಷ್ಣತೆ, ಆಮ್ಲೀಯತೆ ಮತ್ತು ಕಲಾವಧಿ ಹಾಗೂ ರೆನೆಟ್ ಮತ್ತು ಆಮ್ಲಗಳ ಪ್ರಮಾಣ ಇವುಗಳನ್ನು ವ್ಯತ್ಯಾಸಗೊಳಿಸುವುದರಿಂದ ಗರಣೆಗಟ್ಟಿಸುವುದನ್ನೂ ಗರಣೆಯ ಸ್ವಭಾವವನ್ನೂ ಬದಲಾಯಿಸಬಹುದು. ಅನಂತರ ಅದರಿಂದ ದ್ರವಾಂಶವನ್ನು ತೆಗೆದುಹಾಕಿ ವಿವಿಧ ಬಗೆಯ ಸಂಸ್ಕರಣ ಕ್ರಿಯೆಗಳಿಗೆ ಒಳಪಡಿಸಲಾಗುತ್ತದೆ. ದ್ರವಾಂಶವನ್ನು ತೆಗೆಯಲು ಗರಣೆಯಾದ ಹಾಲನ್ನು ಕತ್ತರಿಸಿ, ಕಲಕಿ, ಬಿಸಿಮಾಡಿ, ಒತ್ತಡಕ್ಕೊಳಪಡಿಸಲಾಗುತ್ತದೆ. ಆಮೇಲೆ ಇದನ್ನು ಮಾಗಿಸಲಾಗುತ್ತದೆ. ಮಾಗುವ ಮೊದಲಿನ ರೂಪಕ್ಕೆ ಹೊಸ ಇಲ್ಲವೆ ಹಸಿರು ಗಿಣ್ಣು ಎಂದೂ ಅನಂತರದ ರೂಪಕ್ಕೆ ಮಾಗಿದ ಇಲ್ಲವೆ ಸಂಸ್ಕರಿಸಿದ ಗಿಣ್ಣು ಎಂದೂ ಹೆಸರು. ಮಾಗಿದ ಗಿಣ್ಣನ್ನು ತಿಂಗಳುಗಟ್ಟಲೆ ಕೆಡದಂತೆ ಇರಿಸಬಹುದು. ಮಾಗುವಾಗ ಗಿಣ್ಣು ಹಲವಾರು ಭೌತ, ರಾಸಾಯನಿಕ ಹಾಗೂ ಜೈವಿಕ ಬದಲಾವಣೆಗಳಿಗೆ ಒಳಗಾಗುತ್ತದೆ.

ಗಿಣ್ಣುಗಳಲ್ಲಿ ಸುಮಾರು 200ಕ್ಕೂ ಹೆಚ್ಚು ಬಗೆಗಳಿವೆ ಎಂದು ಹೇಳಲಾಗಿದೆ. ಆದರೆ ಇವೆಲ್ಲವನ್ನೂ ಸುಮಾರು 20 ಮುಖ್ಯ ಬಗೆಗಳಿಗೆ ಸೇರಿಸಬಹುದು. ಮುಖ್ಯವಾದ ಗಿಣ್ಣುಗಳನ್ನು ಮುಂದೆ ವಿವರಿಸಿದೆ.

**ಚೆಡ್ಡರ್ ಗಿಣ್ಣು :** ಸಾಮಾನ್ಯವಾಗಿ ಇದನ್ನು ಮಾಡಲು ಕಚ್ಚಾಹಾಲನ್ನು ಉಪಯೋಗಿಸುವುದು ವಾಡಿಕೆ. ಆದರೆ ಗಿಣ್ಣು ತಯಾರಿಕೆಯ ಕಾರ್ಯವಿಧಾನದ ಮೇಲೆ ಉತ್ತಮ ನಿಯಂತ್ರಣವನ್ನು ಸಾಧಿಸಲು ನಿಷ್ಕ್ರಿಮೀಕರಿಸಿದ ಹಾಲು ಉತ್ತಮವೆಂದು ಕಂಡುಬಂದಿದೆ. ಉಪಯೋಗಿಸುವ ಹಾಲಿನ ಸ್ವಲ್ಪ ಭಾಗ ಹಿಂದಿನ ರಾತ್ರಿಯಲ್ಲಿ ಹಿಂಡಿದುದಾಗಿರುತ್ತದೆ. ಅನಂತರ ಶೇ.0.8 ರಷ್ಟು ಲ್ಯಾಕ್ಟಿಕ್ ಆಮ್ಲವಿರುವ ಒಳ್ಳೆ ಹೆಪ್ಪನ್ನು ಹಾಕುತ್ತಾರೆ. ಇದರಲ್ಲಿ ಜಾಗ್ರತೆಯಾಗಿ ಬೆಳೆಯುವ ಜೀವಾಣುಗಳಿದ್ದು ಇವು ಹುಳಿಯನ್ನು ಬೇಗ ಹುಟ್ಟಿಸಿ ಅನಿಲಜನಕಗಳಾದ ಇತರ ಜೀವಾಣುಗಳನ್ನು ನಾಶ ಮಾಡುತ್ತವೆ. ಹೆಚ್ಚಿನ ವಸ್ತುವಿರುವ ಹಾಲಿನಲ್ಲಿ ಹುಳಿಯ ಭಾಗ ಶೇ.0.18–0.19 ರವರೆಗೆ (ಇದು ಪ್ರಾರಂಭದ ಗಾತ್ರಕ್ಕಿಂತ ಶೇ.03ರಷ್ಟು ಹೆಚ್ಚು). ಹೆಚ್ಚುವ ತನಕ ಸುಮಾರು $86^0$ ಫ್ಯಾ. ಉಷ್ಣತೆಯಲ್ಲಿಟ್ಟು ಬಳಿಕ ಅದಕ್ಕೆ ರೆನೆಟನ್ನು ಸೇರಿಸುತ್ತಾರೆ.

ರೆನೆಟನ್ನು ಸೇರಿಸಿ ಚೆನ್ನಾಗಿ ಕಲಸಿದ ಮೇಲೆ ಹಾಲು ಗರಣೆ ಕಟ್ಟುವವರೆಗೂ (ಅಂದರೆ ರೆನೆಟ್ ಸೇರಿಸಿದ ನಲವತ್ತು ನಲವತ್ತೈದು ಮಿನಿಟುಗಳವರೆಗೆ) ಅದನ್ನು ಕದಲಿಸದೆ ಹಾಗೆಯೇ $80^0$ ಫ್ಯಾ. ಉಷ್ಣತೆಯಲ್ಲಿಡುತ್ತಾರೆ. ಬಳಿಕ ಗರಣೆಯನ್ನು ಒಂದು $\frac{1}{8}$" ಗಾತ್ರದ ಘನಾಕೃತಿಯಲ್ಲಿ ನೇರವಾಗಿಯೂ ಅಡ್ಡವಾಗಿಯೂ ಇರುವ ಎರಡು ಅಲಗಿನ ಚಾಕುಗಳಿಂದ ಸಮಗಾತ್ರದಲ್ಲಿ ಕತ್ತರಿಸುತ್ತಾರೆ. ಈ ಹಂತದಲ್ಲಿ ಹುಳಿ ಕಡಿಮೆಯಾಗುತ್ತದೆ. ಇದು ಶೇ.0.12–0.14 ವರೆಗಿರಬಹುದು.

ಗರಣೆಯನ್ನು ನಿಧಾನವಾಗಿ ಕಲಕುತ್ತಿದ್ದು ತೊಟ್ಟಿಯ ಉಷ್ಣತೆಯನ್ನು ನಿಧಾನವಾಗಿ ಏರಿಸಲಾಗುತ್ತದೆ. ಇದರಿಂದ ಪ್ರತಿಯೊಂದು ಗರಣೆ ಹಳುಕೂ ನೀರನ್ನು ಕಳೆದುಕೊಂಡು ಗಟ್ಟಿಯಾಗುತ್ತದೆ. ಬ್ಯಾಕ್ಟೀರಿಯಗಳ ಚಟುವಟಿಕೆಯ ಪರಿಣಾಮವಾಗಿ ಹುಳಿ ಕ್ರಮೇಣ ಅಧಿಕವಾಗುತ್ತದೆ. ಉಷ್ಣತೆ $105^0$ ಫ್ಯಾ. ಆದಾಗ ದ್ರವಾಂಶದಲ್ಲಿ ಶೇ.0.20 ಹುಳಿಯಿರುತ್ತದೆ. ಈ ಹಂತದಲ್ಲಿ ದ್ರವಾಂಶವನ್ನು ಹೊರ ತೆಗೆದು ಗರಣೆಯನ್ನು ಜಡೆಗಟ್ಟುವುದಕ್ಕೆ (ಮ್ಯಾಟಿಂಗ್) ಬಿಡಲಾಗುತ್ತದೆ. ಹೀಗಾಗುವುದನ್ನು ಚೆಡ್ಡರಿಂಗ್ ಎನ್ನುತ್ತಾರೆ. ಬಳಿಕ ಗರಣೆಯಲ್ಲಿರುವ ಕೇಸೀನ್ ಕಣಗಳು ಒಟ್ಟುಗೂಡುವಂತೆ ಮಾಡಲು ಗರಣೆಯನ್ನು ಎತ್ತರವಾಗಿ ಗುಡ್ಡೆ ಹಾಕಲಾಗುತ್ತದೆ. ಅದನ್ನು ಒಂದು ಬಟ್ಟೆಯಲ್ಲಿ ಕಟ್ಟಿ ಅದರಲ್ಲಿರುವ ನೀರನ್ನು ಹಿಂಡಿ ಹೊರಬರಲು ಭಾರವನ್ನು ಅದರ ಮೇಲೆ ಹೇರುತ್ತಾರೆ. ಗರಣೆಗೆ ಈ ಹಂತದಲ್ಲಿ ಹಸಿರು ಗಿಣ್ಣು ಎಂದು ಹೆಸರು. ಇದರಲ್ಲಿ ಜಡೆಗಟ್ಟಿದ ಗರಣೆಯನ್ನು ಯಾಂತ್ರಿಕ ಸಾಧನದಿಂದ ಒಡೆದು ಅದಕ್ಕೆ ಶೇ.2 ಭಾಗದಷ್ಟು ಉತ್ತಮ ದರ್ಜೆಯ ಉಪ್ಪನ್ನು ಸೇರಿಸುತ್ತಾರೆ. ಉಪ್ಪು ಹಾಕಿದ ಗಿಣ್ಣನ್ನು ಮರದ ಅಥವಾ ಲೋಹದ ಸುರುಳಿಗಳಲ್ಲಿ ತುಂಬುತ್ತಾರೆ. ಇದರಿಂದ ಒಳ್ಳೆ ರೂಪ ಬರುವುದಲ್ಲದೆ ಅದರಲ್ಲಿರುವ ತೇವವೂ ಬಸಿದುಹೋಗುತ್ತದೆ. ಈ ಸುರುಳಿಯನ್ನು ಒಂದು ಯಂತ್ರದ ಒತ್ತುಗದಲ್ಲಿ (ಪ್ರೆಸ್)ಇಟ್ಟು ಕ್ರಮೇಣ ತೂಕವನ್ನು ಪೇರಿಸುತ್ತಾರೆ. ಹೀಗೆ ಒತ್ತಡದಲ್ಲಿ ಸುಮಾರು 48 ಗಂಟೆಗಳ ಕಾಲ ಇಟ್ಟಮೇಲೆ, ಸುರುಳಿಯಿಂದ ಗಿಣ್ಣಿನ ತುಂಡನ್ನು ಹೊರತೆಗೆದು ಅದರ ಮೇಲೆ ಬಿಸಿಬಿಸಿ ನೀರನ್ನು ಹುಯ್ಯುತ್ತಾರೆ. ಇದರಿಂದ ಅದರ ಹೊರಮೈ ಚೆನ್ನಾಗಿ ಪದರಗಟ್ಟುತ್ತದೆ. ಬಳಿಕ ಆ ರಾಶಿಗೆಲ್ಲ ಸೂಕ್ತ ರೂಪ ಕೊಡಲು ಅದನ್ನು ಬಿಗಿಯಾಗಿ ಕಟ್ಟಿಡಲಾಗುತ್ತದೆ. ಕೆಲದಿನಗಳು ಈ ರೀತಿ ಇಟ್ಟ ಬಳಿಕ ಗಿಣ್ಣಿನ ಕಟ್ಟನ್ನು ಕಳಚಿ, ಕರಗಿಸಿದ ಪ್ಯಾರಫಿನ್ನಿನಲ್ಲಿ ಅದ್ದಿ ಅದಕ್ಕೆ ಪ್ಯಾರಫಿನ್ನಿನ ಲೇಪ ಬರುವಂತೆ ಮಾಡುತ್ತಾರೆ. ಅನಂತರ ಮಾಗಿಸುವ ಕೋಣೆಯಲ್ಲಿ ಎರಡು ಮೂರು ತಿಂಗಳು ಅಥವಾ ಇನ್ನೂ ಹೆಚ್ಚುಕಾಲ ಇಡುತ್ತಾರೆ. ಆಗ ಇದರಲ್ಲಿನ ಪ್ರೋಟೀನುಗಳು, ಪೆಪ್‌ಟೈಡುಗಳಾಗಿ ಇಲ್ಲವೆ ಅಮಿನೋ ಆಮ್ಲಗಳಾಗಿ ಸಂಪೂರ್ಣವಾಗಿ ಒಡೆದು ಹೋಗಿ ವಿಶಿಷ್ಟವಾದ ಸುವಾಸನೆ, ರುಚಿ ಮತ್ತು ಮೈಯ ಹದ ಬರುತ್ತವೆ.

ಚೆಡ್ಡರ್ ಗಿಣ್ಣನ್ನು ತಯಾರು ಮಾಡುವ ವಿಧಾನಗಳನ್ನೇ ಮಿಕ್ಕ ಗಿಣ್ಣುಗಳ ತಯಾರಿಕೆಯಲ್ಲಿಯೂ ಸಾಮಾನ್ಯವಾಗಿ ಬಳಸಲಾಗುತ್ತದೆ. ಆದರೆ ಸಣ್ಣಪುಟ್ಟ ವಿವರಗಳಲ್ಲಿ, ಬ್ಯಾಕ್ಟೀರಿಯಗಳ ಬಗೆಯಲ್ಲಿ, ಗಿಣ್ಣನ್ನು ಮಾಗಿಸಲು ಉಪಯೋಗಿಸುವ ಯೀಸ್ಟ್ ಅಥವಾ ಬೂಷ್ಟುಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಗಳಿರಬಹುದು, ಅಷ್ಟೆ.

**ಮೃದು ಗಿಣ್ಣು :** ಕಾಟೇಜ್ ಗಿಣ್ಣು ಅಥವಾ ಸುರಟಿ ಗಿಣ್ಣು ಇಲ್ಲವೆ ಪಾನೀರ್, ಮುಂತಾದ ಮೃದು ಗಿಣ್ಣುಗಳ ತಯಾರಿಕೆಯಲ್ಲಿ ಹಾಲು ಗರಣೆಗಟ್ಟಿದ ಮೇಲೆ ಅದನ್ನು ಕತ್ತರಿಸಿ ಸಣ್ಣ ಸಣ್ಣ ಕುಕ್ಕೆಗಳಲ್ಲಿ ಪದರಪದರವಾಗಿ ಪೇರಿಸುತ್ತಾರೆ. ಪ್ರತಿಯೊಂದು ಗರಣೆಯ ಪದರದ ಮೇಲೂ ಸ್ವಲ್ಪ ಉಪ್ಪನ್ನು ಚಿಮುಕಿಸುತ್ತಾರೆ. ಸ್ವಲ್ಪ ಹೊತ್ತಾದ ಬಳಿಕ ಗರಣೆಯ ಪದರಗಳನ್ನು ಮೆಲ್ಲನೆ ತಿರುವಿಹಾಕುತ್ತಾರೆ. ಇದರಿಂದ ಅದಕ್ಕೆ ರೊಟ್ಟಿಯ ರೂಪ ಬರುತ್ತದೆ. ಈ ರೊಟ್ಟಿಗಳನ್ನು ಗರಣೆ ನೀರಿನಲ್ಲಿ ಅದ್ದುತ್ತಾರೆ. ಮಾಗಿಸುವ ಮತ್ತಾವ ವಿಧಾನವನ್ನೂ ಅನುಸರಿಸುವುದಿಲ್ಲ. ಇಂಥ ಗಿಣ್ಣುಗಳಲ್ಲಿ ತೇವ ಬೇಕಾದಷ್ಟಿರುತ್ತದೆ. ಹುಳಿಯಿರುವುದಿಲ್ಲ. ಇವನ್ನು ತಯಾರಿಸಿದ ಮೇಲೆ ಒಂದೆರಡು ದಿನಗಳು ಮಾತ್ರ ಸಂಗ್ರಹಿಸಿಡಬಹುದು.

**ಪರಿಷ್ಕೃತ ಗಿಣ್ಣು :** ಎರಡನೆಯ ಮಹಾಯುದ್ಧ ನಡೆಯುತ್ತಿದ್ದಾಗ ಮತ್ತು ಮುಂದಿನ ದಿನಗಳಲ್ಲಿ ಮತ್ತೊಂದು ಬಗೆಯ ಗಿಣ್ಣಿನ ತಯಾರಿಕೆ ಪ್ರಾರಂಭವಾಯಿತು. ಇದು ಡಬ್ಬಿಯೊಳಗೆ ಹಾಕಿಡುವಂಥ ಪರಿಷ್ಕೃತ ಚೀಸ್. ಸಹಜ ಚೀಸನ್ನು ಕಾಯಿಸುವುದೇ ಪರಿಷ್ಕರಣದ ಮುಖ್ಯ ಅಂಶ. ಒಂದು ಅಥವಾ ಹೆಚ್ಚಿನ ಬಗೆಯ ಗಿಣ್ಣುಗಳನ್ನು ಕುದಿಸಿ, ಕಲಸಿ ಹದಕ್ಕೆ ತರುವ ಒಂದು ಸೂಕ್ತ ಪದಾರ್ಥದೊಡನೆ ಬೆರಸಿ, ಮುದ್ದೆಮಾಡಿ ಒಂದು ಹೊಸತರದ ಗಿಣ್ಣನ್ನು ತಯಾರಿಸುವ ವಿಧಾನವಿದು.

ಪರಿಷ್ಕೃತ ಗಿಣ್ಣಿನ ಮೂಲವಸ್ತು ಸಾಮಾನ್ಯವಾಗಿ ಎರಡನೆಯ ದರ್ಜೆಯ ಗಿಣ್ಣು ಎನಿಸಿದ ಅರೆಗಟ್ಟಿ ಅಥವಾ ಗಟ್ಟಿಯಾಗಿರುವ ಗಿಣ್ಣು. ಗಿಣ್ಣಿನ ಹೊರ ಹೊದಿಕೆಯನ್ನು ಸೀಳುಗಳಾಗಿ ಕತ್ತರಿಸಿ ಪುಡಿ ಮಾಡುತ್ತಾರೆ. ಬಳಿಕ ನೀರಿನಲ್ಲಿ ಶೇಕಡ ಸುಮಾರು ಮೂರು ಭಾಗದಷ್ಟು ಸಾಂದ್ರತೆಯಿರುವ ಗಾತ್ರದಲ್ಲಿ ಸೋಡಿಯಂ ನೈಟ್ರೇಟ್ ಮತ್ತು ಡೈಸೋಡಿಯಂ ಫಾಸ್ಫೇಟ್ ಎಂಬ ವಸ್ತುಗಳನ್ನು ಕರಗಿಸಿ ಅದರಲ್ಲಿ ಗಿಣ್ಣಿನ ಪುಡಿಯನ್ನೂ ಎಳೆಯನ್ನೂ ಅದ್ದುತ್ತಾರೆ. ಅವನ್ನೆಲ್ಲ ಎಡಬಿಡದೆ ಕಲಕುತ್ತ ಕಾಯಿಸುತ್ತಾರೆ. ಪರಿಷ್ಕರಣದ ಈ ಹಂತದಲ್ಲಿ ಉತ್ಪನ್ನದ ಪಾಶ್ಚುರೀಕರಣ ಜರಗುತ್ತದೆ. ಈ ಹದಕ್ಕೆ ಬಂದಿರುವ ಪರಿಷ್ಕೃತ ಗಿಣ್ಣನ್ನು ಡಬ್ಬಿಗಳಲ್ಲಿ ಸಂಗ್ರಹಿಸಿಡಬಹುದಾಗಿದ್ದು ಇದು ಅನಿರ್ದಿಷ್ಟ ಕಾಲದವರೆಗೆ ಕೆಡದೆ ಇರುತ್ತದೆ.

**ಸ್ವಿಸ್ ಅಥವಾ ಎಮೆನ್‌ಥಾಲರ್ ಗಿಣ್ಣು :** ಇದೊಂದು ಗಟ್ಟಿ ಗಿಣ್ಣು. ಇದಕ್ಕೆ ಸ್ವಲ್ಪ ಸಿಹಿ ರುಚಿ ಉಂಟು. ಇದರಲ್ಲಿ ಅಲ್ಲಲ್ಲಿ 1"–3" ಅಂತರಕ್ಕೊಂದರಂತೆ ಅನೇಕ ರಂಧ್ರಗಳಿವೆ. ಇವಕ್ಕೆ ಕಣ್ಣುಗಳೆಂದು ಹೆಸರು. ಪ್ರತಿ ಕಣ್ಣೂ $\frac{1}{2}$" – $\frac{5}{8}$" ವ್ಯಾಸದ್ದಾಗಿದೆ. ಈ ಗಿಣ್ಣಿನ ತಯಾರಿಕೆ ಕ್ಯಾಂಟನ್ ಬೆರ್ನ್, ಎಮೆನ್‌ತಾಲ್ ಮತ್ತು ಸ್ವಿಟ್ಜರ್‌ಲೆಂಡುಗಳಲ್ಲಿ ಪ್ರಾರಂಭವಾದ್ದರಿಂದ ಇದಕ್ಕೆ ಈ ಹೆಸರು ಬಂದಿದೆ.

ಗಿಣ್ಣನ್ನು ದೊಡ್ಡ ತಾಮ್ರದ ಕಡಾಯಿಗಳಲ್ಲಿ ಮಾಡುತ್ತಾರೆ. ಶುದ್ಧವಾಗಿ ಬೆಳೆಸಿದ ಲ್ಯಾಕ್ಟೋಬ್ಯಾಸಿಲ್ಲೈ ಮತ್ತು ಸ್ಟ್ರೆಪ್ಟೋಕಾಕಸ್ ಥರ್‌ಮೋಫೈಲಸ್ ಎಂಬ ಜಾತಿಯ ಬ್ಯಾಕ್ಟೀರಿಯಗಳನ್ನು ಸೇರಿಸಿ ಲ್ಯಾಕ್ಟಿಕ್ ಆಮ್ಲ ರೂಪುಗೊಳ್ಳುವುದನ್ನು ನಿಯಂತ್ರಿಸುತ್ತಾರೆ. ಇದರಿಂದ ಮಾಗಿಸುವ ಹದವನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲು ಅನುಕೂಲವಾಗುತ್ತದೆ. ಕಣ್ಣುಗಳು ಹುಟ್ಟುವುದಕ್ಕಾಗಿಯೂ ರುಚಿಯನ್ನು ಹೆಚ್ಚಿಸುವುದಕ್ಕಾಗಿಯೂ ಶುದ್ಧವಾಗಿ ಬೆಳೆಸಿದ ಪ್ರೊಪಿಯೋನಿ–ಬ್ಯಾಕ್ಟೀರಿಯಂ ಷೆರ್‌ಮಾನಿಯೈ ಎಂಬುದನ್ನು ಬೆರೆಸುತ್ತಾರೆ. ಈಗ ರೆನೆಟಿನಿಂದ ಹೆಪ್ಪುಗಟ್ಟಿಸುರುವ ಹಾಲನ್ನು ಚೆಡ್ಡರ್ ಗಿಣ್ಣಿನ ತಯಾರಿಕೆಯಲ್ಲಿ ಹೇಗೋ ಹಾಗೆ ಕತ್ತರಿಸಲಾಗುತ್ತದೆ; ಮತ್ತು ಕಾಯಿಸುವುದಕ್ಕೆ ಮುಂಚೆ ಗರಣೆಯನ್ನು ಹಾರ್ಪ್ ಎಂಬ ವಿಶಿಷ್ಟವಾದ ಆಯುಧದಿಂದ ಗುಂಡಾಗಿ ತಿರುವಿ ಎರಡನೆಯ ಬಾರಿ ಕತ್ತರಿಸಿ ಬ್ರೇಕರ್ ಎಂಬ ಸಾಧನದಿಂದ ಗರಣೆಯ ಚೂರುಗಳನ್ನು ಗೋದಿ ಕಾಳಿನ ಗಾತ್ರಕ್ಕೆ ಒಡೆಯುತ್ತಾರೆ.

ಅನಂತರ ಅವು ಗಟ್ಟಿಯಾಗುವವರೆಗೂ ಕುದಿಸುತ್ತಾರೆ. ಬಳಿಕ ಕಡಾಯಿಯಲ್ಲಿನ ಗರಣೆ ನೀರನ್ನು ಚೆನ್ನಾಗಿ ಹೊರಳಿಸುತ್ತಾರೆ. ಇದರಿಂದ ಗರಣೆ ಶಂಕುವಿನ ಆಕಾರದ ಗುಡ್ಡೆಯಾಗುತ್ತದೆ. ಈ ರೀತಿ ಗುಡ್ಡೆಯಾದ ಗರಣೆಯನ್ನು ಒಂದು ವಸ್ತ್ರದ ಮೂಲಕ ಬೇರ್ಪಡಿಸಿ, ಸುರುಳಿಯೊಳಕ್ಕೆ ಹಾಕಿ ಒತ್ತುಯಂತ್ರದಲ್ಲಿಡುತ್ತಾರೆ. ಇಪ್ಪತ್ತು ನಾಲ್ಕು ಗಂಟೆಗಳಾದ ಬಳಿಕ ಗಿಣ್ಣಿಗೆ ಉಪ್ಪು ಹಾಕಿ ಮಗುಚಿ ಪುನಃ ಒತ್ತುಯಂತ್ರದಲ್ಲಿಡುತ್ತಾರೆ. ಎರಡು ದಿವಸಗಳಾದ ಮೇಲೆ ಗಿಣ್ಣನ್ನು ಉಪ್ಪು ನೀರಿನಲ್ಲಿ 1–4 ದಿವಸಗಳ ಕಾಲ ಇಡುತ್ತಾರೆ. ಬಳಿಕ ಅದನ್ನು 3–6 ತಿಂಗಳವರೆಗೆ ಸಂಸ್ಕರಿಸಲಾಗುತ್ತದೆ.

**ರಾಕ್‌ಫೋರ್ಟ್ ಗಿಣ್ಣು:** ಇದು ದಕ್ಷಿಣ ಫ್ರಾನ್ಸಿನ ರಾಕ್‌ಫೋರ್ಟಿನ ಗುಹೆಗಳಲ್ಲಿ ಮೊದಲು ತಯಾರಾಯಿತು. ಇದರ ಬಣ್ಣ ನೀಲಿ ಮತ್ತು ಹಸುರುಗಳ ಮಿಶ್ರಣವಾಗಿದ್ದು ಇದು ನೋಡುವುದಕ್ಕೆ ವಿಚಿತ್ರವಾಗಿ ಕಾಣುತ್ತದೆ. ಪೆನಿಸಿಲಿಯಂ ರಾಕೆಫೋರ್ಟಿ ಎಂಬ ಬೂಷ್ಟು ಇದಕ್ಕೆ ಹತ್ತಿಕೊಳ್ಳುವುದರಿಂದ ಈ ಬಣ್ಣಗಳು ಬರುತ್ತದೆ. ಮೊದಲು ಇದನ್ನು ಕುರಿಯ ಹಾಲಿನಿಂದ ಮಾಡುತ್ತಿದ್ದರು. ಆದರೆ ಅಮೆರಿಕದಲ್ಲಿ ಶೇ.3.8–4 ಭಾಗದ ವರೆಗೆ ಕೊಬ್ಬು ಇರುವ ಹಸುವಿನ ಹಾಲಿನಿಂದ ಇದನ್ನು ತಯಾರಿಸಲಾಗಿದೆ. ಶೇ.3–ಶೇ.4 ವರೆಗೆ ಹೆಪ್ಪಿನ ವಸ್ತುವನ್ನು ಸೇರಿಸಿ ಶೇ.0.2–9.23 ವರೆಗೂ ಹುಳಿ ಬರುವಂತೆ ಮಾಡಲಾಗುತ್ತದೆ. ಇದಕ್ಕಾಗಿ ಹಾಲಿನ ಪ್ರತಿ ಸಾವಿರ ಪೌಂಡಿನ ತೂಕಕ್ಕೂ 3–4 ಔನ್ಸ್ ರೆನೆಟನ್ನು ಸೇರಿಸಲಾಗುತ್ತದೆ. 1–$\frac{1}{2}$ ಗಂಟೆಗಳಾದ ಮೇಲೆ 3/4"–1 ಘನ ಗಾತ್ರಕ್ಕೆ ಇದನ್ನು ಕತ್ತರಿಸಿ ಹಲಗೆಗಳ ಮೇಲೆ 15–20 ಮಿನಿಟುಗಳ ತನಕ ಬಸಿಯುತ್ತಾರೆ. ಬಳಿಕ ಅದನ್ನು 6" ಎತ್ತರ ಮತ್ತು 7$\frac{7}{8}$" ವ್ಯಾಸದ ಗುಂಡುಗಳಾಗಿ ಮಾಡಿ ಅವುಗಳಲ್ಲಿ ಸಣ್ಣ ತೂತುಗಳನ್ನು ಕೊರೆಯುತ್ತಾರೆ. ಗಿಣ್ಣನ್ನು ಅಚ್ಚುಗಳ ಮೇಲೆ ಇಡುವಾಗ ಅದರ ಮೇಲೆ ಪೆನಿಸಿಲಿಯಂ ರಾಕೆಫೋರ್ಟಿಯ ಬೀಜಾಣುಗಳನ್ನು ಚಿಮುಕಿಸುತ್ತಾರೆ. ಬಳಿಕ ಅಚ್ಚನ್ನು ಆಗಾಗ ತಿರುವಿ ಹಾಕುತ್ತ $68^0$ ರಿಂದ $72^0$ ಫ್ಯಾ. ಉಷ್ಣತೆಯಲ್ಲಿ 24 ಗಂಟೆಗಳ ಕಾಲದವರೆಗೂ ಬಸಿಯಬಿಡುತ್ತಾರೆ. ಅನಂತರ ಅದನ್ನು ಮತ್ತೆ ಬಸಿಯುವ ಮಣೆಗಳ ಮೇಲಿರಿಸಿ 3–5 ದಿವಸಗಳ ತನಕ ಇಟ್ಟು ಶೇ.7.5 ಭಾಗ ಉಪ್ಪನ್ನು ಮೂರು ಸಲ ಗಿಣ್ಣಿನೊಳಕ್ಕೆ ಉಜ್ಜಿ ಸೇರಿಸುತ್ತಾರೆ. ಉಪ್ಪು ಹಾಕಿದ ಮೇಲೆ ಗಿಣ್ಣನ್ನು ಸೂಜಿಗಳಿಂದ ಚುಚ್ಚುತ್ತಾರೆ. ಇದರಿಂದ ಗಾಳಿ ಒಳಕ್ಕೆ ಹೋಗುವಂತಾಗುತ್ತದೆ. ಬಳಿಕ ಅದನ್ನು $48^0$–$50^0$ ಫಾ. ಉಷ್ಣದಲ್ಲಿ ಶೇ.95 ಸಾಪೇಕ್ಷ ಆರ್ದ್ರತೆಯಲ್ಲಿ ಮೂರು ತಿಂಗಳುಗಳವರೆಗೆ ಸಂಸ್ಕರಿಸುತ್ತಾರೆ. ಅನಂತರ ಅದನ್ನು ತಗಡು ಕಾಗದದಲ್ಲಿ ಸುತ್ತಿ ಉಷ್ಣತೆಯನ್ನು $45^0$ ಫ್ಯಾ. ಗೆ ಇಳಿಸಿ 3–6 ತಿಂಗಳ ಕಾಲ ಇಡುತ್ತಾರೆ. ಆಗ ಅದಕ್ಕೆ ವಿಶಿಷ್ಟವಾದ ರೂಪವೂ ರುಚಿಯೂ ಬರುತ್ತವೆ. ಇತ್ತೀಚೆಗೆ ಈ ಗಿಣ್ಣಿಗೆ ಒಳ್ಳೆಯ ಬಣ್ಣ ಬರುವಂತೆ ಮಾಡಲು ಹೊಸ ಬಗೆಯ ಬಿಳಿವರ್ಣದ ಪೆನಿಸಿಲಿಯಂ ರಾಕೆಫೋರ್ಟಿ ಬೂಷ್ಟನ್ನು ವೃದ್ಧಿಸಲಾಗಿದ್ದು ಇದನ್ನು ಬಳಸುತಿದ್ದಾರೆ.

**ಗಿಣ್ಣಿನ ಉಪಯುಕ್ತತೆ :** ಹಾಲಿನಲ್ಲಿ ಅನೇಕ ಪೌಷ್ಟಿಕಾಂಶಗಳು ಗಿಣ್ಣಿನಲ್ಲಿ ಸಾರರೂಪದಲ್ಲಿರುವುದರಿಂದ ಇದು ತುಂಬ ಪುಷ್ಟಿಕರವಾದ ಆಹಾರ ಎನಿಸಿದೆ. ಸಾಮಾನ್ಯವಾಗಿ ಹತ್ತು ಪೌಂಡು ಹಾಲಿಗೆ ಒಂದು ಪೌಂಡು ಗಿಣ್ಣು, ಒಂಭತ್ತು ಪೌಂಡು ಗರಣೆ ಉತ್ಪತ್ತಿಯಾಗುತ್ತದೆ. ಲ್ಯಾಕ್ಟೋಸ್, ತಯಾಮಿನ್, ರೈಬೊಫ್ಲೇವಿನ್, ನೈಯಾಸಿನ್, ಸ್ವಲ್ಪಭಾಗ ರಂಜಕ, ಸ್ವಲ್ಪ ಕ್ಯಾಲ್ಸಿಯಂ ಮುಂತಾದ ನೀರಿನಲ್ಲಿ ಕರಗುವ ವಸ್ತುಗಳು ದ್ರವಾಂಶದಲ್ಲಿ ಹೊರಟು ಹೋದರೂ ಉಳಿದ ವಸ್ತುಗಳು ಗಿಣ್ಣಿನಲ್ಲಿ ಉಳಿಯುತ್ತದೆ. ಉದಾಹರಣೆಗೆ ಚೆಡ್ಡರ್ ಗಿಣ್ಣಿನಲ್ಲಿ ಶೇ.40 ಕೊಬ್ಬು, ಶೇ.29 ಪ್ರೋಟೀನು, ಮತ್ತು ಶೇ.30 ನೀರು ಇದೆ. ಇದು ಹಾಲಿನ ಪ್ರೋಟೀನು ಮತ್ತು ಕೊಬ್ಬು ಇವೆರಡನ್ನೂ ಸಾರತರ ರೂಪದಲ್ಲಿ ಒಳಗೊಂಡಿರುವ ಆಹಾರ ವಸ್ತು. ಸುಲಭವಾಗಿ ಅರಗುವ ಕ್ಯಾಲ್ಸಿಯಮಿನ ಗಾತ್ರವೂ ಗಿಣ್ಣಿನಲ್ಲಿ ಹೆಚ್ಚು. ಈ ಗಿಣ್ಣನ್ನು ಅನೇಕ ದಿವಸಗಳವರೆಗೆ ಕೆಡದಂತೆ ಇಡಬಹುದು.


ಭಾರತದಲ್ಲಿ ಗಿಣ್ಣನ್ನು ತಯಾರಿಸಲು ಇರುವ ಮುಖ್ಯ ಪ್ರತಿ ಬಂಧಕಗಳೆಂದರೆ– 1 ರೆನೆಟನ್ನು ಎಳೆಗರುಗಳಿಂದ ಪಡೆಯಬೇಕಾಗುವುದರಿಂದ ಅವನ್ನು ಕೊಲ್ಲಬೇಕು. ಭಾರತದಲ್ಲಿನ ಮಾಂಸಾಹಾರಿಗಳಲ್ಲದ ಅನೇಕ ಜನಕ್ಕೆ ಇದು ಹಿಡಿಸುವುದಿಲ್ಲ; 2 ಗಿಣ್ಣಿಗೆ ಇರುವ ವಿಶಿಷ್ಟವಾದ ವಾಸನೆ ಮತ್ತು ರುಚಿ ಎರಡನ್ನೂ ಜನ ಒಗ್ಗಿಸಿಕೊಳ್ಳಬೇಕು. ಇಲ್ಲದಿದ್ದರೆ ಆ ಪದಾರ್ಥವನ್ನು ಸೇವಿಸುವುದು ಕಷ್ಟ.

ಮೊದಲನೆಯ ತೊಡಕಿನ ಪರಿಹಾರಕ್ಕೆ ರಾಷ್ಟ್ರೀಯ ಡೈರಿ ರಿಸರ್ಚ್ ಇನ್‌ಸ್ಟಿಟ್ಯೂಟ್ ಬ್ಯಾಕ್ಟೀರಿಯದಿಂದಾಗಲೀ ಬೂಷ್ಟಿನಿಂದಾಗಲೀ ರೆನೆಟನ್ನು ತಯಾರಿಸುವ ಪ್ರಯೋಗವನ್ನು ನಡೆಸುತ್ತಿದೆ. ಗಿಣ್ಣು ತುಂಬ ಪುಷ್ಟಿಕರ ಆಹಾರವಾದ್ದರಿಂದ ಇದರ ತಯಾರಿಕೆಗೆ ಗಮನ ಕೊಡುವುದು ಬಹಳ ಅವಶ್ಯಕ ಮತ್ತು ಇದನ್ನು ಜನಪ್ರಿಯವಾಗಿ ಮಾಡುವುದಕ್ಕೆ ಸಕಲ ಪ್ರಯತ್ನಗಳನ್ನೂ ಮಾಡಬೇಕು. ಈ ಪ್ರಯತ್ನಗಳ ಜತೆಗೆ ಪ್ರಾಣಿಜನ್ಯ ರೆನೆಟಿಗೆ ಪ್ರತಿಯಾಗಿ ಬೇರೊಂದು ವಸ್ತುವನ್ನು ಆವಿಷ್ಕರಿಸುವ ವಿಷಯಕ್ಕೂ ಅಲ್ಲದೆ ವಾಸನೆ ಅಷ್ಟು ಕಟುವಾಗಿರದ ಮತ್ತು ಜನ ಬೇಗ ಒಗ್ಗಿಸಿಕೊಳ್ಳಬಲ್ಲಂಥ ಗಿಣ್ಣಿನ ತಯಾರಿಕೆಗೂ ತೀವ್ರ ಗಮನ ಕೊಡಬೇಕು. (ಕೆ.ಕೆ.ಎ.)

**ಗಿನಿ :** ಪಶ್ಚಿಮ ಆಫ್ರಿಕದಲ್ಲಿ ಉ.ಅ. $15^0$, ದ.ಅ. $15^0$ ನಡುವೆ–ಕೇಪ್‌ವರ್ಡ್‌ನಿಂದ ಆಂಗೋಲದ ಮೋಕಮಿಡಿಸ್‌ವರೆಗೆ–ಹಬ್ಬಿರುವ ಕರಾವಳಿಪ್ರದೇಶಕ್ಕೆ ಸ್ಥೂಲವಾಗಿ ಈ ಹೆಸರಿದೆ. ಗಿನಿ ಖಾರಿಯಲ್ಲಿರುವ ಆನೊಬಾನ್ ದ್ವೀಪದಿಂದ ಸೌನ್ ತೂಮೇ ದ್ವೀಪದ ಮೂಲಕ ಹಾಯ್ದು ಕ್ಯಾಮರೂನ್ ಪರ್ವತದವರೆಗೆ ಇರುವ ಜ್ವಾಲಾಮುಖೀಯ ಶಿಖರಗಳ ಸಾಲಿಗೆ ಪಶ್ಚಿಮದಲ್ಲಿರುವ ಪ್ರದೇಶ ಮೇಲಣ ಗಿನಿ; ಅದಕ್ಕೆ ದಕ್ಷಿಣದಲ್ಲಿರುವ ಪ್ರದೇಶ ಕೆಳಗಣ ಗಿನಿ. ಈ ಕರಾವಳಿಯ ಮಗ್ಗುಲಿಗೆ ಗಿನಿ ಖಾರಿಯಿದೆ. ಇದು ಅಟ್ಲಾಂಟಿಕ್ ಸಾಗರದ ಭಾಗ. 8ನೆಯ ಶತಮಾನದಲ್ಲಿ ಮೇಲಣ ನೈಜರ್ ನದೀಪ್ರದೇಶದಲ್ಲಿದ್ದ, ಘಿನಿ, ಗೆನಿ, ಜೆನಿ, ಡ್ಜೆನಿ ಎಂದು ಕರೆಯಲಾಗುತ್ತಿದ್ದ ರಾಜ್ಯದಿಂದಲೋ ಪಶ್ಚಿಮ ಸೂಡಾನಿನ ಅತ್ಯಂತ ಪ್ರಾಚೀನ ದೇಶವೆಂದು ಭಾವಿಸಲಾಗಿರುವ ಘಾನದಿಂದಲೋ ಗಿನಿ ಎಂಬ ಹೆಸರು ಬಂದಿರಬೇಕೆಂದು ಊಹಿಸಲಾಗಿದೆ.

ಸುಮಾರು 1350ರಿಂದಲೇ ಗಿನಿಯ ಹೆಸರು ಭೂಪಟಗಳ ಮೇಲೆ ಕಾಣಬರುತ್ತದೆ. 1364–65ರಷ್ಟು ಹಿಂದೆಯೇ ಉತ್ತರ ಫ್ರಾನ್ಸಿನ ಡಿಯೆಪ್ ಬಂದರಿನಿಂದ ಹೊರಟ ಹಡಗುಗಳು ಗಿನಿ ತೀರವನ್ನು ಮುಟ್ಟಿದ್ದುವೆಂದೂ ಘಾನದ ವರೆಗೂ ಫ್ರೆಂಚ್ ವರ್ತಕರು ತಮ್ಮ ವ್ಯಾಪಾರ ಕೇಂದ್ರಗಳನ್ನು ತೆರೆದಿದ್ದರೆಂದೂ ಫ್ರೆಂಚರು ಹೇಳಿಕೊಳ್ಳುತ್ತಾರೆ. ಆದರೆ ಇದಕ್ಕೆ ಖಚಿತವಾದ ಆಧಾರಗಳಿಲ್ಲ. ಪೋರ್ಚುಗೀಸ್ ನಾವಿಕರು ಉ.ಅ. $26^0$ ಯಲ್ಲಿರುವ ಬಾಜಡಾರ್ ಭೂಶಿರವನ್ನು 1434ರಲ್ಲಿ ಬಳಸಿದರು. ಕೆಲವು ವರ್ಷಗಳ ಅನಂತರ ಈ ಪ್ರದೇಶದಿಂದ ಸರಕುಗಳನ್ನೂ ಗುಲಾಮರನ್ನೂ ಲಿಸ್ಬನಿಗೆ ಮೊಟ್ಟಮೊದಲಿಗೆ ತರಲಾಯಿತು. ಪೋರ್ಚುಗೀಸರು 1471ರಲ್ಲಿ ಸಮಭಾಜಕವನ್ನು ತಲಪಿದರು. ಕಾಂಗೋದ ಆವಿಷ್ಕಾರವಾದ್ದು 1482ರಲ್ಲಿ. ಇತರ ಐರೋಪ್ಯ ದೇಶಗಳವರು ಈ ಪ್ರದೇಶಕ್ಕೆ ಬಂದದ್ದು

1530ರಲ್ಲಿ ಅನಂತರ. ಅವರೆಲ್ಲ ಇಲ್ಲಿ ವ್ಯಾಪಾರ ಕೇಂದ್ರಗಳನ್ನು ತೆರೆದರು. ಈ ಪ್ರದೇಶದ ಒಂದೊಂದು ಭಾಗಕ್ಕೂ ಅಲ್ಲಿಯ ಪ್ರಧಾನ ವಸ್ತುವಿಗೆ ಅನುಗುಣವಾದ ಹೆಸರು ಬಂತು. ಸಿಯೆರ ಲಿಯೋನಿನಿಂದ ಪಾಲ್ಮಾಸ್ ವರೆಗಿನ ಪ್ರದೇಶ ಗ್ರೇನ್ ಕೋಸ್ಟ್ (ಧಾನ್ಯ ಕರಾವಳಿ) ಎನಿಸಿಕೊಂಡಿದೆ. ಸ್ವರ್ಗದ ಧಾನ್ಯವೆಂದು ಕರೆಯಲಾದ ಗಿನಿ ಪೆಪರ್ ಇಲ್ಲಿಯ ಮುಖ್ಯ ವಸ್ತು. ಪಾಲ್ಮಾಸ್‌ನಿಂದ ಆಚೆಗಿನ ಪ್ರದೇಶ ಐವರಿ ಕೋಸ್ಟ್ (ದಂತ ಕರಾವಳಿ). ವೋಲ್ಟ ನದಿಯಿಂದ ನೈಜರ್ ನದೀಮುಖಜಭೂಮಿಯವರೆಗಿನದು ಸ್ಲೇವ್



ಕೋಸ್ಟ್ (ಗುಲಾಮ ಕರಾವಳಿ). ತ್ರೀ ಪಾಯಿಂಟ್ಸ್ ಭೂಶಿರಕ್ಕೆ ಪೂರ್ವದ ಪ್ರದೇಶ ಗೋಲ್ಡ್ ಕೋಸ್ಟ್ (ಚಿನ್ನದ ಕರಾವಳಿ). ಗಿನಿ ಗಣರಾಜ್ಯ, ಸಯೆರ ಲಿಯೋನ್, ಲೈಬೀರಿಯ, ಐವರಿ ಕೋಸ್ಟ್ ಗಣರಾಜ್ಯ, ಉತ್ತರ ವೋಲ್ಟ, ಘಾನ, ಟೋಗೋ, ದಹೋಮಿ ಗಣರಾಜ್ಯ, ನೈಜೀರಿಯ, ಕ್ಯಾಮರೂನ್, ಸಮಭಾಜಕೀಯ ಗಿನಿ, ಗ್ಯಾಬನ್, ಗ್ಯಾಂಬಿಯ, ಪೋರ್ಚುಗೀಸ್ ಗಿನಿ–ಇವು ಗಿನಿ ಪ್ರದೇಶದಲ್ಲಿರುವ ಮುಖ್ಯ ದೇಶಗಳು. ಇವನ್ನು ಕುರಿತ ವಿವರಗಳಿಗೆ ಆಯಾ ಶೀರ್ಷಿಕೆಗಳನ್ನು ನೋಡಿ. (ಎಂ.ಎಸ್.ಎಚ್.ಒ.;ಎಸ್.ಎನ್.ಎ.ಆರ್.ಇ.)

**ಗಿನಿ ಕೋಳಿ** : ಗ್ಯಾಲಿಫಾರ್ಮೀಸ್ ಗಣದ ನ್ಯೂಮಿಡಿಡೀ ಕುಟುಂಬಕ್ಕೆ ಸೇರಿದ ಹಕ್ಕಿ. ಇದರಲ್ಲಿ ಸುಮಾರು 5 ಜಾತಿಗಳೂ 7 ಪ್ರಭೇದಗಳೂ ಇವೆ. ಎಲ್ಲವೂ ಕೋಳಿಗಳಿಗೆ ಹತ್ತಿರ ಸಂಬಂಧಿಗಳು. ಆಫ್ರಿಕ, ಮಡಗಾಸ್ಕರ್ ಮತ್ತು ವೆಸ್ಟ್‌ಇಂಡೀಸಿನ ಕೆಲವು ದ್ವೀಪಗಳಲ್ಲಿ ಕಾಣಬರುತ್ತವೆ. ಇವುಗಳಲ್ಲಿ ಕೆಲವು ಬಗೆಗಳನ್ನು ಕೋಳಿಗಳಂತೆ ಸಾಕಲಾಗಿದೆ. ಗಿನಿಕೋಳಿಗಳು ಸುಮಾರು 40–80 ಸೆಂಮೀ ಉದ್ದದ ಹಕ್ಕಿಗಳು. ಇವುಗಳ ತಲೆಯ ಮೇಲೆ ಪುಕ್ಕಗಳಿಲ್ಲ. ಕೆಲವು ಪ್ರಭೇದಗಳಲ್ಲಿ (ನ್ಯೂಮಿಡ್) ನೆತ್ತಿಯ ಮೇಲೆ ಕೊಂಬಿನ ಮುಳ್ಳಿನಂಥ ರಚನೆಯಿದೆ. ಇನ್ನು ಕೆಲವು ಬಗೆಗಳಲ್ಲಿ ಗರಿಗಳ ಕಿರೀಟ ವಿರುವುದೂ ಉಂಟು. ಬಹುಪಾಲು ಬಗೆಗಳಲ್ಲಿ ಕತ್ತು ಕೂಡ ಬರಿದಾಗಿರುವುದಾದರೂ ಕೆಲವು ಪ್ರಭೇದ ಗಳಲ್ಲಿ ನೀಲಿ ಇಲ್ಲವೆ ಕೆಂಪು ಬಣ್ಣದ ಜೋಲು ಮಾಂಸಲ ಭಾಗ (ವ್ಯಾಟಲ್) ಉಂಟು. ಈ ಲಕ್ಷಣದಲ್ಲಿ ಇವು ಟರ್ಕಿ ಕೋಳಿಗಳನ್ನು ಹೋಲುತ್ತವೆ. ಹಿಂದಕ್ಕೆ ಬಾಗಿ ಹೆಚ್ಚು ಕಡಿಮೆ ನೆಲವನ್ನು ಮುಟ್ಟುವಂಥ ಬಾಲ, ಬಾಲವನ್ನು ಸಂಪೂರ್ಣವಾಗಿ ಮುಚ್ಚುವಂಥ ಬಾಲದ ಗರಿಗಳು, ಅಚ್ಚ ಕಪ್ಪು ಬಣ್ಣ ಮತ್ತು ಚೆಲುವಾದ ಬಿಳಿಯ ಮಚ್ಚೆಗಳಿಂದ ಕೂಡಿದ ಗರಿಗಳು–ಇವು ಗಿನಿ ಕೋಳಿಗಳ ಇನ್ನಿತರ ಲಕ್ಷಣಗಳು.



ದಟ್ಟವಾದ ಕಾಡುಗಳಲ್ಲಿ ಇವುಗಳ ವಾಸ. ಸಂಘಜೀವಿಗಳಾದ ಇವು ದೊಡ್ಡ ಗುಂಪುಗಳಲ್ಲಿರುತ್ತವೆ. ಗುಂಪಿಗೆ ಮುದಿ ಹುಂಜವೇ ಯಜಮಾನ. ಹಿಂಡುಗಳಲ್ಲಿರುವಾಗ ಇವು ಜೋರಾಗಿ ಕೇಕೆ ಹಾಕುತ್ತ ಓಡಾಡುತ್ತವೆ. ಇವು ಎಷ್ಟು ಗದ್ದಲ ಪ್ರೇಮಿಗಳೋ ಅಷ್ಟೇ ಪುಕ್ಕಲು ಸ್ವಭಾವದವು ಕೂಡ. ಅಲ್ಪಸ್ವಲ್ಪ ಶಬ್ದಕ್ಕೂ ಗಾಬರಿಗೊಂಡು, ಗುಂಪಿನಿಂದ ಚದರಿ ಪೊದೆಗಳಲ್ಲಿ ಅವಿತುಕೊಳ್ಳುತ್ತವೆ. ಚಿಗುರು, ಬೀಜ ಮುಂತಾದವು ಇವುಗಳ ಮೆಚ್ಚಿನ ಆಹಾರ. ಸಂತಾನೋತ್ಪತ್ತಿಯ ಕಾಲದಲ್ಲಿ ಮಾತ್ರ ಗುಂಪಿನಲ್ಲಿನ ಗಂಡು ಹೆಣ್ಣುಗಳು ಜೊತೆಯಾಗಿ ಗುಂಪಿನಿಂದ ಪ್ರತ್ಯೇಕವಾಗಿ ಜೀವಿಸುತ್ತವೆ. ಈ ಸಮಯದಲ್ಲಿ ಸದ್ದುಗದ್ದಲ ಮಾಡದೆ ಶಾಂತವಾಗಿರುತ್ತವೆ. ಗೂಡು ಕಟ್ಟುವ ಕೆಲಸ ಹೆಣ್ಣಿನದು.

ಗಿನಿ ಕೋಳಿಗಳು ಸಾಮಾನ್ಯವಾಗಿ ನೆಲದ ಮೇಲೆ ನಡೆದಾಡುವುದೇ ಹೆಚ್ಚು. ಆಹಾರವನ್ನು ಅರಸಿಕೊಂಡು ದಿನಕ್ಕೆ ಸುಮಾರು 35 ಕಿಮೀ ವರೆಗೂ ಓಡಾಡುವುದುಂಟು. ಇವಕ್ಕೆ ಚೆನ್ನಾಗಿ ಹಾರಲು ಬಾರದು. ಶತ್ರುಪ್ರಾಣಿಗಳು ಎರಗಿದಾಗ ಹಾರುವ ಬದಲು ವೇಗವಾಗಿ ಓಡುವುದೇ ಸಾಮಾನ್ಯ. ಅತ್ಯಾವಶ್ಯಕವೆನಿಸಿದಾಗ ಮಾತ್ರ ಹಾರುತ್ತವೆ.


ಗಿನಿ ಕೋಳಿಗಳಲ್ಲೆಲ್ಲ ಬಹಳ ಪ್ರಸಿದ್ಧವಾದುದು ಪೂರ್ವ ಆಫ್ರಿಕದ ನಿವಾಸಿಯಾದ ಆಕ್ರಿಲಿಯಮ್ ವಲ್ಚರೈನಮ್ ಎಂಬ ಪ್ರಭೇದ. ಈ ಜಾತಿಯಲ್ಲೇ ಇದು ಅತ್ಯಂತ ದೊಡ್ಡ ಗಾತ್ರದ್ದು. ಇದರ ತಲೆ ಬೋಳಾಗಿದ್ದು ಹೆಚ್ಚು ಕಡಿಮೆ ರಣಹದ್ದಿನ ತಲೆಯನ್ನೇ ಹೋಲುವುದರಿಂದ ಇದನ್ನು ಬಳಕೆಯ ಮಾತಿನಲ್ಲಿ ವಲ್ಚರೈನ್ ಗಿನಿಕೋಳಿ ಎಂದು ಕರೆಯಲಾಗುತ್ತದೆ. ಪಶ್ಚಿಮ ಆಫ್ರಿಕದ ದಟ್ಟವಾದ ಕಾಡುಗಳಲ್ಲಿ ಹೆಲ್ಮೆಟೆಡ್ ಗಿನಿಫೌಲ್ (ನ್ಯೂಮಿಡ ಮಿಲಿಯಾಗ್ರಿಸ್) ಎಂಬ ಇನ್ನೊಂದು ಬಗೆ ಕಾಣಬರುತ್ತದೆ. ಸಾಕಣೆಯಲ್ಲಿರುವ ಗಿನಿಕೋಳಿಗಳನ್ನು ಈ ಬಗೆಯಿಂದಲೇ ಪಡೆಯಲಾಗಿದೆ ಎನ್ನುತ್ತಾರೆ. ಗಿನಿಕೋಳಿಗಳನ್ನು ಅವುಗಳ ಬಲು ರುಚಿಯಾದ ಮಾಂಸಕ್ಕಾಗಿ ಸಾಕುವುದಿದೆ. ಇವುಗಳ ಸಾಕಣೆ ಬಹು ಪ್ರಾಚೀನವಾದ ಕಸಬು. ರೋಮನರು, ಗ್ರೀಕರು ಆಫ್ರಿಕದಿಂದ ಇವನ್ನು ಹಿಡಿದುತಂದು ಸಾಕುತ್ತಿದ್ದರಂತೆ. ಆದರೆ ಪ್ರಸಕ್ತಯುಗ ಆರಂಭವಾಗುವ ಕಾಲಕ್ಕೆ ಇವುಗಳ ಸಾಕಣೆ ನಿಂತುಹೋಯಿತು. ಮತ್ತೆ ಹದಿನೈದನೆಯ ಶತಮಾನದಲ್ಲಿ ಪೋರ್ಚುಗೀಸ್ ನಾವಿಕರು ಗಿನಿ ತೀರ ಪ್ರದೇಶದಲ್ಲಿ ಇವನ್ನು ಕಂಡು ಮತ್ತೆ ಯುರೋಪಿಗೆ ತಂದರು. ಅಲ್ಲಿಂದೀಚೆಗೆ ಯುರೋಪಿನ ದೇಶಗಳಲ್ಲಿ ಕೆಲವೆಡೆ ಗಿನಿಕೋಳಿಗಳ ಸಾಕಣೆ ರೂಢಿಯಲ್ಲಿದೆ. ಹೀಗೆ ಸಾಕುವ ಗಿನಿಕೋಳಿಗಳಲ್ಲಿ ಪರ್ಲ್, ಹ್ವೈಟ್ ಮತ್ತು ಲ್ಯಾವೆಂಡರ್ ಎಂಬ ಮೂರು ಬಗೆಗಳಿವೆ. ಆರ್ಥಿಕ ದೃಷ್ಟಿಯಿಂದ ಗಿನಿಕೋಳಿಗಳ ಸಾಕಣೆ ಲಾಭದಾಯಕವಲ್ಲದ್ದರಿಂದ ಇದು ಹೆಚ್ಚು ಜನಪ್ರಿಯವಾಗಿಲ್ಲ. (ಜಿ.ಎಂ.ಬಿ.)

**ಗಿನಿ ಖಾರಿ** : ಪಶ್ಚಿಮ ಆಫ್ರಿಕದ ಐವರಿ ಕೋಸ್ಟ್‌ನಿಂದ ಗಬಾನ್‌ವರೆಗಿನ ಪ್ರದೇಶದ ಮಗ್ಗುಲಿಗೆ ಮತ್ತು ಪೂ.ರೇ. $7^0$ ಯ ಪೂರ್ವಕ್ಕೆ ಇರುವ ದಕ್ಷಿಣ ಅಟ್ಲಾಂಟಿಕ್ ಸಾಗರ ಭಾಗ. ಬೆನಿನ್ ಕೊಲ್ಲಿಯಿಂದ ದಕ್ಷಿಣಕ್ಕೆ ಸಾಗಿ, ನೈಜರ್ ಮುಖಜಭೂಮಿಯಿಂದ ಪೂರ್ವಾಭಿಮುಖವಾಗಿ ಮುಂದುವರಿಯುವ ಕಡಲ ಕರೆ ಈ ಖಾರಿಯ ಮೂಲೆಯಿಂದ ಮುಂದಕ್ಕೆ ದಕ್ಷಿಣದ ಕಡೆಗೆ ತಿರುಗುತ್ತದೆ. ಖಾರಿಯ ಮೂಲೆಯಲ್ಲಿ–ಮುಖ್ಯ ಭೂಪ್ರದೇಶದಲ್ಲಿರುವ ಕ್ಯಾಮರೂನ್ ಪರ್ವತಕ್ಕೆ ಎದುರು–ಹಲವು ಜ್ವಾಲಾಮುಖೀಯ ದ್ವೀಪಗಳಿವೆ. ಆನೊವಾನ್‌ನಿಂದ ಫರ್ನಾಂಡೋ ಪೋ ವರೆಗೆ ಈ ದ್ವೀಪಗಳು ಈಶಾನ್ಯಕ್ಕೆ ಹಬ್ಬಿವೆ. ಈ ಖಾರಿಯ ಮೂಲೆಯಲ್ಲಿರುವುದೇ ಬಯಾಫ್ರಕೊಲ್ಲಿ. ಪಶ್ಚಿಮದ ಕಡೆಯಿಂದ ಹರಿದು ಬರುವ ಗಿನಿ ಉಷ್ಣೋದಕ ಪ್ರವಾಹ ಎಲ್ಲಿ ಹಿಂದಕ್ಕೆ ತಿರುಗಿ, ತಣ್ಣಗಿನ ದಕ್ಷಿಣ ಸಮಭಾಜಕೀಯ ಪ್ರವಾಹದೊಂದಿಗೆ ಸೇರುತ್ತದೆ. ಆದ್ದರಿಂದ ಈ ಖಾರಿಯ ಉತ್ತರ ದಕ್ಷಿಣ ಅಂಚುಗಳಲ್ಲಿಯ ಮೇಲ್ಪದರದ ನೀರಿನ ಉಷ್ಣತೆಯಲ್ಲಿ ವ್ಯತ್ಯಾಸಗಳುಂಟು. ಇದರಿಂದ ಕರಾವಳಿಯ ವಾಯುಗುಣದಲ್ಲೂ ಭಿನ್ನತೆಯಿರುತ್ತದೆ. ಕರಾವಳಿಯಿಂದ 30 ಕಿಮೀಗಳಿಂದಾಚೆಗೆ ಕಡಲು ಬಲು ಆಳವಾಗಿದೆ. (ಎನ್.ಸಿ.ವಿ.)

**ಗಿನಿ ಗಣರಾಜ್ಯ** : ಪಶ್ಚಿಮ ಆಫ್ರಿಕದ ಗಿನಿ ಪ್ರದೇಶದಲ್ಲಿರುವ ಒಂದು ಗಣರಾಜ್ಯ. ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರ ಮತ್ತು ಪೋರ್ಚುಗೀಸ್ ಗಿನಿ, ಉತ್ತರದಲ್ಲಿ ಸೆನಿಗಾಲ್ ಮತ್ತು ಮಾಲಿ, ಪೂರ್ವದಲ್ಲಿ ಐವರಿ ಕೋಸ್ಟ್, ದಕ್ಷಿಣದಲ್ಲಿ ಲೈಬೀರಿಯ ಮತ್ತು ಸೆಯೆರ ಲಿಯೋನ್–ಇವು ಇದರ ಮೇರೆಗಳು. ಗಿನಿ ಗಣರಾಜ್ಯದ ವಿಸ್ತೀರ್ಣ 245,857 ಚ.ಕಿಮೀ, ಜನಸಂಖ್ಯೆ 10,069,000 (2011). ರಾಜಧಾನಿ ಕಾನಕ್ರಿ.

**ಭೌತಲಕ್ಷಣ** : ಗಿನಿಯ ಸಮುದ್ರತೀರ ಅಂಕುಡೊಂಕಾಗಿ ನದೀ ಅಳಿವೆಗಳಿಂದ ಕೂಡಿದೆ. ಕರೆಯ ಬಳಿ ಅಲ್ಲಲ್ಲಿ ಜವುಗು ತುಂಬಿದ ದ್ವೀಪಗಳಿವೆ. ಉಳಿದ ಭಾಗವನ್ನು ಸ್ಥೂಲವಾಗಿ ನಾಲ್ಕು ವಿಭಾಗಗಳಾಗಿ ವಿಂಗಡಿಸಬಹುದು. 1 45–53 ಮೈ. ಅಗಲವಾಗಿರುವ ಕರಾವಳಿಯ ಮೈದಾ ತಗ್ಗಿನಪ್ರದೇಶ. ಇದಕ್ಕೆ ಅಡ್ಡಲಾಗಿ ಹಲವಾರು ನದಿಗಳಿವೆ. ನೆಲ ಬಹುತೇಕ ಮೆಕ್ಕಲು ಮಣ್ಣಿನಿಂದಲೂ ಜಂಬುಮಣ್ಣಿನಿಂದಲೂ ಆವೃತವಾದ್ದು. ಕಡಲಕರೆಗೆ 30 ಮೈ. ದೂರದಲ್ಲಿರುವ ಮರಳುಗಲ್ಲಿನ ಗುಡ್ಡಗಳ ಮುಂದೆ 3,688'

ಎತ್ತರದ ಕಕೌಲಿಯ ಬೆಟ್ಟಗಳಿವೆ. ಮೆಲ್ಲಕೋರಿ, ಕಾಂಕೌರಿ, ರೀಯೂ ಕಪಾಟ್ಚೆಜ಼್, ರೀಯೂ ನೂನೆಜ಼್, ರೀಯೂ ಕಾಂಪಿನಿ ಅಥವಾ ಕಾಗಾನ್ ಇವು ಇಲ್ಲಿ ಹರಿಯುವ ನದಿಗಳು. 2 ಮಧ್ಯ ಗಿನಿ ಎತ್ತರ ಪ್ರದೇಶ. ಇಲ್ಲಿರುವ ಫೂಟ ಜ್ಯಾಲಾನ್ ಗುಡ್ಡಗಾಡಿನ ಸರಾಸರಿ ಎತ್ತರ 3,000' ಇದರುತ್ತರಕ್ಕೆ ಇರುವ ಲೌರ ಶಿಖರ 4,970' ಎತ್ತರವಾಗಿದೆ. ಗ್ಯಾಂಬಿಯ ನದಿ ಉಗಮಿಸುವುದು ಇದರ ಬಳಿಯಲ್ಲೇ. ಪಶ್ಚಿಮದ ಕಡೆಯ ನೆಲ ಸ್ವಲ್ಪ ತಗ್ಗು. ಇಲ್ಲಿ ಕಾಗಾನ್, ಟಾಮಿನೆ ಮತ್ತು ಫಟಾಲಾ ನದಿಗಳು ಹರಿಯುತ್ತವೆ. 3



ಈಶಾನ್ಯ ಭಾಗ ಹುಲ್ಲು ತುಂಬಿದ ಮೈದಾನ. ಅಲ್ಲಲ್ಲಿ ಕುಳ್ಳಾದ ಮರಗಳಿವೆ. ಟಿಂಕಿಸ್ಸೊ ನದಿ ಇದರ ಮೂಲಕ ಹರಿದು ಮುಂದೆ ನೈಜರ್ ನದಿಯನ್ನು ಸೇರುತ್ತದೆ. 4 ಗಿನಿಯ ದಕ್ಷಿಣ ಭಾಗ ಪ್ರಸ್ಥಭೂಮಿ ಪ್ರದೇಶ. ಬೆಣಚುಕಲ್ಲು ಮತ್ತು ಕಾಚ ಶಿಲೆಗಳ ಗುಡ್ಡಗಳಿಂದ ಕೂಡಿದ ಈ ಪ್ರದೇಶದ ಎತ್ತರ ಶಿಖರ ನಿಂಬ (6,069).

**ವಾಯುಗುಣ :** ಗಿನಿ ಗಣರಾಜ್ಯ ಉಷ್ಣವಲಯದಲ್ಲಿದೆ. ವರ್ಷದಲ್ಲಿ ಆರು ತಿಂಗಳು (ಜೂನ್–ಡಿಸೆಂಬರ್) ಮಳೆಗಾಲ. ಉಳಿದ ಆರು ತಿಂಗಳು ಶುಷ್ಕ ಹವೆ. ಕರಾವಳಿ ಪ್ರದೇಶದಲ್ಲಿ ಉಷ್ಣತೆಯೂ ಮಳೆಯೂ ಹೆಚ್ಚು. ಉಷ್ಣತೆ ಒಣಹವೆಯ ಕಾಲದಲ್ಲಿ $62^0$ ಫ್ಯಾ. ನಿಂದ ಮಳೆಗಾಲದಲ್ಲಿ $80^0$ ಫ್ಯಾ.ವರಗೆ ವ್ಯತ್ಯಾಸವಾಗುತ್ತದೆ. ಎತ್ತರವಾದ ಒಳನಾಡಿನಲ್ಲಿ ಮಳೆ ಕಡಿಮೆ. ಉಷ್ಣತೆಯೂ ಕಡಿಮೆ. ಈಶಾನ್ಯದಲ್ಲಿ ಉಷ್ಣತೆಯ ಅಂತರ ಹೆಚ್ಚು ($64^0$ ಫ್ಯಾ.–$104^0$ ಫ್ಯಾ.); ಮಳೆ ಕಡಿಮೆ

**ಸಸ್ಯಪ್ರಾಣಿ ಜೀವನ :** ಕರಾವಳಿಯಲ್ಲಿ ತಾಳೆ ಮರಗಳು ವಿಶೇಷ. ಮಳೆ ಕಡಿಮೆಯಿರುವಲ್ಲಿ ಹುಲ್ಲು ಹೆಚ್ಚಾಗಿ ಬೆಳೆಯುತ್ತದೆ. ಜಿಂಕೆ, ಮೊಲ, ಆನೆ, ಸಿಂಹ, ಕಾಡುಕೋಣ, ಮೊಸಳೆ, ಹಾಗೂ ನಾನಾಜಾತಿಯ ಹಾವುಗಳು ಇಲ್ಲಿವೆ.

**ಕೃಷಿ, ಕೈಗಾರಿಕೆ, ಅಭಿವೃದ್ಧಿ :** ಗಿನಿಯ ಶೇ.95 ಜನಕ್ಕೆ ಕೃಷಿ ಮುಖ್ಯ ಕಸಬು. ಬಾಳೆಹಣ್ಣು, ಎಣ್ಣೆ ತೆಂಗು, ಅನಾನಾಸ್, ಕಾಫಿ ಮುಖ್ಯ ನಿರ್ಯಾತ ಬೆಳೆಗಳು. ಕಬ್ಬಿಣ ಅದಿರು, ವಜ್ರ, ಬಾಕ್ಸೈಟ್ ಇವನ್ನು ಗಣಿಗಳಿಂದ ತೆಗೆದು ರಫ್ತು ಮಾಡುತ್ತಾರೆ. ಕ್ಯಾಲ್ಸಿಯಂ ಕಾರ್ಬೈಡ್ ನಿಕ್ಷೇಪಗಳು ಇಲ್ಲಿ ಹೇರಳವಾಗಿವೆ. ಹೊಗೆಸೊಪ್ಪು, ಕ್ವಿನೈನ್, ಚಹ ರಬ್ಬರ್ ಇವೂ ಬೆಳೆಯುತ್ತವೆ. ಬತ್ತ ಮಿಲೆಟ್‌ಗಳೂ ಮುಖ್ಯ ಬೆಳೆಗಳು. ಈಶಾನ್ಯ ಗಿನಿಯಲ್ಲಿ ದನಗಳನ್ನು ಸಾಕಿ ರಫ್ತು ಮಾಡುತ್ತಾರೆ. ಮೀನು, ಚರ್ಮ ಇನ್ನೆರಡು ಮುಖ್ಯ ರಫ್ತು ವಸ್ತುಗಳು, ಜವಳಿ, ಪೆಟ್ರೋಲಿಯಂ ಉತ್ಪನ್ನ, ಸಿಮೆಂಟ್ ಇವು ಮುಖ್ಯ ಆಮದುಗಳು.

ಗಿನಿಯ ರಾಜಧಾನಿ ಕಾನಕ್ರಿ , ಕಂಕನ್, ಕಿಂಡಿಯ ಇನ್ನೆರಡು ದೊಡ್ಡ ನಗರಗಳು. ಕಾನಕಿ ಗಿನಿ ಗಣರಾಜ್ಯದ ದೊಡ್ಡ ಬಂದರು. ವಿಮಾನ ನಿಲ್ದಾಣ. ಅಲ್ಲಿಂದ ಕಂಕನ್‌ಗೆ 657.6 ಕಿಮೀ ಉದ್ದದ ರೈಲು ಮಾರ್ಗವಿದೆ. ಗಿನಿಯಲ್ಲಿ ಸುಮಾರು 16000 ಕಿಮೀ ಉದ್ದದ ರಸ್ತೆಗಳಿವೆ. ಕಾನಕ್ರಿಯಿಂದ ಮಾಲಿಯ ರಾಜಧಾನಿಯಾದ ಬ್ಯಾಮ್ಯಾಕೋಗೆ ಸಾಗುವ ರಸ್ತೆಯ ಉದ್ದ 928 ಕಿಮೀ ಸೆನಿಗಾಲ್‌ನ ರಾಜಧಾನಿಯಾದ ಡಾಕಾರ್ ಮತ್ತು ಐವರಿ ಕೋಸ್ಟಿನ ರಾಜಧಾನಿ ಆಬಿಜಾನ್ ನಡುವಣ ರಸ್ತೆ ಗಿನಿಯ ಮೂಲಕ ಹಾದುಹೋಗುತ್ತದೆ.

ಗಿನಿಯ ಅಧಿಕೃತ ಭಾಷೆಗಳು ಫ್ರೆಂಚ್ ಮತ್ತು ಎಂಟು ರಾಷ್ಟ್ರೀಯ ಭಾಷೆಗಳಲ್ಲಿ ಒಂದು ಸೌಸೌ ಅಥವಾ ಮಾನಿಕವನ್ನು ಅಧಿಕೃತ ಭಾಷೆಯಾಗಿ ಮಾಡಬೇಕೆಂಬ ಉದ್ದೇಶವಿದೆ. ಇಲ್ಲಿಯ ಜನರಲ್ಲಿ ಬಹು ಮಂದಿ ಮುಸ್ಲಿಮರು.

ಗಿನಿಯಲ್ಲಿ ಶಿಕ್ಷಣ ಉಚಿತ. ಪ್ರಾಥಮಿಕ, ಉಚ್ಚ ಪ್ರಾಥಮಿಕ, ದ್ವಿತೀಯಕ ಎಂಬ ಮೂರು ಹಂತಗಳಲ್ಲಿ ಶಿಕ್ಷಣ ನೀಡಲಾಗುತ್ತವೆ. 1968 ರಿಂದ ಗಿನಿಯ ಎಂಟು ರಾಷ್ಟ್ರೀಯ ಭಾಷೆಗಳನ್ನೂ ಕಲಿಸಲಾಗುತ್ತಿದೆ. ಸದ್ಯಕ್ಕೆ ಫ್ರೆಂಚ್ ಭಾಷೆ ಹೆಚ್ಚು ಪ್ರಚಾರದಲ್ಲಿದೆ. ಎಂಟು ರಾಷ್ಟ್ರೀಯ ಭಾಷೆಗಳಲ್ಲಿ ಒಂದಲ್ಲ ಒಂದು ಭಾಷೆಯನ್ನು ಪ್ರತಿಯೊಬ್ಬರೂ ಕಲಿಯುವಂತೆ ಮಾಡಿ ಫ್ರೆಂಚ್ ಭಾಷೆಯನ್ನು ಉಚ್ಚಾಟಿಸಲು 1968ರಲ್ಲಿ ದೇಶದಲ್ಲಿ ಸಾಂಸ್ಕೃತಿಕ ಕ್ರಾಂತಿಯೊಂದು ಆರಂಭವಾಯಿತು. ದೇಶದ ಅಭಿವೃದ್ಧಿಗಾಗಿ 1964ರಲ್ಲಿ ಏಳು ವರ್ಷಗಳ ಆರ್ಥಿಕಾಭಿವೃದ್ಧಿ ಯೋಜನೆ ಜಾರಿಗೆಬಂತು. ಸರ್ಕಾರ ರಾಷ್ಟ್ರೀಕರಣ ನೀತಿ ಅನುಸರಿಸುತ್ತಿದೆ. ವ್ಯಾಪಾರ ಕೈಗಾರಿಕೆಗಳನ್ನು ಸರ್ಕಾರ ನಿಯಂತ್ರಿಸುವ ಕ್ರಮ ಕೈಗೊಂಡಿದೆ.



1970ರಲ್ಲಿ ಪೋರ್ಚುಗೀಸ್ ದಾಳಿಯ ಸ್ಮಾರಕ

ಗಿನಿಯ ನಿಸರ್ಗ ಸೌಂದರ್ಯ ಅನೇಕ ಪ್ರವಾಸಿಗಳನ್ನು ಆಕರ್ಷಿಸಿದೆ. ಫೂಟ ಜ್ಯಾಲಾನ್ ಬೆಟ್ಟಪ್ರದೇಶ ತುಂಬ ಸುಂದರವಾಗಿದೆ. ಗಿನಿಯಲ್ಲಿ ರಾಷ್ಟ್ರೀಯ ರಂಗಮಂದಿರವಿದೆ. ಆಫ್ರಿಕನ್ ನೃತ್ಯಕ್ಕೆ ವಿಶೇಷ ಪ್ರೋತ್ಸಾಹವುಂಟು. ಗಿನಿಯ ರಾಷ್ಟ್ರೀಯ ವಾದ್ಯಮೇಳಕ್ಕೆ ಸಂಪೂರ್ಣ ಆಫ್ರಿಕನ್ ವಾದ್ಯಗಳನ್ನು ಅಳವಡಿಸಲಾಗಿದೆ. ಫುಟ್‌ಬಾಲ್ ಗಿನಿಯ ಅತ್ಯಂತ ಜನಪ್ರಿಯ ಆಟ. ಗಿನಿಯನ್ ಫ್ರಾಂಕ್ ಇಲ್ಲಿಯ ನಾಣ್ಯ.

ಗಿನಿ ಅಧ್ಯಕ್ಷಪ್ರರೂಪಿ ಗಣರಾಜ್ಯ. ಅಧ್ಯಕ್ಷನನ್ನು ಅಲ್ಲಿಯ ರಾಷ್ಟ್ರೀಯ ಸಭೆ ಏಳು ವರ್ಷಗಳಿಗೊಮ್ಮೆ ಆಯ್ಕೆ ಮಾಡುತ್ತವೆ. ರಾಷ್ಟ್ರೀಯ ಸಭೆಯ ಸದಸ್ಯರ ಸಂಖ್ಯೆ 60. ಇವರ ಚುನಾವಣೆ ನಡೆಯುವುದು ಐದು ವರ್ಷಗಳಿಗೊಮ್ಮೆ. ಅಧ್ಯಕ್ಷ ಮಂತ್ರಿಸಂಪುಟದ ಮೂಲಕ ಆಡಳಿತ ನಡೆಸುತ್ತಾನೆ. ದೇಶವನ್ನು ಆಡಳಿತ ಸೌಕರ್ಯಕ್ಕಾಗಿ 26 ವಿಭಾಗಗಳಾಗಿ ವಿಂಗಡಿಸಲಾಗಿದೆ. (ಎಂ.ಎಸ್.ಎಚ್‌ಒ.;ಎಸ್.ಎನ್.ಎಆರ್‌ಇ.)

**ಇತಿಹಾಸ :** ಈ ಪ್ರದೇಶದ ಅನೇಕ ಸ್ಥಳಗಳಲ್ಲಿ ಶಿಲೋಕರಣಗಳು ಸಿಕ್ಕಿರುವುದರಿಂದ ಪ್ರಾಗಿತಿಹಾಸಕಾಲದಲ್ಲಿ ಜನರು ಇಲ್ಲಿ ವಾಸಿಸುತ್ತಿದ್ದರೆಂದು ತಿಳಿಯಬಹುದು. ಸುಮಾರು ಪ್ರ.ಶ.ಪೂ. 2000ದಿಂದ ಸಹರ ಪ್ರದೇಶದ ಜನರು ಇಲ್ಲಿಗೆ ವಲಸೆ ಬಂದಿರಬಹುದು. ಮೊದಲ ನಿವಾಸಿಗಳು ಬೇಟೆಯಾಡುವುದು ಮತ್ತು ಅರಣ್ಯ ಫಲಗಳನ್ನು ಶೇಖರಿಸುತ್ತಿದ್ದರು. ಪ್ರ.ಶ.ಪೂ. 1000ರಲ್ಲಿ ಜನರು ಪಶುಪಾಲನೆ ಮತ್ತು ವ್ಯವಸಾಯವನ್ನು ಪ್ರಾರಂಭಿಸಿದರು.

ಗಿನಿಯ ಕೆಲವು ಭಾಗ ಪ್ರ.ಶ. 1000 ದಿಂದ 1500ರವರೆಗೆ ಅನೇಕ ಸಾಮ್ರಾಜ್ಯಗಳ ವಶದಲ್ಲಿತ್ತು. ಗಿನಿಯಲ್ಲಿ ಮೇಲಣ ಪ್ರದೇಶ ಚಿನ್ನ ದೊರಕುವುದು 1000ರಲ್ಲಿ ಗಿನಿಯು ಘಾನ ಸಾಮ್ರಾಜ್ಯದ ಪ್ರಭಾವಕ್ಕೆ ಒಳಪಟ್ಟಿತ್ತು. ಈ ಪ್ರದೇಶದಲ್ಲಿ 1200ರಿಂದ 1500ರವರೆಗೆ ಮಲಿಂಕೆ ಜನರಿಂದ ಸ್ಥಾಪಿತವಾದ ಮಾಲಿ ಸಾಮ್ರಾಜ್ಯ ಬಹಳ ಬಲಿಷ್ಠವಾಗಿತ್ತು. ಇಲ್ಲಿಗೆ 1300 ರಿಂದ 1700ರ ವರೆಗೆ ಉತ್ತರದಿಂದ ಫುಲನಿಗಳು ವಲಸೆ ಬಂದರು. ಇವರಲ್ಲಿ ಮುಸ್ಲಿಂ ಫುಲನಿ ಅಧಿಕ ಸಂಖ್ಯೆಯಲ್ಲಿದ್ದರು. 1700ರ ಮೊದಲಲ್ಲಿ ಮುಸ್ಲಿಂ ಫುಲನಿ ಮತ್ತು ಮಲಿಂಕೆ ಮತ್ತು ಮುಸ್ಲಿಂ ಅಲ್ಲದ ಫುಲನಿ ಮತ್ತು ಮಲಿಂಕೆ ಜನರ ನಡುವೆ ಧರ್ಮಯುದ್ಧ ನಡೆದು ಮುಸ್ಲಿಂ ಫುಲನಿ ಮಲಿಂಕೆ ಜನರು ಫೌಂಟ್ ಡ್ಜಲ್ಲೊನ್ ಮೇಲೆ ಹಿಡಿತ ಸಾಧಿಸಿದರು. (ಎನ್.ಎಲ್.)

ಗಿನಿಯ ತೀರವನ್ನು ಮೊದಲು ಕಂಡ ಐರೋಪ್ಯರು ಪೋರ್ಚುಗೀಸರು (15ನೆಯ ಶತಮಾನ). ಫ್ರೆಂಚ್ ಪರಿಶೋಧಕ ರೇನೇ ಎ. ಕೈಲಿ 1827ರಲ್ಲಿ ಈ ದೇಶದಲ್ಲಿ ಸಂಚರಿಸಿದ. 1838ರಿಂದ ಅನೇಕ ಫ್ರೆಂಚ್ ನಾವಿಕರು ಇದರ ಕರಾವಳಿಯ ಸರ್ವೇಕ್ಷಣ ನಡೆಸಿ ಕ್ರಮವಾಗಿ ಇದನ್ನು ಆಕ್ರಮಿಸಿಕೊಂಡರು. ಫ್ಯೂಟ ಜ್ಯಾಲಾನ್‌ನ ಅಮೀರ 1881ರಲ್ಲಿ ಫ್ರೆಂಚ್ ರಕ್ಷಣೆಗೆ ಒಳಪಟ್ಟ. 1890ರಲ್ಲಿ ಗಿನಿ ಪ್ರದೇಶವನ್ನು ಸೆನಿಗಾಲ್‌ನಿಂದ

ಪ್ರತ್ಯೇಕಿಸಲಾಯಿತು. ಇದಕ್ಕೆ ಫ್ರೆಂಚ್ ಗಿನಿ ಎಂಬ ಹೆಸರು ಬಂದದ್ದು ಅನಂತರ. 1895ರಲ್ಲಿ ಇದು ಫ್ರೆಂಚ್ ಪಶ್ಚಿಮ ಆಫ್ರಿಕ ಒಕ್ಕೂಟದ ಭಾಗವಾಯಿತು. ಕ್ರಮೇಣ ಅಕ್ಕಪಕ್ಕದ ಪ್ರದೇಶಗಳನ್ನು ಸೇರಿಸಿ ಇದನ್ನು ವಿಸ್ತರಿಸಲಾಯಿತು. (ಎಸ್.ಎಸ್.)

ಮಲಿಂಕೆಯ ಬಲಿಷ್ಠನಾಯಕ ಸಮೋರಿತೌರಿ (ಟೌರೆ) ಫ್ರೆಂಚ್‌ರ ಆಳಿಕೆಯನ್ನು ವಿರೋಧಿಸಿದ. ಆದರೆ ಹೋರಾಟದಲ್ಲಿ ಸೋತು 1898ರಲ್ಲಿ ಸೆರೆಯಾದ. ಗಿನಿಯನ್ನು ಫ್ರೆಂಚ್ ಸಾಗರಾಂತರ ಪ್ರದೇಶವೆಂದು ಕರೆದು ಅದರ ಪ್ರಜೆಗಳನ್ನು ಫ್ರಾನ್ಸಿನ ಪ್ರಜೆಗಳೆಂದು ಪರಿಗಣಿಸಲಾದ್ದು 1946ರಲ್ಲಿ. 2ನೆಯ ಮಹಾಯುದ್ಧ ಮುಗಿದ ಅನಂತರ ಗಿನಿಯಲ್ಲಿ ರಾಜಕೀಯ ಪಕ್ಷಗಳು ಮತ್ತು ಕಾರ್ಮಿಕ ಸಂಘಗಳು ಜಾಗ್ರತವಾದುವು. ಗಿನಿ ಪ್ರಜಾಪ್ರಭುತ್ವ ಪಕ್ಷ (ಪಿಡಿಜಿ)ವು 1947ರಲ್ಲಿ ಪ್ರಾರಂಭವಾಯಿತು. ಸಿಕೌತೌರೆ 1952ರಲ್ಲಿ ಆ ಪಕ್ಷದ ನಾಯಕನಾದ. ಗಿನಿಯಲ್ಲಿ 1957ರಲ್ಲಿ ಮತದಾನ ನಡೆದು 1958ರ ಸೆಪ್ಟೆಂಬರ್ 28ರಂದು ಫ್ರಾನ್ಸಿನಿಂದ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯಿತು. 1958ರ ಅಕ್ಟೋಬರ್ 2 ರಂದು ತೌರೆ ಗಿನಿಯ ಮೊದಲ ಅಧ್ಯಕ್ಷನಾದ. ನವೆಂಬರ್ 12ರಂದು ಸಂವಿಧಾನ ಸರ್ಕಾರ ಪ್ರಾರಂಭವಾಯಿತು. ಆಗ ಪಿ.ಡಿ.ಜಿ ಒಂದೇ ರಾಜಕೀಯ ಪಕ್ಷವಾಯಿತು.

ಗಿನಿಯ ಸಂಪೂರ್ಣ ವಾಣಿಜ್ಯ, ಕೈಗಾರಿಕೆಗಳ ಮೇಲೆ ಹಿಡಿತ ಸಾಧಿಸಿ ಸಮಾಜವಾದಿ ರಾಷ್ಟ್ರವಾಗಿ ಮಾಡಲು ಅಧ್ಯಕ್ಷ ಪ್ರಯತ್ನ ಪಟ್ಟನು. ಆಫ್ರಿಕ ಖಂಡದಲ್ಲಿ ಸ್ವಾತಂತ್ರ್ಯ ಪಡೆದ ದೇಶಗಳ ಮತ್ತು ಸಮಾಜವಾದಿ ರಾಷ್ಟ್ರಗಳೊಡನೆ ಹೊಂದಾಣಿಕೆಯಿಂದ ಒಗ್ಗಟ್ಟಾಗಿ ಇರಲು ಪ್ರಯತ್ನಪಟ್ಟನು. ಆದರೆ ಅನೇಕ ಸಮಸ್ಯೆಗಳು ಎದುರಿಸಬೇಕಾಯಿತು. ನೈಸರ್ಗಿಕ ಸಂಪನ್ಮೂಲಗಳಿಂದ ರಾಷ್ಟ್ರವನ್ನು ಅಭಿವೃದ್ಧಿ ಪಡಿಸುವಲ್ಲಿ ಸರ್ಕಾರ ವಿಫಲವಾಯಿತು. ಅಧಿಕ ಜನರು ಬಡವರಾಗಿಯೇ ಉಳಿದರು. 1960ರ ದಶಕ ಮತ್ತು 1970ರ ದಶಕದ ಮೊದಲಲ್ಲಿ ಅಧ್ಯಕ್ಷನ ಕಾರ್ಯ ನೀತಿಗೆ ವಿರೋಧ ವ್ಯಕ್ತವಾಯಿತು. ಅಧ್ಯಕ್ಷ ತೌರೆ ತನ್ನ ಸರ್ಕಾರದ ವಿರೋಧಿಗಳನ್ನು ಮತ್ತು ವಿರೋಧಿಸುವ ಪ್ರಜೆಗಳನ್ನು ಕಾರಣವಿಲ್ಲದೆ ಬಂಧಿಸಿದನು.

ಅಧ್ಯಕ್ಷ ತೌರೆ 1984ರ ಮಾರ್ಚ್ 26ರಂದು ನಿಧನವಾದ. ಏಪ್ರಿಲ್ ಮೊದಲವಾರದಲ್ಲಿ ಸೈನ್ಯದ ನಾಯಕರು ಸರ್ಕಾರವನ್ನು ಹತೋಟಿಗೆ ತೆಗೆದುಕೊಂಡು ಸಂವಿಧಾನವನ್ನು ತಡೆಹಿಡಿದು ಪಿಡಿಜಿ ಪಕ್ಷವನ್ನು ವಿಸರ್ಜಿಸಿದರು. ಸೈನ್ಯ ಮಂಡಲಿಯ ನಾಯಕ ಕರ್ನಲ್ ಲಂಸನ ಕಾಂಟೆ ಅಧ್ಯಕ್ಷನಾದ. ಇವನ ಸರ್ಕಾರ ಸಮಾಜವಾದವನ್ನು ನಿಷೇಧಿಸಿ ಮುಕ್ತ ವ್ಯಾಪಾರನಿಯಮಗಳನ್ನು ಪ್ರಾರಂಭಿಸಿ, ಫ್ರಾನ್ಸ್ ಮತ್ತು ಇತರ ದೇಶಗಳೊಡನೆ ಉತ್ತಮ ಸಂಬಂಧ ಪ್ರಾರಂಭಿಸಿದ 1990ರಲ್ಲಿ ಜನರು ಅನೇಕ ಪಕ್ಷಗಳ ನಾಗರಿಕ ಆಳಿಕೆಯ ಸಂವಿಧಾನವನ್ನು ಒಪ್ಪಿಕೊಂಡರು. 1993ರಲ್ಲಿ ಇಲ್ಲಿಯ ಮತದಾರರು ಕಾಂಟೆಯನ್ನು ಅಧ್ಯಕ್ಷನಾಗಿ ಚುನಾಯಿಸಿದರು. 1995ರಲ್ಲಿ ಕಾಂಟೆಯ ಪಾರ್ಟಿ ಆಫ್ ಯೂನಿಟಿ ಪಕ್ಷ ಬಹುಮತ ಪಡೆಯಿತು. 1998ರಲ್ಲಿ ಕಾಂಟೆಯನ್ನು ಮತ್ತೆ ಅಧ್ಯಕ್ಷನಾಗಿ ಚುನಾಯಿಸಿದರು. (ಎನ್.ಎಲ್.)

**ಗಿನಿಬಿಸ್ಸಾವು :** ಪಶ್ಚಿಮ ಆಫ್ರಿಕ ತೀರದಲ್ಲಿರುವ ಒಂದು ದೇಶ. 1974ಕ್ಕೆ ಮೊದಲು ಇದು ಪೋರ್ಚುಗೀಸ್ ಸಾಗರೋತ್ತರ ಪ್ರಾಂತವಾಗಿತ್ತು. ಉ.ಅ. 10°52'–12°14' ಮತ್ತು ಪ.ರೇ. 13°38'–16°43' ನಡುವೆ ಇದೆ. ಉತ್ತರದಲ್ಲಿ ಸೆನೆಗಲ್, ಪೂರ್ವ ಹಾಗೂ ದಕ್ಷಿಣದಲ್ಲಿ ಗಿನಿ ಗಣರಾಜ್ಯ ಮತ್ತು ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರ ಇವೆ. ಇದರ ಸಮೀಪದಲ್ಲಿರುವ ಬಿಜಾಗೋಸ್ (ಬಿಸ್ಸಾಗೋಸ್) ದ್ವೀಪಸ್ತೋಮ ಮತ್ತು ಇತರ ದ್ವೀಪಗಳೂ ಇದರ ಆಡಳಿತಕ್ಕೆ ಒಳಪಟ್ಟಿವೆ. ವಿಸ್ತೀರ್ಣ 36,125 ಚ.ಕಿಮೀ ಜನಸಂಖ್ಯೆ 15,96,677 (2011) ರಾಜಧಾನಿ ಬಿಸ್ಸಾವು.

**ಭೌತಲಕ್ಷಣ:** ಈ ಪ್ರದೇಶ ಉತ್ತರ–ದಕ್ಷಿಣ 193 ಕಿಮೀ ಪೂರ್ವ–ಪಶ್ಚಿಮ 322 ಕಿಮೀ ಮತ್ತು ತೀರಪ್ರದೇಶ 398 ಕಿಮೀ ಇದೆ. ಬಹುಭಾಗ ತಗ್ಗಿನಲ್ಲಿರುವ ಜೌಗಿನಿಂದ ಕೂಡಿದೆ. ಅತ್ಯುನ್ನತ ಪ್ರದೇಶ ಆಗ್ನೇಯ ಭಾಗದಲ್ಲಿ ಸು. 244 ಮೀ ಎತ್ತರದಲ್ಲಿದೆ. ಇದಕ್ಕೆ ಸೇರಿದ ದ್ವೀಪಗಳಲ್ಲಿ ಪ್ರಮುಖವಾದವು ಕಯೋ, ಪೆಸಿಕ್ಸ್, ಬಿಸ್ಸಾವು, ಏರಿಯೀಸ್, ಬೋಲಾಮ, ಕೋಮಾ ಮತ್ತು ಮೆಲೊ. ಹಿಂದೆ ಪೋರ್ಚುಗೀಸರು ಒಳಭಾಗಕ್ಕೆ ಹೋಗುವ ಮೊದಲು ತಂಗುದಾಣವಾಗಿ ಈ ದ್ವೀಪಗಳನ್ನು ಉಪಯೋಗಿಸುತ್ತಿದ್ದರು. 1890–1914ರ ವರೆಗೆ ಬೊಲಾಮ ದ್ವೀಪದಲ್ಲಿನ ಬೊಲಾಮ ಇದರ ರಾಜಧಾನಿಯಾಗಿತ್ತು. ಇಲ್ಲಿಗೆ ದೂರದಲ್ಲಿರುವ ವಿಷಗಾಸ್ ದ್ವೀಪಗಳು ದಟ್ಟವಾದ ಕಾಡುಗಳಿಂದ ಕೂಡಿದ್ದರಿಂದ ಅನೇಕ ವರ್ಷಗಳ ಕಾಲ ಆಫ್ರಿಕನ್ ಕಡಲ್ಗಳ್ಳರ ನೆಲೆಗಳಾಗಿದ್ದವು. ಬೈಬಾಕ್, ರೂಬೇನ್, ಅರಂಗೋಜಿನೊ, ರೋಕ್ಸಾ, ಗಾಲಿನಾಸ್, ಮೈಯೋ, ಪೊಲಿಲಾವೊ, ಉನೋ, ಅರಾಂಗೋ ಮತ್ತು ಉರಾಕೇನ್. ಇವು ವಿಷಗಾಸ್ ದ್ವೀಪಸ್ತೋಮದ ದ್ವೀಪಗಳಲ್ಲಿ ಪ್ರಮುಖವಾದವು ಈ ದೇಶದ ನದಿಗಳಲ್ಲಿ ಚಪ್ಪಟೆ ತಳದ ದೋಣಿಗಳ ಸಂಚಾರ ಸಾಧ್ಯವಿದೆ. ಪ್ರಮುಖ ನದಿಗಳು ಸೆನೆಗಲ್, ಗೇಬಾ, ಕಾಚೆವು, ಮನಸೋವ, ಕೋರುಬಲ್, ರೀಯೋಗ್ರ್ಯಾಂಡ್ ಡಿ ಬುಬಾ ಮತ್ತು ಕ್ಯಾಸೈನ್.

**ವಾಯುಗುಣ, ಸಸ್ಯ, ಪ್ರಾಣಿಸಂಪತ್ತು:** ಇಲ್ಲಿಯ ವಾಯುಗುಣ ಸೆಕೆ ಮತ್ತು ತೇವದಿಂದ ಕೂಡಿದ್ದು ಜೂನ್–ನವೆಂಬರ್‌ವರೆಗೆ ಮಳೆಗಾಲ. ಡಿಸೆಂಬರ್–ಮೇ ವರೆಗೆ ಒಣಹವೆ ಇರುತ್ತದೆ. ತೀರಪ್ರದೇಶದಲ್ಲಿ ಮಾನ್‌ಸೂನ್ ವಾಯುಗುಣವಿರುತ್ತದೆ. ಇಲ್ಲಿಯ ಮಳೆ ಹಾಗೂ ಉಷ್ಣತೆಯಲ್ಲಿ ತೀವ್ರ ಏರುಪೇರುಗಳಿರುತ್ತವೆ. ಡಿಸೆಂಬರ್–ಮೇ ತಿಂಗಳುಗಳಲ್ಲಿ ಸರಾಸರಿ ಉಷ್ಣತೆ 23° ಸೆ (74° ಫ್ಯಾ), ಜೂನ್–ನವೆಂಬರ್ ವರೆಗೆ ಸರಾಸರಿ ಉಷ್ಣತೆ 28° ಸೆ (83° ಫ್ಯಾ). ತೀರಪ್ರದೇಶದಲ್ಲಿ ವರ್ಷಕ್ಕೆ 241 ಸೆಂಮೀ ಮತ್ತು ಒಳನಾಡಿನಲ್ಲಿ 140 ಸೆಂಮೀ ಮಳೆಯಾಗುತ್ತದೆ. ಮೂರು ಸಸ್ಯವಲಯಗಳಿವೆ ತೀರದ ಜವುಗು ನೆಲ ಮತ್ತು ಬಯಲು ನೆಲ ಒಂದು ವಲಯ. ಇಲ್ಲಿ ಗುಲ್ಮ ಮತ್ತು ತಾಳೆ ಮರಗಳು ಬೆಳೆಯುತ್ತವೆ. ಕೆಲವು ಕಡೆ ಬತ್ತವನ್ನು ಬೆಳೆಯುತ್ತಾರೆ. ಒಳಭಾಗದ ಬಯಲು ಎರಡನೆಯ ವಲಯ. ಇದು ದಟ್ಟವಾದ ಕಾಡುಗಳಿಂದ ಕೂಡಿದೆ. ಮೂರನೆಯದು ಸವಾನ ಹುಲ್ಲುಗಾವಲು ವಲಯ. ಇಲ್ಲಿನ ಕಾಡುಗಳಲ್ಲಿ ಪೆಲಿಕನ್, ಫ್ಲೆಮಿಂಗೋ, ಮೊಸಳೆ, ಹಾವು, ಕಾಡೆಮ್ಮೆ, ಗೆಜ಼ಲ್, ಜಿಂಕೆ, ಚಿರತೆ ಮತ್ತು ಹಲವು ಬಗೆಯ ಕಡಲ ಹಕ್ಕಿಗಳಿವೆ. ಸಿಂಹಗಳು ಅಪರೂಪವಾಗಿ ಕಾಣಸಿಗುತ್ತವೆ. ನದಿಯ ಅಳಿವೆಗಳಲ್ಲಿ ಶಾರ್ಕ್‌ಗಳಿವೆ.



ಗ್ರಾಮದ ಒಂದು ನೋಟ

**ಆರ್ಥಿಕತೆ:** ಈ ದೇಶದ ಆರ್ಥಿಕತೆ ಕೃಷಿ ಮತ್ತು ಪಶು ಸಂಪತ್ತನ್ನು ಅವಲಂಬಿಸಿದೆ. ಬತ್ತ ಇಲ್ಲಿಯ ಮುಖ್ಯ ಆಹಾರ. ದ್ವೀಪಗಳಲ್ಲಿ ಹಾಗೂ ತೀರಪ್ರದೇಶದಲ್ಲಿ ಬತ್ತದ ಜೊತೆಗೆ ತಾಳೆಯ ಎಣ್ಣೆಯನ್ನೂ ಉತ್ಪಾದಿಸಲಾಗುತ್ತದೆ. ಫರೀಮ್ ಮತ್ತು ನೋವಾಲಾ ಮೆಗೊಗಳ ಸುತ್ತ ನೆಲಗಡಲೆ ಬೆಳೆಯುತ್ತಾರೆ. ಇದು ಪ್ರಮುಖ ಆರ್ಥಿಕ ಬೆಳೆ. ಇದರ ರಫ್ತು ದೇಶದ ಒಟ್ಟು ರಫ್ತಿನ ಶೇ. 60ರಷ್ಟಿದೆ. ಇಲ್ಲಿಂದ ರಫ್ತಾಗುವ ಕೆಲವು ಸರಕುಗಳು ಮರ, ತೆಂಗು, ಜೇನುಮೇಣ ಮತ್ತು ಚರ್ಮ.

**ಕೈಗಾರಿಕೆ:** ಕೈಗಾರಿಕಾ ಕ್ಷೇತ್ರದಲ್ಲಿ ಹಿಂದುಳಿದಿದೆ. ಬಿಸ್ಸಾವಿನಲ್ಲಿ ಕೆಲವು ತೈಲ ಸಂಸ್ಕರಣ ಕೇಂದ್ರಗಳಿವೆ. ಇಲ್ಲಿ ತೈಲ ಹಾಗೂ ಬಾಕ್ಸೈಟ್, ತಾಮ್ರ, ರಂಜಕ ಮತ್ತು ಸತುವು ಇವುಗಳ ನಿಕ್ಷೇಪ ಹೆಚ್ಚಾಗಿದ್ದರೂ ಇದರ ಪರಿಶೋಧನ ಕಾರ್ಯ ಇನ್ನೂ ನಡೆಯಬೇಕಾಗಿದೆ. ಇಲ್ಲಿಯ ಇತರ ಕೆಲವು ಕೈಗಾರಿಕೆಗಳೆಂದರೆ ನೆಲಗಡಲೆ, ಅಕ್ಕಿ, ರಬ್ಬರ್, ಕಬ್ಬು, ಇವುಗಳ ಸಂಸ್ಕರಣ; ಸಾಬೂನು, ಕಾಗದ, ಸೆರಾಮಿಕ್ ಮತ್ತು ಇಟ್ಟಿಗೆ ತಯಾರಿಕೆ. ನೆಲಗಡಲೆ ಹಾಗೂ ಇತರ ಸರಕುಗಳನ್ನು ನದಿಗಳ ಮೇಲೆ ಸಾಗಿಸಲಾಗುತ್ತದೆ. ದೇಶದ ಪ್ರಮುಖ ಹೆದ್ದಾರಿ ಬಿಸ್ಸಾವಿನಿಂದ ಬಾಗಟವರೆಗೆ ಇದೆ. ಆಧುನಿಕ ಬಂದರು ಬಿಸ್ಸಾವಿನಲ್ಲಿದೆ. ಬಿಸ್ಸಾವಿನಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಿದೆ. ಬಾಗಟ, ನೋವಾ, ಲೊಮೇಗೊ ಪಟ್ಟಣಗಳಲ್ಲಿ ವಿಮಾನ ನಿಲ್ದಾಣಗಳಿವೆ.

ಇಲ್ಲಿ ಅನೇಕ ಬುಡಕಟ್ಟುಗಳಿಗೆ ಸೇರಿದ ಜನರು ನೆಲಸಿದ್ದಾರೆ. ಬಲಾಂಟಿಗಳು ಶೇ. 30ರಷ್ಟಿದ್ದಾರೆ. ಇವರಲ್ಲದೆ ಫುಲಾನಿ (ಶೇ. 20), ಮಂಡ್ಯಾಕೋ (ಶೇ. 14), ಮಾಲಿಂಕೆ (ಶೇ. 12.5), ಪೆಪಲ್ (ಶೇ. 7), ಇತರರು (ಶೇ. 16.5) ಇದ್ದಾರೆ. ಇವರಲ್ಲಿ ಬಲಾಂಟಿಗಳು ವಿಸ್ತರಣಾಕಾಂಕ್ಷಿಗಳಾಗಿದ್ದು ರಾಷ್ಟ್ರೀಯತಾವಾದಿಗಳಾಗಿದ್ದಾರೆ, ಫುಲಾನಿಗಳು, ಮುಸ್ಲಿಮ್ ಸಂಪ್ರದಾಯವಾದಿಗಳು. ಇಲ್ಲಿಯ ಪ್ರಮುಖ ಧರ್ಮ ಇಸ್ಲಾಂ. ಸ್ಥಳೀಯ ಧರ್ಮದವರೂ ಕೆಥೊಲಿಕರೂ ಇದ್ದಾರೆ.

ಶಿಕ್ಷಣ ಕ್ಷೇತ್ರದಲ್ಲಿ ತೀವ್ರ ಬದಲಾವಣೆಗಳಾಗುತ್ತಿವೆ. ಇಲ್ಲಿ 7 ರಿಂದ 13 ವರ್ಷದವರಿಗೆ ವಿದ್ಯಾಭ್ಯಾಸ ಕಡ್ಡಾಯ. ಶಾಲೆಗೆ ಬಾಲಕಿಯರಿಗಿಂತ ಬಾಲಕರ ದಾಖಲಾತಿ ಅಧಿಕವಾಗಿದೆ. ಅಲ್ಪ ಸಂಖ್ಯೆಯಷ್ಟು ಮಾತ್ರ ಅನಕ್ಷರಸ್ಥರಿದ್ದಾರೆ. ಅನೇಕ ಶಾಲೆಗಳಿವೆ. ಇಲ್ಲಿ ಅನೇಕ

ಸ್ವಾಯತ್ತಾಧಿಕಾರದ ವಿಶ್ವವಿದ್ಯಾಲಯಗಳಿರುವುದು ವಿಶೇಷ. ಬಿಸ್ಸಾವಿನಲ್ಲಿ ಒಂದು ವಸ್ತು ಸಂಗ್ರಹಾಲಯವೂ ಒಂದು ಗ್ರಂಥಾಲಯವೂ ಇದೆ. (ಕೆ.ಎಸ್.ಎನ್)

ಇತಿಹಾಸ: ಈ ಪ್ರದೇಶದಲ್ಲಿ ಪ್ರ.ಶ.ಸು.1000 ವರ್ಷಗಳಿಗಿಂತ ಹಿಂದೆ ಕಡಲ ತೀರದಲ್ಲಿ ಕಬ್ಬಿಣದ ಉಪಕರಣಗಳನ್ನು ಉಪಯೋಗಿಸುತ್ತಿದ್ದ ರೈತರು ವಾಸಿಸುತ್ತಿದ್ದರು. ಇವರು ಬತ್ತವನ್ನು ಬೆಳೆದು ಅಕ್ಕಿಯನ್ನು ಉಪಯೋಗಿಸುತ್ತಿದ್ದರು. ಇದು ಮಾಲಿ ಸಾಮ್ರಾಜ್ಯದ, ಗಬು ರಾಜ್ಯದ ಭಾಗವಾಗಿತ್ತು. ಪೋರ್ಚುಗೀಸ್ ಅನ್ವೇಷಕರು 1446ರಲ್ಲಿ ಬರುವುದಕ್ಕೆ ಮೊದಲು ಇಲ್ಲಿ ಆಫ್ರಿಕದ ಕರಿಜನರ ಅನೇಕ ಗುಂಪುಗಳು ವಾಸಿಸುತ್ತಿದ್ದವು. ಇದು 1600 ರಿಂದ 1800ರ ವರೆಗೆ ಪೋರ್ಚುಗೀಸರ ಗುಲಾಮರ ವ್ಯಾಪಾರದ ನೆಲೆಯಾಗಿತ್ತು. 1879ರಲ್ಲಿ ಪೋರ್ಚುಗೀಸ್ ಗಿನಿ ಎಂಬ ವಸಾಹತಾಯಿತು. ಇದು 1951ರಲ್ಲಿ ಪೋರ್ಚುಗೀಸ್ ಸಾಗರೋತ್ತರ ಪ್ರಾಂತವಾಯಿತು.



ಸೇನಾದಳದ ಸಮಾರಂಭ

ಆಫ್ರಿಕದಲ್ಲಿ 1950 ಮತ್ತು 1960ರ ದಶಕದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟ ಪ್ರಾರಂಭವಾಯಿತು. 1956ರಲ್ಲಿ ಸ್ವಾತಂತ್ರ್ಯಕ್ಕಾಗಿ ರಾಷ್ಟ್ರೀಯವಾದಿ ನಾಯಕರು ಆಫ್ರಿಕನ್ ಪಾರ್ಟಿ ಫಾರ್ ಇಂಡಿಪೆಂಡೆನ್ಸ್ ಆಫ್ ಗಿನಿ ಅಂಡ್ ಕೇಪ್‌ವರ್ಡೆ (ಪಿಎಐಜಿಸಿ) ಎಂಬ ಪಕ್ಷವನ್ನು ಸ್ಥಾಪಿಸಿದರು. ಈ ಪಕ್ಷವು ಪೋರ್ಚುಗೀಸ್ ಗಿನಿ ಮತ್ತು ಕೇಪ್‌ವರ್ಡೆ ದ್ವೀಪಸ್ತೋಮದ ಸ್ವಾತಂತ್ರ್ಯಕ್ಕೆ ಹೋರಾಟ ಪ್ರಾರಂಭಿಸಿತು. ಕೇಪ್‌ವರ್ಡೆ ದ್ವೀಪಸ್ತೋಮವು ಗಿನಿ ಬಿಸ್ಸಾವಿನ ವಾಯವ್ಯಕ್ಕೆ 764ಕಿಮೀ ದೂರದಲ್ಲಿದೆ. 1960ರ ಮೊದಲಲ್ಲಿ ಪಕ್ಷವು ಅನೇಕ ರೈತರಿಗೆ ಗೆರಿಲ ಕಾಳಗದ ತರಬೇತಿ ನೀಡಿತು. ಈ ಹೋರಾಟಕ್ಕೆ ಆಫ್ರಿಕದ ಎಡಪಂಥಿಯ ದೇಶಗಳು, ಕ್ಯೂಬ, ಚೀನ ಮತ್ತು ರಷ್ಯ ದೇಶಗಳಿಂದ ಶಸ್ತ್ರಾಸ್ತ್ರಗಳು ಗಿನಿ ಬಿಸ್ಸಾವು ದೇಶದ ನೆರೆಹೊರೆ ದೇಶಗಳ ಮೂಲಕ ಸರಬರಾಜು ಆಗುತ್ತಿತ್ತು. ರಾಷ್ಟ್ರೀಯವಾದಿ ಹೋರಾಟಗಾರರು ಅಧಿಕ ಪ್ರದೇಶವನ್ನು ವಶಪಡಿಸಿಕೊಂಡರು. ಈ ಹೋರಾಟಕ್ಕೆ 1973ರ ಜನವರಿಯಲ್ಲಿ ನಾಯಕ ಅಮಿಲ್ಕಾರ್ ಕಬ್ರಾಲ್‌ನ ಹತ್ಯೆಯಿಂದ ಸ್ವಲ್ಪ ಹಿನ್ನಡೆ ಉಂಟಾಯಿತು. 1973ರ ಸೆಪ್ಟೆಂಬರ್ 24ರಂದು ಸ್ವಾತಂತ್ರ್ಯ ಹೋರಾಟಗಾರರು ಏಕ ಪಕ್ಷವಾಗಿ ಸ್ವಾತಂತ್ರ್ಯವನ್ನು ಘೋಷಿಸಿದರು. ಪೋರ್ಚುಗಲ್ ಇದರ ಸ್ವಾತಂತ್ರ್ಯವನ್ನು 1974ರ ಏಪ್ರಿಲ್ 25ರಂದು ಒಪ್ಪಿಕೊಂಡಿತು. ಅಮಿಲ್ಕಾರ್ ಕಬ್ರಾಲ್‌ನ ಸಹೋದರ ಲೂಯಿಸ್ ಕಬ್ರಾಲ್ ಮೊದಲ ಅಧ್ಯಕ್ಷನಾದ. ಕೇಪ್‌ವರ್ಡೆ 1975ರಲ್ಲಿ ಸ್ವಾತಂತ್ರ್ಯ ಪಡೆಯಿತು. ಪಿಎಐಜಿಸಿ ಪಕ್ಷವು ಗಿನಿ ಬಿಸ್ಸಾವು ಮತ್ತು ಕೇಪ್‌ವರ್ಡೆ ದ್ವೀಪಸ್ತೋಮವನ್ನು ಒಂದೇ ಸರ್ಕಾರದ ಅಡಿಯಲ್ಲಿ ಒಂದು ಗೂಡಿಸಲು ಪ್ರಯತ್ನಿಸಿತು.

ಸ್ವಾತಂತ್ರ್ಯಾನಂತರ ಪೋರ್ಚುಗೀಸ್ ಸೈನಿಕರ ಜೊತೆಗೂಡಿ ರಾಷ್ಟ್ರೀಯ ವಾದಿಗಳ ವಿರುದ್ಧ ಹೋರಾಡಿದ ಕರಿ ಜನಾಂಗದ ಸೈನಿಕರನ್ನು ಗೆರಿಲ ಸೈನಿಕರು ಹತ್ಯೆಮಾಡಿದರು. ಬಿಸ್ಸಾವು ನಗರದಲ್ಲಿ ಸಾಮೂಹಿಕ ಕಗ್ಗೊಲೆ ನಡೆಯಿತು. ಸರ್ಕಾರ ಅನೇಕರನ್ನು ಮರಣ ದಂಡನೆಗೆ ಗುರಿಪಡಿಸಿ ದೇಹಗಳನ್ನು ಗುಮೆರ, ಪೋರ್ಟೋಗೋಲಿ ಮತ್ತು ಮನ್‌ಸಬ ಅರಣ್ಯಗಳಲ್ಲಿ ಗೌಪ್ಯವಾಗಿ ಸಾಮೂಹಿಕ ಸಮಾಧಿ ಮಾಡಿತೆಂಬ ವಿಚಾರ ತಿಳಿದುಬರುತ್ತದೆ.

1980ರಲ್ಲಿ ಸೈನ್ಯದ ನಾಯಕರು ಸರ್ಕಾರವನ್ನು ಕಿತ್ತೊಗೆದು, ನ್ಯಾಷನಲ್ ಅಸ್ಸೆಂಬಿಯನ್ನು ರದ್ದು ಪಡಿಸಿದರು. ಸೈನ್ಯದ ಆಡಳಿತ ಮಂಡಲಿಯ ಅಧಿಕಾರವನ್ನು ಸ್ಥಾಪಿಸಿದರು. ಸೈನ್ಯದ ಸರ್ಕಾರ ಗಿನಿ ಬಿಸ್ಸಾವು ಮತ್ತು ಕೇಪ್‌ವರ್ಡೆ ದ್ವೀಪಸ್ತೋಮ ಒಂದಾಗುವುದನ್ನು ವಿರೋಧಿಸಿತು. ಸೈನ್ಯದ ಆಡಳಿತ ಮಂಡಲಿಯ ಮುಖ್ಯಸ್ಥ ಬ್ರಿಗೇಡಿಯರ್ ಜನರಲ್ ಜೊವೊ ಬೆರ್ನಾರ್ಡೊವಿಈರ ಅಧ್ಯಕ್ಷ. 1984ರಲ್ಲಿ ಸಂವಿಧಾನವನ್ನು ರಚಿಸಿ ಹೊಸ ನ್ಯಾಷನಲ್ ಅಸ್ಸೆಂಬಿಯನ್ನು ಪ್ರಾರಂಭಿಸಿದರು. ಜೊವೊ ಬೆರ್ನಾರ್ಡೊವಿಈರ ಅಧ್ಯಕ್ಷನಾಗಿ ಚುನಾಯಿತನಾದ. 1991ರ ವರೆಗೆ ಪಿಎಐಜಿಸಿ ಒಂದೇ ರಾಜಕೀಯ ಪಕ್ಷವಾಗಿತ್ತು. ಅದೇ ವರ್ಷ ಬೇರೆ ಪಕ್ಷಗಳಿಗೂ ಅವಕಾಶ



ನ್ಯಾಯಾಂಗ ಮಂಡಲ

ಕಲ್ಪಿಸಲಾಯಿತು. 1994ರ ಚುನಾವಣೆಯಲ್ಲಿ ಪ್ರಥಮವಾಗಿ ಅನೇಕ ಪಕ್ಷಗಳ ಚುನಾವಣೆ ನಡೆದು ವಿಈರ ಜಯಗಳಿಸಿ ಅಧ್ಯಕ್ಷನಾದ. ಬಂಡಾಯಗಾರರು 1999ರ ಮೇ ತಿಂಗಳಲ್ಲಿ ಇವನನ್ನು ಅಧ್ಯಕ್ಷ ಸ್ಥಾನದಿಂದ ಪದಚ್ಯುತಿ ಗೊಳಿಸಿದರು. ಆಗ ಅಸ್ಸೆಂಬಿಯ ಮುಖ್ಯಸ್ಥ ನಾಗಿದ್ದ ಮಲನ್ ಬಕ್ಕೈ ಸಿನ್‌ಹ ಹಂಗಾಮಿ ಅಧ್ಯಕ್ಷನಾದ. 1999ರ ನವೆಂಬರ್ ತಿಂಗಳಲ್ಲಿ ಚುನಾವಣೆ ನಡೆದು ಸೋಶಿಯಲ್ ಪಾರ್ಟಿಯ ಅಧಿಕ ಸದಸ್ಯರು ಚುನಾಯಿತರಾದರು. 2000ರ ಜನವರಿಯಲ್ಲಿ ಅನೇಕ ಪಕ್ಷದ ಕುಂಬ ಯಿಯಾಲ ಅಧ್ಯಕ್ಷನಾದ. ಪುನಃ 2003ರ ಸೆಪ್ಟೆಂಬರ್‌ನಲ್ಲಿ ದಂಗೆ ನಡೆದು ಈತನನ್ನು ಪದಚ್ಯುತಿ ಗೊಳಿಸಿದರು. 2004ರ ಮಾರ್ಚ್‌ನಲ್ಲಿ ಚುನಾವಣೆ ನಡೆಯಿತು. ಅಕ್ಟೋಬರ್‌ನಲ್ಲಿ ಸೈನ್ಯದ ಪಂಗಡಗಳ ದಂಗೆಯ ಸಮಯದಲ್ಲಿ ಸೈನ್ಯದ ಮುಖ್ಯಸ್ಥ ನಿಧನವಾದ. ವ್ಯಾಪಕ ಅಶಾಂತಿಗೆ ಕಾರಣವಾಯಿತು. 2005ರ ಜೂನ್‌ನಲ್ಲಿ ಮೊದಲ ಬಾರಿಗೆ ಅಧ್ಯಕ್ಷ ಚುನಾವಣೆ ನಡೆದು ವಿಈರ ಅಧ್ಯಕ್ಷನಾದ. ಸೈನ್ಯದಲ್ಲಿ ಕೆಲವರು ಅಧ್ಯಕ್ಷನ ವಿರೋಧಿಗಳಿದ್ದರು. 2009ರ ಮಾರ್ಚ್ 1 ರಂದು ಭಾನುವಾರ ಸೈನ್ಯದ ಜಂಟಿ ಮುಖ್ಯಸ್ಥ ಜನರಲ್ ಬಟಿಸ್ಟ ಟಗ್ಮೆ ನ ವೈ ಬಾಂಬ್ ಸ್ಫೋಟದಿಂದ ಹತನಾದ. ಇದರಿಂದ ಉದ್ರಿಕ್ತಗೊಂಡ ಸೈನಿಕರ ಒಂದು ಗುಂಪು ಸೇಡು ತೀರಿಸಿಕೊಳ್ಳಲು ಅಧ್ಯಕ್ಷನನ್ನು ಹತ್ಯೆಗೈದಿತು. ನ್ಯಾಷನಲ್ ಅಸೆಂಬ್ಲಿಯ ಅಧ್ಯಕ್ಷನನ್ನು 2009ರ ಜೂನ್ 28ರ ಚುನಾವಣೆವರೆಗೆ ಹಂಗಾಮಿ ಅಧ್ಯಕ್ಷನಾಗಿ ಮಾಡಿದರು. ಚುನಾವಣೆಯಲ್ಲಿ ಮಲಮ್ ಬಕ್ಕೈ ಸಿನ್‌ಹ ಅಧ್ಯಕ್ಷನಾಗಿ ಚುನಾಯಿತನಾದ. ಈತ 2012ರ ಜನವರಿ 9 ರಂದು ನಿಧನವಾದ ಅನಂತರ 2012ರ ಮೇ 11 ರಿಂದ ಮಾನ್ಯುಎಲ್‌ಸೆರಿಫೊ ನಹ್‌ಮದ್‌ಗೊ ಅಧ್ಯಕ್ಷರಾಗಿದ್ದಾರೆ. (ಎನ್.ಎಲ್)

**ಗಿನಿ ಹಂದಿ :** ಕೇವಿ ಎಂಬ ಪ್ರಾಣಿಯಿಂದ ವಿಕಾಸ ಹೊಂದಿದ ಸಾಕುಪ್ರಾಣಿ (ಗಿನಿಪಿಗ್); ರಾಡೆನ್ಷಿಯ ಗಣದ ಕೇವಿಯಿಡೀ ಕುಟುಂಬಕ್ಕೆ ಸೇರಿದೆ. ಕೇವಿಯ ಪಾರ್ಸೆಲಸ್ ಎಂಬುದು ಇದರ ವೈಜ್ಞಾನಿಕ ಹೆಸರು. ಜನಪ್ರಿಯವಾಗಿರುವ ಈ ಪ್ರಾಣಿಯ ಹೆಸರಿಗೂ ಆಫ್ರಿಕದ ಗಿನಿ ಮತ್ತು ಆಗ್ನೇಯ ಏಷ್ಯದ ನ್ಯೂಗಿನಿಗಳಿಗೂ ಯಾವ ಬಗೆಯಾದ ಸಂಬಂಧವಿಲ್ಲ. ಗಿನಿ ಎಂಬ ಪದ ಬಹುಶಃ ಗಿಯಾನ ಎಂಬ ಪದದಿಂದ ಪಡೆದುದಾಗಿರ ಬಹುದು. ಡಚ್ ಮತ್ತು ಇಂಗ್ಲಿಷ್ ವ್ಯಾಪಾರಸ್ಥರು ಈ ಪ್ರಾಣಿಗಳನ್ನು ಗಿಯಾನದಿಂದ ಕೊಂಡೊಯ್ದದ್ದರಿಂದ ಈ ಹೆಸರು ಬಂದಿರಬೇಕು.

ದಕ್ಷಿಣ ಅಮೆರಿಕದ ಪೆರು, ಎಕ್ವಡಾರ್ ಮತ್ತು ಕೊಲಂಬಿಯಗಳು ಗಿನಿಹಂದಿಗಳ ತೌರು. ಇವು ಈ ಪ್ರದೇಶಗಳ ಬಯಲಿನ ಮೂಲವಾಸಿಗಳಾದ ಕೇವಿ ಪ್ರಾಣಿಗಳಿಂದ ವಿಕಾಸ ಹೊಂದಿದ ಪ್ರಾಣಿಗಳೆಂದು ತಿಳಿಯಲಾಗಿದೆ. ದಕ್ಷಿಣ ಅಮೆರಿಕಕ್ಕೆ ಸ್ಪಾನಿಷರು

ಕಾಲಿಡುವುದಕ್ಕೆ ಮುಂಚೆಯೇ ಅಲ್ಲಿಯ ಮೂಲವಾಸಿಗಳಾದ ಅಮೆರಿಕದ ಇಂಡಿಯನ್ನರು ಈ ದಂಶಕ ಪ್ರಾಣಿಗಳನ್ನು ಆಹಾರಕ್ಕಾಗಿ ಸಾಕುತ್ತಿದ್ದರಂತೆ. ಡಚ್ಚರು ಹದಿನಾರನೆಯ ಶತಮಾನದಲ್ಲಿ ಯುರೋಪಿಗೆ ಇವನ್ನು ಕೊಂಡೊಯ್ದು ಇವುಗಳ ತಳಿಗಳನ್ನು ಅಭಿವೃದ್ಧಿಗೊಳಿಸಿದರು. ಅಲ್ಲಿಂದೀಚೆಗೆ ಪ್ರಪಂಚದ ವಿವಿಧ ದೇಶಗಳಿಗೆ ಹರಡಿದ ಇದನ್ನು ಆಹಾರಕ್ಕಾಗಿ ಸಾಕುತ್ತಿಲ್ಲವಾದರೂ ವೈಜ್ಞಾನಿಕ ಪ್ರಯೋಗಮಂದಿರಗಳಲ್ಲಿ ಇದರ ನೆರವು ಅಪಾರ. ವೈದ್ಯಕೀಯ, ಜೈವಿಕ, ತಳಿವಿಜ್ಞಾನ ಮತ್ತು ಪೋಷಣಸಂಬಂಧಿ ಸಂಶೋಧನೆಗಳಲ್ಲಿ ಇದನ್ನು ಪ್ರಯೋಗ ಪ್ರಾಣಿಯಾಗಿ ಬಳಸಲಾಗುತ್ತಿದೆ. ಇದು ಎಷ್ಟು ಪ್ರಚಲಿತವೆಂದರೆ ಗಿನಿಹಂದಿಯನ್ನಾಗಿ ಬಳಸು ಎಂಬುದು ಈಗ ಒಂದು ನುಡಿಗಟ್ಟಾಗಿಬಿಟ್ಟಿದೆ.



ಗಿನಿ ಹಂದಿಗಳು

ಗಿನಿ ಹಂದಿಗಳ ಮೈ ಬಣ್ಣ ಸಾಮಾನ್ಯವಾಗಿ ಬಿಳಿ, ಕಪ್ಪು, ಕೆಂಪು, ಕಂದು, ಹೀಗೆ ವೈವಿಧ್ಯಮಯ. ಚೆನ್ನಾಗಿ ಬೆಳೆದ ಪ್ರೌಢಜೀವಿಯ ದೇಹದ ಉದ್ದ 25 ಸೆಂಮೀ, ತೂಕ ಸುಮಾರು 900 ಗ್ರಾಂ. ಗಿನಿ ಹಂದಿಗಳಿಗೆ ಬಾಲವಿಲ್ಲ. ಆದರೆ ಅದಕ್ಕೆ ಸಂಬಂಧಿಸಿದ ಏಳು ಕಶೇರುಕ ಮಣಿಗಳು ದೇಹದೊಳಗೇ ಹುದುಗಿರುತ್ತವೆ. ಸ್ಥೂಲ ದೇಹ, ದಪ್ಪತಲೆ, ಚಿಕ್ಕಕಾಲುಗಳು, ರೋಮರಹಿತವಾದ ಮತ್ತು ಗುಂಡನೆಯ ಚಿಕ್ಕ ಕಿವಿಗಳು, ಮುಂಗಾಲಿನಲ್ಲಿ ನಾಲ್ಕು, ಹಿಂಗಾಲಿನಲ್ಲಿ ಮೂರು ಬೆರಳುಗಳು, ಪ್ರತಿ ಬೆರಳಿನಲ್ಲಿ ಅಗಲವಾದ ನಖಗಳು– ಇವು ಈ ಪ್ರಾಣಿಯ ಮುಖ್ಯ ಲಕ್ಷಣಗಳು. ದೇಹದ ಮೇಲಿರುವ ಕೂದಲು ರೇಷ್ಮೆಯಂತೆ ನಯವಾಗಿರಬಹುದು ಅಥವಾ ಒರಟಾಗಿರಬಹುದು. ಹಾಗೆಯೇ ಚಿಕ್ಕದಾಗಿರಬಹುದು ಇಲ್ಲವೆ ನೀಳವಾಗಿರಬಹುದು.

ಹುಲ್ಲು, ಸೊಪ್ಪುಗಳೇ ಇದರ ಮುಖ್ಯ ಆಹಾರ. ಆಹಾರವನ್ನು ಸಾಕಷ್ಟು ಮೊತ್ತದಲ್ಲಿ ಒದಗಿಸಿದರೆ ಇದು ನೀರಿಲ್ಲದೆಯೇ ಬಹು ಕಾಲ ಬದುಕಬಲ್ಲುದು. ಆದರೆ ಮರದ ಪೆಟ್ಟಿಗೆಯಲ್ಲಿ ಗೂಡು ಮಾಡಿ, ಇಲಿ, ಮೊಲ ಮುಂತಾದವಕ್ಕೆ ಕೊಡುವ ಆಹಾರವನ್ನು ಒದಗಿಸಿದಲ್ಲಿ ಇದಕ್ಕೆ ಪ್ರತ್ಯೇಕವಾಗಿ ನೀರನ್ನು ಒದಗಿಸುವುದು ಅನಿವಾರ್ಯ.

ಸಂತಾನಶಕ್ತಿಗೆ ಹೆಸರಾದ ಗಿನಿಹಂದಿ ವರ್ಷಕ್ಕೆ 5–6 ಸಲ ಮರಿ ಹಾಕುತ್ತದೆ. ಒಂದು ಸೂಲಿಗೆ 2–8 ಮರಿಗಳು ಇರುತ್ತವೆ. ಗರ್ಭಾವಧಿಯ ಕಾಲ 63–75 ದಿವಸಗಳು. ಬಸಿರಿನಲ್ಲಿಯೇ ಮರಿಗಳು ಚೆನ್ನಾಗಿ ಬೆಳೆಯುವುದರಿಂದ ಹುಟ್ಟಿದ ಮರಿಗಳಿಗೆ ಕಣ್ಣು ಬಂದಿರುತ್ತವಲ್ಲದೆ ಘನರೂಪದ ಆಹಾರವನ್ನು ಸೇವಿಸುವ ಸಾಮರ್ಥ್ಯವೂ ಇರುತ್ತದೆ. ಹುಟ್ಟಿದ ಒಂದೆರಡು ಗಂಟೆಗಳಲ್ಲಿಯೇ ತಾಯಿಯನ್ನು ಹಿಂಬಾಲಿಸಿ ಓಡಲು ಇವು ಸಮರ್ಥವಾಗಿರುತ್ತವೆ. ಎರಡು ವಾರಗಳ ಕಾಲ ತಾಯಿಯ ಹಾಲನ್ನು ಕುಡಿದು ಬೆಳೆದು ಅನಂತರ ಸ್ವತಂತ್ರ ಜೀವನವನ್ನು ಆರಂಭಿಸುತ್ತವೆ. 2 ತಿಂಗಳುಗಳಲ್ಲಿ ಪ್ರೌಢಾವಸ್ಥೆಗೆ ಬರುತ್ತವೆ. ಗಿನಿ ಹಂದಿಗಳ ಆಯಸ್ಸು ಸುಮಾರು 6–8 ವರ್ಷಗಳು. (ಬಿ.ಎನ್.ಬಿ.)

**ಗಿನಿ ಹುಲ್ಲು :** ಪ್ಯಾನಿಕಂ ಮ್ಯಾಕ್ಸಿಮಂ ಎಂಬ ವೈಜ್ಞಾನಿಕ ಹೆಸರಿನ ಒಂದು ಹುಲ್ಲು. ಆಫ್ರಿಕದ ಮೂಲವಾಸಿ. 1.3–3 ಮೀ ಎತ್ತರಕ್ಕೆ ಬೆಳೆಯುವ ಬಹುವಾರ್ಷಿಕ ಹುಲ್ಲು ಇದು. ಅಧಿಕ ಗಾತ್ರದಲ್ಲಿ ಕ್ಯಾಲ್ಸಿಯಮ್ ಮತ್ತು ಫಾಸ್ಫರಸ್‍ಗಳನ್ನೂ ಶೇ.5–8 ರಷ್ಟು ಪ್ರೋಟೀನುಗಳನ್ನೂ ಒಳಗೊಂಡಿದ್ದು ಉತ್ತಮ ಬಗೆಯ ಮೇವುಗಳಲ್ಲೊಂದು ಎನಿಸಿದೆ. ಇದನ್ನು ಹಸಿ ಇಲ್ಲವೆ ಒಣಹುಲ್ಲಾಗಿ ಬಳಸಬಹುದು. ಹಲವಾರು ಬಗೆಯ ಮಣ್ಣಿನಲ್ಲೂ ವಾಯುಪರಿಸ್ಥಿತಿಗಳಲ್ಲೂ ಬೆಳೆಯಬಲ್ಲ ಸಾಮರ್ಥ್ಯ ಇದಕ್ಕೆ ಇದೆ. ಆದರೆ ಮಣ್ಣಿನಲ್ಲಿ ನೀರು ನಿಲ್ಲುವಂತಿರಬಾರದು. ಇದು ಚಳಿಯನ್ನು ತಡೆಯಲಾರದು. ಬೀಜ ಇಲ್ಲವೆ ಬೇರು ತುಂಡುಗಳಿಂದ ಇದನ್ನು ವೃದ್ಧಿಸಬಹುದು. ಬೀಜ ಬಿತ್ತಿದ 2 $^1/_2$ ತಿಂಗಳ ಅನಂತರ ಮೊದಲ ಬಾರಿಗೆ ಇದನ್ನು ಕಟಾಯಿಸಬಹುದು. ಆಮೇಲೆ 6–8 ವಾರಗಳ ಅಂತರಕ್ಕೊಮ್ಮೆ ಹಲವಾರು ವರ್ಷಗಳ ಕಾಲ ಕತ್ತರಿಸಬಹುದು. ಗಿನಿಹುಲ್ಲಿನ ವಾರ್ಷಿಕ ಇಳುವರಿ ಹೆಕ್ಟೇರಿಗೆ 38–62 ಮೆಟ್ರಿಕ್ ಟನ್ನುಗಳಷ್ಟಾಗುತ್ತದೆ. ಆದರೆ ಕೊಟ್ಟಿಗೆ ಗೊಬ್ಬರ, ಕಂಪೋಸ್ಟ್, ಅಮೋನಿಯಂ ಸಲ್ಫೇಟ್, ಚರಂಡಿ ನೀರು ಮುಂತಾದ ಗೊಬ್ಬರಗಳನ್ನು ಕೊಟ್ಟು ಬೆಳೆಸಿದಲ್ಲಿ ಹುಲ್ಲಿನ ಬೆಳವಣಿಗೆ ಇನ್ನೂ ಹುಲುಸಾಗಿ ಇಳುವರಿ ಹೆಕ್ಟೇರಿಗೆ 250 ಮೆಟ್ರಿಕ್ ಟನ್ನುಗಳವರೆಗೆ ಹೆಚ್ಚುವುದುಂಟು.

ಗಿನಿ ಹುಲ್ಲನ್ನು ಅನೇಕ ವರ್ಷಗಳವರೆಗೆ ಬೆಳೆಸಬಹುದಾದರೂ 3–5 ವರ್ಷಗಳ ಮೇಲೆ ಇಳುವರಿ ಕಡಿಮೆಯಾಗುವುದರಿಂದ ಆ ಅವಧಿಯ ಅನಂತರ ಹಳೆಯ ಗಿಡಗಳನ್ನು ಕಿತ್ತು ಹೊಸದಾಗಿ ಕೃಷಿ ಮಾಡಬೇಕು. (ಎಂ.)

**ಗಿಬನ್ :** ಸಸ್ತನಿವರ್ಗದ ಪ್ರೈಮೇಟ್ ಗಣಕ್ಕೆ ಸೇರಿದ ವೃಕ್ಷವಾಸಿ ವಾನರ. ಹೈಲಾಬಟೀಸ್ ಮತ್ತು ಸಿಂಫಲ್ಯಾಂಗಸ್ ಎಂಬ ಎರಡು ಮುಖ್ಯಜಾತಿಗಳನ್ನು ಒಳಗೊಂಡಿದೆ. ಒರಾಂಗೂಟಾನ್(**ನೋಡಿ**), ಗೊರಿಲ, ಚಿಂಪ್ಯಾಂಜಿಗಳ ಹತ್ತಿರ ಸಂಬಂಧಿ. ಅವುಗಳಂತೆಯೇ ಇದಕ್ಕೂ ಬಾಲವಿಲ್ಲ. ಮನುಷ್ಯನನ್ನೂ ಒಳಗೊಂಡಿರುವ ಹೋಮಿನಾಯ್ಡಿಯ ಅಧಿಕುಟುಂಬದ ಹೈಲೋಬ್ಯಾಟಿಡೀ ಕುಟುಂಬಕ್ಕೆ ಸೇರಿದೆ. ಆಗ್ನೇಯ ಏಷ್ಯದ ಮೂಲವಾಸಿಯಾದ ಇದು ಅಸ್ಸಾಂ, ಬರ್ಮ, ಮಲಯ, ಇಂಡೋನೇಷ್ಯಗಳ ದಟ್ಟವಾದ ಕಾಡುಗಳಲ್ಲಿ ಕಾಣಬರುತ್ತದೆ; ಸಮುದ್ರಮಟ್ಟದಿಂದ ಹಿಡಿದು 2500 ಮೀ ಎತ್ತರದ ಪರ್ವತ ಪ್ರದೇಶಗಳಲ್ಲೆಲ್ಲ ಬಲು ಸಾಮಾನ್ಯ.

ಇದು ವಾನರಗಳಲ್ಲೆಲ್ಲ ಅತ್ಯಂತ ಚಿಕ್ಕಗಾತ್ರದ್ದು, ಇದರ ಎತ್ತರ ಸಾಮಾನ್ಯವಾಗಿ 1 ಮೀ, ತೂಕ ಸುಮಾರು 14 ಕೆಜಿ. ಮೈಬಣ್ಣ ಸಾಮಾನ್ಯವಾಗಿ ಕಪ್ಪು. ಕೆಲವು ಬಗೆಗಳಲ್ಲಿ ಕಂದು, ಬೂದಿ ಮುಂತಾದ ಬಣ್ಣವಿರುವುದೂ ಉಂಟು. ಗಿಬನ್ನಿನ ಕೈಗಳು ಬಲು ಉದ್ದ. 1ಮೀ ಎತ್ತರದ ಗಿಬನ್ನಿನ ಕೈಹರವು ಸುಮಾರು 1.3 ಮೀ ಇರುವುದುಂಟು. ಈ ಉದ್ದ ಕೈಗಳ ಸಹಾಯದಿಂದ ಗಿಬನ್ ಮರದಿಂದ ಮರಕ್ಕೆ ಯಾವ ಬಗೆಯ ಶ್ರಮವೂ ಇಲ್ಲದೆ ಅತ್ಯಂತ ವೇಗವಾಗಿ ತೂಗಿ ತೊನೆಯುತ್ತ, ಜಿಗಿಯುತ್ತ ಸಾಗಬಲ್ಲದು. ಒಂದೊಂದು ಸಲದ ಜಿಗಿತಕ್ಕೂ ಸುಮಾರು 6–9 ಮೀ ದೂರವನ್ನು ಕ್ರಮಿಸಬಲ್ಲುದು. ಹೀಗೆ ಗಿಬನ್ ರೆಂಬೆಯಿಂದ ರೆಂಬೆಗೆ ಹಾರಿ ಸಾಗುವ ನೈಪುಣ್ಯವನ್ನೂ ವೇಗವನ್ನೂ ಇನ್ನಾವುದೇ ವಾನರವಾಗಲಿ, ಕಪಿಯಾಗಲಿ ತೋರಲಾರದು. ಈ ರೀತಿಯ ಚಲನೆಗೆ ಮತ್ತು ರೆಂಬೆಗಳನ್ನು ಹಿಡಿಯುವುದಕ್ಕೆ ಅನುಕೂಲವಾಗುವಂತೆ ಗಿಬನ್ನಿನ ಕೈ ಮತ್ತು ಕಾಲುಗಳ ಬೆರಳುಗಳೂ ಬಲು ಉದ್ದವಾಗಿವೆ. ಅಲ್ಲದೆ ತೋರುಬೆರಳು ಮತ್ತು ಹೆಬ್ಬೆರಳುಗಳ ಅಂತರ ಆಳವಾದ ಸೀಳಿನಂತಿದೆ. ಹೆಬ್ಬೆರಳು ಉಳಿದ ಬೆರಳುಗಳಿಗಿಂತ ಮೋಟಾಗಿದೆ. ಹೀಗೆ ಗಿಬನ್ನಿನ ಕೈಕಾಲುಗಳು ಮರಗಳ ಮೇಲಿನ ಚಲನೆಗೆ ಅತ್ಯಂತ ಉಪಯುಕ್ತವಾಗಿದ್ದರೂ ಗಿಬನ್ ನೆಲದ ಮೇಲೆ ಮನುಷ್ಯನಂತೆಯೇ ನೆಟ್ಟಗೆ, ಕೇವಲ ತನ್ನ ಎರಡು ಕಾಲುಗಳಿಂದ ಮಾತ್ರವೇ ನಡೆಯಬಲ್ಲದು. ವಾನರಗಳಲ್ಲೆಲ್ಲ ಇದೊಂದು ಮಾತ್ರವೇ ಹೀಗೆ ನಡೆಯಲು ಸಮರ್ಥವಾಗಿರುವುದು (ಉಳಿದ ವಾನರಗಳು ಹೀಗೆ ನಡೆಯುವಾಗ ಕೈಗಳ ನೆರವನ್ನು ಪಡೆಯುತ್ತವೆ.) ಆದರೆ ಕೈಗಳು ಬಲು ಉದ್ದವಾಗಿದ್ದು ನೆಲವನ್ನು ಮುಟ್ಟುವಂತಿರುವುದರಿಂದ ಗಿಬನ್ ನಡೆಯುವಾಗ ಸರ್ಕಸಿನಲ್ಲಿ ತಂತಿ ಮೇಲೆ ನಡೆಯುವವರಂತೆ ಕೈಗಳನ್ನು ಮೇಲಕ್ಕೆತ್ತಿ ಅಕ್ಕಪಕ್ಕಕ್ಕೆ ಚಾಚಿಕೊಂಡು ವಕ್ರವಾಗಿ ನಡೆಯುತ್ತದೆ. ಕೈಗಳನ್ನು ಮೇಲಕ್ಕೆತ್ತುವುದರಿಂದ ದೇಹವನ್ನು ಸಮತೋಲವಾಗಿರಿಸುವುದಕ್ಕೆ ಸಾಧ್ಯವಾಗುತ್ತದೆ. ಗಿಬನ್ನಿನ ಇನ್ನಿತರ ಲಕ್ಷಣಗಳಲ್ಲಿ ಮುಖ್ಯವಾದವು ಅದರ ತೆಳುವಾದ ದೇಹ, ಉದ್ದವಾದ ಹಾಗೂ ಕಿರಿದಾದ ವಸ್ತಿಕುಹರ, ಚೆನ್ನಾಗಿ ರೂಪುಗೊಂಡಿರುವ ರೊಂಡಿಯ ಜಡ್ಡುಭಾಗಗಳು ಮತ್ತು ಚಪ್ಪಟೆಯಾದ ಮೂತಿ. ಗಿಬನ್ನಿನ ಮಿದುಳು ಬಹಳ ಚಿಕ್ಕಗಾತ್ರದ್ದು. ಬುದ್ಧಿಶಕ್ತಿಯಲ್ಲಿ ಗಿಬನ್ ಉಳಿದ ವಾನರಗಳಿಗಿಂತ ಅತ್ಯಂತ ಕೆಳಮಟ್ಟ ದಲ್ಲಿದೆ. ಹೆಚ್ಚು ಕಡಿಮೆ ಕೋತಿಗಳಿಗಿ



ರುವಷ್ಟು ಬುದ್ಧಿ ಇದಕ್ಕೆ ಇದೆ ಎನ್ನಬಹುದು. ಆದರೂ ಕೆಲವು ಬಣ್ಣಗಳನ್ನೂ ಗಾತ್ರವ್ಯತ್ಯಾಸಗಳನ್ನೂ ಗುರುತಿಸಬಲ್ಲುದು. ಗಿಬನ್ ಸ್ವಭಾವತಃ ಸಾಧುಪ್ರಾಣಿ. ಇದನ್ನು ಪಳಗಿಸಿ ಮುದ್ದಿನ ಪ್ರಾಣಿಯಾಗಿ ಸಾಕಬಹುದು. ಗಿಬನ್ ಸ್ವಇಚ್ಛೆಯಿಂದ ನೀರಿಗಿಳಿಯಲು ಹೆದರುತ್ತದಾದರೂ ತನ್ನ ದೇಹವನ್ನು ಸಾಕಷ್ಟು ಶುದ್ಧವಾಗಿ ಇಟ್ಟುಕೊಳ್ಳುತ್ತದೆ. ಎರಡು ಪ್ರಾಣಿಗಳು ಸೇರಿದುವೆಂದರೆ ಒಂದರ ದೇಹವನ್ನು ಇನ್ನೊಂದು ಶುಚಿಮಾಡುತ್ತವೆ.

ಹಣ್ಣುಹಂಪಲು, ಎಲೆಗಳು, ಎಳೆಯಕುಡಿಗಳು ಗಿಬನ್ನಿನ ಪ್ರಮುಖ ಆಹಾರ. ಕೀಟಗಳನ್ನೂ ತಿನ್ನುವುದುಂಟು. ಜೇಡವನ್ನು ಬಲು ಮೆಚ್ಚಿನಿಂದ ತಿನ್ನುತ್ತದೆ. ಆಗಾಗ್ಗೆ ಹಕ್ಕಿಗಳ ಮೊಟ್ಟೆಗಳನ್ನೂ ಮರಿಹಕ್ಕಿಗಳನ್ನೂ ತಿನ್ನುವುದುಂಟು. ಗಿಬನ್ ಸಂಘಜೀವಿ; ಸಣ್ಣಗುಂಪುಗಳಲ್ಲಿ ವಾಸಿಸುತ್ತದೆ. ಸಾಮಾನ್ಯವಾಗಿ ಒಂದು ಗುಂಪಿನಲ್ಲಿ ಒಂದು ಗಂಡು, ಒಂದು ಹೆಣ್ಣು ಮತ್ತು ಹಲವಾರು ಮರಿಗಿಬನ್‌ಗಳಿರುತ್ತವೆ. ಒಂದೊಂದು ಕುಟುಂಬಕ್ಕೂ ಅದರದೇ ಆದ ಅಧೀನಗಡಿ ಪ್ರಾಂತ್ಯವಿರುತ್ತದೆ. ಇಂಥ ಪ್ರಾಂತ್ಯದ ವಿಸ್ತಾರ ಸುಮಾರು 30–100 ಎಕರೆಯಷ್ಟಿರಬಹುದು. ಇದರಲ್ಲಿ ಗಿಬನ್‌ಗಳಿಗೆ ಆಹಾರವೊದಗಿಸುವ ಮತ್ತು ಮಲಗಲು ಪ್ರಶಸ್ತವಾದ ಮರಗಳು ವಿಪುಲವಾಗಿರುತ್ತವೆ. ಗಿಬನ್‌ಗಳು ನೆಲಮುಟ್ಟದೆ ಮರದಿಂದ ಮರಕ್ಕೆ ಸುಸೂತ್ರವಾಗಿ ಹೋಗಲು ತಮ್ಮದೇ ಆದ ದಾರಿ ಮಾಡಿಕೊಂಡಿರುತ್ತವೆ. ಒಂದು ಗಿಬನ್ ಕುಟುಂಬದ ಪ್ರಾಂತ್ಯಕ್ಕೆ ಮತ್ತೊಂದು ಗುಂಪು ಬರುವುದು ವಿರಳ. ಹಾಗೇನಾದರೂ ಬಂದರೆ ಅವುಗಳ ನಡುವೆ ಯುದ್ಧವೇ ನಡೆಯುತ್ತದೆ. ಯುದ್ಧವೆಂದರೆ ಮುಷ್ಟಾಮುಷ್ಟಿಯಲ್ಲ, ಬರಿಯ ವಾಗ್ಯುದ್ಧ. ಅದರಲ್ಲಿ ಸೋತ ಗುಂಪು ಓಡಿಹೋಗುತ್ತದೆ. ತಮ್ಮ ಧ್ವನಿಶಕ್ತಿಗೆ ಹೆಸರಾಗಿರುವ ಗಿಬನ್‌ಗಳು ಬಲು ಜೋರಾಗಿ, ಕಿವಿಗಡಚಿಕ್ಕುವಂತೆ, ಕಾಡಿಗೆ ಕಾಡೇ ಅನುರಣಿತವಾಗುವಂತೆ ಕೂಗುತ್ತವೆ. ಬೆಳಗಿನ ಜಾವ ಮತ್ತು ಸಂಜೆ ಸೂರ್ಯ ಮುಳುಗುವ ಮುನ್ನ ಇವುಗಳ ಗದ್ದಲದಿಂದ ಇಡೀ ಕಾಡೇ ಮೊಳಗುತ್ತಿರುತ್ತದೆ. ಆಹಾರವನ್ನು ಅರಸಿಕೊಂಡು ತಮ್ಮ ಎಲ್ಲೆಯನ್ನು ಬಿಟ್ಟು ಹೊರಟಾಗಲೂ ಅಸಾಧ್ಯವಾಗಿ ಬೊಬ್ಬೆಯಿಡುತ್ತವೆ. ಹೀಗೆ ಹೊರಟಾಗ ಎರಡು ಗುಂಪುಗಳು ಪರಸ್ಪರ ಸಂಧಿಸಿದಾಗ ಮತ್ತೆ ಕೂಗಿನ ಕಾಳಗ ನಡೆಯುತ್ತದೆ. ಇಲ್ಲೂ ಹೆಚ್ಚು ಗದ್ದಲ ಮಾಡುವ ಗುಂಪಿಗೇ ಜಯ. ಸಿಂಫಲ್ಯಾಂಗಸ್ ಜಾತಿಯ ಗಿಬನ್‌ಗಳಲ್ಲಿ ಧ್ವನಿವರ್ಧಕಚೀಲಗಳಿರುವುದರಿಂದ ಇವುಗಳ ಕೂಗು ಇನ್ನೂ ತೀವ್ರವಾಗಿರುತ್ತದೆ. ಆದರೆ ಹವೆ ಪ್ರತಿಕೂಲವಾಗಿದ್ದಾಗ ನಿಶ್ಶಬ್ದವಾಗಿಬಿಡುವುದು ಇವುಗಳ ಮರ್ಜಿ. ಗಿಬನ್‌ಗಳು ಗೂಡುಗಳನ್ನೇನೂ ಕಟ್ಟುವುದಿಲ್ಲ. ವಿಶ್ರಮಿಸುವಾಗ ಮರಗಳ ಪೊಟರೆಗಳಲ್ಲಿ ಇಲ್ಲವೆ ರೆಂಬೆಗಳ ಸಂದಿಗಳಲ್ಲಿ ಅಡಗುತ್ತವೆ.

ಗಿಬನ್‌ಗಳ ಗರ್ಭಾವಧಿಯ ಕಾಲ ಸುಮಾರು 7 ತಿಂಗಳುಗಳು. ಒಂದು ಸಲಕ್ಕೆ ಒಂದೇ ಮರಿ; ಸಾಧಾರಣವಾಗಿ 2 ವರ್ಷಕ್ಕೊಂದು. ಮರಿಯ ಪಾಲನೆ, ಪೋಷಣೆಗಳ ಹೊಣೆಯೆಲ್ಲ ತಾಯಿಯದೆ. ಚಿಕ್ಕಮರಿಗಳು ಯಾವಾಗಲೂ ಚಟುವಟಿಕೆಯಿಂದ ಆಟವಾಡುತ್ತಿರುತ್ತವೆ. ಅನೇಕವೇಳೆ ಬೆಳೆದ ಗಿಬನ್‌ಗಳೂ ಮರಿಗಳೊಡನೆ ಸೇರುವುದುಂಟು. 7 ವರ್ಷ ವಯಸ್ಸಾದ ಅನಂತರ ಗಿಬನ್ ಲೈಂಗಿಕ ಪ್ರಬುದ್ಧಾವಸ್ಥೆಗೆ ಬರುತ್ತದೆ. (ಬಿ.ಆರ್.ಸಿ.ಆರ್.)

**ಗಿಬ್ಬನ್, ಎಡ್ವರ್ಡ್ :** 1737–94. ಆಂಗ್ಲ ಇತಿಹಾಸಕಾರ. ದಿ ಡಿಕ್ಲೈನ್ ಅಂಡ್ ಫಾಲ್ ಆಫ್ ರೋಮನ್ ಎಂಪೈರ್ (ರೋಮ್ ಚಕ್ರಾಧಿಪತ್ಯದ ಅವನತಿ ಮತ್ತು ಪತನ) ಎಂಬ ಆರು ಸಂಪುಟಗಳ ಇತಿಹಾಸ ಗ್ರಂಥದ ಕರ್ತೃ. ಈತ ಜನಿಸಿದುದು 1737ರ ಮೇ 8 ರಂದು ಸರ್ರೆ ಕೌಂಟಿಯ ಪುಟ್ನಿಯಲ್ಲಿ. ಇವನ ತಂದೆ ಎಡ್ವರ್ಡ್, ತಾಯಿ ಜೂಡಿತ್ ಪೋರ್ಟನ್. ಈತ 10 ವರ್ಷದವನಾಗಿದ್ದಾಗ ತಾಯಿ ನಿಧನ ಹೊಂದಿದಳು (1747). ಇವನನ್ನು ಚಿಕ್ಕಮ್ಮ ಕ್ಯಾಥರೀನ್ ಪೋರ್ಟನ್ ಸಾಕಿ ವಿದ್ಯಾಭ್ಯಾಸಕ್ಕೆ ತೊಡಗಿಸಿದಳು. ಮುಂದೆ ತಾನು ಬುದ್ಧಿಜೀವಿ ಯಾಗಲು ಈಕೆಯ ಪ್ರೋತ್ಸಾಹವೇ ಕಾರಣವೆಂದು ತನ್ನ ಆತ್ಮಕಥೆಯಲ್ಲಿ ಹೇಳಿಕೊಂಡಿದ್ದಾನೆ. ಈತ ತನ್ನ 14ನೆಯ ವಯಸ್ಸಿಗೆ ಕೆಲವು ವಿಷಯಗಳಲ್ಲಿ ಅಸಾಧಾರಣ ಪಾಂಡಿತ್ಯ ಸಂಪಾದಿಸಿ ಕೊಂಡಿದ್ದರೂ ಇತರ ವಿಷಯಗಳಲ್ಲಿ ಸಣ್ಣ ಶಾಲಾ ಬಾಲಕನೂ ನಾಚುವಂಥ ಅಜ್ಞಾನಿ ಯಾಗಿದ್ದನೆಂದು ಇವನೇ ಹೇಳಿ ಕೊಂಡಿದ್ದಾನೆ. ಈತ 15ನೆಯ ವಯಸ್ಸಿನಲ್ಲಿ ಆಕ್ಸ್‌ಫರ್ಡಿನ ಮ್ಯಾಗ್ಡಲೀನ್ ಕಾಲೇಜು ಸೇರಿದ. ಆದರೆ ಅಲ್ಲಿ ಈತ ಇದ್ದದ್ದು ಕೇವಲ 14 ತಿಂಗಳು. ಆ ಸಮಯದಲ್ಲಿ ಈತ ಕ್ರೈಸ್ತಧರ್ಮವನ್ನು ಕುರಿತು ಹೆಚ್ಚಿನ ಅಭ್ಯಾಸದಲ್ಲಿ ತೊಡಗಿದ್ದ; ಅದರ ಪರಿಣಾಮವೆಂಬಂತೆ 1753ರ ರೋಮನ್ ಕೆಥೊಲಿಕ್ ಚರ್ಚಿನ ಸದಸ್ಯನಾಗಿ ಜೂನ್ 8ರಂದು ಲಂಡನ್ ನಗರದ ಒಂದು ಚರ್ಚಿನಲ್ಲಿ ಪುರೋಹಿತನಾದ. ಆದರೆ ಇದು ಇವನ ತಂದೆಗೆ ಸರಿಬರಲಿಲ್ಲ. ಕುಪಿತನಾದ ತಂದೆ ಇವನನ್ನು ಲಾಸ್ಯಾನ್ ನಗರದಲ್ಲಿ ಕಾಲ್ವಿನ್ ಪಂಗಡಕ್ಕೆ ಸೇರಿದ ಪೆವಿಲಿಯಾನ ಬಳಿ ಬಿಟ್ಟ. ಇಲ್ಲಿ ಇವನು ಸುಮಾರು ಐದು ವರ್ಷಗಳನ್ನು ಕಳೆದ. ಆಗ ಇವನಿಗೆ ಲ್ಯಾಟಿನ್ ಮತ್ತು ಫ್ರೆಂಚ್ ಭಾಷೆ ಸಾಹಿತ್ಯಗಳಲ್ಲೂ ಗಣಿತ ತರ್ಕಶಾಸ್ತ್ರಗಳಲ್ಲೂ ಕ್ರಮಬದ್ಧವಾದ ಶಿಕ್ಷಣ ದೊರಕಿತು. ಪೆವಿಲಿಯಾನ ಪ್ರಭಾವದಿಂದ 1754ರಲ್ಲಿ ಇವನು ಕೆಥೊಲಿಕ್ ಪಂಗಡವನ್ನು ತ್ಯಜಿಸಿ ಪ್ರಾಟೆಸ್ಟಂಟ್ ಆಗಿ ಮತಾಂತರಗೊಂಡ. ಕ್ರಮೇಣ ಇವನು ಸಾಮಾಜಿಕ ಚಟುವಟಿಕೆಗಳಲ್ಲೆಲ್ಲ ಭಾಗವಹಿಸಲಾರಂಭಿಸಿದ. ಇವನ ಹಿರಿಯ ಸಮಕಾಲೀನನಾಗಿದ್ದ ವಾಲ್ಟೇರ್ ಏರ್ಪಡಿಸುತ್ತಿದ್ದ ಸತ್ಕಾರ ಸಮಾರಂಭಗಳಲ್ಲಿಯೂ ಲಾಸ್ಯಾನ್ ನಗರದ ಪ್ರತಿಷ್ಠಿತ ಸಮಾಜದಲ್ಲಿಯೂ ಈತ ಕಾಣಿಸಿಕೊಳ್ಳತೊಡಗಿದ. (ಎ.ಎಂ.)

ಪ್ರಾಪ್ತವಯಸ್ಕನಾದಾಗ ಇವನ ತಂದೆ ಈತನಿಗೆ ವಾರ್ಷಿಕವಾಗಿ 300 ಪೌಂಡುಗಳ ಆದಾಯ ಬರುವಂತೆ ವ್ಯವಸ್ಥೆ ಮಾಡಿದ (1758). ಇದು ಇವನಿಗೆ ಹೆಚ್ಚು ಸ್ವಾತಂತ್ರ್ಯ ದೊರಕಿಸಿಕೊಟ್ಟಿತು. ಸುಸೇನ್ ಚರ್ಚೋಡಳೊಂದಿಗೆ ಇವನ ಸ್ನೇಹ ಬೆಳೆಯಿತು. ಅವಳನ್ನು ಮದುವೆಯಾಗಬೇಕೆಂಬುದು ಇವನ ಅಪೇಕ್ಷೆಯಾಗಿತ್ತು. ಆದರೆ ಈತನ ತಂದೆ ಇವರ



ಮದುವೆಗೆ ಅನುಮತಿ ನೀಡಲಿಲ್ಲವಾದ ಕಾರಣ ಇವರ ಸಂಬಂಧ ಮುರಿಯಿತು. ಈ ಕಹಿ ಪ್ರಸಂಗದ ಫಲವಾಗಿ ಇವನು ಮುಂದೆ ಅವಿವಾಹಿತನಾಗಿಯೇ ಉಳಿಯ ಬೇಕಾಯಿತು. ಇದನ್ನು ಮರೆಯಲೋಸುಗ ಮುಂದಿನ ಐದು ವರ್ಷಗಳ ಕಾಲ ಪುನಃ ಅಧ್ಯಯನದಲ್ಲಿ ನಿರತನಾದ. ಇವನ ಮೊದಲ ಪ್ರಬಂಧ 1761ರಲ್ಲಿ ಫ್ರೆಂಚ್ ಭಾಷೆಯಲ್ಲಿ ಪ್ರಕಟವಾಯಿತು. ಅನಂತರ ಇದನ್ನೇ ಇಂಗ್ಲಿಷ್ ಭಾಷೆಯಲ್ಲೂ ಪ್ರಕಟಿಸಿದ. ಅಷ್ಟರಲ್ಲಿ ಏಳು ವರ್ಷಗಳ ಯುದ್ಧ ಆರಂಭವಾಯಿತು (1757–64). ಈ ಕದನದಲ್ಲಿ ಇವನೂ ಪಾಲ್ಗೊಂಡು ಕ್ಯಾಪ್ಟನ್ ಆಗಿ ನಾಡಿಗೆ ಸೇವೆ ಸಲ್ಲಿಸಿದ (1760–62). ಸೇನೆಯಿಂದ ನಿವೃತ್ತಿ ಹೊಂದಿದ ಮೇಲೆ 1763ರ ಅನಂತರ ಪುನಃ ಲಾಸ್ಯಾನ್ ನಗರಕ್ಕೆ ಹಿಂದಿರುಗಿದಾಗ ಇವನಿಗೆ ಜಾನ್‌ಬೇಕರ್ ಹಾಲ್ರಾಯ್ (ಮುಂದೆ ಲಾರ್ಡ್ ಷೆಫೀಲ್ಡ್) ಎಂಬವನ ಸ್ನೇಹ ದೊರಕಿತು. ಆತನೇ ಇವನ ವ್ಯವಹಾರಗಳನ್ನು ನಿರ್ವಹಿಸುತ್ತಿದ್ದ.

1764ರಲ್ಲಿ ಇಟಲಿಗೆ ಹೋಗಿ ಅಲ್ಲಿಯ ಪುರಾತನ ಅವಶೇಷಗಳನ್ನು ಕೂಲಂಕಷವಾಗಿ ಪರಿಶೀಲಿಸಿದ. ಅವನತಿಗೀಡಾದ ರೋಮ್ ಚಕ್ರಾಧಿಪತ್ಯದ ಇತಿಹಾಸ ಇವನು ಲ್ಯಾಟಿನ್ ಸಾಹಿತ್ಯದ ಪರಿಚಯ ಪಡೆದಾಗಲೇ ಮನಸೆಳೆದಿತ್ತು. ಮರುವರ್ಷವೇ ನೇಪಲ್ಸ್ ಮುಖಾಂತರ ಮನೆಗೆ ಹಿಂದಿರುಗಿದ. ಮುಂದಿನ ಐದು ವರ್ಷಗಳನ್ನು ವ್ಯರ್ಥವಾಗಿ ಕಳೆದ. ಫ್ರಾನ್ಸಿನಲ್ಲಿದ್ದಾಗ ಅಲ್ಲಿ ಇವನ ಮಿತ್ರರಲ್ಲೊಬ್ಬನಾದ ಜಾರ್ಜಿಸ್ ಡೇವೆರ್ಡನ್‌ನೊಡಗೂಡಿ ಮೆಮ್ವಾರ್ಸ್ ಲಿಟರೇರಿಸ್ ದ ಲಾ ಗ್ರಾಂಡ್ ಬ್ರೆಟಾನೆ ಎಂಬ ಗ್ರಂಥವನ್ನು ಬರೆದ (1768–69). 1770ರಲ್ಲಿ ಕ್ರಿಟಿಕಲ್ ಆಬ್ಸರ್ವೇಷನ್ಸ್ ಆನ್ ದಿ ಸಿಕ್ಸ್ತ್ ಬುಕ್ ಆಫ್ ದಿ ಏನೀಡನ್ನು ಪ್ರಕಟಿಸಿದ.

1770ರಲ್ಲಿ ಈತ ತಂದೆಯ ನಿಧನಾನಂತರ ಲಂಡನ್ ನಗರಕ್ಕೆ ಬಂದು ನೆಲಸಿದ. ನಗರ ಜೀವನದಲ್ಲಿ ಮೈಮರೆತು ವೈಭವೋಪೇತ ಕ್ಲಬ್‌ಗಳ ಸದಸ್ಯನಾದ. ಜಾನ್ಸನ್ ಕ್ಲಬ್ ಸದಸ್ಯನಾಗಿ ಚುನಾಯಿತನಾದ. ಸಾಹಿತಿ ಜಾನ್ಸನನ ಹಾಗೂ ಬಾಸ್ವೆಲನ ಟೀಕೆಗಳಿಗೆ ಗುರಿಯಾದ. ಇವನು 1774ರಲ್ಲಿ ಪಾರ್ಲಿಮೆಂಟಿನ ಸದಸ್ಯನಾದ. ಆ ವೇಳೆಗೆ ನಿಧಾನವಾಗಿ ತನ್ನ ಮುಖ್ಯಗ್ರಂಥವನ್ನು ಬರೆಯಲು ತೊಡಗಿದ. ಇವನ ಆ ಗ್ರಂಥದ ಮೊದಲ ಸಂಪುಟ 1776ರ ಫೆಬ್ರುವರಿ 16ರಂದು ಪ್ರಕಟವಾಯಿತು. ಇದು ಇವನಿಗೆ ಹೆಸರನ್ನೂ ಪ್ರಸಿದ್ಧಿಯನ್ನೂ ತಂದಿತು. ಈ ಗ್ರಂಥ ಅನೇಕರ ಶ್ಲಾಘನೆಗೂ ಕಟುಟೀಕೆಗೂ ಒಳಗಾಯಿತು. ಇದರ 15, 16ನೆಯ ಅಧ್ಯಾಯಗಳು ಕ್ರೈಸ್ತಧರ್ಮದ ಉಗಮವನ್ನು ಕುರಿತವು. ಇವನ ಗ್ರಂಥದ ಪ್ರಚಾರಕ್ಕೆ ಇದೂ ಒಂದು ಕಾರಣ.

ಲಾರ್ಡ್ ನಾರ್ತ್ ಇಂಗ್ಲೆಂಡಿನ ಪ್ರಧಾನಿಯಾದಾಗ 1779 ಇವನಿಗೆ ಲಾಭದಾಯಕವಾದ ಹುದ್ದೆ ದೊರಕಿತು. ಅನ್ ಮೆಮ್ವಾರ್ ಜಸ್ಟಿಫಿಕೇಟಿವ್ ಎಂಬ ಶೀರ್ಷಿಕೆಯಲ್ಲಿ ಒಂದು ರಾಜ್ಯಪತ್ರವನ್ನು ಹೊರಡಿಸಿ ಬ್ರಿಟಿಷ್ ಸರ್ಕಾರದ ಅಮೆರಿಕ ನೀತಿಯನ್ನು ಸಮರ್ಥಿಸಿದ. 1782ರಲ್ಲಿ ನಾರ್ತನ ಸರ್ಕಾರ ಬಿದ್ದಾಗ ಈತನೂ ತನ್ನ ಹುದ್ದೆ ಕಳೆದುಕೊಂಡ. ಅನಂತರ ಈತ ಲಾಸ್ಯಾನ್ ನಗರಕ್ಕೆ ಹಿಂತಿರುಗಿ ಇವನ ಇತಿಹಾಸದ 2, 3ನೆಯ ಸಂಪುಟಗಳು 1781ರಲ್ಲೂ 4, 5 ಮತ್ತು 6ನೆಯ ಸಂಪುಟಗಳು 1787ರಲ್ಲೂ

ಬಂದುವು. ಕೊನೆಯ 6ನೆಯ ಸಂಪುಟ ಪ್ರಕಟವಾದ್ದು ಇವನ 51ನೆಯ ಹುಟ್ಟುಹಬ್ಬದಂದು. ಇವನ ಆಪ್ತಮಿತ್ರ ಜಾರ್ಜಿಸ್ 1789ರಲ್ಲಿ ನಿಧನನಾದ. ಅವನ ಅಗಲಿಕೆ ಇವನಿಗೆ ತೀವ್ರ ಆಘಾತವಾಯಿತು. ಈ ಘಟನೆಯಿಂದ ಇವನು ಅನಾರೋಗ್ಯಕ್ಕೀಡಾಗಿ 1794 ಜನವರಿ 16ರಂದು ಲಂಡನ್ನಿನಲ್ಲಿ ನಿಧನನಾದ. ರೋಮ್ ಚಕ್ರಾಧಿಪತ್ಯದ ಅವನತಿ ಕುರಿತು ಬರೆದ ಗ್ರಂಥ ಇಂದಿಗೂ ಮೇರು ಕೃತಿಯಾಗಿದೆ. ಇತಿಹಾಸಕ್ಕೆ–ಅದರ ನಿರೂಪಣೆಗೆ–ಸಂಬಂಧಿಸಿದಂತೆ ಹಲವಾರು ಸಮಸ್ಯೆಗಳನ್ನು ಇತಿಹಾಸಕಾರರ ಮುಂದೆ ಇಡುವುದರ ಮೂಲಕ ಇವನು ಇತಿಹಾಸದ ಅಧ್ಯಯನಕ್ಕೆ ವಿಶಿಷ್ಟವಾದ ಕಾಣಿಕೆ ನೀಡಿದ್ದಾನೆ. ಇತಿಹಾಸಕ್ಕೆ ಇವನು ನೀಡುವ ಅರ್ಥ ನಿಷ್ಠುರವಾದ್ದು. ಮಾನವ ಎಸಗಿದ ಘೋರ ಅನ್ಯಾಯಗಳ, ಪಾತಕಗಳ ದುರದೃಷ್ಟದ ವರದಿಯೇ ಇತಿಹಾಸ ಎಂದಿದ್ದಾನೆ.

ಅನೇಕ ಪರಿಮಿತಿಗಳಿದ್ದರೂ ಇವನ ಬರವಣಿಗೆಯ ಶೈಲಿ ಉತ್ತಮವಾದುದು. ಇವನು ಕೆಲವು ಘಟನೆಗಳನ್ನು ಕುರಿತು ಮಾಡಿರುವ ಅನೇಕ ನಿರ್ಣಯಗಳು ಇತ್ತೀಚಿನ ಶೋಧನೆಗಳಿಂದ ಖಚಿತಗೊಂಡಿವೆ. ತನ್ನ ಗ್ರಂಥವನ್ನು ಬರ್ಬರತೆ ಹಾಗೂ ಮತದ ವಿಜಯೋತ್ಸವದ ದಾಖಲೆ ಎಂದು ಹೇಳಿಕೊಂಡಿದ್ದಾನೆ. ಪ್ರ. ಶ. ಎರಡನೆಯ ಶತಮಾನದಿಂದ ಆರಂಭವಾಗುವ ರೋಮ್ ಚಕ್ರಾಧಿಪತ್ಯದ ಇತಿಹಾಸದ ಮೊದಲನೆಯ ಅರ್ಧ 480ರ ವರೆಗಿನ ಘಟನೆಗಳಿಗೆ ಮೀಸಲಾಗಿದೆ. ಉಳಿದರ್ಧದಲ್ಲಿ 1453ರಲ್ಲಿ ಸಂಭವಿಸಿದ ಕಾನ್‌ಸ್ಟಾಂಟಿನೋಪಲ್ ಪತನದವರೆಗಿನ ಕಥೆ ಇದೆ. ಉತ್ತಮ ನಾಗರಿಕ ಸಂಸ್ಕೃತಿಯನ್ನು ಹೊಂದಿದ್ದ ರೋಮ್‌ನ ನೈತಿಕ ಪತನವೇ ಆ ಚಕ್ರಾಧಿಪತ್ಯದ ಅಳಿವಿಗೆ ಮೂಲ ಕಾರಣ ಎಂದು ಹೇಳಿದ್ದಾನೆ. ಆಂಟೋನೈನ್ ಯುಗ ರೋಮ್ ಇತಿಹಾಸದ ಸುವರ್ಣಯುಗ. ಅನಂತರ ಕಾಣುವುದು ಅದರ ಪತನ ಎಂಬುದು ಇವನ ವಾದದ ರೀತಿ. ಇವನ ಆತ್ಮಕಥೆ ಈತನ ನಿಧನಾನಂತರ ಪ್ರಕಟವಾಯಿತು. (ಬಿ.ಆರ್.ಜಿ.)

**ಗಿಬ್ಸ್, ಜೋಸಯಾ ವಿಲಾರ್ಡ್ :** 1839–1903. ಅಮೆರಿಕದ ಭೌತವಿಜ್ಞಾನಿ. ಅಮೆರಿಕದ ಕನೆಕ್ಟಿಕಟ್ ಪ್ರಾಂತದ ನ್ಯೂ ಹೇವನ್ ಎಂಬಲ್ಲಿ 11 ಫೆಬ್ರವರಿ 1839ರಂದು ಜನಿಸಿದ. 1858ರಲ್ಲಿ ಯೇಲ್ ವಿಶ್ವವಿದ್ಯಾಲಯದಿಂದ ಬಿ.ಎಸ್. ಪದವಿಯನ್ನೂ 1863ರಲ್ಲಿ ಅದೇ ವಿಶ್ವವಿದ್ಯಾಲಯದ ಪಿಎಚ್.ಡಿ.ಪದವಿಯನ್ನೂ ಪಡೆದು 1869ರ ವರೆಗೆ ಸ್ನಾತಕೋತ್ತರ ಅಭ್ಯಾಸಗಳನ್ನು ಯುರೋಪಿನಲ್ಲಿ ಮಾಡಿದ. ಯುರೋಪಿನಿಂದ ಹಿಂತಿರುಗಿದ ಬಳಿಕ 1871ರಿಂದ ತನ್ನ ಕೊನೆಯ ದಿನದ ವರೆಗೂ ಯೇಲ್ ವಿಶ್ವವಿದ್ಯಾಲಯದಲ್ಲಿ ಗಣಿತೀಯ ಭೌತವಿಜ್ಞಾನದ ಪ್ರಾಧ್ಯಾಪಕನಾಗಿ ಸೇವೆ ಸಲ್ಲಿಸಿದ.

1873–78ರ ಅವಧಿಯಲ್ಲಿ ರಸಾಯನವಿಜ್ಞಾನದ ಅಧ್ಯಯನದಲ್ಲಿ ಉಷ್ಣಗತಿವಿಜ್ಞಾನದ (ಥರ್ಮೋಡೈನಮಿಕ್ಸ್) ಉಪಯೋಗದ ಬಗ್ಗೆ ಮೂರು ಲೇಖನಗಳನ್ನು ಪ್ರಕಟಿಸಿದ. ಈ ಸಂಶೋಧನರಂಗದಲ್ಲಿ ಅವನ ಮೊದಲ ಲೇಖನವಾದ ದ್ರವಾನಿಲಗಳ ಉಷ್ಣಗತಿ ಶಾಸ್ತ್ರದಲ್ಲಿ ರೇಖಾಪದ್ಧತಿಗಳು 1873ರಲ್ಲಿ ಪ್ರಕಟವಾಗಿ ಉಷ್ಣಗತಿಶಾಸ್ತ್ರ ಮತ್ತು ಭೌತರಸಾಯನವಿಜ್ಞಾನಗಳ ಅಧ್ಯಯನದಲ್ಲಿ ಪ್ರಾವಸ್ಥಾ ಸೂತ್ರವಿಧಿ(ಫೇಸ್ ರೂಲ್) ಎಂಬ ಹೊಸ ಅಧ್ಯಾಯಕ್ಕೆ ಆರಂಭವಾಯಿತು. ಈ ಲೇಖನಮಾಲಿಕೆಯಲ್ಲಿ ಅತಿ ಮುಖ್ಯವಾದ ಮತ್ತು ಅವನಿಗೆ ಬಹು ಕೀರ್ತಿ ತಂದ ಲೇಖನವೆಂದರೆ ವಿಷಮ ವಸ್ತುಗಳ ನಡುವಣ ಸಮತೋಲ. ಇದು 1876–78ರ ಅವಧಿಯಲ್ಲಿ ಹಲವು ಭಾಗಗಳಾಗಿ ಪ್ರಕಟವಾಯಿತು. ಅಮೆರಿಕನ್ ಅಕಾಡೆಮಿ ಆಫ್ ಆರ್ಟ್ಸ್ ಅಂಡ್ ಸೈನ್ಸ್ ಸಂಸ್ಥೆಯು 1880ರಲ್ಲಿ ರುಮ್ ಫೋರ್ಡ್ ಪದಕವನ್ನಿತ್ತು ಸನ್ಮಾನಿಸಿತು.

ಗಣಿತ ಮತ್ತು ಭೌತವಿಜ್ಞಾನಗಳಲ್ಲಿ ಈಗ ಒಂದು ಅತ್ಯವಶ್ಯ ಭಾಗವೆನಿಸಿರುವ ಸದಿಶವಿಶ್ಲೇಷಣೆಯ (ವೆಕ್ಟರ್ ಅನಾಲಿಸಿಸ್) ಅಭ್ಯಾಸಕ್ಕೆ 1881ರಲ್ಲಿ ಅಡಿಗಲ್ಲು ಹಾಕಿ ಅದನ್ನು ಗ್ರಹ, ಧೂಮಕೇತುಗಳ ಕಕ್ಷೆಗಳನ್ನು ಕಂಡುಹಿಡಿಯುವುದಕ್ಕೂ ಹರಳುಗಳ ರಚನೆಗಳನ್ನು ತಿಳಿಯುವುದಕ್ಕೂ ಗಿಬ್ಸ್ ಉಪಯೋಗಿಸಿದ. 1902ರಲ್ಲಿ ಪ್ರಕಟವಾದ ಅವನ ಕೊನೆ ಲೇಖನದ ಹೆಸರು ಸಂಖ್ಯಾಕಲನಶಾಸ್ತ್ರದ (ಸ್ಟ್ಯಾಟಿಸ್ಟಿಕ್ಸ್) ಮೂಲ ನಿಯಮಗಳು. ಇದು ಸಂಖ್ಯಾಕಲನಶಾಸ್ತ್ರದ ಬೆಳವಣಿಗೆಗೆ ಬಹು ನೆರವು ನೀಡಿತು. ಭೌತರಸಾಯನವಿಜ್ಞಾನದ ಆರಂಭಕ್ಕೆ ಕಾರಣನಾದ ಮಹಾವಿಜ್ಞಾನಿಯೆಂದೂ ಉಷ್ಣಗತಿ ಶಾಸ್ತ್ರದ ಎರಡನೆಯ ನಿಯಮವನ್ನು ರಾಸಾಯನಿಕ, ವಿದ್ಯುತ್ ಮತ್ತು ಉಷ್ಣಶಕ್ತಿಗಳಿಗೆ ಅಳವಡಿಸಿ ಅವುಗಳಿಂದ ಪಡೆಯಬಲ್ಲ ಉಪಯುಕ್ತ ಕ್ರಿಯಾಶಕ್ತಿಗಳ ಬಗ್ಗೆ ಸಂಶೋಧನೆ ನಡೆಸಿದ ಮೊದಲಿಗನೆಂದೂ ಗಿಬ್ಸ್‌ನನ್ನು ಗೌರವಿಸಿ ರಾಯಲ್ ಸೊಸೈಟಿ 1901ರಲ್ಲಿ ಕಾಪ್ಲೇ ಪದಕವನ್ನಿತ್ತು ಸನ್ಮಾನಿಸಿತು. ಗಿಬ್ಸ್‌ನ ಸಂಶೋಧನೆಗಳು ಉಷ್ಣಗತಿಶಾಸ್ತ್ರದ ಅಧ್ಯಯನದಲ್ಲಿ ಅವನ ಹೆಸರು ಸ್ಥಿರವಾಗಿ ನಿಲ್ಲುವಂತೆ ಮಾಡಿವೆ. ಅವನ ಹೆಸರು ಪಡೆದಿರುವ ಗಿಬ್ಸ್–ಡೂಹೆಮ್ ಮತ್ತು ಗಿಬ್ಸ್–ಹೆಲ್ಮ್‌ಹಾಲ್ಟ್ಸ್ ಸಮೀಕರಣಗಳು ಅವನ ಸಂಶೋಧನೆಗಳ ಮೌಲ್ಯಕ್ಕೆ ಸಾಕ್ಷಿಯಾಗಿವೆ.


ಗಿಬ್ಸ್‌ನ ಮರಣಾನಂತರ ಯೇಲ್ ವಿಶ್ವವಿದ್ಯಾಲಯ ಆತನ ಬರಹಗಳನ್ನು ಸಂಕಲಿಸಿ 1928ರಲ್ಲಿ ಎರಡು ಸಂಪುಟಗಳಾಗಿ ಪ್ರಕಟಿಸಿತು. ಈ ಸಂಪುಟ ಅನೇಕ ಪ್ರಸಿದ್ಧ ವಿಜ್ಞಾನಿಗಳ ಲೇಖನಗಳಿಂದ ಕೂಡಿದೆ. ಜೆ. ವಿಲಾರ್ಡ್ ಗಿಬ್ಸ್‌ನ ವೈಜ್ಞಾನಿಕ ಬರೆಹಗಳನ್ನು ಕುರಿತು ವ್ಯಾಖ್ಯಾನ ಎಂಬ ಸನ್ಮಾನ ವಿಶ್ಲೇಷಣ ಗ್ರಂಥ 1936ರಲ್ಲಿ ಎರಡು ಸಂಪುಟಗಳಾಗಿ ಪ್ರಕಟವಾಯಿತು. ಗಿಬ್ಸ್‌ನ ಶಿಷ್ಯರಲ್ಲೊಬ್ಬನಾದ ಎಲ್. ಪಿ. ವ್ಹೀಲರ್ ಎಂಬಾತ ಬರೆದ ಜೋಸಯಾ ವಿಲಾರ್ಡ್ ಗಿಬ್ಸ್–ಮಹಾ ಪ್ರಜ್ಞೆಯೊಂದರ ಚರಿತ್ರೆ ಎಂಬ ಪುಸ್ತಕ 1852ರಲ್ಲಿ ಪ್ರಕಟವಾಯಿತು. (ಕೆ.ಟಿ.ಎಸ್.)

**ಗಿಬ್ಸನ್, ವಿಲ್ಫ್ರೆಡ್ ವಿಲ್ಸನ್ :** 1878–1962. ಜಾರ್ಜಿಯನ್ ಕಾವ್ಯಪಂಥದ ನಾಯಕರಲ್ಲೊಬ್ಬ. ಟೆನಿಸನ್ ಪಂಥವನ್ನು ವಿರೋಧಿಸಿ ಜನಜೀವನವನ್ನು ಕಾವ್ಯಕ್ಕೆ ವಸ್ತುವನ್ನಾಗಿ ಬಳಸಿಕೊಂಡು ವಿಪುಲವಾಗಿ ಕಾವ್ಯರಚನೆಮಾಡಿದ ಕವಿ. ಈತ ಇಂಗ್ಲೆಂಡಿನ ನಾರ್ತಂಬರ್‌ಲೆಂಡ್ ಜಿಲ್ಲೆಯಲ್ಲಿ ಜನಿಸಿದ. ಆರ್ಲಿನ ದಿ ಹಾರ್ಪರ್ ಮತ್ತು ದಿ ಕ್ವೀನ್ಸ್ ವಿಜಿಲ್ ಇವನ ಪ್ರಥಮ ಕವನ ಸಂಕಲನಗಳು (1902). ಮೊದಲು ಟೆನಿಸನ್ನನನ್ನು ಅನುಕರಿಸಿದನಾದರೂ ಕ್ರಮೇಣ ಆ ಹಾದಿಯನ್ನು ಬಿಟ್ಟು ತನ್ನ ಜಿಲ್ಲೆಯ ವಿಶಿಷ್ಟ ಕವಿಯಾಗಿ, ಅಲ್ಲಿನ ಜನಜೀವನದ ಸಾಹಿತಿಯಾಗಿ ಈತ 1907ರ ವೇಳೆಗೆ ಪ್ರಸಿದ್ಧನಾದ. ವಿಲಿಯಂ ವರ್ಡ್ಸ್‌ವರ್ತನಂತೆಯೇ ಸರಳವಾದ, ನಿಸರ್ಗಕ್ಕೆ ಹತ್ತಿರವಾದ ಕವಿತಾ ವಸ್ತುವನ್ನು ಉಪಯೋಗಿಸಿಕೊಂಡು ಇನ್ನೂ ಒಂದು ಹೆಜ್ಜೆ ಮುಂದುವರಿದ. ನಾರ್ತಂಬರ್‌ಲೆಂಡ್ ಪ್ರದೇಶದ ರೈತರು, ಕೂಲಿಗಳು, ಗಣಿ ಕೆಲಸಗಾರರು, ಬಂಡಿ ಹೊಡೆಯುವವರು, ಕಲ್ಲು ಒಡೆಯುವವರು, ಕುರಿ ಕಾಯುವವರು, ಅಲೆಮಾರಿಗಳು ಮುಂತಾದ ನೆಲದ ಮಕ್ಕಳ ಸರಳವಾದ ಬದುಕಿನ ಸುಖ ದುಃಖಗಳನ್ನು ತನ್ನ ಕವಿತೆಗಳಲ್ಲಿ ನೇರವಾಗಿ, ಮನಮುಟ್ಟುವಂತೆ ಅಭಿವ್ಯಕ್ತಿಗೊಳಿಸಿದ. ಸ್ಟೋನ್‌ಫೋಲ್ಡ್ಸ್ (1906) ಈ ರೀತಿಯ ಮೊದಲ ಕವನ ಸಂಕಲನ. ಅಲ್ಲಲ್ಲಿ ಜನರ ನುಡಿಗಟ್ಟುಗಳನ್ನೇ ಬಳಸಿ ಪ್ರಾದೇಶಿಕ ಭಾಷೆಗೆ ಬರ್ನ್ಸ್‌ನಂತೆ ಕಾವ್ಯದಲ್ಲಿ ಸ್ಥಾನಮಾಡಿಕೊಟ್ಟ ಕೀರ್ತಿ ಗಿಬ್ಸನ್ನನದು. ಡೇಲಿ ಬ್ರೆಡ್ (1910) ಸೊಗಸಾದ ಕಾವ್ಯನಾಟಕ. ನಿಸರ್ಗದ ಚೆಲುವನ್ನೂ ರೈತಕೂಲಿಗಳ ಸಂಕಟವನ್ನೂ ಒಳಗೊಂಡ ಈ ನಾಟಕ ರಂಗಭೂಮಿಗೆ ಪ್ರಜ್ಞಾವಂತ ಸಾಮಾಜಿಕ ಕೊಡುಗೆ. ವಿಮೆನ್‌ಕೈಂಡ್ (1912), ಕೆಸ್ಟ್ರೆಲ್ ಎಜ್ (1924), ವಿದಿನ್ ಫೋರ್ ವಾಲ್ಸ್ (1950)–ಇವು ಇವನ ಇತರ ನಾಟಕಗಳು. ಬಡ ಜನರ ಬದುಕಿನಿಂದ ಒರಟು ಮತ್ತು ಅಸಂಸ್ಕೃತ ಘಟನೆಗಳಿಂದ ತನ್ನ ಕಾವ್ಯಕ್ಕೆ ಪ್ರತಿಮೆಗಳನ್ನು ವಸ್ತುವನ್ನು ಗಿಬ್ಸನ್ ಆಯ್ದುಕೊಂಡು ತನ್ನ ಕೃತಿಗಳಲ್ಲಿ ಮಾನವೀಯ ಸಹೃದಯತೆಯಿಂದ ಈ ಬಡಜನರ ಬಗ್ಗೆ ಅನುಕಂಪ ಮತ್ತು ಸೌಹಾರ್ದಗಳನ್ನು ಸೂಸಿದ್ದಾನೆ. ಜನರ ಭಾಷೆ, ನುಡಿಗಟ್ಟು, ಆಡುಮಾತು– ಇವುಗಳ ಪದಬಂಧ, ಲಯ, ರೀತಿಗಳನ್ನೇ ಉಳಿಸಿಕೊಂಡು ಮಾತನಾಡುವ ಸಾಮಾನ್ಯ ಬಗೆಯನ್ನೇ ಕಾವ್ಯರೂಪವನ್ನಾಗಿ ಮಾಡಿಕೊಂಡು ಮುಕ್ತಛಂದದಲ್ಲಿ ತನ್ನ ಕವಿತೆಗಳನ್ನು ಗಿಬ್ಸನ್ ರಚಿಸಿದ್ದಾನೆ. ಒಮ್ಮೊಮ್ಮೆ ಮಾತ್ರ ಪ್ರಾಸ ಬಳಸಿರುವುದೂ ಉಂಟು. ಛಂದಕ ಬಂಧದಲ್ಲಿ ಸೊಗಸಾದ ಧ್ವನಿಪೂರ್ಣ ಕವಿತೆಗಳಲ್ಲಿಯೂ ಕಾವ್ಯನಾಟಕಗಳಲ್ಲಿಯೂ ತುಂಬಿ, ಅವೆಲ್ಲವನ್ನೂ ಕಾವ್ಯವನ್ನಾಗಿಸಿದೆ. ಈತನ ನಾಟಕಗಳಲ್ಲಿ, ಕಥನ ಕವನಗಳಲ್ಲಿ ಸರಳ ಜೀವಿಗಳ ಸರಳ ಸುಖಸಂಕಟಗಳ ಸರಳನಿರೂಪಣೆಯಿದ್ದು ಅವು ಮನತಾಗುವಂತಿವೆ. ಅದ್ಭುತ ಮತ್ತು ಅಮಾನುಷಗಳ ಗೊಡವೆಗೇ ಹೋಗದಿದ್ದರೂ ಫ್ಲಾನನ್ ಐಲ್‌ನಂಥ ಕವಿತೆಯಲ್ಲಿ ಬಹುಸುಂದರವಾಗಿ ಅದ್ಭುತ ರಮ್ಯ ಭಯಂಕರಗಳ ಧ್ವನಿ ಚಿತ್ರಣ ಕಾಣಬಹುದು.

ಇವನ ಕಥನ ಕವನಗಳೆಲ್ಲ ನಾಟಕಾಂಶದಿಂದ ಬೆಳಗುತ್ತವೆ. ಈ ನಾಟಕೀಯ ಬಗೆಗೆ ದೇಸೀಪದಗಳಿಂದ ಕಳೆಗಟ್ಟಿದೆ. ಕೆಲವೆಡೆಗಳಲ್ಲಿ ಪದ್ಯದ ಗದ್ಯತನ ಕಾಣಿಸಿದಂತೆನಿಸಿದರೂ ಸಾಮಾನ್ಯವಾಗಿ ಆಡುಮಾತಿನ ಲಯ ಮತ್ತು ಜೀವಂತಿಕೆ ಇದೆ. ಬಾರ್ಡರ್ ಲ್ಯಾಂಡ್ (1914). ಫೈರ್ಸ್ (1912), ಹೋಂ (1920), ಫ್ಯೂಯೆಲ್, ಹಜ಼ಾರ್ಡ್ (1930), ಐಲೆಂಡ್ಸ್ (1932), ಚ್ಯಾಲೆಂಜ್ (1942), ದಿ ಔಟ್ ಪೋಸ್ಟ್ (1944), ದಿ ಐಲೆಂಡ್ ಸ್ಟ್ಯಾಗ್ (1947) ಮುಂತಾದವು ಇವನ ಸುಮಾರು 40 ಕವನ ಸಂಗ್ರಹಗಳಲ್ಲಿ ಮುಖ್ಯವಾದುವು. ಕಾರ್ಖಾನೆಯ ಕೂಲಿಗಾರರ ಮತ್ತು ಬಡವರ ಕವಿಯಾಗಿ ಈತ ಅವರ ನೋವು ನಲಿವುಗಳನ್ನೂ ಕೈಗಾರಿಕಾ ಜೀವನದ ನೈಜಚಿತ್ರಣವನ್ನೂ ಈ ಕವನಗಳಲ್ಲಿ ಚಿತ್ರಿಸಿದ್ದಾನೆ. ನಮ್ಮ ಕಣ್ಣಮುಂದೆಯೇ ಘಟನೆಗಳು ನಡೆಯುವಂತೆ ಕಣ್ಣಿಗೆ ಕಟ್ಟುವ ಚಿತ್ರ ನೇಯುತ್ತಾನೆ, ಗಿಬ್ಸನ್. ಆ ಕಾಲದ ಸಮಾಜದ ಮನಸ್ಸಾಕ್ಷಿ ಎಂದೂ ನಾರ್ತಂಬರ್ ಲೆಂಡ್ ನೆಲದ ಕವಿಯೆಂದೂ ಈತ ಪ್ರಖ್ಯಾತ. (ಎಸ್.ಎ.ಎನ್.)


**ಗಿಯರ್ :** ಆವರ್ತಿಸುತ್ತಿರುವ ಎರಡು ತಾಳುಗಳ (ಷ್ಯಾಫ್ಟ್ಸ್) ಕೇಂದ್ರದೂರ ಅತಿ ಹೆಚ್ಚಾಗಿಲ್ಲದಿರುವಾಗ ಅವುಗಳ ನಡುವೆ ಚಲನೆಯನ್ನು ವರ್ಗಾಯಿಸಲು ಬಳಸುವ ಒಂದು ಯಾಂತ್ರಿಕಾಂಶ. ಅಂದರೆ ತಾಳುಗಳು ಪರಸ್ಪರ ಸಮೀಪವಾಗಿರುವಲ್ಲಿ ಮಾತ್ರ

ಗಿಯರಿನ ಉಪಯೋಗ. ಗಿಯರ್ ಎಂದರೆ ಸ್ಥೂಲವಾಗಿ ಒಂದು ದಂತಚಕ್ರ. ಪಟ್ಟಿ ಚಾಲನೆ (ಬೆಲ್ಟ್ ಡ್ರೈವ್), ರಜ್ಜು ಚಾಲನೆ ಮತ್ತು ಘರ್ಷಣ ಚಕ್ರ–ಇವುಗಳಿಗೆ ಹೋಲಿಸಿದಂತೆ ಗಿಯರ್ ಚಾಲನೆಯಲ್ಲಿ ಜಾರುವಿಕೆ ಅಥವಾ ಸರ್ಪಣಕ್ರಿಯೆಯಿಲ್ಲದೆ ಶಕ್ತಿ ಸಾಗಣೆ ಧನಾತ್ಮಕವೂ ವೇಗಾನುಪಾತ ಖಚಿತವೂ ಆಗಿರುತ್ತದೆ. ತಾಳುಗಳು ಕೊಂಚ ದೂರವಾಗಿರುವಾಗ ಇಂಥದೇ ಧನಾತ್ಮಕ ಚಾಲನೆ ಬೇಕಾದರೆ ಸರಪಣಿಯನ್ನು





ಚಿತ್ರ: 1. ಗಿಯರ್ ದಂತದ ಪ್ರಧಾನ ಭಾಗಗಳು: 1. ಅಡೆಂಡಂ, 2. ಡಿಡೆಂಡಂ, 3. ಸೂತ್ರಾಂತರ, 4. ಪ್ಲಾಂಕ್, 5. ಕೆಳಮೈ, 6. ಮೂಲಫಿಲೆಟ್, 7. ಮೂಲವೃತ್ತ, 8. ಆಧಾರವೃತ್ತ, 9. ಅಡೆಂಡಂ ವೃತ್ತ, 10. ಮೇಲ್ಮೈ, 11. ದಂತಾಂತರ, 12. ವರ್ತುಳೀಯ ಸೂತ್ರಾಂತರ, 13. ಮುಖ, 14. ಮುಖದ ಅಗಲ, 15. ದಂತದ ದಪ್ಪ

ಉಪಯೋಗಿಸಬೇಕಾಗುತ್ತದೆ. ತಾಳುಗಳು ಪರಸ್ಪರ ಸಮಾಂತರವಾಗಿರುವುದು, ಛೇದಿಸುವಂತಿರುವುದು, ಅಥವಾ ಸಮಾಂತರವೂ ಅಲ್ಲದೆ ಛೇದಕವೂ ಅಲ್ಲದೆ ಇರುವುದು ಇಂಥ ಸಂದರ್ಭಗಳಿಗೆ ಅನುಗುಣವಾಗಿ ಗಿಯರುಗಳ ರೂಪ ವ್ಯತ್ಯಾಸವಾಗುತ್ತದೆ. ಅನುಕ್ರಮವಾಗಿ ಇವನ್ನು ಸ್ಪರ್ ಗಿಯರ್, ಬೆವೆಲ್ ಗಿಯರ್ ಮತ್ತು ವರ್ಮ್ ಗಿಯರುಗಳಿಂದ ಉದಾಹರಿಸಬಹುದು. ಕೂಡಿಕೆಗೊಂಡ ಎರಡು ಗಿಯರುಗಳಿಂದ ವರ್ಗಾವಣೆಗೊಳ್ಳುವ ಚಲನೆ ಶುದ್ಧಗತೀಯವಾಗಿ (ಕೈನ್‌ಮೆಟಿಕಲಿ) ಗಿಯರ್ ಸೂತ್ರಾಂತರ ಮೈಗಳಿಗೆ (ಗಿಯರ್ ಪಿಚ್ ಸರ್ಫೇಸಸ್) ಸರ್ವಸಮವಾಗಿರುವ ಉರುಳುವ ಮೈಗಳ ಚಲನೆಗೆ ಸಮಾನವಾಗಿದ್ದರೂ ಒಂದು ಗಿಯರ್ ಹಲ್ಲಿನ ಮೇಲೆ ಇನ್ನೊಂದು ಗಿಯರ್ ದಂತ ಕ್ರಿಯೆ ಸಾಮಾನ್ಯವಾಗಿ ಉರುಳು ಹಾಗೂ ಜಾರು ಚಲನೆಗಳ ಒಂದು ಸಂಯೋಜನೆ.




ಚಿತ್ರ 2. ಸ್ಪರ್ ಗಿಯರುಗಳ ಲಕ್ಷಣಗಳು: 1. ಗಿಯರ್, 2. ಆಧಾರವೃತ್ತ, 3. ಸೂತ್ರಾಂತರ ವೃತ್ತ, 4. ಒತ್ತಡ ಕೋನ, 5. ಸೂತ್ರಾಂತರ ಕೋನ, 6. ಆಧಾರವೃತ್ತ, 7. ಪಿನಿಯನ್, 8. ಚಾಲಕ, 9. ಅಂತರ್ವಲಿತ, 10. ಅಂತವರ್ಲಿತ, 11. ಉಭಯಸಾಮಾನ್ಯ ಸ್ಪರ್ಶಕ, 12. ಚಾಲಿತ, 13. ಕ್ರಿಯಾರೇಖೆ

ಎರಡು ಸಾದಾ ಚಕ್ರಗಳಲ್ಲಿ ಒಂದರ ಅಂಚು ಮತ್ತೊಂದಕ್ಕೆ ಒತ್ತಿ ಹಿಡಿದಂತೆ ಇರುವಾಗ ಒಂದನ್ನು ತಿರುಗಿಸಿದಾಗ ಮತ್ತೊಂದು ತಿರುಗುವುದಷ್ಟೆ. ಶಕ್ತಿಯ ಅಥವಾ ಚಾಲನೆಯ ಸಾಗಣೆಗೆ ಇಲ್ಲಿ ಎರಡು ಮೈಗಳ ನಡುವಣ ಘರ್ಷಣೆ ಮಾತ್ರ ಕಾರಣ. ಚಕ್ರಗಳ ಅಂಚಿನ ಮೇಲ್ಮೈಯಲ್ಲಿ ದಂತಗಳನ್ನು ಎಂದರೆ ಹಲ್ಲುಗಳನ್ನು ಕೊರೆದರೆ ಅವು ಗಿಯರ್ ಚಕ್ರಗಳಾಗುತ್ತವೆ. ದಂತಗಳು ಕೊಂಚ ಭಾಗ ಈ ಸಾದಾ ಚಕ್ರದ ಅಂಚಿನ ಮೇಲುಗಡೆಗೂ ಉಳಿದ ಭಾಗ ಕೆಳಗಡೆಗೂ ಇರುತ್ತವೆ. ದಂತದ ನಡುವಣ ಹಿಡಿತದಿಂದಾಗಿ ಶಕ್ತಿಯ ಸಾಗಣೆ ಹೆಚ್ಚು ಭದ್ರವಾಗುತ್ತದೆ. ಗಿಯರ್ ಚಕ್ರಕ್ಕೆ ಸಂಬಂಧಿಸಿದಂತೆ ಈ ಕಲ್ಪಿತ ಸಾದಾ ಚಕ್ರವನ್ನು ಪ್ರತಿನಿಧಿಸುವ ವೃತ್ತಕ್ಕೆ ಸೂತ್ರಾಂತರ ವೃತ್ತ (ಪಿಚ್ ಸರ್ಕಲ್) ಎಂದು ಹೆಸರು. ಗಿಯರ್ ಚಕ್ರದ ಈ ಕಲ್ಪಿತ ಸೂತ್ರಾಂತರ ವೃತ್ತ ಅಡೆಂಡಂ ವೃತ್ತ ಎಂಬ ಹೆಸರಿನ ದಂತಗಳ ಹೊರ ವೃತ್ತಕ್ಕೂ ಇರುವ ಅರೀಯ (ರೇಡಿಯಲ್) ಅಂತರಕ್ಕೆ ಅಡೆಂಡಂ ಎಂದು ಹೆಸರು. ಸ್ಪರ್ ಗಿಯರುಗಳಲ್ಲಿ (ದುಂಡು ಚಕ್ರದ ಮೇಲೆ ದಂಶ ಕೊರೆದಿರುವಂಥವು) ಅಡೆಂಡಂ ಒಂದೇ ಅಳತೆಯದಾಗಿದ್ದರೆ, ಬೆವೆಲ್ ಗಿಯರುಗಳಲ್ಲಿ (ಶಂಕು ಭಾಗದ ಮೇಲೆ ದಂತ ಕೊರೆದಿರುವಂಥವು) ಚಕ್ರದ ಒಳ ಮುಖದಿಂದ ಹೊರಮುಖದ ವರೆಗೆ ಅಡೆಂಡಂ ಅಳತೆ ಹೆಚ್ಚುತ್ತ ಹೋಗುತ್ತದೆ. ಒಳಮುಖದ ಅಡೆಂಡಂ ವೃತ್ತದ ಮತ್ತು ಹೊರಮುಖದ ಅಡೆಂಡಂ ವೃತ್ತದ ವ್ಯಾಸಗಳ ವ್ಯತ್ಯಾಸದ ಅರ್ಧದಷ್ಟಕ್ಕೆ ಅಡೆಂಡಂ ಏರಿಕೆ ಎಂದು ಹೆಸರು. ಸೂತ್ರಾಂತರ ಮೈಯ ಶಂಕುವಿಗೂ ಹೊರ ಅಥವಾ ಅಡೆಂಡಂ ಮೈಯ ಶಂಕುವಿಗೂ ಇರುವ ಕೋನಾಂತರಕ್ಕೆ ಅಡೆಂಡಂ ಕೋನ ಎಂದು ಹೆಸರು. ಬೆವೆಲ್ ಗಿಯರ್ ಚಕ್ರದ ಅಗಲ ಜಾಸ್ತಿಯಾದಂತೆ ಅಡೆಂಡಮಿನ ಅಳತೆ ಹೆಚ್ಚುತ್ತ ಹೋದರೂ ಅಡೆಂಡಂ ಕೋನ ಒಂದೇ ಗಾತ್ರದ್ದಾಗಿರುತ್ತದೆ. ಅಡೆಂಡಂ ಸಾಮಾನ್ಯವಾಗಿ ಹಲ್ಲಿನ ಒಟ್ಟು ಎತ್ತರದ ಅರ್ಧದಷ್ಟೇ ಇರುವುದಾದರೂ ದಂತಕ್ರಿಯೆಯನ್ನು ನಿರ್ದಿಷ್ಟ ರೀತಿಯಲ್ಲಿ ಮಾರ್ಪಡಿಸಲೋಸುಗ ಅದನ್ನು ಕಡಿಮೆ ಅಥವಾ ಹೆಚ್ಚು ಎತ್ತರದ್ದನ್ನಾಗಿ ಮಾಡಿರುವುದೂ ಉಂಟು. ಇಂಥವಕ್ಕೆ ಕುಬ್ಜ ಅಡೆಂಡಂ ಮತ್ತು ನೀಳ ಅಡೆಂಡಂ ಎಂದೂ ಹೆಸರುಂಟು.




ಚಿತ್ರ 3. ಅಂತರ್ವಲಿತ ಮತ್ತು ಚಕ್ರಜೇಯ ವಕ್ರಗಳನ್ನು ರೇಖಿಸುವ ವಿಧಾನವನ್ನು ಅನುಕ್ರಮವಾಗಿ (a) ಮತ್ತು (b) ಚಿತ್ರಗಳಲ್ಲಿ ತೋರಿಸಿದೆ. ಚಿತ್ರದಲ್ಲಿ 1 ರೇಖಿಸುವ ಬಿಂದು, 2. ಸೂತ್ರಾಂತರ ವೃತ್ತ, 3. ಆಧಾರ ವೃತ್ತ


ಗಿಯರಿನ ಭಾಗಗಳ ನಾಮಾಂಕಿತಗಳನ್ನು (ಸರಳತೆಗಾಗಿ ಸ್ಪರ್ ಮಾದರಿಯನ್ನು ಉದಾಹರಿಸಿದೆ) ಚಿತ್ರಗಳು (1) ಮತ್ತು (2) ತಿಳಿಯಬಹುದು. ಕೂಡಿಕೆಗೊಂಡಿರುವ ಎರಡು ಗಿಯರುಗಳಲ್ಲಿ ಚಿಕ್ಕವನ್ನು ಪಿನಿಯನ್ ಎನ್ನುತ್ತಾರೆ. ಸೂತ್ರಾಂತರ ಮೈಯ ವೃತ್ತ ಸೂತ್ರಾಂತರ ವೃತ್ತವಾದರೆ ಇಲ್ಲಿಂದ ದಂತದ ತುದಿಯವರೆಗಿನ ಅರೀಯ ದೂರ ಅಡೆಂಡಂ. ಇಲ್ಲಿಂದಲೇ ಕೂಡಿಕೆಗೊಂಡ ಗಿಯರಿನ ದಂತಾಂತರ (ಟೂತ್ ಸ್ಪೇಸ್) ತಳದವರೆಗಿನ ಅರೀಯ ಆಳ ಅಡೆಂಡಂ. ದಂತದ ತುದಿಗೂ ದಂತಾಂತರದ ತಳಕ್ಕೂ ನಡುವಿನ ಅರೀಯ ದೂರ ದಂತಾಂತರಾಳ (ಕ್ಲಿಯೆರೆನ್ಸ್). ಎರಡೂ ಸೂತ್ರಾಂತರ




ಚಿತ್ರ 4. ಸ್ಪರ್ ಗಿಯರುಗಳು. (a) ಹೊರಸ್ಪರ್ಶವಿರುವ ಸ್ಪರ್ ಗಿಯರ್ ಮತ್ತು ಪಿನಿಯನ್, (b) ಒಂಟಿ ಕುಂಡಲಿನೀಯ ಗಿಯರ್, (c) ಒಳಸ್ಪರ್ಶವಿರುವ ಗಿಯರ್ ಮತ್ತು ಪಿನಿಯನ್

ವೃತ್ತಗಳ ಸಂಸ್ಪರ್ಶ ಬಿಂದುವಿಗೆ ಸೂತ್ರಾಂತರ ಬಿಂದುವೆಂದೂ ಎರಡೂ ಸೂತ್ರಾಂತರ ಮೈಗಳ ಸಂಸ್ಪರ್ಶರೇಖೆಗೆ ಸೂತ್ರಾಂತರ ರೇಖೆಯೆಂದೂ ಹೆಸರು. ಈ ರೇಖೆಯಿಂದ ಮೈಯ ಮೇಲುಭಾಗಕ್ಕೆ ದಂತಫಲಕವೆಂದೂ ದಂತದ ತಳದವರೆಗಿನ ಮೈಗೆ ದಂತಪಾರ್ಶ್ವವೆಂದೂ ಹೆಸರು. ಫಲಕ ಪಾರ್ಶ್ವಗಳೆರಡೂ ಸೇರಿ ದಂತಮೈ ಆಗುತ್ತದೆ. ಸೂತ್ರಾಂತರ ವೃತ್ತದ ಪರಿಧಿಯಲ್ಲಿರುವುದನ್ನೇ ದಂತದ ದಪ್ಪ ಎನ್ನುವುದು. ಅಡೆಂಡಂ ಡಿಡೆಂಡಂ ಸೇರಿ ಒಟ್ಟು ಆಳವಾದರೆ ಇದರಲ್ಲಿ ದಂತಾಂತರಾಳವನ್ನು ಕಳೆದದ್ದು ಕಾರ್ಯಕಾರೀ ಆಳವಾಗುತ್ತದೆ. ದಂತದ ಮೇಲುಭಾಗದ ಮೈಗೆ ಪ್ರದೇಶವೆಂದೂ ದಂತಾಂತರದ ತಳ ಭಾಗದ ಮೈಗೆ ತಳಪ್ರದೇಶವೆಂದೂ ಹೆಸರು. ಸೂತ್ರಾಂತರ ವೃತ್ತದ ಪರಿಧಿಯ ಮೇಲೆ ಅಳೆದಂತೆ ಯಾವುದೇ ದಂತದ ಒಂದು ಬಿಂದುವಿಗೂ ಅದರ ಮುಂದಿನ ದಂತದ ಅಂಥದೇ ಬಿಂದುವಿಗೂ ಇರುವ ದೂರ ವರ್ತುಳೀಯ

ಸೂತ್ರಾಂತರ. ಮಿಲಿಮೀಟರುಗಳಲ್ಲಿರುವ ಸೂತ್ರಾಂತರ ವ್ಯಾಸವನ್ನು ದಂತಗಳ ಸಂಖ್ಯೆಯಿಂದ ಭಾಗಿಸಿದ ಲಬ್ಧ ಮಾಡ್ಯೂಲ್ ಆದರೆ, ಬ್ರಿಟಿಷ್ ಪದ್ಧತಿಯಲ್ಲಿ ದಂತಗಳ ಸಂಖ್ಯೆಯನ್ನು ಸೂತ್ರಾಂತರ ವ್ಯಾಸದಿಂದ (ಅಂಗುಲಗಳಲ್ಲಿ) ಭಾಗಿಸಿ ಬರುವುದನ್ನು ವ್ಯಾಸೀಯ ಸೂತ್ರಾಂತರ ಎನ್ನುತ್ತಾರೆ. ಎರಡೂ ಸೂತ್ರಾಂತರ ವೃತ್ತಗಳ ಸಂಸ್ಪರ್ಶ ಬಿಂದುವಿನಲ್ಲಿ ಎಳೆದ ಉಭಯ ಸಾಮಾನ್ಯ ಸ್ಪರ್ಶರೇಖೆಯಿಂದ ಕೂಡಿಕೆಯಾಗಿರುವ ಎರಡೂ ದಂತಗಳ ಸಂಸ್ಪರ್ಶಬಿಂದುವಿನಲ್ಲಿ ಎಳೆದ ಉಭಯ ಸಾಮಾನ್ಯ ಲಂಬಕ್ಕೆ ಇರುವ ಕೋನಕ್ಕೆ ಒತ್ತಡದ ಕೋನ ಎಂದು ಹೆಸರು. ಶಿಷ್ಟಮಾನಕ ದಂತ ರೂಪವೆನ್ನಬಹುದಾದ ಅಂತರ್ವಲಿತ (ಇನ್‌ವೊಲ್ಯೂಟ್) ದಂತಗಳಲ್ಲಿ ಈ ಒತ್ತಡ ಕೋನ ಒಂದೇ ಸಮವಾಗಿರುತ್ತದೆ. ಗಿಯರ್ ತಯಾರಿಕೆಯಲ್ಲಿ ಏಕರೂಪ ಸಾಧನೆಗಾಗಿ ಒತ್ತಡ ಕೋನ $14\frac{1}{2}^0$ ಮತ್ತು $20^0$ ಗಳನ್ನು ಶಿಷ್ಟಮಾನಕವೆಂದು ಅಂಗೀಕರಿಸಿ ರುತ್ತದೆ. ದಂತರೂಪದಲ್ಲಿ ಇನ್ನೊಂದು ಚಕ್ರಜ (ಸೈಕ್ಲಾಯಿಡ್) ದಂತದಲ್ಲಿ ಈ ಒತ್ತಡ ಕೋನ ಸಂಸ್ಪರ್ಶಬಿಂದುವಿನೊಡನೆ ವ್ಯತ್ಯಾಸವಾಗುತ್ತ ಹೋಗುತ್ತದೆ.



ಚಿತ್ರ 5. ಆಂತರಿಕ ಸ್ಪರ್ ಗಿಯರ್


ದಂತರೂಪಗಳು : ಒಂದು ಆಧಾರವೃತ್ತದ ಮೇಲೆ ಬಿಗಿಯಾಗಿ ಸುತ್ತಿರುವ ದಾರವನ್ನು ಅಳಕ ಬಿಡದೆ ಬಿಚ್ಚುತ್ತ ಹೋದಾಗ ದಾರದ ಮೇಲಿನ ಒಂದು ಬಿಂದು ರೇಖಿಸುವ ವಕ್ರವೇ ಅಂತರ್ವಲಿತ. ಆಧಾರವೃತ್ತದಿಂದಾಚೆಗೆ ದಂತದ ಪರಿಧಿ ರೇಖೆಗಳಿರುವುದು ಈ ಆಕಾರದಲ್ಲಿ. ಆಧಾರವೃತ್ತದೊಳಗಡೆ ದಂತಪಾರ್ಶ್ವ ಸಾಮಾನ್ಯವಾಗಿ ಅರೀಯ ರೇಖೆಯಲ್ಲಿದ್ದು ತಳ ಪ್ರದೇಶಕ್ಕೆ ಒಂದು ಬಾಗು ರೇಖೆಯಿಂದ ಸೇರಿಸಲ್ಪಟ್ಟಿರುತ್ತದೆ.

ಅದೇ ರೀತಿ ಆಧಾರವೃತ್ತದ ಪರಿಧಿಯ ಮೇಲೆ ಅಥವಾ ಒಳಗೆ ಜಾರುವಿಕೆಯಿಲ್ಲದೆ ಉರುಳುತ್ತಿರುವ ಮತ್ತೊಂದು ಸಣ್ಣ ವೃತ್ತದ ಪರಿಧಿಯ ಮೇಲಿನ ಬಿಂದುವೊಂದು ರೇಖಿಸುವ ವಕ್ರವೇ ಚಕ್ರಜ. ಈ ಎರಡೂ ದಂತ ಆಕಾರಗಳ ಉತ್ಪಾದನೆಯನ್ನು ಚಿತ್ರದ(3)ರಲ್ಲಿ ತೋರಿಸಿದೆ. ಚಕ್ರಜ ದಂತಗಳು ಉಪಯೋಗದಲ್ಲಿರುವ ಗಡಿಯಾರಗಳು, ಮಾಪನಯಂತ್ರಗಳು ಮುಂತಾದ ಕೆಲವೆಡೆಗಳಲ್ಲುಳಿದು ಸರ್ವತ್ರ ಅಂತರ್ವಲಿತ ಗಿಯರುಗಳೇ ಬಳಕೆಯಲ್ಲಿವೆ ಎನ್ನಬಹುದು.

ವೇಗಾನುಪಾತ : ಶಕ್ತಿಸಾಗಣೆಯ ಜೊತೆಗೆ ಗಿಯರುಗಳ ಮುಖ್ಯಕಾರ್ಯ ಪರಿಕ್ರಮಣ ವೇಗದ ಬದಲಾವಣೆ ಮಾಡುವುದು. ಈ ವೇಗಾನುಪಾತ ಗಿಯರುಗಳಲ್ಲಿನ ದಂತಗಳ ಸಂಖ್ಯೆಯನ್ನು ಅವಲಂಬಿಸಿದೆ. ಜಾರುವಿಕೆ ಇಲ್ಲದಿರುವುದರಿಂದ ಯಾವುದೇ ಅವಧಿಯಲ್ಲಿ ಎರಡೂ ಗಿಯರುಗಳ ಸೂತ್ರಾಂತರ ವೃತ್ತದ ಪರಿಧಿಯಲ್ಲಿ ಕ್ರಮಿಸುವ ದೂರ ಒಂದೇ ಸಮ. ಹೀಗಾಗಿ $\pi d_1 n_1 = \pi d_2 n_2$ (ಇಲ್ಲಿ $d_1$ ಮತ್ತು $d_2$ ಎರಡೂ ಗಿಯರುಗಳ ಸೂತ್ರಾಂತರ ವ್ಯಾಸ ಹಾಗೂ $n_1$ ಮತ್ತು $n_2$ ಅನುಕ್ರಮವಾಗಿ ಅವುಗಳ ಪ್ರತಿಮಿನಿಟ್ ಪರಿಕ್ರಮಣ–ಪ್ರ.ಮಿ.ಪ.) ಕೂಡಿಕೊಳ್ಳಬೇಕಾದರೆ ಎರಡೂ ಗಿಯರುಗಳ ವರ್ತುಳೀಯ ಸೂತ್ರಾಂತರ ಒಂದೇ ಇರಬೇಕಾದ್ದರಿಂದ ಗಿಯರುಗಳ ಸೂತ್ರಾಂತರ ಪರಿಧಿ ಅವುಗಳ ದಂತಸಂಖ್ಯೆ Z ಗೆ ಅನುಗುಣವಾಗಿರುತ್ತದೆ.

ಆದ್ದರಿಂದ $$\frac{n_1}{n_2} = \frac{\pi d_2}{\pi d_1} = \frac{z_2}{z_1}$$


ಗಿಯರುಗಳ ಹಿಂದೊದೆತ ಹಾಗೂ ಅಂತಃಕ್ಷೇಪ : ಒಂದು ದಿಶೆಯಲ್ಲಿ ತಿರುಗುತ್ತಿರುವ ಗಿಯರುಗಳನ್ನು ವಿರುದ್ಧ ದಿಶೆಯಲ್ಲಿ ತಿರುಗಿಸಿದಾಗ ಕೊಂಚ ನಿಷ್ಕ್ರಿಯ ಅವಧಿಯಿದ್ದು ಅನಂತರ ಅವು ಕ್ರಿಯಾಶೀಲವಾಗುವುದನ್ನು ಗಮನಿಸಬಹುದು. ಇದಕ್ಕೆ ಹಿಂದೊದೆತ (ಬ್ಯಾಕ್‌ಲ್ಯಾಷ್) ಎಂದು ಹೆಸರು. ಗಿಯರಿನ ದಂತದ ದಪ್ಪಕ್ಕಿಂತ ಕೂಡಿಕೆಯ ಗಿಯರಿನ ದಂತಾಂತರ ಅಗಲವಾಗಿರುವುದೇ ಇದರ ಕಾರಣ. ಕೂಡಿರುವ ಗಿಯರುಗಳಲ್ಲಿ ಈ ಹಿಂದೊದೆತ ಪೂರ್ಣವಾಗಿ ಇಲ್ಲದಿರಬೇಕಾದರೆ ಗಿಯರಿನ ಎಲ್ಲ ಭಾಗಗಳೂ ಅಳತೆ ಗಾತ್ರಗಳಲ್ಲಿ ಪರಿಪೂರ್ಣವಾಗಿದ್ದು ಗಿಯರುಗಳ ಉಷ್ಣ ವಿಸರಣ ಗುಣಾಂಕವೂ ಒಂದೇ ಇರಬೇಕಾಗುತ್ತದೆ. ಇವನ್ನು ಸಾಧಿಸುವುದು ಕಷ್ಟವಾದ್ದರಿಂದಲೂ ಎಣ್ಣೆ ಹಚ್ಚಲು (ಲ್ಯೂಬ್ರಿಕೇಷನ್) ಅನುಕೂಲವಾಗಿರಲಿ ಎಂದೂ ಗಿಯರ್ ದಂತಗಳ ನಡುವೆ ಸ್ವಲ್ಪ ಅಂತರ ಉಳಿಸಿರುತ್ತದೆ. ನಿಯಂತ್ರಣ ವಿನ್ಯಾಸಗಳು ಮುಂತಾದ ಕರಾರುವಾಕ್ಕದ



ಚಿತ್ರ 6. ಕುಂಡಲಿನೀ ಗಿಯರುಗಳು: ಎಡಗಡೆಯದು ಸಮಾಂತರ ಕುಂಡಲಿನೀ ಗಿಯರ್, ಬಲಗಡೆಯದು ಭೇದಿಸಿದ ಕುಂಡಲಿನೀ ಗಿಯರ್

ಗಿಯರಣವಿರಬೇಕಾದಲ್ಲಿ (ಕಂಟ್ರೋಲ್ ಗಿಯರಿಂಗ್) ಸ್ಪ್ರಿಂಗು ಗಳು ಮುಂತಾದವುಗಳ ಉಪಯೋಗದಿಂದ ಹಿಂದೊದೆತ ವನ್ನು ತಪ್ಪಿಸಲಾಗುತ್ತದೆ. ಗಿಯರ್ ದಂತಗಳಲ್ಲಿ ಅಂತಃಕ್ಷೇಪವಿರುತ್ತದೆ (ಇಂಟರ್‌ಫಿಯರೆನ್ಸ್) ಎಂದರೆ ಒಂದು ದಂತದ ತುದಿ ಮತ್ತೊಂದು ಪಾರ್ಶ್ವದೊಳಕ್ಕೆ ಅಗೆಯುತ್ತದೆ. ಗಿಯರಿಗೆ ಹೋಲಿಸಿದಂತೆ ಪಿನಿಯನ್ನಿನಲ್ಲಿ ಅತಿ ಕಡಿಮೆ ಸಂಖ್ಯೆಯ ದಂತಗಳಿರುವಾಗ ಹೀಗಾಗುವ ಸಂಭವವುಂಟು. ಗಿಯರಿನ ಅಡೆಂಡಮ್ಮನ್ನು ಕಡಿಮೆ ಮಾಡುವುದರಿಂದ, ಒತ್ತಡಕೋನ ವನ್ನು ಹೆಚ್ಚಿಸುವುದರಿಂದ, ಗಿಯರು ಗಳ ನಡುವಿನ ಕೇಂದ್ರಾಂತರವನ್ನು ಹೆಚ್ಚಿಸಿ ಹಿಂದೊದೆತವನ್ನು ಸ್ವಲ್ಪ ಜಾಸ್ತಿಮಾಡುವುದ ರಿಂದ. ಪಿನಿಯನ್ನಿನ ಪಾರ್ಶ್ವವನ್ನು ಕೆಳಗೆ ಕತ್ತರಿಸುವುದರಿಂದ ಈ ಅಂತಃಕ್ಷೇಪ ಆಗದಂತೆ ನೋಡಿಕೊಳ್ಳಬಹುದು.

ಸ್ಪರ್ ಗಿಯರುಗಳು : ಅಕ್ಷಗಳು ಸಮಾಂತರವಾಗಿದ್ದು ದಂತಗಳು ಕೂಡ ಗಿಯರಿನ ಕೇಂದ್ರರೇಖೆಗೆ ಸಮಾಂತರವಾಗಿರುವ ಗಿಯರುಗಳಿವು. ಸೂಕ್ಷ್ಮ ಗಡಿಯಾರಗಳಿಂದ ಹಿಡಿದು ಭಾರಿ ಯಂತ್ರೋಪಕರಣಗಳು. ಮೋಟಾರುಕಾರು ಹಾಗೂ ವಾಯು ಎಂಜಿನ್ ಗಿಯರ್ ಪೆಟ್ಟಿಗೆಗಳ ವರೆಗೂ ಇವು ಬಹಳ ಉಪಯೋಗದಲ್ಲಿವೆ. (ಚಿತ್ರ.4 ನೋಡಿ)



ಚಿತ್ರ 7. ಪಿನಿಯನ್ನುಗಳು ಇರುವ ಬೆವೆಲ್ ಗಿಯರುಗಳು ಉದಾ: (a) ನೇರವಾಗಿರುವ (b) ಕುಂಡಲಿನೀಯ (c) ಒಳಬಾಗಿರುವ (d) ಹೈಪಾಯಿಡ್


ರ್‍ಯಾಕ ಮತ್ತು ಪಿನಿಯನ್ : ಒಂದು ಗಿಯರಿನ ಸೂತ್ರಾಂತರ ವೃತ್ತದ ವ್ಯಾಸವನ್ನು ಹೆಚ್ಚಿಸುತ್ತ ಹೋಗಿ ಅದು ಅನಂತವಾಯಿತೆಂದಿಟ್ಟುಕೊಂಡರೆ ಆಗ ಅದರ ಪರಿಧಿ ಒಂದು ಸರಳರೇಖೆಯಾಗಿ ಸೂತ್ರಾಂತರ ಮೈ ಒಂದು ಸಮತಲ ಪಟ್ಟಿಯಾಗುತ್ತದೆ. ಆಗ ಅದಕ್ಕೆ ರ್‍ಯಾಕ್ ಎಂದು ಹೆಸರು. ಇನ್ನೊಂದು ಗಿಯರ್ ಪಿನಿಯನ್ ಆಗುತ್ತದೆ. ರ್‍ಯಾಕ್ ಮತ್ತು ಪಿನಿಯನ್ನಿಂದ ವರ್ತುಳೀಯ ಚಲನೆಯನ್ನು ರೇಖೀಯ ಚಲನೆಯಾಗಿ ಅಥವಾ ವಿಪರ್ಯವಾಗಿ ಪರಿವರ್ತಿಸಲು ಸಾಧ್ಯ ಉಂಟು.

ಆಂತರಿಕ ಗಿಯರ್ : ಹೊರ ಮುಖದಲ್ಲಿ ಕೂಡಿಕೊಳ್ಳುವ ಎರಡು ಸ್ಪರ್ ಗಿಯರುಗಳು ವಿರುದ್ಧ ದಿಶೆಗಳಲ್ಲಿ ಓಡುತ್ತವೆ. ದೊಡ್ಡದಾದ ಗಿಯರ್ ಚಕ್ರದ ಹೊರಬದಿಯಲ್ಲಲ್ಲದೆ ಒಳಬದಿಯಲ್ಲಿ ದಂತಗಳು ರೂಪಿತವಾಗಿದ್ದು ಪಿನಿಯನ್ ಅದರ ಒಳಗಡೆ ಯಿಂದಲೇ ಕೂಡಿಕೊಳ್ಳುವ ವ್ಯವಸ್ಥೆಗೆ ಆಂತರಿಕ ಗಿಯರಣವೆಂದು ಹೆಸರು. (ಚಿತ್ರ.5 ನೋಡಿ)

ಇಲ್ಲಿ ಎರಡೂ ಒಂದೇ ದಿಶೆಯಲ್ಲಿ ತಿರುಗುವುದನ್ನು ಕಾಣಬಹುದು. ಎರಡೂ ತಾಳುಗಳ ಅಂತರ ಕಡಿಮೆಯಿದ್ದು ಘಟಕ ಅಡಕವಾಗಿಯೂ ದಂತಕ್ರಿಯೆ ದಕ್ಷವಾಗಿಯೂ ಇರುವುದರಿಂದ ವೇಗ ಕಡಿಮೆ ಮಾಡಲು ಉದ್ದೇಶಗಳಿಗೆ ಇದು ಬಹಳ ಸೂಕ್ತವಾದದ್ದಾಗಿರುತ್ತದೆ. (ಚಿತ್ರ.6 ನೋಡಿ)

ಕುಂಡಲಿನೀ (ಹೆಲಿಕಲ್) ಗಿಯರ್ : ಸಮಾಂತರ ಅಕ್ಷಗಳ ಮೇಲೆಯೇ ಓಡುವ ಗಿಯರುಗಳ ದಂತಗಳು ಅಕ್ಷಕ್ಕೆ ಸಮಾಂತರವಾಗಿರುವುದನ್ನು ಬಿಟ್ಟು ಅಕ್ಷಕ್ಕೆ ಓರೆಯಾಗಿ ತಿರುಚಿದಂತಿದ್ದರೆ (ಅಥವಾ ಗಿಯರಿನ ಸುತ್ತ ಕುಂಡಲಿನಿಯಂತೆ ಸುತ್ತುವಂತಿದ್ದರೆ) ಕುಂಡಲಿನೀ ಗಿಯರ್ ಆಗುತ್ತದೆ. ಈ ತಿರುಚಿನಿಂದಾಗಿ ದಂತಗಳ ನಡುವಣ ಸಂಪರ್ಕ ಒಮ್ಮೆಗೇ ಆಗದೆ ಒಂದು ತುದಿಯಲ್ಲಿ ಪ್ರಾರಂಭಿಸಿ ದಂತಫಲಕದ ಅಡ್ಡವಾಗಿ ಮುಂದುವರಿಯುತ್ತ ಹೊಗುತ್ತದೆ. ಇದರಿಂದಾಗಿ ಅದರಲ್ಲೂ ಅಧಿಕ ವೇಗಗಳಲ್ಲಿ ಗಿಯರಣ ಕ್ರಿಯೆಯಲ್ಲಿನ ಆಘಾತ ಕಡಿಮೆಯಾಗಿ ಶಬ್ದವೂ ಅಷ್ಟಾಗಿ ಇರುವುದಿಲ್ಲ. ತಿರುಚು ಒಂದೇ ಕಡೆಗಿರದೆ ನಡುವಿನಿಂದ ಎರಡೂ ಕಡೆಗಿರುವಾಗ ಅದನ್ನು ದ್ವಿಕುಂಡಲಿನೀ ಗಿಯರ್ ಅಥವಾ ಹೆರ್ರಿಂಗ್ ಬೋನ್ ಗಿಯರ್ ಎನ್ನಲಾಗುತ್ತದೆ. (ಚಿತ್ರ.7 ನೋಡಿ)

ಇದರ ಕ್ರಿಯೆ ನಿಶ್ಶಬ್ದವಾಗಿರುವುದರ ಜೊತೆಗೆ ಅಕ್ಷೀಯ ನೂಕುಬಲವೂ (ಥ್ರಸ್ಟ್) ಸಮತುಲಿತಗೊಂಡು ಬಹಳ ಸಲೀಸಾಗಿ ಓಡುತ್ತದೆ. ಸಮಾಂತರವಲ್ಲದ ಹಾಗೂ ಪರಸ್ಪರ ಛೇದಿಸದೆಯೂ ಇರುವ ತಾಳುಗಳಿಗಾಗಿ ಸಹ ಕುಂಡಲಿನೀ ಗಿಯರುಗಳನ್ನು ಅಭಿಕಲ್ಪಿಸುವುದು ಸಾಧ್ಯ. ಇಲ್ಲಿನ ದಂತಕ್ರಿಯೆ ಸಮಾಂತರ ತಾಳುಗಳಲ್ಲಿನದಕ್ಕಿಂತ ಭಿನ್ನವಾಗಿರುತ್ತದೆ. ಹಾಗೂ ಇದು ಹೋಲಿಕೆಯಲ್ಲಿ ಲಘುವಾಗಿರುವ ಸೇವೆಗೆ ಮಾತ್ರ ಉಪಯೋಗಕ್ಕೆ ಬರುತ್ತದೆ.



ಚಿತ್ರ 8. ವರ್ಮ್ ಮತ್ತು ವರ್ಮ್ ಗಿಯರ್

ಬೆವೆಲ್ ಗಿಯರ್ : ತಾಳುಗಳು ಸಮಾಂತರವಾಗಿರದೆ ಪರಸ್ಪರ ಛೇದಿಸುವಂತಿರುವಾಗ ಇವುಗಳ ಉಪಯೋಗ ಶಕ್ತಿಸಾಗಣೆಯಲ್ಲಿ ದಿಕ್ಕಿನ ಬದಲಾವಣೆಗಾಗಿ ಮಾತ್ರ. ಇವು ಬೇಕಾದರೆ ಎರಡು ಗಿಯರುಗಳೂ ಸಮ ಅಳತೆಯವಾಗಿರುತ್ತವೆ. ದಿಕ್ಕಿನ ಬದಲಾವಣೆಯೊಡನೆ ವೇಗದ ವ್ಯತ್ಯಾಸವನ್ನು ಪಡೆಯ ಬೇಕಾಗಿರುವಾಗ ಗಿಯರುಗಳು ಭಿನ್ನ ಅಳತೆಯವಾಗಿರುತ್ತವೆ. ತಾಳು ಅಕ್ಷಗಳು ಪರಸ್ಪರ $90^0$ ಯಲ್ಲಿ ಛೇಧಿಸುವಂತಿರುವ ಹಾಗೂ ಸಮ ಅಳತೆಯ ಬೆವೆಲ್ ಗಿಯರುಗಳ ಜೋಡಿಯನ್ನು ಮೈಟರ್ ಗಿಯರುಗಳು ಎನ್ನುತ್ತಾರೆ. ಬೆವೆಲ್ ಗಿಯರುಗಳ ದಂತಗಳು ನೇರವಾಗಿರಬಹುದು, ಕುಂಡಲಿನೀಯವಾಗಿರಬಹುದು.(ಚಿತ್ರ.8 ನೋಡಿ) ಒಳಬಾಗಿರಬಹುದು. ಅಲ್ಲದೆ ಹೈಪಾಯಿಡ್ ಗಿಯರುಗಳೆಂಬ ಹೆಸರಿನ ಒಂದು ವಿಶೇಷ ರೀತಿಯ ಬೆವೆಲ್ ಸಾಮಾನ್ಯ ನೋಟಕ್ಕೆ ಕುಂಡಲಿನೀ ಗಿಯರಿನಂತೆಯೇ ಇರುವುದಾದರೂ ಅಸಮಾಂತರ ಅಭೇಧಕ, ಪರಸ್ಪರ ಲಂಬ ಕೋನದಲ್ಲಿ ಅಡ್ಡವಾಗಿರುವ ಹಾಗೂ ಅಂತರ ಹೆಚ್ಚಿಲ್ಲದ ತಾಳುಗಳನ್ನು ಕೂಡಿಸುವುದಾಗಿರುತ್ತದೆ. ವೇಗ ಅತಿಯಾಗಿ ಕಡಿಮೆಯಾಗಬೇಕಾದಾಗ (ಅನುಪಾತ 60:1 ಅಥವಾ ಇನ್ನೂ ಅಧಿಕ) ಇದನ್ನು ಉಪಯೋಗಿಸುತ್ತದೆ.

ವರ್ಮ್ ಗಿಯರ್ : ಅಸಮಾಂತರ ಅಛೇದಕ ಅಂದರೆ ಅಸಮತಲೀಯವಾದ ತಾಳುಗಳನ್ನು ಸೇರಿಸುವ ಸಾಮಾನ್ಯ ವಿಧಾನ ವರ್ಮ್ ಗಿಯರಣದಿಂದ. ತಾಳುಗಳು ಸುಮಾರು ದೂರದಲ್ಲಿದ್ದು ವಾಸ್ತವ ಬಳಕೆಯಲ್ಲಿ ಲಂಬ ಕೋನವೆಂಬಂತೆ ಅಡ್ಡಡ್ಡವಾಗಿರುತ್ತವೆ. ಸಾಮಾನ್ಯವಾಗಿ ಚಾಲಕವಾಗಿರುವ ವರ್ಮ್ ಒಂದು ಸ್ಕ್ರೂ ಇದ್ದಂತೆ ಇರುತ್ತದೆ. ದೊಡ್ಡದಾಗಿರುವ ಚಕ್ರ ವರ್ಮ್ ಚಕ್ರವೆನ್ನಿಸಿಕೊಳ್ಳುತ್ತದೆ. ವರ್ಮ್ ಸುತ್ತುತ್ತಿರುವಾಗ ಅದರ ಸೂತ್ರಗಳು (ತ್ರೆಡ್ಸ್) ಚಕ್ರದ ಪರಿಧಿಯ ಮೇಲಿರುವ ದಂತಗಳ ಮೇಲೆ ಒತ್ತಿದಂತಾಗಿ ಅದು ತಿರುಗುವಂತೆ ಮಾಡುತ್ತದೆ. ವರ್ಮ್ ಗಿಯರಣವನ್ನು ಸಹ ಅಧಿಕವಾದ ವೇಗಾನುಪಾತಗಳಿಗೆ ಉಪಯೋಗಿಸುತ್ತಾರೆ. (ಕೆ.ವಿ.ಎಸ್.)

**ಗಿರ್ ಅರಣ್ಯ :** ಗುಜರಾತ್ ರಾಜ್ಯದ ಜುನಾಗಢ ಜಿಲ್ಲೆಯ ದಕ್ಷಿಣಭಾಗದಲ್ಲಿರುವ ಗಿರ್ ಗಿರಿಶ್ರೇಣಿಯ ತಳಭಾಗದಲ್ಲಿರುವ ಅತ್ಯಂತ ಆಕರ್ಷಕವೂ ವರ್ಣಮಯವೂ ಆಗಿರುವ ಅರಣ್ಯ. ಇದು ಸಾಮಾನ್ಯ ಅರ್ಥದಲ್ಲಿ ಅರಣ್ಯವೇ ಅಲ್ಲ; ಅರೆ ಮರುಭೂಮಿಯಿಂದ ಕೂಡಿದ 1412 ಚ.ಕಿಮೀ ವಿಸ್ತೀರ್ಣದ ಪ್ರದೇಶ. ಅಲ್ಲಲ್ಲಿ ಮುಳ್ಳು ಪೊದೆಗಳುಂಟು. ಇಲ್ಲಿಯ ಮರಗಳು ಸಾಗುವಾನಿಯ ದೃಷ್ಟಿಯಿಂದ ಅಷ್ಟೇನೂ ಉತ್ತಮವಲ್ಲ. ಈ ಕಾಡಿನಲ್ಲಿ ಕೆಲವು ತೇಗದ ಮರಗಳು ಉಂಟೂ. ಇಡೀ ಪ್ರದೇಶದಲ್ಲಿ ಅಲ್ಲಲ್ಲಿ ಸಾಗುವಳಿಯಾದ ನೆಲವೂ ಹಳ್ಳಿಗಳು ಇವೆ.



ಗಿರ್ ಅರಣ್ಯದ ಸಿಂಹಗಳು

ಭಾರತದಲ್ಲಿ ಉಳಿದಿರುವ ಕೆಲವೇ ಸಿಂಹಗಳು ಗಿರ್ ಅರಣ್ಯದಲ್ಲಿರುವುದರಿಂದ ಇದು ಬಹಳ ಪ್ರಸಿದ್ಧವಾಗಿದೆ ಇದೊಂದು ಅಭಯಾರಣ್ಯ. ಈ ಅರಣ್ಯದಲ್ಲಿರುವ ಸಿಂಹಗಳ ರಕ್ಷಣೆಗೆ ಸರ್ಕಾರ ವಿಶೇಷ ಕ್ರಮ ಕೈಗೊಂಡಿದೆ. 1950ರಲ್ಲಿ ನಡೆಸಿದ ಗಣತಿಯ ಪ್ರಕಾರ ಸುಮಾರು 240 ಸಿಂಹಗಳಿದ್ದುವು. 1955ರಲ್ಲಿ 290 ಸಿಂಹಗಳಿದ್ದುವೆಂದು ಅಂದಾಜು ಮಾಡಲಾಗಿತ್ತು. ಅರಣ್ಯದಲ್ಲಿ ಆಹಾರ ಸಿಕ್ಕದಿದ್ದಾಗ ಹಳ್ಳಿಗಳೊಳಕ್ಕೆ ನುಗ್ಗಿ ದನಕರುಗಳನ್ನು ಕೊಂದು ತಿನ್ನುತ್ತಿದ್ದ ಸಿಂಹಗಳ ಹಾವಳಿಯನ್ನು ತಪ್ಪಿಸಲು ಹಳ್ಳಿಗರು ವಿಷ ಹಾಕಿ ಇವನ್ನು ಕೊಲ್ಲುತ್ತಿದ್ದರೆಂದೂ ಇದರಿಂದಾಗಿ ಇವುಗಳ ಸಂಖ್ಯೆ ಸುಮಾರು 200ಕ್ಕೆ ಕಡಿಮೆಯಾಗಿದೆಯೆಂದೂ ಭಾವಿಸಲಾಗಿತ್ತು. 2011ರ ಜನಗಣತಿಯ ಪ್ರಕಾರ ಈಗ ಇಲ್ಲಿ ಸು. 526 ಸಿಂಹಗಳಿವೆ.

ಸೌರಾಷ್ಟ್ರದ ದಕ್ಷಿಣ ತೀರಕ್ಕೆ 75 ಕಿಮೀ ದೂರದಲ್ಲಿರುವ ಗಿರ್ ಗಿರಿಸಾಲು ಪೂರ್ವ ಪಶ್ಚಿಮವಾಗಿ 180 ಕಿಮೀ ದೂರ ಹಬ್ಬಿದೆ. ಅಲ್ಲಲ್ಲಿ ಕತ್ತರಿಸಿದಂತಿರುವ ಗಿರ್ ಶ್ರೇಣಿಯ ಪಶ್ಚಿಮದಲ್ಲಿ ಓಜಾತ್ ನದಿಯೂ ಪೂರ್ವದಲ್ಲಿ ಶೆತ್ರುಂಜಿ ನದಿಯೂ ಹರಿಯುತ್ತವೆ. ಓಜಾತ್ ನದಿ ಗಿರ್ ಶ್ರೇಣಿಗೂ ಗಿರ್ನಾರ್ ಶ್ರೇಣಿಗೂ (**ನೋಡಿ– ಗಿರ್ನಾರ್**) ನಡುವಣ ಗಡಿರೇಖೆಯಂತಿದೆ. ಗಿರ್ ಶ್ರೇಣಿಯ ಅತ್ಯುನ್ನತ ಶಿಖರದ ಎತ್ತರ 643ಮೀ. (ಎಸ್.ಎನ್.ಎಆರ್.ಇ.)

**ಗಿರಕಿ ರೋಗ :** ಕುರಿ, ದನ, ಮೇಕೆ ಮುಂತಾದ ಸಾಕುಪ್ರಾಣಿಗಳ ಮಿದುಳಿನ ರೋಗ (ಗಿಡ್). ತಲೆತಿರುಗು ರೋಗ, ತತ್ತರ ರೋಗ ಇದರ ಪರ್ಯಾಯನಾಮಗಳು. ಇಂಗ್ಲಿಷಿನಲ್ಲಿ ಟರ್ನ್‌ಸಿಕ್, ಸ್ಟರ್ಡಿ, ಬ್ಲಾಬ್‌ಫ್ಲಿರ್ಲ್, ಪಂಟ್ ಮುಂತಾದ ಹೆಸರುಗಳಿವೆ. ಸೆಸ್ಟೋಡ ಗಣದ ಟೀನಿಯ ಮಲ್ಟಿಸೆಪ್ಸ್ ಅಥವಾ ಮಲ್ಟಿಸೆಪ್ಸ್ ಎಂಬ ಲಾಡಿಹುಳುವಿನ ಡಿಂಬಾವಸ್ಥೆಯಾದ ಸೀನ್ಯೂರಸ್ ಸೆರಬ್ರಾಲಿಸ್ ಎಂಬುದರಿಂದ ಈ ರೋಗ

ಉಂಟಾಗುತ್ತದೆ. ಇದು ಪ್ರಮುಖವಾಗಿ ಕುರಿ, ದನ ಮುಂತಾದವುಗಳ ರೋಗವಾದರೂ ರೋ, ಜಿಂಕೆ, ಗೆಜ್ಜೆಲ್ ಮುಂತಾದ ಕಾಡುಪ್ರಾಣಿಗಳಲ್ಲೂ ಒಂಟೆ, ಕುದುರೆಗಳಲ್ಲೂ ಅಪೂರ್ವವಾಗಿ ಮನುಷ್ಯನಲ್ಲೂ ಕಾಣಬರುವುದುಂಟು.

ಮಲ್ಟಿಸೆಪ್ಸ್ ಹುಳು ತನ್ನ ಜೀವನಚಕ್ರವನ್ನು ಎರಡು ಭಿನ್ನ ಆತಿಥೇಯ ಪ್ರಾಣಿಗಳಲ್ಲಿ ನಡೆಸುತ್ತದೆ. ಇದರ ಪ್ರೌಢಹುಳು ನಾಯಿ, ನರಿ ಮುಂತಾದ ಮಾಂಸಹಾರಿ ಪ್ರಾಣಿಗಳ ಕರುಳಿನಲ್ಲೂ ಡಿಂಬ ಕುರಿ, ಮೇಕೆ, ದನ ಮುಂತಾದ ಸಸ್ಯಹಾರಿ ಪ್ರಾಣಿಗಳ ದೇಹದಲ್ಲೂ ಕಾಣಬರುತ್ತವೆ. ಪ್ರೌಢಹುಳು ಸುಮಾರು 100ಸೆಂಮೀ. ಉದ್ದವಿದ್ದು ಸುಮಾರು 200 ಖಂಡಗಳನ್ನೂ ಒಳಗೊಂಡಿದೆ. ಇದರ ತಲೆಯ ಭಾಗದಲ್ಲಿ (ಸ್ಕೋಲೆಕ್ಸ್) 22–32 ದೊಡ್ಡ ಹಾಗೂ ಚಿಕ್ಕ ಮುಳ್ಳುಗಳಿವೆ. ಇವುಗಳ ಸಹಾಯದಿಂದ ಆತಿಥೇಯ ಪ್ರಾಣಿಯ ಕರುಳಿನ ಒಳಭಿತ್ತಿಗೆ ಹುಳು ಅಂಟಿರುತ್ತದೆ. ಹುಳುವಿನ ದೇಹದ ಹಿಂತುದಿಯ ಖಂಡಗಳಲ್ಲೆಲ್ಲ ಫಲವಂತಿ ಕೋಶಗಳಿದ್ದು ಅವು ಅಸಂಖ್ಯಾತ ಮೊಟ್ಟೆಗಳನ್ನು ಉತ್ಪಾದಿಸುತ್ತವೆ. ಪ್ರಾಣಿಗಳ ಮಲದೊಂದಿಗೆ ಹೊರಬರುವ ಈ ಮೊಟ್ಟೆಗಳು ಹುಲ್ಲು ಮುಂತಾದ ಗಿಡಗಳ ಮೇಲೆಲ್ಲ ಹರಡಿರುತ್ತವೆ. ಕುರಿ, ದನಗಳು ಹುಲ್ಲನ್ನು ತಿಂದಾಗ ಮೊಟ್ಟೆಗಳು ಅವುಗಳೊಳಕ್ಕೆ ಹೋಗಿ ದೇಹದ ವಿವಿಧ ಭಾಗಗಳಲ್ಲಿ ಪಸರಿಸಿ ಆಂಕೊಸ್ಫಿಯರುಗಳೆಂಬ ಡಿಂಬಗಳನ್ನು ಉತ್ಪಾದಿಸುತ್ತವೆ. ಇವು ಕ್ರಮೇಣ ಮಿದುಳು ಮತ್ತು ಬೆನ್ನು ಹುರಿಗಳನ್ನು ಸೇರಿಕೊಂಡು ಸೀನ್ಯೂರಸ್ ಡಿಂಬಗಳಾಗಿ ಬೆಳೆಯುತ್ತವೆ. ಒಂದೊಂದು ಡಿಂಬವೂ ಒಂದು ಬಗೆಯ ಗುಂಡನೆಯ ಇಲ್ಲವೆ ಕೊಳವೆಯಂಥ ಚೀಲದಂತಿದ್ದು ಅನೇಕ ಸ್ಕೋಲೆಕ್ಸ್ ತಲೆಗಳನ್ನು ಒಳಗೊಂಡಿದೆ. ಪ್ರತಿ ಸ್ಕೋಲೆಕ್ಸ್ ತಲೆಯೂ ಒಂದು ಲಾಡಿ ಹುಳುವಾಗಿ ಬೆಳೆಯಬಲ್ಲದು. ಡಿಂಬ ಈ ಹಂತಕ್ಕೆ ಬರುವ ವೇಳೆಗೆ ಆತಿಥೇಯ ಪ್ರಾಣಿ ವಿಶಿಷ್ಟ ರೋಗಲಕ್ಷಣಗಳನ್ನು ಪ್ರದರ್ಶಿಸುತ್ತಿದ್ದು ಕೊನೆಗೆ ಸತ್ತು ಹೋಗುತ್ತದೆ. ಹೀಗೆ ಸತ್ತ ಪ್ರಾಣಿಯ ಮಿದುಳನ್ನು ಮತ್ತೆ ನಾಯಿಯೋ, ನರಿಯೊ ತಿಂದಾಗ ಅದರಲ್ಲಿನ ಡಿಂಬದ ತಲೆಭಾಗ ಪ್ರೌಢಹುಳುವಾಗಿ ಬೆಳೆದು ಮತ್ತೆ ಮೊಟ್ಟೆಗಳನ್ನು ಉತ್ಪಾದಿಸತೊಡಗುತ್ತದೆ.

ರೋಗ ಲಕ್ಷಣಗಳು: ಜಾಡ್ಯ ತಗುಲಿದ ಪ್ರಾಣಿಗಳಲ್ಲಿ ಸಾಮಾನ್ಯವಾಗಿ ಮೊದಲು 1–3 ವಾರಗಳ ತನಕ ಜ್ವರ ಬರುತ್ತದೆ. ಅಲ್ಲದೆ ಮಿದುಳು ಪೊರೆಯು ಉರಿಯೂತದ (ಕಾರ್ಟಿಕಲ್ ಎನ್‌ಸೆಫಲೈಟಿಸ್) ಲಕ್ಷಣಗಳು ತೋರುತ್ತವೆ. ಕೆಲವೊಮ್ಮೆ ರೋಗದ ಈ ಪ್ರಥಮ ಲಕ್ಷಣಗಳು ಕಾಣದೇ ಹೋಗುವುದುಂಟು. ಸೋಂಕು ತಗುಲಿದ 2–7 ತಿಂಗಳುಗಳ ಅನಂತರ ರೋಗದ ಇತರ ಲಕ್ಷಣಗಳು ಕಾಣತೊಡುಗುತ್ತವೆ. ಪ್ರಾಣಿ ಆಹಾರಸೇವೆಯನ್ನು ನಿಲ್ಲಿಸಿ ಜಡವಾಗುತ್ತದೆ. ತನ್ನ ತಲೆಯನ್ನು ಒಂದು ದಿಕ್ಕಿನಲ್ಲಿ (ಮಿದುಳಿನ ಯಾವ ಭಾಗದಲ್ಲಿ ಡಿಂಬ ಸೇರಿಕೊಂಡಿದೆಯೋ ಆ ದಿಕ್ಕಿನಲ್ಲಿ) ವಾಲಿಸುವುದಲ್ಲದೆ ಅದೇ ದಿಕ್ಕಿನಲ್ಲಿ ಸುತ್ತು ಹಾಕುತ್ತಾ ನಡೆದಾಡುತ್ತದೆ. ಈ ರೀತಿ ಸುತ್ತು ಹಾಕುವಾಗ ಮತ್ತೊಂದು ದಿಕ್ಕಿಗೆ ದೃಷ್ಟಿಯನ್ನು ಬೀರುವುದೇ ಇಲ್ಲ. ಆಗಿಂದಾಗ್ಗೆ ಸೆಡೆತಕ್ಕ ಈಡಾದಂತೆ ಅಡ್ಡಡ್ಡವಾಗಿ ತಲೆಯನ್ನು ಚಲಿಸುವುದೂ ಉಂಟು. ಉಳಿದ ಸಮಯದಲ್ಲಿ ತಲೆಯನ್ನು ತಗ್ಗಿಸಿ ನಿಶ್ಚೇಷ್ಟವಾಗಿ ನಿಂತುಬಿಡುತ್ತದೆ. ಡಿಂಬ ಮಿದುಳಿನ ಮುಂಭಾಗದಲ್ಲಿದ್ದರೆ ತಲೆಯನ್ನು ಎದೆಗೆ ಒತ್ತುಕೊಂಡು ನೆಗೆಯುವುದುಂಟು. ಈ ಸ್ಥಿತಿಯಲ್ಲಿ ಎದುರಿಗೆ ಕಲ್ಲು, ಮರದ ಕಂಬ ಮುಂತಾದ ವಸ್ತುಗಳು ಸಿಕ್ಕಿದರೆ ಅವಕ್ಕೆ ಗಟ್ಟಿಯಾಗಿ ಹಾಯುವುದು, ಹಲ್ಲು ಮಸೆಯುವುದು ಮುಂತಾದವನ್ನು ಮಾಡುತ್ತದೆ. ಆಗಿಂದಾಗ್ಗೆ ಜೊಲ್ಲು ಸುರಿಯುತ್ತಾ ಇರುತ್ತದೆ. ಕ್ರಮೇಣ ಪ್ರಾಣಿಗೆ ಸರಿಯಾಗಿ ನಿಲ್ಲುವುದಕ್ಕಾಗಲಿ ಆಹಾರವನ್ನು ಅಗಿಯುವುದಕ್ಕಾಗಲಿ ಆಗುವುದೇ ಇಲ್ಲ. ರೋಗ ಪೀಡಿತ ಪ್ರಾಣಿ ತನ್ನ ಗುಂಪಿನಿಂದ ಬೇರೆ ಯಾಗಲು ಇಚ್ಚಿಸುತ್ತದೆ. ಹೀಗೆ ಒಂಟಿಯಾಗಿ ಹಲವಾರು ರೀತಿಯಲ್ಲಿ ನರಳಿ, ಆಹಾರ ಸೇವನೆಯಿಲ್ಲದೆ ಕೃಶವಾಗಿ ಕೊನೆಗೆ ಸತ್ತು ಹೋಗುತ್ತದೆ.

ಮಲ್ಟಿಸೆಪ್ಸ್ ಮಲ್ಟಿಸೆಪ್ಸ್ ಹುಳುವನ್ನೇ ಹೋಲುವ ಮ.ಗೈಗರಯ್ ಎಂಬ ಇನ್ನೊಂದು ಬಗೆಯ ಲಾಡಿಹುಳುವಿನ ಡಿಂಬ ಮೇಕೆಗಳಲ್ಲಿ ರೋಗವನ್ನು ಉಂಟು ಮಾಡುತ್ತದೆ. ಡಿಂಬದ ಹೆಸರು ಸೀನ್ಯೂರಸ್ ಗೈಗರಯ್. ಭಾರತ, ಪಾಕಿಸ್ತಾನ ಮತ್ತು ಶ್ರೀಲಂಕಾದಲ್ಲಿ ಈ ರೋಗ ಬಲುಸಾಮಾನ್ಯ. ಡಿಂಬ ಸಿ.ಸೆರೆಬ್ರಾಲಿಸ್ ರೀತಿಯಂತೆ ನರಮಂಡಲಕ್ಕೆ ಮಾತ್ರ ಮೀಸಲಾಗಿಲ್ಲ. ತೊಡೆಯ ಅಂಗಾಂಶ, ನಡುವಿನ ಭಾಗ, ವಪೆ, ಮೂತ್ರಪಿಂಡ, ಹೃದಯ, ಉದರ ಪರಿವೇಷ್ಟನ ಪಟಲ, ಕಿಬ್ಬೊಟ್ಟೆಗಳಲ್ಲಿ ಕಂಡುಬರುತ್ತದೆ. ಈ ರೋಗದ ಬಗೆಗೆ ಭಾರತದಲ್ಲಿ ಮಾಥೂರ್ ಮತ್ತು ದತ್ (1969), ರಹಮುದ್ದೀನ್ (1941) ಬಾಳೇರಾಯರು(1939) ಸಂಶೋಧನೆ ನಡೆಸಿದ್ದಾರೆ.

ರೋಗ ಚಿಕಿತ್ಸೆ ಹಾಗೂ ತಡೆಗಟ್ಟುವ ಕ್ರಮಗಳು: ಗಿರಕಿ ರೋಗಕ್ಕೆ ಸರಿಯಾದ ಔಷಧಿಗಳಿಲ್ಲ. ಕೆಲವೊಮ್ಮೆ ಶಸ್ತ್ರಚಿಕಿತ್ಸೆಯಿಂದ ಗುಣಪಡಿಸಬಹುದಾದರೂ ತಡೆಗಟ್ಟುವಿಕೆಯೇ ಅತ್ಯುತ್ತಮ ಮಾರ್ಗ. ಡಿಂಬ ನಿಯತ ಜೀವಿಯ ಸಂಪರ್ಕ ಹೊಂದದಂತೆ ಮಾಡುವುದರಿಂದ ಈ ರೋಗವನ್ನು ತಡೆಗಟ್ಟಬಹುದು. ನಾಯಿ, ನರಿಗಳು ರೋಗಪೀಡಿತ ಪ್ರಾಣಿಗಳನ್ನು ತಿನ್ನದಂತೆ ನೋಡಿಕೊಳ್ಳಬೇಕು. (ಜಿ.ಆರ್.ಆರ್.ಎಸ್)

**ಗಿರವಿದಾರ :** ಬೆಲೆಬಾಳುವ ಪದಾರ್ಥಗಳ ಮೇಲೆ, ಆಧಾರದ ಮೇಲೆ ಹಣವನ್ನು ಸಾಲವಾಗಿ ಕೊಡುವ ವ್ಯಕ್ತಿ (ಅಥವಾ ಸಂಸ್ಥೆ) (ಪಾನ್‌ಬ್ರೋಕರ್) ಹೀಗೆ ಸಾಲವಾಗಿಕೊಟ್ಟ ಹಣದ ಮೇಲೆ ಋಣಿಯಿಂದ ಆತ ನಿಗದಿಯಾದ ದರದಲ್ಲಿ ಬಡ್ಡಿಯನ್ನು ತೆಗೆದು ಕೊಳ್ಳುತ್ತಾನೆ. ಗಿರವಿಗಾಗಿ ಬಂದ ಪದಾರ್ಥಗಳನ್ನು ಗಿರವಿದಾರ ಕೂಲಂಕುಷವಾಗಿ ಪರೀಕ್ಷಿಸಿ, ಅದರ ಮಾರುಕಟ್ಟೆಯ ಬೆಲೆಯನ್ನು ನಿರ್ಣಯಿಸಿ ಅದರ ಆಧಾರದ ಮೇಲೆ ಸಾಲ ಕೊಡುವ ಬಗ್ಗೆ ಸೂಕ್ತ ನಿರ್ಣಯ ತೆಗೆದುಕೊಳ್ಳುತ್ತಾನೆ. ಕೊಟ್ಟ ಸಾಲಕ್ಕೆ ಪ್ರತಿಯಾಗಿ ಆ ಪದಾರ್ಥವನ್ನು ತನ್ನ ಅಧೀನದಲ್ಲಿಟ್ಟುಕೊಳ್ಳುತ್ತಾನೆ. ಈ ವ್ಯವಹಾರಕ್ಕೆ ಅಡವು ಇಡುವುದೆಂದೂ ಹೆಸರು. ಸಾಲವನ್ನು ಪಡೆಯುವ ವ್ಯಕ್ತಿ ಗಿರವಿದಾರನಿಗೆ, ತಾನು ಗಿರವಿ ಇಡುತ್ತಿರುವ ಪದಾರ್ಥಧ ಪೂರ್ಣ ವಿವರಗಳೊಡನೆ, ಅದು ತನ್ನ ಸ್ವಂತ ಸ್ವತ್ತೆಂದು ಬರವಣಿಗೆಯಲ್ಲಿ ಕೊಡಬೇಕು. ಗಿರವಿದಾರ ತಾನು ಅಡವು ಇಟ್ಟುಕೊಂಡಿರುವ ಪದಾರ್ಥದ ಪೂರ್ಣ ವಿವರ, ಅದರ ಅಂದಾಜು ಬೆಲೆ ಇತ್ಯಾದಿ ವಿವರಗಳನ್ನು ನಮೂದಿಸಿರುವ ಪತ್ರವನ್ನು ಸಾಲಗಾರನಿಗೆ ಕೊಡಬೇಕು. ಯಾವ ಕಾರಣದಿಂದಲಾದರೂ ಸಾಲಗಾರ ಅಡವಿಟ್ಟ ಪದಾರ್ಥವನ್ನು ಒಪ್ಪಲಾದ ವಾಯಿದೆಯೊಳಗೆ, ಒಪ್ಪಂದಕ್ಕೆ ಅನುಗುಣವಾಗಿ ಬಿಡಿಸಿಕೊಳ್ಳದಿದ್ದಲ್ಲಿ ಗಿರವಿದಾರ ಸೂಕ್ತ ತಿಳಿವಳಿಕೆಯಿತ್ತು ಅದನ್ನು ಮುಟ್ಟುಗೋಲು ಹಾಕಿಕೊಳ್ಳಲು ಹಾಗೂ ಅದನ್ನು ಸೂಕ್ತರೀತಿಯಲ್ಲಿ ವಿಲೆ ಮಾಡಲು ಹಕ್ಕು ಪಡೆದಿರುತ್ತಾನೆ.

ಭಾರತದಲ್ಲಿ ಗಿರವಿದಾರರು ಕಾನೂನಿನ ಪ್ರಕಾರ ಪರವಾನೆ ಪಡೆದು, ತಮ್ಮ ಹೆಸರನ್ನು ರಿಜಿಸ್ಟರ್ ಮಾಡಿಕೊಳ್ಳಬೇಕು. ಗಿರವಿದಾರರು ತಾವು ಮಾಡುವ ಪ್ರತಿಯೊಂದು ವ್ಯವಹಾರಕ್ಕೂ ಸೂಕ್ತ ದಾಖಲೆಗಳನ್ನಿಟ್ಟರಬೇಕು. ಗಿರವಿದಾರ ಕಾನೂನು ರೀತಿ ಇಡಬೇಕಾದ ದಾಖಲೆಯಲ್ಲಿ ಯಾವ ರೀತಿಯಲ್ಲಾದರೂ ನ್ಯೂನತೆಗಳಿಗೆ ಅವಕಾಶ ನೀಡಿದರೆ, ತನಿಖೆಗೆ ಬರುವ ಸಂಬಂಧಪಟ್ಟ ಸರ್ಕಾರಿ ಅಧಿಕಾರಿಗಳಿಗೆ ದಾಖಲೆ ತೋರಿಸಿದಿದ್ದರೆ ಅಥವಾ ತನಿಖೆಗೆ ಒದಗಿಸದಿದ್ದರೆ, ಗಿರವಿದಾರನ ವ್ಯವಹಾರ ಕಾನೂನು ರೀತಿಯಾಗಿಲ್ಲವೆಂದು ಯಾವುದಾದರೂ ಕಾರಣಗಳಿಂದ ನಿರ್ಧರಿಸಲ್ಪಟ್ಟರೆ ಗಿರವಿದಾರನ ಪರವಾನೆಯನ್ನು ವಾಪಾಸು ಪಡೆದು, ಕಾನೂನು ರೀತ್ಯ ಅವನ ಮೇಲೆ ಕ್ರಮ ಜರುಗಿಸುವ ಅಧಿಕಾರ ಸರ್ಕಾರಕ್ಕೆ ಇರುತ್ತದೆ.

ಗಿರವಿದಾರನ ಆಧಾರದಲ್ಲಿರುವ, ಗಿರವಿಗಾಗಿ ಬಂದಿರುವ, ಪದಾರ್ಥ ಕಳವು ಮಾಲೆಂದು ಸ್ಥಿರಪಟ್ಟರೆ, ಆ ಪದಾರ್ಥಗಳನ್ನು ಮುಟ್ಟಗೋಲು ಹಾಕಿಕೊಂಡು ಗಿರವಿದಾರನಿಗೆ ಯಾವ ರೀತಿಯ ಪರಿಹಾರವನ್ನೂ ಕೊಡದೆ ಇರುವ, ಗಿರವಿದಾರ ಕಳ್ಳತನಕ್ಕೆ ಪರೋಕ್ಷವಾಗಿ ಸಹಾಯಕನಾಗಿರುವನೆಂದು ನಿರ್ಧರಿಸಿ ಅವನ ಮೇಲೆ ಕ್ರಮ ಕೈಗೊಂಡು ಗಿರವಿದಾರನನ್ನು ಶಿಕ್ಷಾರ್ಹನನ್ನಾಗಿ ಮಾಡುವ ಹಕ್ಕು ಸರ್ಕಾರಕ್ಕೆ ಇರುತ್ತದೆ. (ಎ.ಕೆ.ಎಸ್.ಎಚ್.)


**ಗಿರಿಧರ ಕವಿರಾಯ :** 18ನೆಯ ಶತಮಾನದ ಒಬ್ಬ ಹಿಂದೀ ಕವಿ. ಈತನ ಜೀವನ ವಿಷಯ ಹೆಚ್ಚಾಗಿ ಉಪಲಬ್ಧವಿಲ್ಲ. ಶಿವಸಿಂಹ ಸೇಂಗರನ ಪ್ರಕಾರ ಈತ ಹುಟ್ಟಿದ್ದು 1713ರಲ್ಲಿ. ಈತ ಭಾಟಕವಿಯಾಗಿದ್ದು ಅವಧಿ ಭಾಷೆಯಲ್ಲಿ ಕಾವ್ಯ ರಚಿಸಿದ್ದರಿಂದ ಅವಧ (ಅಯೋಧ್ಯೆ) ಪ್ರದೇಶದವನಿರಬಹುದೆಂದು ಹೇಳಬಹುದು. ಈತ ಅನೇಕ ಕುಂಡಲಿಯಗಳನ್ನು (ಆರು ಪಂಕ್ತಿಗಳ ಪದ್ಯ) ರಚಿಸಿದ್ದಾನೆ. ಈತನ ವಿಷಯದಲ್ಲಿ ಒಂದು ಕಥೆ ಪ್ರಚಲಿತವಿದೆ–

ಗಿರಿಧರನ ಮನೆಯ ಪಕ್ಕದಲ್ಲಿ ಒಬ್ಬ ಬಡಗಿ ವಿಚಿತ್ರವಾದ ಒಂದು ಮಂಚ ತಯಾರಿಸಿದ. ಯಾರಾದರೂ ಆ ಮಂಚದ ಮೇಲೆ ಕುಳಿತರೆಂದರೆ ಅದರ ಕಾಲುಗಳಿಗೆ ಅಳವಡಿಸಿದ್ದ ಗಾಳಿಚಕ್ಕೆಗಳು (ಬೀಸಣಿಗೆ) ತಮ್ಮಷ್ಟಕ್ಕೆ ತಾವೇ ತಿರುಗುತ್ತಿದ್ದುವು. ಇದನ್ನು ರಾಜನಿಗೆ ಕೊಡಲಾಯಿತು. ಇದೇ ತರಹದ ಇನ್ನೊಂದನ್ನು ಮಾಡಲು ರಾಜ ಬಡಗಿಗೆ ಆಜ್ಞೆಮಾಡಿದ. ಇದನ್ನು ತಯಾರಿಸಲು ಗಿರಿಧರನ ಅಂಗಳದಲ್ಲಿದ್ದ ಬೋರಿ ಮರ ಬೇಕೆಂದು ರಾಜನನ್ನು ಬಡಗಿ ಕೇಳಿದ. ಈ ಬೋರಿ ಮರವನ್ನು ಕಡಿಯಬಾರದಾಗಿ ರಾಜನಿಗೆ ವಿನಂತಿಸಿದರೂ ಪ್ರಯೋಜನವಾಗಲಿಲ್ಲ. ಆಗ ಸಪತ್ನೀಕನಾಗಿ ಗಿರಿಧರ ಆ ರಾಜ್ಯವನ್ನು ಬಿಟ್ಟು ಹೊರಟ. ಹೊರಟವನು ಭಾರತದಲ್ಲೆಲ್ಲ ಸಂಚರಿಸಿದ. ಈ ಸಮಯದಲ್ಲಿ ಪತಿಪತ್ನಿಯರು ಕುಂಡಲಿಯಗಳನ್ನು ರಚಿಸಿದರು ಎಂದು ಪ್ರತೀತಿ. ಸಾಈ ಎಂಬ ಶಬ್ದಪ್ರಯೋಗಿಸಿದ ಕುಂಡಲಿಯಗಳು ಆತನ ಹೆಂಡತಿ ರಚಿಸಿದುವು. ಈಕೆಯ ಪದ್ಯಗಳು ಸುಮಾರು ನಾಲ್ಕುನೂರ ಎಪ್ಪತ್ತೈದು. ಬಹುಮಟ್ಟಿಗೆ ಅವು ಕುಂಡಲಿಯಗಳೇ ಆಗಿವೆ.

ದೈನಂದಿನ ಜೀವನದಲ್ಲಿಯ ಮಹತ್ತ್ವದ ಘಟನೆಗಳನ್ನು ಸರಳವಾಗಿ ತನ್ನ ಕಾವ್ಯಗಳಲ್ಲಿ ನಿರೂಪಿಸಿರುವುದರಿಂದ ಉತ್ತರಭಾರತದ ಹಿಂದೀ ಜನರಲ್ಲಿ ಈತನ ಕುಂಡಲಿಯಗಳು ತುಂಬ ಬಳಕೆಯಲ್ಲಿವೆ. ಜನ ಆಗಿ ಹೋದ ವಿಷಯಗಳನ್ನು ಮರೆತು ಬಿಟ್ಟು ತಮ್ಮ ಭವಿಷ್ಯ ಜೀವನವನ್ನು ಸುಧಾರಿಸಲೆತ್ನಿಸಬೇಕು ಎಂಬುದು ಈತನ ಕಾವ್ಯಗಳಲ್ಲಿನ ದೃಷ್ಟಿ. ಕಾವ್ಯಗುಣವನ್ನು ಅರಸುವವರಿಗೂ ಈತನ ಕಾವ್ಯಗಳಲ್ಲಿ ಸ್ವಾರಸ್ಯ ಕಂಡುಬರುತ್ತದೆ. *

**ಗಿರಿಧಾಮಗಳು :** ಪರ್ವತಗಳ ಹಾಗೂ ಬೆಟ್ಟಗಳ ನೆತ್ತಿಯಲ್ಲೋ ಸಾನು ಪ್ರದೇಶಗಳಲ್ಲೋ ವಿಶ್ರಾಂತಿ, ವಿಹಾರಗಳಿಗಾಗಿ ಗೊತ್ತು ಮಾಡಿರುವ ಸ್ಥಳಗಳು (ಹಿಲ್ ಸ್ಟೇಷನ್ಸ್). ರೋಗದಿಂದ ಆಗತಾನೆ ಚೇತರಿಸಿಕೊಳ್ಳುತ್ತಿರುವ ಜನರೂ ದಣಿದು ವಿಶ್ರಾಂತಿ ಬಯಸುವ ಇತರರೂ ಅನೇಕ ವೇಳೆ ವಿಹಾರಾಕಾಂಕ್ಷಿಗಳೂ ಇಲ್ಲಿಗೆ ಬಂದು ಕೆಲಕಾಲ ತಂಗಿದ್ದು ಚೇತರಿಸಿಕೊಂಡು ಹಿಂದಿರುಗುತ್ತಾರೆ. ದಗೆಯಿಂದ ಪಾರಾಗಲು ಬೇಸಗೆಯಲ್ಲಿ ಜನ ಈ ಸ್ಥಳಗಳಿಗೆ ಬರುವುದು ಹೆಚ್ಚು. ಇಂದಿನ ಗಿರಿಧಾಮಗಳ ಕಲ್ಪನೆ ಲೌಕಿಕವಾದದು. ಹಿಂದಾದರೋ ಧರ್ಮದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ ಇಂಥ ಸ್ಥಳಗಳನ್ನು ನಿರ್ಮಿಸುತ್ತಿದ್ದರು. ಜನವಸತಿಯಿದ್ದು ಸುತ್ತಲೂ ಅರಣ್ಯವಿರುವ ಬೆಟ್ಟಗಳ ನೆತ್ತಿಯಲ್ಲಿ ದೇವಾಲಯಗಳನ್ನು ಕಟ್ಟುವ ಪದ್ಧತಿ ಗ್ರೀಕರ ಕಾಲದಿಂದಲೂ ನಡೆದುಬಂದಿದೆ. ಒಂದು ದೇವಾಲಯ, ಅದಕ್ಕೆ ಹೊಂದಿದಂತೆ ಒಂದು ಪುಷ್ಕರಣಿ, ಒಂದು ಅನ್ನಸತ್ರ–ಇಷ್ಟನ್ನು ಎಲ್ಲ ಯಾತ್ರಸ್ಥಳಗಳಲ್ಲೂ ಕಾಣಬಹುದು. ಮಧ್ಯಯುಗದ ಕಾಲದಲ್ಲಿ ಮಧ್ಯ ಯುರೋಪಿನ ಅನೇಕ ಬೆಟ್ಟಗಳಲ್ಲಿ ಚರ್ಚುಗಳನ್ನು ಕಟ್ಟಿದ್ದಾರೆ. ಭಾರತದಲ್ಲಿ ಪವಿತ್ರ ಯಾತ್ರಸ್ಥಳಗಳಾದ ತಿರುಪತಿ, ದೇವರಾಯನದುರ್ಗ, ಆಲ್ಮೋರ, ಅಬು ಮೊದಲಾದವು ಗಿರಿಧಾಮಗಳಾಗಿರುವುದಲ್ಲದೆ ಭಕ್ತಾದಿಗಳನ್ನೂ ತಮ್ಮತ್ತ ಸೆಳೆಯುತ್ತಿವೆ.

ಹಳ್ಳಿಗಳೇ ಹೆಚ್ಚಾಗಿದ್ದು ಪಟ್ಟಣಗಳಲ್ಲಿನ ಜನಸಂಖ್ಯೆ ಅಷ್ಟು ನಿಬಿಡವಾಗಿಲ್ಲದಾಗ ಗಿರಿಧಾಮಗಳ ಅಗತ್ಯ ಕಂಡುಬರುತ್ತಿರಲಿಲ್ಲ. ಕ್ರಮೇಣ ದೊಡ್ಡ ದೊಡ್ಡ ಪಟ್ಟಣಗಳ ಬೆಳವಣಿಗೆಯಿಂದಾಗಿ ಜನಕ್ಕೆ ಏಕಾಂತ, ವಿರಾಮ, ವಿಶ್ರಾಂತಿ, ಶುದ್ಧವಾದ ಗಾಳಿ, ಬೆಳಕು, ಸುಂದರವಾದ ಪ್ರಾಕೃತಿಕ ಸನ್ನಿವೇಶ–ಇವು ಸಿಗದಂತಾದವು. ಈ ಕೊರೆಯನ್ನು ತುಂಬಲು ಸರ್ಕಾರಗಳು ರಾಷ್ಟ್ರೀಯ ಉದ್ಯಾನಗಳನ್ನೂ ಅಭಯಾರಣ್ಯಗಳನ್ನೂ, ಗಿರಿಧಾಮಗಳನ್ನೂ, ಅಭಿವೃದ್ಧಿಪಡಿಸತೊಡಗಿದರು. ಭಾರತದಲ್ಲಿ ಬ್ರಿಟಿಷರೂ ರಾಜ ಮಹಾರಾಜರುಗಳೂ ಈ ಕೆಲಸವನ್ನು ತುಂಬ ಆಸಕ್ತಿಯಿಂದ ಮಾಡಿದರು. ಕೆಮ್ಮಣ್ಣು ಗುಂಡಿಯನ್ನು (ಕೃಷ್ಣರಾಜೇಂದ್ರ ಗಿರಿಧಾಮ) ಗುರುತಿಸಿ ಬೆಳೆಸಿದ ಕೀರ್ತಿ ನಾಲ್ವಡಿ



ಕೃಷ್ಣರಾಜೇಂದ್ರ ಗಿರಿಧಾಮದ ಒಂದು ದೃಶ್ಯ

ಕೃಷ್ಣರಾಜ ಒಡೆಯರದು. ಸ್ವತಂತ್ರ ಭಾರತದಲ್ಲಿ, ಪ್ರವಾಸೋದ್ಯಮ ಬೆಳೆದಂತೆಲ್ಲ, ಗಿರಿಧಾಮಗಳಲ್ಲಿನ ಸೌಕರ್ಯಗಳು ಹೆಚ್ಚುತ್ತಿವೆ. ಈಗ ಪ್ರಸಿದ್ಧವಾದ ಗಿರಿಧಾಮಗಳಿಗೆ ಸರಾಗವಾಗಿ ಹೋಗಿಬರಲು ರಸ್ತೆಗಳಿವೆ. ವಾಹನ ಸೌಕರ್ಯವಿದೆ, ಸಿಮ್ಲ, ಶ್ರೀನಗರ, ಡಾರ್ಜಲಿಂಗ್ ಮೊದಲಾದ ಪ್ರಮುಖ ಗಿರಿಧಾಮಗಳಿಗೆ ವಿಮಾನ ಸೌಕರ್ಯವೂ ಉಂಟು. ಈಚೆಗೆ ಅಲ್ಲೆಲ್ಲ ಉತ್ತಮ ಉದ್ಯಾನಗಳನ್ನು ಬೆಳೆಸಿದ್ದಾರೆ. ಉದಾಹರಣೆಗೆ ಸಿಮ್ಲ ಮತ್ತು ಶ್ರೀನಗರಗಳನ್ನು ನೋಡಬಹುದು. ಕೆಲವು ಕಡೆ ಸಸ್ಯವೈಜ್ಞಾನಿಕ ಉದ್ಯಾನಗಳನ್ನು ಎಬ್ಬಿಸಿರುವುದೂ ಉಂಟು. ಒಂದೊಂದು ಗಿರಿಧಾಮದಲ್ಲಿ ಒಂದೊಂದು ಬಗೆಯ ಕ್ರೀಡೆಗೆ ಅವಕಾಶ ಉಂಟು. ಈಜುಕೊಳ, ದೋಣಿ ಸೌಕರ್ಯ, ಮೀನು ಹಿಡಿಯಲು ತಕ್ಕ ಸ್ಥಳಗಳು, ಬೇಟೆಯ ಸೌಲಭ್ಯ, ಸ್ಕೇಟಿಂಗ್, ಸ್ಕೀಯಿಂಗ್, ಮೊದಲಾದವುಗಳಿಗೆ ಏರ್ಪಾಟು, ಸುತ್ತಣ ಪ್ರೇಕ್ಷಣೀಯ ಸ್ಥಳಗಳಿಗೆ ಹೋಗಿಬರಲು ಮಾಡಿರುವ ವ್ಯವಸ್ಥೆ– ಇವುಗಳಿಂದಾಗಿ ಅನೇಕ ಗಿರಿಧಾಮಗಳು ಜನಪ್ರಿಯವಾಗಿವೆ.

ಭಾರತದಲ್ಲಿ ಪ್ರಸಿದ್ಧ ಗಿರಿಧಾಮಗಳಾದ ಸಿಮ್ಲ, ಷಿಲ್ಲಾಂಗ್, ಶ್ರೀನಗರ, ಅಬು ಮೊದಲಾದವು ಆಯಾ ರಾಜ್ಯಗಳ ರಾಜಧಾನಿಗಳಾಗಿವೆ. ಭಾರತದ ಸ್ವಿಟ್ಜರ್ಲೆಂಡ್ ಎಂದು ಖ್ಯಾತಿ ಪಡೆದ ಉದಕಮಂಡಲ, ಲ್ಯಾಂಡ್ ಆಫ್ ದಿ ಹ್ವೈಟ್ ಆರ್ಕಿಡ್ಸ್ ಎಂದು ಪ್ರಸಿದ್ಧವಿರುವ ಕುರ್ಸಿಯಾಂಗ್, ಪೂರ್ವದ ಸ್ಕಾಟ್ಲೆಂಡ್ ಎಂಬ ಹೆಸರಿಗೆ ತಕ್ಕುದಾದ ಷಿಲ್ಲಾಂಗ್, ಭೂಸ್ವರ್ಗವೆನಿಸಿಕೊಂಡಿರುವ ಶ್ರೀನಗರ, ಜವಹರಲಾಲ್ ನೆಹರು ಅವರ ಪ್ರಿಯ ವಿಶ್ರಾಂತಿ ಸ್ಥಳವಾದ ಕುಲು–ಈ ಮೊದಲಾದವು ಭಾರತದಲ್ಲಿನ ಪ್ರಸಿದ್ಧ ಗಿರಿಧಾಮಗಳು. ಇವಲ್ಲದೆ ನಂದಿ, ಕೂನೂರು, ಕೋಟಗಿರಿ, ಕೊಡೈಕ್ಕಾನಲ್, ಎರ್ಕಾಡ್, ಮಹಾಬಲೇಶ್ವರ, ಪಂಚಗನಿ, ಕಾಲಿಂಪಾಂಗ್, ರಾಂಚಿ, ಹಜಾರಿಬಾಗ್ ಮುಸ್ಸೋರಿ ಮತ್ತು ನೈನಿತಾಲ್–ಮೊದಲಾದ ಅನೇಕ ಸುಂದರ ಗಿರಿಧಾಮಗಳು ಇವೆ. ಇವುಗಳಲ್ಲಿ ಅನೇಕ ಗಿರಿಧಾಮಗಳ ವಿವರಗಳು ಆಯಾ ಶೀರ್ಷಿಕೆಗಳಲ್ಲಿ ಸಿಗುತ್ತವೆ. (ಕೆ.ಟಿ.ಕೆ.)

**ಗಿರಿ, ವಿ.ವಿ. :** 1894–1980. 1969 ಆಗಸ್ಟ್ 24ರಿಂದ ಭಾರತ ಗಣರಾಜ್ಯದ ನಾಲ್ಕನೆಯ ಅಧ್ಯಕ್ಷರು. 1894ರ ಆಗಸ್ಟ್ 10ರಂದು ಅಂದಿನ ಮದ್ರಾಸ್ ಪ್ರೆಸಿಡೆನ್ಸಿ ಇಂದಿನ ಒರಿಸ್ಸಾದ ಬರ್ಹಾಂಪುರದಲ್ಲಿ ಜನ್ಮತಾಳಿದರು. ಏಳು ಗಂಡು ಐದು ಹೆಣ್ಣುಮಕ್ಕಳ ಸಂಸಾರದಲ್ಲಿ ಇವರು ಎರಡನೆಯ ಮಗ. ತಂದೆ ವಿ ವಿ ಜೋಗಯ್ಯ ಪಂತಲು, ವಕೀಲರು; ರಾಜಕಾರಣದಲ್ಲೂ ಅವರಿಗೆ ಆಸಕ್ತಿಯಿತ್ತು. ರಾಷ್ಟ್ರೀಯ ಚಳವಳಿಯಲ್ಲಿ ಆಸಕ್ತಿ; 20ರ ದಶಕಗಳಲ್ಲಿ ಪಂಡಿತ್ ಮೋತಿಲಾಲ ನೆಹರೂ ಹಾಗೂ ಚಿತ್ತರಂಜನ್‌ದಾಸರ



ಸ್ವರಾಜ್ಯ ಪಾರ್ಟಿ ಯಲ್ಲಿ ಸಕ್ರಿಯ. ಇದು ಎಳೆಯ ವಿ.ವಿ. ಗಿರಿಯ ಮೇಲೆ ಸಹಜವಾಗಿ ಪ್ರಭಾವ ಬೀರಿತು. ಗಿರಿಯವರ ಒಬ್ಬ ಚಿಕ್ಕಪ್ಪ ಹನುಮಂತರಾವ್ ಸಾರ್ವಜನಿಕ ಸೇವೆಯಲ್ಲಿ ಆಸಕ್ತರಾಗಿದ್ದರು. ಇನ್ನೊಬ್ಬ ಚಿಕ್ಕಪ್ಪ ವಿಶ್ವನಾಥ ರಾವ್ ಸ್ಥಾಪಿಸಿದ್ದ ತರುಣ ಸಂಘಕ್ಕೆ ಗಿರಿಯವರು ಬಾಲ್ಯದಲ್ಲೇ ಸದಸ್ಯರಾಗಿದ್ದರು. ಆ ಸಂಘದ ಗ್ರಂಥಾಲಯಕ್ಕೆ ದಾನವಾಗಿ ಶೇಖರಿಸಲಾಗಿದ್ದ ಸುಮಾರು 2,000 ಗ್ರಂಥಗಳಲ್ಲಿ ರಾಜಕೀಯ ನಾಯಕರ ಚರಿತ್ರೆಗಳೇ ಹೆಚ್ಚಾಗಿದ್ದವು. ಆ ಸಂಘ ಬಡವರಿಗೆ ಅನ್ನದಾನಕ್ಕಾಗಿ ಮಧುಕರಿ ವ್ಯವಸ್ಥೆಯನ್ನೂ ತಿಲಕರ ಪೈಸಾ ನಿಧಿಗಾಗಿ ಧನ ಸಂಗ್ರಹದ ವ್ಯವಸ್ಥೆಯನ್ನೂ ಮಾಡಿತ್ತು. ಬಾಲ್ಯದಲ್ಲಿ ಗಿರಿಯವರಿಗೆ ಮಾರ್ಗದರ್ಶನ ನೀಡಿದವರು ಶಿಕ್ಷಕ ರಾಮಲಿಂಗಂ. ಆಗಿನ ಇವರ ಚಟುವಟಿಕೆಗಳು ಗಾಂಧಿಯವರ ಸತ್ಯಾಗ್ರಹವೇ ಮುಂತಾದ ಅನಂತರದ ಚಳವಳಿಗಳಲ್ಲಿ ಭಾಗವಹಿಸಲು ಗಿರಿಯವರಿಗೆ ಪೂರ್ವಭಾವಿ ಸಿದ್ಧತೆಯನ್ನೊದಗಿಸಿದವು.

ಗಿರಿಯವರು ತಮ್ಮಂತೆಯೇ ವಕೀಲರಾಗಬೇಕೆಂದು ಅವರ ತಂದೆಯವರ ಬಯಕೆಯಾಗಿತ್ತು. ಮದ್ರಾಸಿನಲ್ಲಿ ಕೇಂಬ್ರಿಜ್ ಸೀನಿಯರ್ ಪರೀಕ್ಷೆ ಮಾಡಿ ಐರ್ಲೆಂಡಿನ ಡಬ್ಲಿನ್ ರಾಷ್ಟ್ರೀಯ ವಿದ್ಯಾಲಯವನ್ನು ಸೇರಿ ಕಿಂಗ್ಸ್ ಇನ್‌ನಲ್ಲಿ ಬ್ಯಾರಿಸ್ಟರ್ ಆದರು. ಸಂಪ್ರದಾಯಸ್ಥ ಬ್ರಾಹ್ಮಣ ಮನೆತನಕ್ಕೆ ಸೇರಿದ ಗಿರಿಯವರು ತಮ್ಮ ತಾಯಿಗೆ ಕೊಟ್ಟ ಮಾತಿನಂತೆ ಶಾಕಾಹಾರಿಗಳಾಗಿಯೇ ಅಲ್ಲಿ ಕಾಲ ಕಳೆದರು. ಐರ್ಲೆಂಡು ಇಂಗ್ಲೆಂಡಿನಿಂದ ಸ್ವತಂತ್ರವಾಗಲು ಹೋರಾಟದ ಹವಣಿಕೆಯಲ್ಲಿದ್ದದ್ದನ್ನು ಕಂಡಾಗ ಗಿರಿಯವರಿಗೆ ಭಾರತ ಐರ್ಲೆಂಡ್‌ಗಳ ಆಶೋತ್ತರಗಳಲ್ಲಿದ್ದ ಸಾಮ್ಯ ಗೋಚರವಾಯಿತು. ಐರ್ಲೆಂಡಿನವರು ಇಂಗ್ಲೆಂಡಿನವರಿಗಿಂತ ಹೆಚ್ಚಾಗಿ ಭಾರತೀಯರನ್ನು ಗೌರವಿಸುತ್ತಿದ್ದದ್ದನ್ನು ಗಮನಿಸಿದರು. ಐರ್ಲೆಂಡಿನ ನಾಯಕ ಡ ವಲೇರ ಅವರನ್ನು ಗಿರಿಯವರು ಸಂದರ್ಶಿಸಿದರು.

ಗಿರಿ ಅವರು ಬಿ.ಎ. ಪದವಿಗೆ ಸಾಹಿತ್ಯ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಂವಿಧಾನ, ನ್ಯಾಯ, ಅಂತರಾಷ್ಟ್ರೀಯ ಕಾನೂನುಗಳನ್ನು ಆರಿಸಿಕೊಂಡಿದ್ದರು. ಅಲ್ಲಿ ಅನೇಕ ಭಾರತೀಯ ವಿದ್ಯಾರ್ಥಿಗಳು ಸೇರಿ ಕ್ರಾಂತಿಕಾರಿ ಸಂಘವನ್ನು ಸ್ಥಾಪಿಸಿಕೊಂಡರು. ರಾಷ್ಟ್ರಪ್ರೇಮವನ್ನು ತೋರಿಸಲು ವಿದೇಶಿ ಅರಿವೆಗಳನ್ನು ಸುಟ್ಟುಹಾಕಿದರು.

ಗಿರಿಯವರು 1914ರಲ್ಲಿ ಗಾಂಧಿಯವರನ್ನು ಲಂಡನ್ನಿನಲ್ಲಿ ಸಂದರ್ಶಿಸಿದರು. ಅವರ ಎಲ್ಲಾ ವಿಚಾರಧಾರೆಗಳನ್ನೂ, ಉದಾಹರಣೆಗೆ ಅಹಿಂಸೆಯನ್ನು, ಆಗ ಗಿರಿ ಒಪ್ಪಲಿಲ್ಲವಾದರೂ ಗಾಂಧಿಯವರಿಂದ ಬಹಳಮಟ್ಟಿಗೆ ಪ್ರಭಾವಿತರಾದರು. ಯುದ್ಧದಲ್ಲಿ ಬ್ರಿಟಿಷರಿಗೆ ನೆರವಾಗಲು ಗಾಂಧಿಯವರ ಮಾತಿನಂತೆ ಗಿರಿಯವರು ರೆಡ್ ಕ್ರಾಸ್ ಸಂಸ್ಥೆಯನ್ನು ಸೇರಿದ್ದರೂ

ಅನಂತರ ವಿಚಾರಮಾಡಿದಾಗ ತಾವು ಅದಕ್ಕೆ ಸೇರಿದ್ದು ತಪ್ಪೆನಿಸಿ ಕೂಡಲೇ ಗಾಂಧಿಯವರಿಗೆ ಪತ್ರ ಬರೆದು ಆ ಸಂಸ್ಥೆಯಿಂದ ಬಿಡುಗಡೆ ಹೊಂದಿದರು. ಅವರ ಈ ಕ್ರಮ ಆಗ ಕಾನೂನು ವಿರೋಧವಾಗಿತ್ತಾದರೂ ಗಿರಿಯವರು ಹೆದರಲಿಲ್ಲ.

1916ರಲ್ಲಿ ಜರುಗಿದ ಈಸ್ಟರ್ ದಂಗೆಯ ಅನಂತರ ಸಂಭವಿಸಿದ ದುರ್ಘಟನೆಗಳ ವಿಶೇಷ ಪರಿಣಾಮ ಗಿರಿಯವರ ಮೇಲಾಯಿತು. ಬಂದರು, ಗಣಿ ಮತ್ತು ರೈಲ್ವೆಗಳ ಸುಸಂಘಟಿತ ಕಾರ್ಮಿಕರು ಮುಷ್ಕರದ ಮೂಲಕ ಏನು ಮಾಡಬಲ್ಲರೆಂಬುದು ಗಿರಿಯವರಿಗೆ ಮನವರಿಕೆಯಾಯಿತು. ಅವರು ಭಾರತಕ್ಕೆ ಮರಳಿದ ಮೇಲೆ ಇದೇ ರೀತಿ ಕಾರ್ಮಿಕ ಶಕ್ತಿಯನ್ನು ಸಂಘಟಿಸಿ ಅದನ್ನು ರಾಜಕೀಯ ಹೋರಾಟದಲ್ಲಿ ಬಳಸಿಕೊಳ್ಳಬೇಕೆಂದು ಗಿರಿಯವರು ನಿರ್ಧರಿಸಿದರು. ಆ ವೇಳೆಗಾಗಲೇ ಬ್ರಿಟಿಷ್ ಸರ್ಕಾರಕ್ಕೆ ಇವರ ಮೇಲೆ ಸಂಶಯ ಬಂದಿತ್ತು. ಆಗಿನ ಸೆಕ್ರೆಟರಿ ಆಫ್ ಸ್ಟೇಟ್ಸ್ ಚೇಂಬರ್ಲೀನ್, ಕಾಮನ್ಸ್ ಸಭೆಯಲ್ಲಿ ಹೇಳಿಕೆ ಕೊಡುತ್ತ, ಗಿರಿಯವರಿಗೂ ಐರಿಷ್ ನಾಯಕರಿಗೂ ಸಂಪರ್ಕವಿದೆಯೆಂದು ಘೋಷಿಸಿದ. ಇದರ ಪರಿಣಾಮವಾಗಿ ಗಿರಿಯವರಿಗೆ ಅಮೆರಿಕಕ್ಕೆ ಹೋಗಲು ರಹದಾರಿ ಸಿಗಲಿಲ್ಲ. ಇವರು ಸ್ವದೇಶಕ್ಕೆ ಮರಳಿದರು. 1917ರಲ್ಲಿ ಸರಸ್ವತಿಬಾಯಿಯವರೊಡನೆ ಗಿರಿಯವರ ಮದುವೆಯಾಯಿತು.

ಕಾರ್ಮಿಕ ಕ್ಷೇತ್ರವೆಂದರೇನೆಂಬುದು ಇನ್ನೂ ತಿಳಿಯದಿದ್ದ ಆ ಸಮಯದಲ್ಲಿ ಗಿರಿಯವರು ಆ ಕ್ಷೇತ್ರದಲ್ಲಿ ಪದಾರ್ಪಣೆ ಮಾಡಿದರು. 1915ರಲ್ಲಿಯೇ ಸರ್ವೆಂಟ್ಸ್ ಆಫ್ ಇಂಡಿಯ ಸೊಸೈಟಿಯ ಸದಸ್ಯರಾಗಿ ಸೇರಿದ್ದ ಗಿರಿಯವರು ಮಹಾತ್ಮಗಾಂಧಿಯವರ ಸಾಬರ್‌ಮತಿ ಆಶ್ರಮದಲ್ಲೂ ಕೆಲವು ದಿನ ಇದ್ದರು.

ಗಿರಿಯವರು ಭಾರತಕ್ಕೆ ಮರಳಿದ ಮೇಲೆ ಆಗ ಸುಪ್ರಸಿದ್ಧ ಬ್ಯಾರಿಸ್ಟರರೂ ರಾಜಕಾರಣಿಯೂ ಆಗಿದ್ದ ಟಿ. ಪ್ರಕಾಶಂ ಅವರನ್ನು ವೃತ್ತಿಸಂಬಂಧವಾಗಿ ಭೇಟಿಮಾಡಿದರು. ಗಿರಿಯವರು ಅಡ್ವೊಕೇಟ್ ಆಗಿ ಸೇರಿದಾಗ ಗಂಜಾಮಿನ ಜಿಲ್ಲಾ ನ್ಯಾಯಾಧೀಶ ಅವರಿಗೆ ಮುನ್ಸಿಫ್ ಸ್ಥಾನ ಕೊಡಿಸುವುದಾಗಿ ಹೇಳಿದನೆಂದೂ ಗಿರಿಯವರ ಕ್ರಾಂತಿಕಾರೀ ವಿಚಾರಗಳನ್ನು ಅರಿತಮೇಲೆ ಆತ ಹೆದರಿದನೆಂದೂ ಹೇಳಲಾಗಿದೆ. ಗಿರಿಯವರು ವಕೀಲಿವೃತ್ತಿಯಲ್ಲಿ ಐದುವರ್ಷ ಕಳೆಯುವುದರೊಳಗಾಗಿ ಸ್ವಾತಂತ್ರ್ಯ ಹೋರಾಟ ಇವರನ್ನು ಸೆಳೆಯಿತು. 1916ರಲ್ಲಿ ಇವರು ಲಖನೌದಲ್ಲಿ ಸೇರಿದ್ದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದರು. 1921ರಲ್ಲಿ ಸತ್ಯಾಗ್ರಹ ಚಳವಳಿಯಲ್ಲಿ 350 ಜನರೊಂದಿಗೆ ಇವರು ಗಂಜಾಮಿನಲ್ಲಿ ಸತ್ಯಾಗ್ರಹ ಹೂಡಿ ಬಂಧಿತರಾದರು. 1922ರಲ್ಲಿ ಇವರು ಜೈಲಿನಲ್ಲಿದ್ದಾಗ ರಾಜಕೀಯ ಸ್ನೇಹಿತರನ್ನು ಗಳಿಸಿಕೊಳ್ಳುವ ಅವಕಾಶ ಸಿಕ್ಕಿತು. ಕಾರಾಗೃಹದ ಸುಧಾರಣೆಗಾಗಿ ಅದರ ಒಳಗೆ ಸಂಘಟನೆ ಆಂದೋಲನಗಳನ್ನು ಪ್ರಾರಂಭಿಸಿದರು. 1922ರ ವೇಳೆಗೆ ವಿ ವಿ ಗಿರಿ ಅವರ ಶ್ರಮಜೀವಿವರ್ಗದ ಜತೆ ಸಂಬಂಧ ನಿಕಟಗೊಂಡು, ಎನ್ ಎಮ್ ಜೋಶಿಯವರ ಬಲಗೈ ಭಂಟರಾದರು. ಅಲ್ಲಿಂದ ಮುಂದಕ್ಕೆ ಅವರ ಬಹುಮುಖ್ಯ ಕಾರ್ಯಕ್ಷೇತ್ರ ಕಾರ್ಮಿಕರಂಗವಾಯಿತು.

ಮೂರು ತಿಂಗಳುಗಳ ಅನಂತರ ಕಾರಾಗೃಹದಿಂದ ಹೊರಬಂದ ಕೂಡಲೇ ಖರಗ್‌ಪುರದ ರೈಲ್ವೆ ಕಾರ್ಮಿಕ ನಿಯೋಗವೊಂದು ಸೆರಮನೆಯ ಹೆಬ್ಬಾಗಿಲಿನಲ್ಲೆ ಗಿರಿಯವರನ್ನು ಸಂದರ್ಶಿಸಿ ತಮ್ಮ ಸಂಘವನ್ನು ಸಂಘಟಿಸಬೇಕೆಂದು ಕೋರಿತು. ಕೂಡಲೇ ಗಿರಿಯವರು ಒಪ್ಪಿಕೊಂಡು ಬಂಗಾಳ, ನಾಗಪುರ ರೈಲ್ವೆ ಸಂಘವನ್ನು ಸ್ಥಾಪಿಸಿದರು. ಒಂದೇ ದಶಕದಲ್ಲಿ ಈ ಸಂಘ ದೊಡ್ಡದಾಗಿ ಬೆಳೆಯಿತು. ಈ ರೈಲ್ವೆಯಲ್ಲಿ ಗಿರಿ ಅವರು ಅತ್ಯಂತ ಯಶಸ್ವಿಯಾದ ಮುಷ್ಕರವನ್ನು ಸಹ ಸಂಘಟಿಸಿದರು. ಇವರು ಅಖಿಲ ಭಾರತ ರೈಲ್ವೆ ಫೆಡರೇಷನ್ನಿನ ಅಧ್ಯಕ್ಷರಾಗಿದ್ದರು. ಎರಡು ಬಾರಿ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಅಧ್ಯಕ್ಷರಾಗಿಯೂ ಇದ್ದರು. 1927ರಲ್ಲಿ ಜಿನೀವದಲ್ಲಿ ಸೇರಿದ್ದ ಅಂತಾರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ಇವರು ಭಾರತದ ಕಾರ್ಮಿಕರ ನಿಯೋಗಿಯಾಗಿ ಭಾಗವಹಿಸಿದರು. 1927–1930ರ ಅವಧಿಯಲ್ಲಿ ಹಲವು ಮುಷ್ಕರಗಳನ್ನು ಸಂಘಟಿಸಿದರಾದರೂ ಗಿರಿಯವರು ಮುಷ್ಕರಗಳನ್ನು ಎಂದೂ ಸ್ವಾಗತಿಸುತ್ತಿರಲಿಲ್ಲ. ಕಾರ್ಮಿಕರು ಅನಿವಾರ್ಯ ಪರಿಸ್ಥಿತಿಯಲ್ಲಿ ಮಾತ್ರ, ಮಾಲೀಕರಿಗೆ ಮುನ್ಸೂಚನೆಯನ್ನು ಕೊಟ್ಟು, ಸಂವಿಧಾನದ ಎಲ್ಲಾ ಪ್ರಯತ್ನಗಳೂ ವಿಫಲವಾದಾಗ, ಮುಷ್ಕರ ಹೂಡಬೇಕೆಂಬುದು ಅವರ ಮತ.

ಬಂಗಾಳ, ನಾಗಪುರ ರೈಲ್ವೆ ಮುಷ್ಕರದಲ್ಲಿ ಸು. 60,000 ಕಾರ್ಮಿಕರು ಒಂದು ತಿಂಗಳ ಕಾಲ ಕೆಲಸಕ್ಕೆ ಹಾಜರಾಗದಿದ್ದಾಗ ಅವರ ಕುಟುಂಬಗಳ ರಕ್ಷಣೆ, ಪೋಷಣೆಗಳ ವ್ಯವಸ್ಥೆಯ ಪ್ರತಿಯೊಂದು ವಿವರವನ್ನೂ ಗಿರಿಯವರು ಪ್ರತ್ಯಕ್ಷ ಪ್ರವಾಸ ಭೇಟಿಗಳಿಂದ ನಿಯಂತ್ರಿಸಿದರು. ಇಂಥ ಬೃಹತ್ ಮುಷ್ಕರವನ್ನು ಗೌರವಯುತವಾಗಿ ನಿರ್ವಹಿಸಿ ಕಾರ್ಮಿಕ ಸಂಘಟನೆಯ ಸಾಮರ್ಥ್ಯ ಆಡಳಿತಕ್ಕೆ ಗೊತ್ತಾಗುವಂತೆ ಮಾಡಿದರು. ಆ ಸಂಘವನ್ನು ಸರ್ಕಾರ ಮನ್ನಿಸಬೇಕಾಯಿತು. ಕಾರ್ಮಿಕ ಕ್ಷೇತ್ರದಲ್ಲಿ ಗಿರಿಯವರಿಗೆ ಎಂ. ಎನ್. ಜೋಷಿಯವರು ಮಾರ್ಗದರ್ಶಕರಾಗಿದ್ದರು.

ಗಿರಿಯವರ ತಂದೆ ಕೇಂದ್ರ ವಿಧಾನ ಪರಿಷತ್‌ನಲ್ಲಿ 1927 ರಿಂದ 1930 ರವರಗೆ ಸದಸ್ಯರಾಗಿದ್ದರೂ ಗಿರಿಯವರು ವಿಧಾನಸಭಾ ಪ್ರವೇಶಕ್ಕಾಗಿ ಪ್ರಯತ್ನಮಾಡಿದವರಲ್ಲ. ಆದರೆ ಕಾರ್ಮಿಕರ ಹಿತ ಪಾರ್ಲಿಮೆಂಟರಿ ಚಟುವಟಿಕೆಗಳಿಂದ ಸಾಧಿತವಾಗುವುದೆಂದು ಅನಿಸಿದ ಮೇಲೆ ಆ ಬಗ್ಗೆ ಅವರಲ್ಲಿದ್ದ ವಿರೋಧಭಾವ ಹೋಯಿತು. 1934ರಲ್ಲಿ ಗಿರಿ ಅವರು ತಮ್ಮ ಸ್ನೇಹಿತರಾದ ರಾಜು ಅವರನ್ನು ಸೋಲಿಸಿ ಕೇಂದ್ರ ವಿಧಾನಸಭೆಗೆ ಚುನಾಯಿತರಾದರು (1934–37). ಆಗ ಅವರು ಕಾರ್ಮಿಕ ಸಮಸ್ಯೆಗಳತ್ತ ಸರ್ಕಾರದ ಗಮನಸೆಳೆಯಲು ಯತ್ನಿಸಿದರು. ಭಾರತದಲ್ಲೇ ರೈಲ್ವೆ ಎಂಜಿನ್‌ಗಳನ್ನು ತಯಾರಿಸುವುದು ಉಳಿತಾಯದ ಮಾರ್ಗವೆಂದು ಆಗಲೇ ಸೂಚಿಸಿದ್ದರು. ಸತ್ಯಮೂರ್ತಿ, ಭುಲಾಬಾಯಿ ದೇಸಾಯಿ, ಜಿನ್ನಾ, ಗೋವಿಂದವಲ್ಲಭಪಂತ್, ಮದನಮೋಹನ ಮಾಳವೀಯ, ಅಸಫ್ ಆಲಿ ಮುಂತಾದ ದಿಗ್ಗಜರಿಂದ ಕೇಂದ್ರೀಯ ವಿಧಾನಸಭೆಯಲ್ಲಿ ವಿ ವಿ ಗಿರಿ ಕಾರ್ಮಿಕ ಪ್ರಶ್ನೆಗಳನ್ನು ಪ್ರಬಲವಾಗಿ ಪ್ರತಿಪಾದಿಸಿ, ಎಲ್ಲರ ಗಮನ ಸೆಳೆದರು.

ಭಾರತದಲ್ಲಿ ಆರ್ಥಿಕ ಯೋಜನೆಗಳ ಮಾತು ಹೊಸದಾಗಿದ್ದ ಆ ಕಾಲದಲ್ಲಿ ಗ್ರಾಮೀಣ ಪ್ರಗತಿಗಾಗಿ ಆರ್ಥಿಕ ಯೋಜನೆಯೊಂದನ್ನು ರೂಪಿಸಿ ಕೇಂದ್ರ ವಿಧಾನ ಮಂಡಲದ ಮುಂದೆ ಗಿರಿಯವರು ಮಂಡಿಸಿದ್ದರು. ಕೈಗಾರಿಕೆಗಳ ವ್ಯಾಜ್ಯಗಳಲ್ಲಿ ಸಂಧಾನದ ಸಾಧನಗಳಾಗಿ ಮಂಡಳಿಗಳು ಇರಬೇಕೆಂದು ಆಗ ವಾದಿಸಿದ ಪರಿಣಾಮವಾಗಿ ಇಂದು ಆ ಬಗ್ಗೆ ಅನೇಕ ಕಾನೂನುಗಳಾಗಿ ಕೈಗಾರಿಕಾ ಸಂಸ್ಥೆಗಳು ವಿಫುಲ ಸೌಲಭ್ಯ ಪಡೆದಿವೆ. ಆದರೆ ಆಗ ಗಿರಿ ಅವರ ಈ ಮಾತುಗಳು ಹೊಸದಾಗಿ ಕಾಣುತ್ತಿದ್ದುವು.

1937ರಲ್ಲಿ ಪ್ರಾಂತೀಯ ವಿಧಾನ ಸಭೆಗಳಿಗೆ ಚುನಾವಣೆಗಳು ನಡೆದಾಗ, ಬ್ರಿಟಿಷ್ ಸರ್ಕಾರದ ಬೆಂಬಲವನ್ನೂ ಶ್ರೀಮಂತಿಕೆ, ಜಾತೀಯತೆ, ಹಾಗೂ ಅಧಿಕಾರ ಬಲವನ್ನೂ ಪಡೆದಿದ್ದ ಬೊಬ್ಬಿಲಿ ರಾಜರ ವಿರುದ್ಧವಾಗಿ ಗಿರಿಯವರು ಕಾಂಗ್ರೆಸ್ ಸ್ಪರ್ಧಿಯಾಗಿ ನಿಂತು ಗೆದ್ದು ನೆಹರೂ ಅವರ ಪ್ರಶಂಸೆಗೆ ಪಾತ್ರರಾದರು.

1937–39 ಮದ್ರಾಸಿನಲ್ಲಿ ಸಿ ರಾಜಗೋಪಾಲಾಚಾರಿ ಅವರು ರಚಿಸಿದ ಕಾಂಗ್ರೆಸ್ ಮಂತ್ರಿಮಂಡಲದಲ್ಲಿ ಕಾರ್ಮಿಕ, ಕೈಗಾರಿಕೆ, ಮತ್ತು ಸಹಕಾರ ಮಂತ್ರಿಯಾಗಿದ್ದ ಗಿರಿಯವರು ಕಾರ್ಮಿಕ ನೀತಿಯನ್ನು ಸ್ಪಷ್ಟೀಕರಿಸುತ್ತ ಮಾಲೀಕರ, ಕಾರ್ಮಿಕರ ಮತ್ತು ಸರ್ಕಾರದ ತ್ರಿಪಕ್ಷ ಸಮ್ಮೇಳನವನ್ನು ಕರೆದರು. ಆಗ ಆ ಪ್ರಾಂತ್ಯದ ಮುಖ್ಯ ಮಂತ್ರಿಯಾಗಿದ್ದ ರಾಜಗೋಪಾಲಾಚಾರಿಯವರು ಇದನ್ನು ಗಿರಿಯವರ ದರ್ಬಾರ್ ಎಂದು ನಗೆಯಾಡಿದರು. ಆಗಿನ ರಾಜ್ಯಪಾಲರೂ ಇದರ ಬಗ್ಗೆ ತಾತ್ಸಾರ ಭಾವ ತಳೆದರು. ಭಾರತೀಯ ವಲಸೆಗಾರರ ಸಮಸ್ಯೆಯನ್ನು ಗಿರಿಯವರು ಆಗ ಕೈಗೆತ್ತಿಕೊಂಡರು. 1938ರಲ್ಲಿ ಕಾಂಗ್ರೆಸ್ ರಚಿಸಿದ ರಾಷ್ಟ್ರೀಯ ಯೋಜನಾ ಆಯೋಗಕ್ಕೆ ಗಿರಿಯವರು ಸಂಚಾಲಕರಾದರು. ಭಾರತದ ಪಂಚವಾರ್ಷಿಕ ಯೋಜನೆಗಳ ಭಾವನೆ ರೂಪುಗೊಂಡದ್ದು ಆಗ.

ಪ್ರಕಾಶಂ ಅವರು ಮದ್ರಾಸಿನಲ್ಲಿ ರಚಿಸಿದ ಸರ್ಕಾರದಲ್ಲೂ ಗಿರಿಯವರು ಮಂತ್ರಿಯಾಗಿದ್ದರು (1946–1947). ಅನಂತರ ಇವರು ಶ್ರೀಲಂಕ (ಸಿಂಹಳ)ದಲ್ಲಿ ಭಾರತದ ಹೈಕಮಿಷನರಾಗಿದ್ದರು (1947–1951). 1952ರ ಮೇ ತಿಂಗಳಿಂದ 1954ರ ಸೆಪ್ಟೆಂಬರ್‌ವರೆಗೆ ಇವರು ಕೇಂದ್ರ ಸರ್ಕಾರದ ಕಾರ್ಮಿಕ ಮಂತ್ರಿಯಾಗಿದ್ದರು. ಕಾರ್ಮಿಕ ನೀತಿಯ ವಿಚಾರವಾಗಿ ಭಿನ್ನಾಭಿಪ್ರಾಯ ಬಂದುದರಿಂದ ಆ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. 1952ರಿಂದ 1957ರವರಗೆ ಇವರು ಲೋಕಸಭಾ ಸದಸ್ಯರಾಗಿದ್ದರು. 1958ರಲ್ಲಿ ಇವರು ಸಾಮಾಜಿಕ ಕಾರ್ಯದ ಭಾರತೀಯ ಸಮ್ಮೇಳನದ ಚುನಾಯಿತ ಅಧ್ಯಕ್ಷರಾಗಿದ್ದರು. ಇವರು ಕಾರ್ಮಿಕ ಅರ್ಥಶಾಸ್ತ್ರದ ಭಾರತೀಯ ಸಂಘದ ಸ್ಥಾಪಕ ಅಧ್ಯಕ್ಷರಾಗಿದ್ದರು. ಭಾರತೀಯ ಕಾರ್ಮಿಕ ಸಂಘ ಚಳವಳಿ, ಕಾರ್ಮಿಕ ಅರ್ಥಶಾಸ್ತ್ರ ಇವುಗಳ ಬೆಳವಣಿಗೆಗೆ ಗಿರಿಯವರು ಬಹಳ ಮಟ್ಟಿಗೆ ಕಾರಣ.

ಗಿರಿಯವರು 1957–1960ರಲ್ಲಿ ಉತ್ತರ ಪ್ರದೇಶಕ್ಕೂ 1960–1965ರಲ್ಲಿ ಕೇರಳಕ್ಕೂ 1965–1967ರಲ್ಲಿ ಕರ್ನಾಟಕಕ್ಕೂ ರಾಜ್ಯಪಾಲರಾಗಿದ್ದರು. 1967ರ ಮೇ 13ರಿಂದ 1969ರ ಮೇ 3ರವರೆಗೆ ಇವರು ಭಾರತದ ಮೂರನೆ ಉಪರಾಷ್ಟ್ರಪತಿಯಾಗಿಯೂ ರಾಜ್ಯಸಭೆಯ ಅಧ್ಯಕ್ಷರಾಗಿಯೂ ಇದ್ದರು. ಭಾರತದ ರಾಷ್ಟ್ರಪತಿಯಾಗಿದ್ದ ಜಾಕಿರ್ ಹುಸೇನ್ 1969ರ ಮೇ 3ರಂದು ನಿಧನರಾದಾಗ ಹಂಗಾಮಿರಾಷ್ಟ್ರಪತಿಯಾದರು. ಅನಂತರ ಸ್ಪರ್ಧಿಸಿ ಜಯಶೀಲರಾಗಿ 1969ರ ಆಗಸ್ಟ್ 24ರಂದು ರಾಷ್ಟ್ರಪತಿಯಾದರು.

ಗಿರಿಯವರ ಪತ್ನಿ ಸರಸ್ವತಿಬಾಯಿ ಗಿರಿಯವರು ಬಳ್ಳಾರಿ ಜಿಲ್ಲೆಯವರು. ಗಿರಿದಂಪತಿಗಳಿಗೆ ಹದಿನಾರು ಮಕ್ಕಳೂ ನಲವತ್ತು ಮೊಮ್ಮಕ್ಕಳೂ ಹದಿಮೂರು ಮರಿಮಕ್ಕಳೂ ಇದ್ದಾರೆ.

ಗಿರಿಯವರು ಒಳ್ಳೆಯ ಲೇಖಕ, ವಾಗ್ಮಿ. ಇಂಡಸ್ಟ್ರಿಯಲ್ ರಿಲೇಷನ್ಸ್, ಲೇಬರ್ ಪ್ರಾಬ್ಲೆಮ್ಸ್ ಇನ್ ಇಂಡಿಯನ್ ಇಂಡಸ್ಟ್ರಿ ಮುಂತಾದ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಇವುಗಳಲ್ಲಿ ಹಲವು ಇಂದಿಗೂ ಆಯಾ ಕ್ಷೇತ್ರಗಳಲ್ಲಿ ಪ್ರಮಾಣ ಗ್ರಂಥಗಳಾಗಿವೆ. ಇವರಿಗೆ 1975ರಲ್ಲಿ ಭಾರತ ಸರ್ಕಾರ 'ಭಾರತರತ್ನ' ಪ್ರಶಸ್ತಿ ನೀಡಿ ಗೌರವಿಸಿತು. ಇವರು 1980ರಲ್ಲಿ ನಿಧನರಾದರು.

ಆಜೀವಪರ್ಯಂತ ಸಮಾಜವಾದಿ ವಿಚಾರಧಾರೆಯ ಒಲವಿದ್ದರೂ, ಒಣ ಸೈದ್ಧಾಂತಿ ಸಮಾಜವಾದಿಯಾಗಿರಲಿಲ್ಲ. ಇವರದು ವ್ಯಾವಹಾರಿಕ ಹಾಗೂ ಮಾನವೀಯ ದೃಷ್ಟಿ. ಇವರ ದೃಷ್ಟಿಯಲ್ಲಿ ಸಮಾಜವೆಂಬ ಮತದ ಬೇರು ಮನುಷ್ಯ. 'ಲಕ್ಷಾಂತರ ಜನರಿಗೆ ಉದ್ಯೋಗ' ವಿ.ವಿ. ಗಿರಿ ಇವರ ನಿತ್ಯ ಜಪವಾಗಿತ್ತು. (ಜಿ.ಆರ್.ಪಿ.)

**ಗಿರಿವ್ರಜ :** ಪ್ರಾಚೀನ ಮಗಧ ದೇಶದ ರಾಜಧಾನಿ. ಪಾಟ್ನದಿಂದ 62 ಕಿಮೀ ದೂರದಲ್ಲಿರುವ ಈ ಸ್ಥಳದ ಈಗಿನ ಹೆಸರು ರಾಜ್‌ಗಿರ್. ಉಪರಿಚರ ವಸುವಿನಿಂದ ಈ ನಗರ ನಿರ್ಮಾಣವಾದ್ದರಿಂದ ಇದಕ್ಕೆ ವಸುಮತೀ ಎಂಬ ಹೆಸರೂ ಉಂಟು. ಬೌದ್ಧರ ಕಾಲದಲ್ಲಿ ಇದನ್ನು ರಾಜಗೃಹ ಎಂದು ಕರೆದರು. ಬಿಂಬಸಾರ (ಪ್ರ.ಶ.ಪೂ. 550) ಇದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ಅನಂತರ ಬಂದ ಕಲಾಶೋಕ ಎಂಬ ರಾಜ ತನ್ನ ರಾಜಧಾನಿಯನ್ನು ರಾಜಗ್ರಹದಿಂದ ಪಾಟಲಿಪುತ್ರಕ್ಕೆ ಬದಲಾಯಿಸಿದ. ಗಿರಿವ್ರಜ ಬಾರ್ಹದ್ರಥ ವಂಶದ ರಾಜಧಾನಿಯಾಗಿದ್ದುದರಿಂದ ಇದಕ್ಕೆ ಬಾರ್ಹದ್ರಥಪುರ ಎಂಬ ಹೆಸರಿತ್ತೆಂದು ತಿಳಿಯುತ್ತದೆ. ಬೌದ್ಧ ಗ್ರಂಥಗಳ ಪ್ರಕಾರ ಇದಕ್ಕೆ ಕುಶಾಗ್ರಪುರಿ ಎಂದೂ ಹೆಸರಿತ್ತು. ಬೃಹತ್‌ಸಂಹಿತೆ ಮತ್ತು ವಿಷ್ಣುಪುರಾಣಗಳಲ್ಲೂ ಗಿರಿವ್ರಜದ ಉಲ್ಲೇಖ ಬಂದಿದೆ. ಕೃಷ್ಣ, ಅರ್ಜುನ, ಭೀಮ–ಇವರು ಜರಾಸಂಧವಧೆಗಾಗಿ ಇಲ್ಲಿಗೆ ಬಂದಿದ್ದರೆಂದು ಭಾಗವತ ಪುರಾಣ ತಿಳಿಸುತ್ತದೆ. ಗೌತಮ ಬುದ್ಧ ವಿಶ್ರಾಂತಿಗಾಗಿ ಒಂದು ವರ್ಷಗಳ ಕಾಲ ಇಲ್ಲಿ ತಂಗಿದ್ದನೆಂದು ತಿಳಿದುಬರುತ್ತದೆ.

ಚೀನಿ ಪ್ರವಾಸಿ ಫಾಹಿಯಾನ್ ಮತ್ತು ಯುವಾನ್‌ಚಾಂಗ್ ಪ್ರಕಾರ ಈ ಪಟ್ಟಣ ಈಗಿನ ರಾಜ್‌ಗಿರ್‌ನ ದಕ್ಷಿಣಕ್ಕೆ ಒಂದು ಕಿಮೀ ದೂರದಲ್ಲಿ ಐದು ಪರ್ವತಗಳ ಮಧ್ಯೆ ಇತ್ತೆಂದು ತಿಳಿದುಬರುತ್ತದೆ. ರಾಮಾಯಣದಲ್ಲೂ ಇದೇ ರೀತಿ ಉಲ್ಲೇಖವಿದೆ. 1. ಪೈಹಾರ (ವೈಭಾರ), 2. ವರಾಲ(ವಿಪುಲಗಿರಿ), 3. ವೃಷಭ (ರಾನ), 4. ಋಷಿ (ಉದಯ) 5. ಚೈತ್ಯಕ (ಸೋನರಾಗಿರಿ)– ಇವೇ ಆ ಪಂಚ ಪರ್ವತಗಳು. ಬುದ್ಧನ ಪರಿನಿರ್ವಾಣದ ಅನಂತರ (ಪ್ರ.ಶ.ಪೂ.486) ಬೌದ್ಧರ ಪ್ರಥಮ ಪರಿಷತ್ತು ಸೇರಿದ್ದು ವೈಭಾರದಲ್ಲಿ. ಗಿರಿವ್ರಜದಲ್ಲಿ ಕೆಲವು ಜೈನ ಶಾಸನಗಳೂ ಉಂಟು. ಇಲ್ಲಿ ಅನೇಕ ಬಿಸಿನೀರಿನ ಚಿಲುಮೆಗಳಿರುವುದರಿಂದ ರಾಜ್‌ಗಿರ್ ಈಗ ಒಂದು ಆರೋಗ್ಯಧಾಮವೆಂದು ಪ್ರಸಿದ್ಧವಾಗಿದೆ. *

**ಗಿರೀಶ್ ಕಾರ್ನಾಡ್ :** 1938–. ಜ್ಞಾನಪೀಠ ಪ್ರಶಸ್ತಿ ಪಡೆದ ಕನ್ನಡ ನಾಟಕಕಾರ, ನಟ, ಚಲನಚಿತ್ರನಿರ್ದೇಶಕ. 1938 ಮೇ 19ರಂದು ಮುಂಬಯಿ ಸಮೀಪದ ಮಾಥೇರಾನ ಎಂಬ ಊರಲ್ಲಿ ಜನಿಸಿದರು. ತಂದೆ ರಘುನಾಥ ಕಾರ್ನಾಡ್, ವೈದ್ಯರು. ತಾಯಿ ಕೃಷ್ಣಬಾಯಿ. ಗಿರೀಶ್ ಕಾರ್ನಾಡ್‌ರು ಶಾಲ ಶಿಕ್ಷಣವನ್ನು ಶಿರಸಿಯಲ್ಲಿ ಪಡೆದರು. 1958 ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಗಣಿತಶಾಸ್ತ್ರ ಮತ್ತು ಸಂಖ್ಯಾಕಲನಶಾಸ್ತ್ರದಲ್ಲಿ ಬಿ.ಎ.ಪದವಿ ಗಳಿಸಿದರು. ಅನಂತರ ಮುಂಬಯಿಯಲ್ಲಿ ಎಂ.ಎ. ವಿದ್ಯಾರ್ಥಿಯಾಗಿದ್ದಾಗ ರೋಡ್ಸ್ ವಿದ್ಯಾರ್ಥಿವೇತನ ಪಡೆದು ಮುಂಬಯಿನಲ್ಲಿ ಅಧ್ಯಯನ ಅರ್ಧಕ್ಕೆ ನಿಲ್ಲಿಸಿ ಇಂಗ್ಲೆಂಡಿಗೆ ಪ್ರಯಾಣ ಮಾಡಿದರು. 1963ರಲ್ಲಿ ಆಕ್ಸ್‌ಫರ್ಡಿನ ಎಂ.ಎ. ಪದವಿ ಸಂಪಾದಿಸಿದರು. ಇಂಗ್ಲೆಂಡಿನಲ್ಲಿ ಆಕ್ಸ್‌ಫರ್ಡ್ ಯೂನಿಯನ್ನಿನ ಅಧ್ಯಕ್ಷರಾಗಿ ಇದ್ದರು. ಯೂನಿಯನ್ನಿಗೆ ಪ್ರಪ್ರಥಮವಾಗಿ ಮಹಿಳೆಯರಿಗೂ ಪ್ರವೇಶ ದೊರಕಿದ್ದು ಕಾರ್ನಾಡರ ಅಧ್ಯಕ್ಷತೆಯ ಅವಧಿಯಲ್ಲಿ. ಅವರು ಇಂಗ್ಲೆಂಡಿನಿಂದ ಭಾರತಕ್ಕೆ ಹಿಂದಿರುಗಿದ ಮೇಲೆ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ ಸಂಸ್ಥೆಯ ಮದರಾಸು ಶಾಖೆಯಲ್ಲಿ ಉಪವ್ಯವಸ್ಥಾಪಕರಾದರು (1963–69); ಅನಂತರ ಅದರ ವ್ಯವಸ್ಥಾಪಕರಾದರು (1969–70). ಕಾನಾರ್ಡ್‌ರವರು ಬೆಂಗಳೂರಿನರಾದ



ಡಾ.ಸರಸ್ವತಿ ಗಣಪತಿ ಈಕೆಯ ತಾಯಿ ಫಾರಸಿ ನರ್ಗಿಸ್‌ಮುಗಾಸೇಥ್ ಮತ್ತು ತಂದೆ ಕೊಡವ, ಕೊಡಂದೆರ ಗಣಪತಿ ಈಕೆಯನ್ನು ತಮ್ಮ 48 ವಯಸ್ಸಿನಲ್ಲಿ ವಿವಾಹವಾದರು. ಇವರಿಗೆ ಇಬ್ಬರು ಮಕ್ಕಳು; ಮಗಳು ಶಲ್ಮಲಿ (1981), ರಘು ಅಮಯ್ (1983) ಮಗ.

ಇವರು ಹವ್ಯಾಸಿ ರಂಗಭೂಮಿಯ ಒಳ್ಳೆಯ ನಟರೆಂದೂ ನಾಟಕ ಲೇಖಕರೆಂದೂ ಹೆಸರುಗಳಿಸಿದ್ದಾರೆ. ಇವರು 1961 ರಲ್ಲಿ ಪ್ರಕಟಿಸಿದ ಯಯಾತಿ ನಾಟಕ ಹಲವು ಬಾರಿ ರಂಗಭೂಮಿಯ ಮೇಲೆ ಪ್ರದರ್ಶಿತವಾಗಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿತು. ಪುರಾಣದ ಯಯಾತಿಯನ್ನು ಆಧುನಿಕ ದೃಷ್ಟಿಕೋನದಿಂದ ಪರಿವೀಕ್ಷಿಸಿ ಅವನ ಬಾಳಿನ ದುರಂತತೆಯನ್ನು ಎತ್ತಿ ತೋರುವ ಯಯಾತಿಯ ತಂತ್ರ ಅತ್ಯಂತ ಯಶಸ್ವಿಯಾಗಿದೆ. ಭಾರತೀಯ ಇತಿಹಾಸದ ವಾದಗ್ರಸ್ತ ಸುಲ್ತಾನರಲ್ಲೊಬ್ಬನ ಬಾಳಿನ ಸುತ್ತ ಹೆಣೆದಿರುವ **'ತುಘಲಕ್'** ನಾಟಕವೂ (1964) ನವೀನ ತಂತ್ರದಿಂದ ಕೂಡಿ, ಅವನ ಬಾಳಿನ ಕಥೆಗೆ ಹೊಸ ಆಯಾಮವೊಂದನ್ನು ನೀಡುತ್ತದೆ. ಅದು ಕನ್ನಡದಲ್ಲಿ ಮಾತ್ರವಲ್ಲದೆ ಇಂಗ್ಲಿಷ್, ಹಿಂದಿ ಮತ್ತು ಮರಾಠಿಯಲ್ಲೂ ರಂಗಪ್ರಯೋಗಗೊಂಡು ಆ ಭಾಷೆಗಳ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿದೆ. ಮಾ ನಿಷಾದ (1964), ಹಯವದನ (1977), ಅಂಜುಮಲ್ಲಿಗೆ (1980), ಹಿಟ್ಟಿನ ಹುಂಜ (1980), ನಾಗಮಂಡಲ (1988), ತಲೆದಂಡ (1990), ಅಗ್ನಿ ಮತ್ತು ಮಳೆ (1995), ಟಿಪ್ಪುವಿನಕನಸುಗಳು(2000) ಮತ್ತು ಒಡಕಲು ಬಿಂಬ (2005) ಇವು ಕಾರ್ನಾಡರು ಬರೆದ ಇತರ ನಾಟಕಗಳು. ಇವರ ಯಯಾತಿಗೆ ರಾಜ್ಯಪ್ರಶಸ್ತಿಯೂ (1961) ತುಘಲಕ್‌ಗೆ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿಯೂ (1969) ಲಭಿಸಿವೆ. 1971ರಲ್ಲಿ ಭಾರತೀಯ ಭಾಷೆಗಳಲ್ಲಿ ಸೃಷ್ಟಿಯಾದ ನಾಟಕಗಳ ಪೈಕಿ ಅತ್ಯುತ್ಕೃಷ್ಟವಾದದ್ದೆಂದು ಭಾರತೀಯ ನಾಟ್ಯ ಸಂಘದ ಬಹುಮಾನ ಗಳಿಸಿದ ಹಯವದನದಲ್ಲಿ ಯಕ್ಷಗಾನದ ತಂತ್ರವನ್ನು ಯಶಸ್ವಿಯಾಗಿ ಅಳವಡಿಸಲಾಗಿದೆ. ಕಾರ್ನಾಡರು ನಾಟಕಗಳಿಗೆ ಆಯ್ದುಕೊಳ್ಳುವ ವಸ್ತು ಪುರಾಣ, ಇತಿಹಾಸ, ಜನಪದಗಳಾದರೂ ಅವರ ಕೃತಿಗಳಲ್ಲಿ ಸಮಕಾಲೀನ ಸಮಸ್ಯೆ ಸಂವೇದನಗಳನ್ನು ಅರ್ಥೈಸುವ ಪ್ರಾಮಾಣಿಕ ಪ್ರಯತ್ನ ಗಮನಾರ್ಹ.

ಗಿರೀಶ್ ಕಾರ್ನಾಡರು ಹೆಚ್ಚು ಪ್ರಸಿದ್ಧಿ ಪಡೆದದ್ದು ಯು.ಆರ್.ಅನಂತಮೂರ್ತಿಯವರ ಸಂಸ್ಕಾರ ಕಾದಂಬರಿಯನ್ನು ಆಧರಿಸಿ ತಯಾರಿಸಲಾದ ಅದೇ ಹೆಸರಿನ ಕನ್ನಡ ಚಲನಚಿತ್ರದಿಂದಾಗಿ. ಸಂಸ್ಕಾರದ ಚಿತ್ರಕಥಾ ಲೇಖಕರೂ ಅದರಲ್ಲಿ ಪ್ರಾಣೇಶಾಚಾರ್ಯನ ಪಾತ್ರ ವಹಿಸಿದವರೂ ಗಿರೀಶ್‌ಕಾರ್ನಾಡರೇ. ತುಂಬ ವಾದಗ್ರಸ್ತವಾದ ಈ ಚಿತ್ರ ಮೊದಲು ಭಾರತದ ಸೆನ್ಸಾರ್ ಬೋರ್ಡಿನಿಂದ ಬಹಿಷ್ಕೃತವಾಗಿ ಅನಂತರ ಒಪ್ಪಿಗೆಯ ಮುದ್ರೆ ದೊರಕಿಸಿಕೊಂಡಿತು. ಇದು ಅನೇಕ ವಿಮರ್ಶಕರ ಮೆಚ್ಚುಗೆ ಗಳಿಸಿತಲ್ಲದೆ, 1971ರ ಶ್ರೇಷ್ಠ ಚಿತ್ರವೆಂದು ರಾಷ್ಟ್ರಪತಿಗಳ ಸ್ವರ್ಣಪದಕ ಗಳಿಸಿತು. ಬಿ.ವಿ.ಕಾರಂತರ ಸಹಯೋಗದಲ್ಲಿ ಇವರು ನಿರ್ದೇಶಿಸಿದ ಎಸ್.ಎಲ್.ಭೈರಪ್ಪನವರ ವಂಶವೃಕ್ಷ ಕಾದಂಬರಿ ಆಧಾರಿತ ಚಿತ್ರವೂ ತುಂಬ ಯಶಸ್ಸು ಗಳಿಸಿತು. ಇದರ ಚಿತ್ರ ಕಥೆಯನ್ನು ಬರೆದವರೂ ಕಾರ್ನಾಡರೇ. ಇದರಲ್ಲೂ ಕಾರ್ನಾಡರು ಪಾತ್ರವಹಿಸಿದ್ದಾರೆ. ಇದಕ್ಕೆ ರಾಜ್ಯ ಪ್ರಶಸ್ತಿಯೂ ಫಿಲ್ಮ್‌ಫೇರ್ ಪ್ರಶಸ್ತಿಯೂ ದೊರಕಿವೆ. ಇವರು ನಿರ್ದೇಶಿಸಿರುವ ಇನ್ನೊಂದು ಚಿತ್ರ ಶ್ರೀಕೃಷ್ಣ ಆಲನಹಳ್ಳಿಯವರ ಕಾಡು ಕಾದಂಬರಿಯನ್ನು ಆಧರಿಸಿದ್ದು. ಉತ್ಸವ್ ಇವರು ನಿರ್ದೇಶಿಸಿದ ಹಿಂದಿ ಚಿತ್ರ. ನಿಶಾಂತ್ ಎಂಬ ಹಿಂದಿ ಚಿತ್ರದಲ್ಲಿ ಕಾರ್ನಾಡರು ಅಭಿನಯಿಸಿದ್ದಾರೆ. ಕುವೆಂಪು ಅವರ ಕಾನೂರು ಹೆಗ್ಗಡತಿ ಕಾದಂಬರಿಯನ್ನು ಆಧರಿಸಿ ಅದೇ ಹೆಸರಿನ ಚಿತ್ರವನ್ನು ನಿರ್ದೇಶಿಸಿ, ಅಭಿನಯಿಸಿದ್ದಾರೆ (1999). ನಾಗಮಂಡಲವು ಸೇರಿದಂತೆ ಇವರ ನಾಟಕಗಳು ವಿದೇಶಗಳಲ್ಲೂ ಪ್ರದರ್ಶಿಸಲ್ಪಟ್ಟಿವೆ. ಇವು ಅನೇಕ ಭಾಷೆಗಳಿಗೆ ಭಾಷಾಂತರಗೊಂಡಿವೆ.

ಸಾಹಿತ್ಯ, ರಂಗಭೂಮಿ, ಚಲನಚಿತ್ರ–ಇವುಗಳ ನಡುವೆ ನಿಕಟಬಾಂಧವ್ಯ ಇದ್ದಾಗಲೇ ಹೊಸಹೊಸ ಪ್ರಯೋಗಗಳು ಸಾಧ್ಯವೆಂದೂ ಬಂಗಾಲದಲ್ಲಿ ಇವು ಮೂರೂ ಪರಸ್ಪರ ಪೂರಕವಾಗಿರುವುದರಿಂದಲೇ ಅಲ್ಲಿಯ ಚಲನಚಿತ್ರ ನವ್ಯತೆಯ ಹಾದಿ ಹಿಡಿದಿದೆಯೆಂದೂ ಭಾವಿಸಿರುವ ಕಾರ್ನಾಡರು ಈ ಮೂರೂ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ. ಗಣಿತಶಾಸ್ತ್ರದ ಶಿಸ್ತಿನಂತೆಯೇ ರಂಗಕರ್ಮಕೂಡ ಎಂಬುದು ಕಾರ್ನಾಡರ ನಂಬುಗೆ. ಸ್ವತಃ ಗಣಿತಶಾಸ್ತ್ರದ ವಿದ್ಯಾರ್ಥಿಯಾಗಿ, ವಿದೇಶಯಾತ್ರೆ ಮಾಡಿ ಅಲ್ಲಿಯ ರಂಗಭೂಮಿ, ಚಿತ್ರರಂಗವನ್ನು ವೀಕ್ಷಿಸಿರುವ ಗಿರೀಶ ಕಾರ್ನಾಡರು ಕನ್ನಡ ರಂಗಭೂಮಿ ಹಾಗೂ ಚಲನಚಿತ್ರ ಕ್ಷೇತ್ರದಲ್ಲೂ ನವ್ಯ ವಿಧಾನವನ್ನು ಪ್ರಯೋಗಿಸಿ ಯಶಸ್ವಿಯಾಗಿದ್ದಾರೆ. ತೆರೆಯ ಮೇಲೆ ಪ್ರಸಿದ್ಧರಾದ ಮತ್ತು ಹಣ ದೊರಕಿಸುವ ಭರವಸೆ ಇರುವ ನಟನಟಿಯರನ್ನು ಬಿಟ್ಟು ತಾವು ಚಿತ್ರೀಕರಿಸಲಿರುವ ಕಥೆಗೆ ಸೂಕ್ತರಾದವರನ್ನು ಅಭಿನಯಕ್ಕೆ ಆರಿಸಿಕೊಳ್ಳುವುದೂ ವೇಷಭೂಷಣಗಳಿಗಾಗಲಿ ಚಿತ್ರನಿರ್ಮಾಣ ಶಾಲೆಯ ಪೂರ್ವಸಿದ್ಧ ದೃಶ್ಯ ಸಂಯೋಜನೆಗಾಗಲಿ ಪ್ರಾಮುಖ್ಯ ಕೊಡದೆ ಹೊರಾಂಗಣದ ಸಹಜ ಪರಿಸರದಲ್ಲಿ ನೇರವಾಗಿ ಚಿತ್ರ

ತೆಗೆಯುವುದೂ ಇವರು ಸಾಮಾನ್ಯವಾಗಿ ಅನುಸರಿಸುವ ಕ್ರಮ. ಇವರು ಸ್ವಲ್ಪ ಕಾಲ ಪುಣೆಯ ಭಾರತೀಯ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆಯ ನಿರ್ದೇಶಕರಾಗಿದ್ದರು. ಇವರು ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಇವರಿಗೆ ಪದ್ಮಶ್ರೀ (1974), ಪದ್ಮಭೂಷಣ (1992), ಕಮಲಾದೇವಿ ಚಟ್ಟೋಪಾಧ್ಯಾಯ ಪ್ರಶಸ್ತಿ (1976) ಮತ್ತು ಜ್ಞಾನಪೀಠ ಪ್ರಶಸ್ತಿ (1998) ದೊರಕಿವೆ. (ಎಚ್.ಎಸ್.ಕೆ.)


ಇವರು 'ಆಡಾಡತ ಆಯುಷ್ಯ' ಎಂಬ ತಮ್ಮ ಆತ್ಮಚರಿತ್ರೆಯ ಒಂದನೆಯ ಸಂಪುಟವನ್ನು 2011ರಲ್ಲಿ ಪ್ರಕಟಿಸಿದ್ದಾರೆ. ಎರಡನೆಯ ಸಂಪುಟ 'ನೋಡ ನೋಡತಾ ದಿನಮಾನ' ಪ್ರಕಟವಾಗಲಿದೆ. ಇವರ ತಾಯಿ ಕೃಷ್ಣಬಾಯಿ ಗೌಡ ಸಾರಸ್ವತ ಸಮುದಾಯಕ್ಕೆ ಸೇರಿದವರು. ಈಕೆ ಗೋಕರ್ಣದ ಮನ್‌ಕೀಕ್ರಾ ಕುಟುಂಬಕ್ಕೆ ಮದುವೆಯಾಗಿದ್ದರು. ಚಿಕ್ಕವಯಸ್ಸಿನಲ್ಲೇ ವಿಧವೆಯಾದಾಗ ಪತಿಯ ಕುಟುಂಬದವರು ನಿರ್ಲಕ್ಷಿಸಿದರು. ಈಕೆಯ ಕಷ್ಟಕಾಲದಲ್ಲಿ ಈಕೆಗೆ ನೆರವು ನೀಡಿದ್ದು ಈಕೆಯ ಭಾವ (ಅಕ್ಕನಗಂಡ) ಮಂಗೇಶ್‌ರಾವ್. ಆಗ ಬೆಳಗಾವಿಯಲ್ಲಿ ಸರ್ಕಾರಿ ವೈದ್ಯಾಧಿಕಾರಿಯಾಗಿದ್ದ ಸಂಬಂಧಿ ಡಾ. ಕಾರ್ನಾಡರ ಸಹಾಯದಿಂದ ನರ್ಸಿಂಗ್ ಶಾಲೆಯಲ್ಲಿ ಸ್ಥಾನಪಡೆಯಲು ಸಹಾಯ ಮಾಡಿದರು. ಈಕೆ ಕಾರ್ನಾಡರ ಮನೆಯಲ್ಲೇ 5 ವರ್ಷವಾಸವಿದ್ದು ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಾ ಕಾರ್ನಾಡರ ಮನೆಯಲ್ಲಿ ಹಾಸಿಗೆ ಹಿಡಿದ ಅವರ ಪತ್ನಿಯನ್ನು ನೋಡಿಕೊಳ್ಳುತ್ತಿದ್ದರು. ಆಕೆ ನಿಧನವಾದ ಅನಂತರ ಕಾನಾರ್ಡರು ಕೃಷ್ಣಬಾಯಿಯನ್ನು ಆರ್ಯ ಸಮಾಜದ ಪದ್ಧತಿಯಂತೆ ವಿವಾಹವಾದರು. ಈ ವಿಷಯವನ್ನು ಗಿರೀಶ್‌ಕಾರ್ನಾಡರು ತಮ್ಮ ಆತ್ಮ ಚರಿತ್ರೆಯಲ್ಲಿ ಬರೆದಿದ್ದಾರೆ. (ಎಸ್.ಎಲ್.)

**ಗಿರೀಶ್ ಕಾಸರವಳ್ಳಿ:** 1950–. ಕನ್ನಡದ ಹೊಸ ಅಲೆಯ ಚಿತ್ರ ನಿರ್ದೇಶಕ. ಶಿವಮೊಗ್ಗ ಜಿಲ್ಲೆ ಕಾಸರವಳ್ಳಿಯಲ್ಲಿ 1950ರ ಡಿಸೆಂಬರ್ 3ರಂದು ಜನಿಸಿದರು. ತಂದೆ ಗಣೇಶರಾವ್ ಕಾಸರವಳ್ಳಿಯಲ್ಲಿ ಕೃಷಿಕರು, ಗಾಂಧಿವಾದಿಯೂ ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದರು. ತಾಯಿ, ಲಕ್ಷ್ಮೀದೇವಿ ಈಕೆಯ ತಂದೆ ಪಂಡಿತ ನರಸಿಂಹಶಾಸ್ತ್ರಿ ಪ್ರಸಿದ್ಧ ಸಂಸ್ಕೃತ ಪಂಡಿತರು ಮತ್ತು ಶಿಕ್ಷಕರೂ ಆಗಿದ್ದರು. ಗಿರೀಶ್ ಕಾಸರವಳ್ಳಿಯವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಶಿವಮೊಗ್ಗ ಸಮೀಪದ ಕಮ್ಮರಡಿಯ ಶಾಲೆಯಲ್ಲಿ ಪಡೆದರು. ಮಣಿಪಾಲದಲ್ಲಿ ಬಿ.ಫಾರ್ಮ ಅಧ್ಯಯನ ಮಾಡಿದರು. ಅನಂತರ ಚಿಕ್ಕಪ್ಪ ಕೆ.ವಿ.ಸುಬ್ಬಣ್ಣನವರಿಂದ ಸ್ಫೂರ್ತಿ ಪಡೆದು ಅನಂತರ ಚಲನಚಿತ್ರ ನಿರ್ದೇಶನದ ಬಗೆಗೆ ಆಸಕ್ತಿ ಹೊಂದಿ ಪುಣೆಯ ಚಲನ ಚಿತ್ರ ಸಂಸ್ಥೆಯಲ್ಲಿ ನಿರ್ದೇಶನದ ಡಿಪ್ಲೊಮಾ ತರಗತಿಗೆ ಸೇರಿದರು. ತರಬೇತಿಯ ಅವಧಿ ಯಲ್ಲಿ 'ಅವಶೇಷ' ಕಿರುಚಿತ್ರ ನಿರ್ದೇಶಿಸಿದರು. ಈ ಚಿತ್ರ ಅತ್ಯುತ್ತಮ ಪ್ರಯೋಗಾತ್ಮಕ ಚಿತ್ರವೆಂದು ಪ್ರಶಸ್ತಿ ಗಳಿಸಿತು (1975). ಬೆಂಗಳೂರಿನ ಆದರ್ಶ ಚಲನಚಿತ್ರ ಸಂಸ್ಥೆಯ ಪ್ರಾಂಶುಪಾಲರಾಗಿಯೂ ಸ್ವಲ್ಪಕಾಲ ಇವರು ಸೇವೆಸಲ್ಲಿಸಿದರು. ಅನಂತರ ಇವರು ಬಿ.ವಿ.ಕಾರಂತರೊಂದಿಗೆ ಚೋಮನ ದುಡಿ, ಸಿ.ಆರ್.ಸಿಂಹರೊಂದಿಗೆ ಕಾಕನಕೋಟೆ ಚಿತ್ರಗಳಲ್ಲಿ ಸಹಾಯಕ ನಿರ್ದೇಶಕರಾಗಿ ಅನುಭವ ಗಳಿಸಿದರು. ಯು.ಆರ್.ಅನಂತಮೂರ್ತಿಯವರ ಕಥೆ ಆಧಾರಿತ ಘಟಶ್ರಾದ್ಧ ಇವರು ಸ್ವತಂತ್ರವಾಗಿ ನಿರ್ದೇಶಿಸಿದ ಮೊದಲ ಚಿತ್ರ (1977). ಈ ಚಿತ್ರ ಸ್ವರ್ಣಕಮಲ ರಾಷ್ಟ್ರಪ್ರಶಸ್ತಿ ಗಳಿಸಿತು. ಅನಂತರ ಇವರು ನಿರ್ದೇಶಿಸಿದ ಹಲವು ಚಿತ್ರಗಳು ರಾಜ್ಯ ಮತ್ತು ರಾಷ್ಟ್ರಪ್ರಶಸ್ತಿಗಳನ್ನು ಗಳಿಸಿದವು. ಆಕ್ರಮಣ (1980), ಮೂರು ದಾರಿಗಳು (1981), ತಬರನ ಕಥೆ (1987), ಬಣ್ಣದವೇಷ (1988), ಮನೆ (1990), ಕ್ರೌರ್ಯ, ತಾಯಿಸಾಹೇಬ (1996), ದ್ವೀಪ (2002, ಹಸೀನಾ (2005) – ಇವು ಇವರು ನಿರ್ದೇಶಿಸಿದ ಪ್ರಮುಖ ಚಿತ್ರಗಳು.



ತಬರನ ಕಥೆ (ಪೂರ್ಣಚಂದ್ರತೇಜಸ್ವಿ), ಬಣ್ಣದವೇಷ (ಸುಂದರ ನಾಡಕರ್ಣಿ), ತಾಯಿಸಾಹೇಬ (ರಂ.ಶಾ.) ಹಾಗೂ ದ್ವೀಪ (ನಾ.ಡಿಸೋಜ) ಚಿತ್ರಗಳೂ ಇವರಿಗೆ ಸ್ವರ್ಣಕಮಲ ಪ್ರಶಸ್ತಿ ತಂದುಕೊಟ್ಟಿವೆ. ಇವರು ನಿರ್ದೇಶಿಸಿದ ಹಸೀನಾ ಚಿತ್ರಕ್ಕೆ (ಕಥೆ: ಭಾನುಮುಷ್ತಾಕ್) ಅತ್ಯುತ್ತಮ ಸಾಮಾಜಿಕ ಸಂದೇಶವುಳ್ಳ ಚಿತ್ರವೆಂದು ರಾಷ್ಟ್ರಪ್ರಶಸ್ತಿ ಬಂದಿದೆ (2005). ಸಮಾಜ ಅರ್ಥವಂತಿಕೆಯ ಚಿತ್ರ ನಿರ್ಮಾಣದೊಂದಿಗೆ ಗಿರೀಶ್ ಕಾಸರವಳ್ಳಿ ಸೃಜನಶೀಲ ನಿರ್ದೇಶಕರಾಗಿ ಉಳಿದಿದ್ದಾರೆ. ಇವರು ಕಿರುತರೆಯಲ್ಲೂ ಯಶಸ್ವಿಯಾಗಿರುವ ನಿರ್ದೇಶಕ, ಇವರ ಚಿತ್ರಗಳು ಭಾರತೀಯ ಚಿತ್ರರಂಗದಲ್ಲೇ ಗಮನಾರ್ಹ ಸ್ಥಾನ ಸಂಪಾದಿಸಿಕೊಂಡಿವೆ. ಕಾಸರವಳ್ಳಿಯವರ ಇತ್ತೀಚಿನ ನಿರ್ದೇಶನದ ಚಿತ್ರ ಕೂರ್ಮಾವತಾರಕ್ಕೆ(2012) ರಾಷ್ಟ್ರಪ್ರಶಸ್ತಿ ದೊರೆತಿದೆ. ಇವರ ಪತ್ನಿ ವೈಶಾಲಿ. ಅವರು ಕೂಡ ರಂಗಭೂಮಿ ನಟಿ. ಚಲನಚಿತ್ರಗಳಲ್ಲಿ ಅಭಿನಯಿಸುವುದರೊಂದಿಗೆ ಕಿರುತೆರೆಯ ಧಾರಾವಾಹಿಗಳನ್ನು ನಿರ್ದೇಶಿಸುತ್ತಿದ್ದರು. ವೈಶಾಲಿಯವರು 2011ರಲ್ಲಿ ನಿಧನವಾದರು. (ಜಿ.ಎಂಯು.;ಎಸ್.ಎಲ್.)

**ಗಿರ್ನಾರ್ :** ಗುಜರಾತ್ ರಾಜ್ಯದ ಸೌರಾಷ್ಟ್ರ ವಿಭಾಗದ ದಕ್ಷಿಣ ಭಾಗದಲ್ಲಿರುವ ಮುಖ್ಯ ಪರ್ವತ; ಜೈನರ ಸಿದ್ಧ ಕ್ಷೇತ್ರ. ಉ.ಅ. $29^{0}$ 39', ಪೂ.ರೇ. $78^{0}$ 42', ಮಧ್ಯೆ, ಜುನಾಗಢದಿಂದ 16 ಕಿಮೀ ಅಂತರದಲ್ಲಿದೆ; ಇತರ ಪರ್ವತಗಳ ಸಾಲಿನಲ್ಲಿರದೆ ಪ್ರತ್ಯೇಕವಾಗಿ ಹಬ್ಬಿದೆ. ಹಿಂದೆ ಈ ಪರ್ವತ ಒಂದು ಜ್ವಾಲಾಮುಖಿಯಾಗಿತ್ತೆನ್ನಲಾಗಿದೆ. ಗುಜಾರಾತಿನಲ್ಲೆ ಅತ್ಯುನ್ನತವಾದ ಈ ಪರ್ವತದ ಸರಾಸರಿ ಎತ್ತರ 1,060 ಮೀ. ಅಂಬಾ, ಗೋರಖ್‌ನಾಥ್, ಕಾಳಿಂಕಾ, ಗುರುನೇಮಿನಾಥ್ ಇವು ಪ್ರಸಿದ್ಧವಾದ ಶಿಖರಗಳು. ಅತ್ಯುನ್ನತ ಶಿಖರ ಗೋರಖ್‌ನಾಥ್ (1,117ಮೀ). ಉಷ್ಣತೆ $25^{0}$ ಸೆಂ,–$35^{0}$ ಸೆಂ, ವಾರ್ಷಿಕ ಮಳೆ 60–80 ಸೆಂಮೀ. ಸುವರ್ಣರೇಖಾ, ಗುಡಾಜಲೀ ಮತ್ತು ಕಾಲವೋ ನದಿಗಳ ಉಗಮಸ್ಥಾನ ಗಿರ್ನಾರ್. ಹಿಂದಿನ ಕಾಲದಲ್ಲಿ ಇದಕ್ಕೆ ಉಜ್ಜಯಂತ, ರೈವತಕ ಪರ್ವತ, ಪ್ರಭಾಸ್ ಪರ್ವತ, ವಸ್ತ್ರಾಪಥ ಕ್ಷೇತ್ರ ಎಂಬ ಹೆಸರುಗಳಿದ್ದವು. ಹಿಂದೂ, ಜೈನ, ಇಸ್ಲಾಂ ಸಂಸ್ಕೃತಿ ಪ್ರವಾಹಗಳು ಇಲ್ಲಿ ಸಂಗಮಿಸಿವೆ. ಗಿರ್ನಾರ್ ಶಿಖರಗಳ ಮೇಲೆ ಗೋರಖ್‌ನಾಥ್, ದತ್ತಾತ್ರೇಯ, ಅಂಬಾದೇವಿ ಮುಂತಾದ ದೇವಾಲಯಗಳೂ ಶ್ರಾವಕರ ದೇವಸ್ಥಾನಗಳೂ ಜೈನ ಧರ್ಮಶಾಲೆಗಳೂ ಇವೆ. 52 ಶಕ್ತಿಪೀಠಗಳ ಪೈಕಿ ಇಲ್ಲಿಯ ಅಂಬಾ ದೇವಿಯ ಗುಡಿಯೂ ಒಂದು. ಇಷ್ಟಲ್ಲದೆ ಇಲ್ಲಿ ಗೋಮುಖಿ, ಹನುಮಾನ್‌ಧಾರಾ, ಕಮಂಡಲು ಎಂಬ ಮೂರು ಜಲಕುಂಡಗಳಿವೆ. ಅಶೋಕ ಮೌರ್ಯನ ಶಿಲಾಶಾಸನವೂ, ಕ್ಷತ್ರಪ ರುದ್ರದಾಮನನ ಶಾಸನಗಳೂ ಇಲ್ಲುಂಟು. ಅಶೋಕನ ಶಾಸನ (ಪ್ರ.ಶ.ಪೂ. 250) ಅತ್ಯಂತ ಪ್ರಾಚೀನ. ಗಿರ್ನಾರ್ ಸುತ್ತಮುತ್ತಣ ಪ್ರದೇಶದಲ್ಲಿ ಅಶೋಕನ ಕಾಲದಲ್ಲಿ ಬೌದ್ಧಧರ್ಮ ಪ್ರಚಾರವಾಗಿ ಅಲ್ಲಿ ಬೌದ್ಧವಿಹಾರಗಳು ಸ್ಥಾಪನೆಯಾಗಿದ್ದುವೆಂಬುದು ಈ ಶಾಸನದಿಂದ ತಿಳಿದುಬರುತ್ತದೆ. ಯುವಾನ್‌ಚಾಂಗ್ ಪ್ರ.ಶ. 7ನೆಯ ಶತಮಾನದಲ್ಲಿ ಗಿರ್ನಾರನ್ನು ಸಂದರ್ಶಿಸಿದಾಗ ಅಲ್ಲಿ ಮಹಾಯಾನ ಬೌದ್ಧ ಪಂಥದ ಸ್ಥವಿರ ಶಾಖೆಯ ಐವತ್ತು ಗವಿ ಮಠಗಳಿದ್ದುದಾಗಿಯೂ ಬೆಟ್ಟದ ತುದಿಯಲ್ಲಿಯ ಬಂಡೆಯನ್ನು ಕೊರೆದು ಒಂದು ಮಠವನ್ನು ನಿರ್ಮಿಸಲಾಗಿತ್ತೆಂದೂ ವರ್ಣಿಸಿದ್ದಾನೆ. 1889ರಲ್ಲಿ ಗಿರ್ನಾರ್ ಬೆಟ್ಟದ ಇಳಿಜಾರಿನಲ್ಲಿ ಒಂದು ಸ್ತೂಪದ ಭಗ್ನಾವಶೇಷ ಪತ್ತೆಯಾಯಿತು.



ಗಿರ್ನಾರ್

ರುದ್ರದಾಮನನ ಶಾಸನ ಗಿರ್ನಾರ್ ಬಳಿಯಲ್ಲಿ ದೊರೆತಿರುವ ಮತ್ತೊಂದು ಐತಿಹಾಸಿಕ ದಾಖಲೆ. ಇದನ್ನು ಅಶೋಕನ ಶಾಸನದ ಬಂಡೆಗಲ್ಲಿನಲ್ಲಿಯೇ ಪ್ರ.ಶ.150 ರಲ್ಲಿ ಕೆತ್ತಲಾಯಿತು. ರುದ್ರದಾಮನ್ ಶಾತಕರ್ಣಿಯನ್ನು ಸೋಲಿಸಿದ ಹಾಗೂ ಗಿರ್ನಾರ್ ಬಳಿಯಿರುವ ಅಶೋಕನ ಕಾಲದಲ್ಲಿ ಕಟ್ಟಲಾಗಿದ್ದ ಸೇತುವೆಯನ್ನು ದುರಸ್ತು ಮಾಡಿಸಿದ ಸಂಗತಿಗಳನ್ನು ಈ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಇಲ್ಲಿಯ ಸುದರ್ಶನ ಜಲಾಶಯವನ್ನು ಚಂದ್ರಗುಪ್ತನ (ಪ್ರ.ಶ.ಪೂ. 322–298) ಆಜ್ಞಾನುಸಾರ ನಿರ್ಮಿಸ

ಲಾಯಿತೆಂದು ಉಲ್ಲೇಖಿವಿದೆ. ಇದು ಶಿಥಿಲಗೊಂಡು ಅಪ್ರಯೋಜಕವಾಗಿತ್ತೆಂದೂ ರುದ್ರದಾಮನ್ ಇದನ್ನು ದುರಸ್ತಿ ಮಾಡಿಸಿ ಮತ್ತೆ ಉಪಯುಕ್ತವಾಗುವಂತೆ ಮಾಡಿದನೆಂದೂ ಹೇಳಿದೆ. ಅದೇ ಬಂಡೆಯ ಮೇಲೆ ಗುಪ್ತ ಚಕ್ರವರ್ತಿ ಸ್ಕಂದಗುಪ್ತನೂ ಪ್ರ.ಶ. 457 ರಲ್ಲಿ ತನ್ನ ಶಾಸನವನ್ನು ಕೆತ್ತಿಸಿದ್ದಾನೆ. ಈ ಶಾಸನದ ಪ್ರಕಾರ ಸ್ಕಂದಗುಪ್ತನೂ ಸುದರ್ಶನ ಜಲಾಶಯಕ್ಕೆ ಆವಶ್ಯಕವಿದ್ದ ದುರಸ್ತಿ ಕಾರ್ಯವನ್ನು ಮಾಡಿಸಿದ.



ಗಿರ್ನಾರದ ದೇಗುಲಗಳು

ಅಲ್ಲಿ ದೊರೆತಿರುವ ಶಾಸನಗಳಿಂದಲೂ ಕಾಣಬರುವ ಭಗ್ನಾವಶೇಷಗಳಿಂದಲೂ ಗಿರ್ನಾರ್ ಅತ್ಯಂತ ಪ್ರಾಚೀನ ಕಾಲದಿಂದಲೂ ಇತಿಹಾಸ ಪ್ರಸಿದ್ಧ ಸ್ಥಳವಾಗಿತ್ತೆಂಬುದರಲ್ಲಿ ಸಂಶಯವಿಲ್ಲ. ಅಲ್ಲಿ ಹೆಚ್ಚು ಸಂಖ್ಯೆಯಲ್ಲಿ ದೇವಾಲಯಗಳೂ ಗುಹಾಲಯಗಳು ನಿರ್ಮಾಣವಾದವು. 400 ವರ್ಷಗಳ ಕಾಲ ಗಿರ್ನಾರ್ ಪ್ರದೇಶ ಮಹಮ್ಮದೀಯರ ಆಳ್ವಿಕೆಗೊಳಪಟ್ಟಿತ್ತು. ಅಲ್ಲಿಯ ಹೆಚ್ಚು ಸ್ಮಾರಕಗಳು ನಾಶವಾದುವು. ಅಲ್ಲಿಯ ಉಪರ್ ಕೋಟೆಯಲ್ಲಿ ಅಥವಾ ಕೋಟೆಯ ಪ್ರದೇಶದಲ್ಲಿ ಅಶೋಕ ಚಕ್ರವರ್ತಿಯ ಕಾಲದಲ್ಲೇ ಬೌದ್ಧ ಗುಹಾಲಯಗಳು ಕೊರೆಯಲ್ಪಟ್ಟವು. ಅವನ್ನು ಗುರುತಿಸುವುದು ಸಾಧ್ಯವಾಗಿಲ್ಲ. ಗಿರ್ನಾರ್ ಪ್ರದೇಶ ಕ್ಷತ್ರಪರ ಆಳ್ವಿಕೆಗೊಳಗಾಗಿದ್ದಾಗ ಅಲ್ಲಿ ಜೈನಮತೀಯರಿಂದ ಅನೇಕ ಗುಹಾಲಯಗಳು ನಿರ್ಮಾಣವಾದವು. ಗಿರ್ನಾರ್‌ಬೆಟ್ಟದ ತುದಿಯಿಂದ ಸುಮಾರು 210 ಮೀಟರ್‌ಗಳ ಕೆಳಗೆ ಹಾಗೂ ಸಮುದ್ರಮಟ್ಟದಿಂದ 1050 ಮೀಟರ್‌ಗಳ ಮೇಲೆ ಹದಿನಾರು ಗುಹಾಲಯಗಳನ್ನೂ ಕೊರೆಯಲಾಗಿದೆ. ಅವುಗಳಲ್ಲಿ ಅತ್ಯಂತ ದೊಡ್ಡದೂ ಪ್ರಾಚೀನವೂ ಆದ್ದು ನೇಮಿನಾಥ ದೇವಾಲಯ. ಇದು 68.25 ಮೀಟರ್ ಉದ್ದವಾಗಿಯೂ 45 ಮೀಟರ್ ಅಗಲವಾಗಿಯೂ ಇದೆ. ದೇವಾಲಯದ ಅಂಗಳದಲ್ಲಿ ತೀರ್ಥಂಕರರ ಮತ್ತು ಯಕ್ಷರ ವಿಗ್ರಹಗಳನ್ನು ಕೆತ್ತಲಾಗಿದೆ. ನೇಮಿನಾಥ ದೇವಾಲಯದ ದ್ವಾರದ ಬಳಿ 1230 ರಲ್ಲಿ ತೇಜಪಾಲ ಮತ್ತು ವಸ್ತುಪಾಲರು ಕೆತ್ತಿಸಿದ ಚಿಕ್ಕ ತ್ರಿಕೂಟಾಲಯವೊಂದಿದೆ. ಇದರ ಮುಖ್ಯ ಗರ್ಭಗುಡಿಯಲ್ಲಿ 19ನೆಯ ತೀರ್ಥಂಕರನಾದ ಮಲ್ಲಿನಾಥನ ವಿಗ್ರಹವುಂಟು.

ಚಾಳುಕ್ಯರ ಕಾಲದಲ್ಲಿ ನಿರ್ಮಿತವಾದ ದೇವಸ್ಥಾನಗಳು ಸುಂದರವಾಗಿದ್ದವು. ಗಿರ್ನಾರದಲ್ಲಿ ಪ್ರಾಚೀನ ಕಾಲದಲ್ಲಿ ಶಾಕ್ತಪಂಥೀಯರು ವಾಸವಾಗಿದ್ದರು. ಕಾರ್ತಿಕ ಶುದ್ಧ ಏಕಾದಶಿಯ ದಿನ ಅಲ್ಲಿ ಜಾತ್ರೆ ನಡೆಯುತ್ತದೆ. ಈ ಜಾತ್ರೆ ಶ್ರೀಕೃಷ್ಣನ ಕಾಲದಿಂದಲೂ ನಡೆದುಬಂದಿದೆಯೆಂಬುದು ಪ್ರತೀತಿ. ದಕ್ಷಿಣದ ಗಿರ್ ಬೆಟ್ಟ ಅರಣ್ಯಮಯ, ಭಾರತದ ಸಿಂಹಗಳ ನೆಲೆಯಿದು **(ನೋಡಿ– ಗಿರ್ ಅರಣ್ಯ).** (ಬಿ.ಆರ್.ಆರ್.)


ಇಪ್ಪತೆರಡನೆಯ ತೀರ್ಥಂಕರನಾದ ನೇಮಿನಾಥ ಗಿರ್ನಾರ್ ಪರ್ವತದ ಮೇಲೆ ದೀಕ್ಷೆಯನ್ನು ಪಡೆದು, ತಪಸ್ಸು ಮಾಡಿ ಮುಕ್ತಿಯನ್ನು ಹೊಂದಿದ. ಅವನಿಗೆ ನಿಶ್ಚಯಿಸಿದ ವಧು ರಾಜೀಮತಿ ಇಲ್ಲಿಯೇ ದೀಕ್ಷೆಯನ್ನು ಕೈಗೊಂಡಳು. ಮೊದಲನೆಯ ಪರ್ವತದ ಮೇಲೆ ಒಂದು ಗುಹೆಯಲ್ಲಿ ರಾಜೀಮತಿಯ ಮೂರ್ತಿ ಇದೆ. ಈ ಪರ್ವತದ ಮೇಲೆ ಬೇರೆ ಜೈನಮುನಿಗಳು ಮುಕ್ತಿಯನ್ನು ಹೊಂದಿದ ಪರಂಪರೆಯುಂಟು. ಐದನೆಯ ಪರ್ವತ ಅತ್ಯಂತ ಎತ್ತರವಾಗಿದೆ. ಮತ್ತು ಅದರ ಮೇಲೆ ನೇಮಿನಾಥನ ಚರಣ ಚಿಹ್ನೆಗಳಿವೆ. ನೇಮಿನಾಥ ಮತ್ತು ರಾಜೀಮತಿಯ ಚರಿತ್ರೆ ಅತ್ಯಂತ ರೋಮಾಂಚನಕಾರಿ ಯಾಗಿದ್ದರಿಂದ ಈ ಕ್ಷೇತ್ರಕ್ಕೆ ವಿಶೇಷ ಮಹತ್ತ್ವ ಬಂದಿದೆ. ವಿವಾಹದಲ್ಲಿ ಪ್ರಾಣಿ ಹಿಂಸೆಯಾಗುವುದನ್ನು ನೋಡಿದ ನೇಮಿನಾಥ ವಿವಾಹದ ವಿಚಾರವನ್ನು ಬಿಟ್ಟು ದೀಕ್ಷೆಯನ್ನು ಪಡೆದನೆಂಬ ಪ್ರತೀತಿ. ನಿಯೋಜಿತ ಪತಿ ದೀಕ್ಷೆ ಕೈಗೊಂಡಿದ್ದರಿಂದ ರಾಜೀಮತಿಯೂ ದೀಕ್ಷೆ ಪಡೆದಳಂತೆ. (ಎ.ಎನ್.ಯು.;ಬಿ.ಜಿ.)

**ಗಿಲೆರೊನ್, ಯೂಲ್ಸ್ :** 1854–1926. ಸ್ವಿಟ್ಜರ್ಲೆಂಡಿನ ಒಬ್ಬ ಪ್ರಮುಖ ಭಾಷಾವಿಜ್ಞಾನಿ. ಹುಟ್ಟಿದ್ದು ಸ್ವಿಟ್ಜರ್ಲೆಂಡಿನ ನೂವೆವಿಲ್ ಎಂಬಲ್ಲಿ. ವಿಧ್ಯಾಭ್ಯಾಸ ಮಾಡಿದ್ದು ಬಾಸೆಲ್ ಮತ್ತು ಪ್ಯಾರಿಸ್‌ಗಳಲ್ಲಿ. ಚಿಕ್ಕಂದಿನಿಂದಲೂ ಭಾಷಶಾಸ್ತ್ರದ ಬಗ್ಗೆ ತುಂಬ ಆಸಕ್ತಿ ಇತ್ತಾಗಿ ಅಲ್ಲಿನ ಕೆಲವು ಉಪಭಾಷೆಗಳನ್ನು ಅಧ್ಯಯನ ಮಾಡತೊಡಗಿದ. ಅಧ್ಯಾಪಕನಾಗಿದ್ದುಕೊಂಡು ನವ ವೈಯಾಕರಣಿಗಳ ಎಲ್ಲ ಬರೆಹಗಳನ್ನು ಆಳವಾಗಿ ಅಭ್ಯಸಿಸಿದ. ಪ್ರಮುಖ ಭಾಷಾವಿಜ್ಞಾನಿ ಜಿ.ಐ. ಓಸ್ಕಾಲಿ ಹಾಕಿಕೊಟ್ಟ ಮಾರ್ಗದಲ್ಲಿ ಮುಂದುವರಿದು ಫ್ರಾನ್ಸಿನ ಎಲ್ಲ ಉಪಭಾಷೆಗಳನ್ನು ಅತಿ ವೈಜ್ಞಾನಿಕವಾಗಿ ಅಭ್ಯಸಿಸುವ ಸಾಹಸಕ್ಕೆ ಕೈಹಾಕಿ ಉಪಭಾಷಾ ವಿಜ್ಞಾನದ ಪಿತಾಮಹನೆಂಬ ಹೆಸರಿಗೆ ಭಾಜನನಾದ. ಹತ್ತೊಂಬತ್ತನೆಯ ಶತಮಾನದ ಅಂತ್ಯಭಾಗದಲ್ಲಿ, ಭಾಷಿಕ ಭೂಗೋಳದ ಬಗ್ಗೆ ಆಳವಾದ ಸಂಶೋಧನೆ ನಡೆಸಿದವರಲ್ಲಿ ಈತ ಮುಖ್ಯನಾದವ. ಇದೇ ಸಮಯದಲ್ಲಿ ಜರ್ಮನಿ ಮತ್ತು ಇಟಲಿಯ ಅನೇಕ ವಿದ್ವಾಂಸರು ಉಪಭಾಷಾ ಅಧ್ಯಯನವನ್ನು ಕೈಗೊಂಡಿದ್ದರು. 1876 ರಲ್ಲಿ ಜರ್ಮನಿಯ ಖ್ಯಾತ ಉಪಭಾಷಾವಿಜ್ಞಾನಿ ಜಾರ್ಜ್ ವೆಂಕರ್ ರಾಇನ್ ಪ್ರದೇಶದ ಕೆಲವು ಉಪಭಾಷೆಗಳನ್ನು ಅಭ್ಯಸಿಸಲಾರಂಭಿಸಿದ್ದ. ಇವನು ಸಂಗ್ರಹಿಸಿದ ಸಾಮಾಗ್ರಿಯನ್ನೇ ಉಪಯೋಗಿಸಿಕೊಂಡು ಯುದ್ ಮತ್ತು ಯೂಬರ್ಗ್ ಎಂಬ ವಿದ್ವಾಂಸರು ಕೆಲವು ಉಪಭಾಷಾನಕ್ಷೆಗಳನ್ನು ತಯಾರಿಸಿ ಪ್ರಕಟಿಸಿದ್ದರು. 1895 ರ ಹೊತ್ತಿಗೆ ರೀಡ್, ಫಿಶರ್ ಮುಂತಾದ ಭಾಷಾವಿಜ್ಞಾನಿಗಳು ಈ ಕಾರ್ಯದಲ್ಲಿ ಸಾಕಷ್ಟು ಜಯಶೀಲರೆನಿಸಿಕೊಂಡಿದ್ದ ಸಮಯದಲ್ಲಿ ಗಿಲೊರೆನ್ ಫ್ರಾನ್ಸಿನ ಎಲ್ಲ ಉಪಭಾಷೆಗಳನ್ನೂ ಆಳವಾಗಿ ಅಭ್ಯಸಿಸುವ ಯೋಜನೆಯನ್ನು ಕೈಗೊಂಡು ಎ. ಎಡ್‌ಮಾಂಟ್ ಎಂಬ ಧ್ವನಿವಿಜ್ಞಾನಿಯ ಸಹಾಯದಿಂದ ಫ್ರಾನ್ಸಿನ ಸುಮಾರು 639 ಕ್ಕೂ ಹೆಚ್ಚು ಸ್ಥಳಗಳ ಉಪಭಾಷಾ ಸಾಮಗ್ರಿಯನ್ನು ಸಂಗ್ರಹಿಸಿದ. 1896 ರಲ್ಲಿ ಆರಂಭಗೊಂಡ ಈ ಕಾರ್ಯ 1900 ರ ಹೊತ್ತಿಗೆ ಮುಗಿಯಿತು. ಹೀಗೆ ಸಂಗ್ರಹಿತವಾದ 2000 ಪದಗಳನ್ನೂ ವಾಕ್ಯಗಳನ್ನೂ ಗಿಲೆರೊನ್ ತನ್ನ ಮಿತ್ರ ಎಡ್‌ಮಾಂಟ್‌ನ ಸಹಾಯದಿಂದ ಆಳವಾಗಿ, ಅತಿ ವೈಜ್ಞಾನಿಕವಾಗಿ ಪರೀಶೀಲಿಸಿ, ವಿಶ್ಲೇಷಿಸಿ 1902–1908 ರ ಹೊತ್ತಿಗೆ ಫ್ರಾನ್ಸಿನ ಉಪಭಾಷಾನಕ್ಷೆಯೊಂದನ್ನು ಪ್ರಕಟಿಸಿದ. ಈ ನಕ್ಷೆಯ ಜೊತೆಗೆ ಗಿಲೆರೊನ್ ಇನ್ನೂ ಅನೇಕ ಗ್ರಂಥ ಹಾಗೂ ಲೇಖನಗಳನ್ನು ಬರೆದು ಪ್ರಕಟಿಸಿದ್ದಾನೆ ಇವನು ಫ್ರೆಂಚ್ ಭಾಷೆಯ ವ್ಯುತ್ಪತ್ತಿ ಕೋಶದ ನಿರ್ಮಾಣಕ್ಕೆ ಸಾಕಷ್ಟು ತಳಹದಿಯನ್ನು ಹಾಕಿಕೊಟ್ಟ. ಪದ ಮತ್ತು ವಸ್ತುಗಳ ನಡುವಿನ ಸಂಬಂಧವನ್ನು ಈತ ವಿವೇಚಿಸಿದ್ದಾನಲ್ಲದೆ ಧ್ವನಿ ಮತ್ತು ಲಿಪಿಗಳ ಇರುವ ಸಂಬಂಧವನ್ನು ಚರ್ಚಿಸುತ್ತ ನವ ವೈಯಾಕರಣಿಗಳ ಕೆಲವು ವಿಚಾರಗಳನ್ನು ಪ್ರಶ್ನಿಸಿದ್ದಾನೆ. ಧ್ವನಿ ಬದಲಾವಣೆಯಲ್ಲಿ ವ್ಯಕ್ತಿ ಪಾತ್ರವೇ ವಿಶಿಷ್ಟವಾದದು ಎಂಬುದು ಇವನ ಮತವಾದರೂ ಕೆಲವು ರಾಜಕೀಯ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಸನ್ನಿವೇಶಗಳೂ ಕಾರಣವಾಗುತ್ತವೆ. ಎಂಬುದನ್ನು ಈತ ಸಮರ್ಥಿಸಿದ್ದಾನೆ. ಪ್ರತಿಯೊಂದು ಪದಕ್ಕೂ ತನ್ನದೇ ಆದ ಇತಿಹಾಸವಿರುತ್ತದೆ–ಎಂಬುದನ್ನು ಸಂಪೂರ್ಣವಾಗಿ ಒಪ್ಪಿಕೊಂಡು ಅದನ್ನು ಸವಿಸ್ತಾರವಾಗಿ ಚರ್ಚಿಸಿದ್ದಾನೆ. ಆಗಿನ ಕಾಲದ ಭಾಷಾವಿಜ್ಞಾನ ಕ್ಷೇತ್ರದಲ್ಲಿ ನವ ವೈಯಾಕರಣಿಗಳು ಧ್ವನಿ ನಿಯಮಗಳನ್ನು ಅಪವಾದರಹಿತವೆಂದು ಹೇಳುತ್ತಿರುವುದನ್ನು ಸಕಾರಣವಾಗಿ ಖಂಡಿಸಿದ್ದಾನೆ. ಇವನ ಫ್ರಾನ್ಸ್ ಉಪ ಭಾಷಾನಕ್ಷೆ ಯಂತೂ ಈಗಲೂ ತುಂಬ ಉಪಯುಕ್ತವೆನಿಸಿಕೊಂಡಿದೆ.

ಗಿಲೆರೋನನ ಮರಣಾನಂತರ ಶಿಷ್ಯರು ಅವನ ಅನೇಕ ವಿಚಾರಗಳನ್ನು ಪ್ರಚಾರಕ್ಕೆ ತಂದರು. (ಕೆ.ಕೆ.ಜಿ.)

**ಗಿಲೆಸ್ಪಿ, ರಾಬರ್ಟ್ ರಾಲೋ :** 1766–1814. ಬ್ರಿಟಿಷ್ ಸೈನಿಕ. 1783 ರಲ್ಲಿ ಐರಿಷ್ ಅಶ್ವಸೈನ್ಯವನ್ನು ಸೇರಿ ಜಮೈಕ (1794) ಸೇಂಟ್ ಡೊಮಿಂಗೊಗಳಲ್ಲಿ ಕಾರ್ಯಾಚರಣೆಗಳಲ್ಲಿ ಭಾಗವಹಿಸಿ ಏಕಾಕಿಯಾಗಿ ಆರು ಜನ ಡಕಾಯಿತರನ್ನು ಕೊಂದು ಪ್ರಸಿದ್ಧನಾದ. 1806ರಲ್ಲಿ ವೆಲ್ಲೂರಿನಲ್ಲಿ ದಂಗೆ ಸಂಭವಿಸಿದಾಗ ಆರ್ಕಾಟಿನಲ್ಲಿ ಬ್ರಿಟಿಷ್ ಸೈನ್ಯದ ದಳಪತಿಯಾಗಿದ್ದ ಗಿಲೆಸ್ಪಿ ಆ ದಂಗೆಯನ್ನು ಅಡಗಿಸಲು ವೆಲ್ಲೂರಿನ ಮೇಲೆ ಉಗ್ರವಾದ ದಾಳಿ ಮಾಡಿದ. 1811ರಲ್ಲಿ ಜಾವದಲ್ಲೂ ಮರುವರ್ಷ ಸುಮಾತ್ರದಲ್ಲೂ ನಡೆದ ಕದನಗಳಲ್ಲಿ ಬ್ರಿಗೇಡಿಯರ್– ಜನರಲ್ ಆಗಿ ಭಾಗವಹಿಸಿದ್ದ. ಆ ಕದನಗಳೂ ಇವನಿಗೆ ಕೀರ್ತಿ ತಂದುವು. ಗೂರ್ಖರ ಪ್ರಾಂತ್ಯದ ಅಂಚಿನಲ್ಲಿದ್ದ ಗೋರಖ್‌ಪುರವು ಗೂರ್ಖರು ಮತ್ತು ಬ್ರಿಟಿಷರ ಯುದ್ಧಕ್ಕೆ ಕಾರಣವಾಗಿತ್ತು. 1814ರಲ್ಲಿ ನಡೆದ ಸೈನ್ಯ ತುಕಡಿಯೊಂದರ ನಾಯಕತ್ವವನ್ನು ವಹಿಸಿ, ಗೂರ್ಖ ಪ್ರಬಲ ನೆಲೆಯೊಂದರ ಮೇಲೆ ಮುತ್ತಿಗೆಯಲ್ಲಿ ತೊಡಗಿದ್ದಾಗ ಈತ ಹತನಾದ. ಈ ಪರಾಭವದಿಂದಾಗಿ ಬ್ರಿಟಿಷರ ಮರ್ಯಾದೆಗೆ ಕೆಲಕಾಲ ಭಂಗ ಬಂದಿತು. ಗಿಲೆಸ್ಪಿಗೆ ಬ್ರಿಟಿಷ್ ದೊರೆಯಿಂದ ಮರಣೋತ್ತರ ಕೆ.ಸಿ.ಬಿ. ಪ್ರಶಸ್ತಿ ದೊರಕಿತು. (ಆರ್.ಜಿ.ಎಸ್.)

**ಗಿಲೊಟೀನ್ :** ಫ್ರೆಂಚ್ ಕ್ರಾಂತಿಯ ಸಮಯದಲ್ಲಿ (1789) ಶಿರಚ್ಛೇದನ ದಂಡನೆಯನ್ನು ಕಾರ್ಯಗತಗೊಳಿಸಲು ಬಳಸುತ್ತಿದ್ದ ಒಂದು ಯಂತ್ರ. ಮೊದಲಿಗೆ ಈ ಯಂತ್ರವನ್ನು ಲೋಹದ ತಗಡು, ಲೋಹದ ಸರಳು, ಕಾಗದದ ರಟ್ಟು ಮುಂತಾದುವನ್ನು ಕತ್ತರಿಸಲು ಬಳಸಲಾಗುತ್ತಿತ್ತು. ಇದಕ್ಕೆ ಕೊಯ್ಯು ಯಂತ್ರ (ಷಿಯರಿಂಗ್ ಮಷೀನ್) ಅಥವಾ ಕೊಯ್ಲುಒತ್ತಗೆ (ಷಿಯಾರಿಂಗ್ ಪ್ರೆಸ್) ಎಂಬ ಹೆಸರುಗಳೂ ಇದ್ದುದುಂಟು. ಶಿರಚ್ಛೇದನಕೋಸ್ಕರ ಇದನ್ನು ಬಳಸಬಹುದೆಂದು ಸಲಹೆ ಮಾಡಿದವ ಜೋಸೆಫ್ ಇಗ್ನೇಸ್ ಗಿಲೊಟೀನ್ (1738–1814) ಎಂಬ ಒಬ್ಬ ಫ್ರೆಂಚ್ ವೈದ್ಯ. ಅಪರಾಧಿಗಳಿಗೆ ಅವರ ಮರಣದಂಡನೆಯ ಸಮಯದಲ್ಲಿ ಸಾಧ್ಯವಾದಷ್ಟೂ ಕಡಿಮೆ ಬಾಧೆ ತಟ್ಟಲಿ ಎಂಬುದೇ ಈ ಸಲಹೆಯ ಉದ್ದೇಶ. ಮೊದಲಿಗೆ ಇಂಗ್ಲೆಂಡಿನಲ್ಲಿ ಈ ವಿಧಾನವನ್ನು ಅನುಸರಿಸಲಾಗುತ್ತಿತ್ತು. ಇಂಗ್ಲೆಂಡಿನಲ್ಲಿ ಇದನ್ನು ಹ್ಯಾಲಿಫಾಕ್ಸ್ ಗಿಬ್ಬಟ್ ಎಂದೂ ಸ್ಕಾಟ್ಲೆಂಡಿನಲ್ಲಿ ಮೈಡನ್ ಎಂದೂ ಕರೆಯುತ್ತಿದ್ದರು. ಹ್ಯಾಲಿಫಾಕ್ಸ್ ಅಂಡ್ ಇಟ್ಸ್ ಗಿಬ್ಬಟ್ ಲಾ (1708) ಎಂಬ ಕಿರುಪುಸ್ತಕದಲ್ಲೂ ಕ್ಯಾಮ್‌ಡನ್ ಎಂಬುವ ಬರೆದಿರುವ, ಗಿಬ್ಬನ್ ಸಂಪಾದಿಸಿರುವ ಬ್ರಿಟಾನಿಯ (1722) ಎಂಬ ಪುಸ್ತಕದಲ್ಲೂ ಉಲ್ಲೇಖವಿದೆ. ಮೈಡನ್ ಶಿರಚ್ಛೇದಕ ಯಂತ್ರವನ್ನು ಎಡಿನ್‌ಬರಾದ ಪ್ರಾಚ್ಯ ವಸ್ತು ಸಂಗ್ರಹಾಲಯದಲ್ಲಿ ಇಡಲಾಗಿದೆ. ಸ್ಕಾಟ್ಲೆಂಡಿನ ರೀಜೆಂಟ್ ಆಗಿದ್ದ ಜೇಮ್ಸ್ ಡೊಗ್ಲಾಸ್ ಮಾರ್ಟನ್ ಎಂಬುವನ ಶಿರಚ್ಛೇದನ (1581) ಮೈಡನಿನಿಂದಾಯಿತು. ಮೈಡನ್ ಶಿರಚ್ಛೇದನಕ್ಕೆ ಅಂತಿಮವಾಗಿ ಒಳಗಾದವರೆಂದರೆ ಸ್ಕಾಟ್ಲೆಂಡಿನ ಮಾರ್ಕ್ವಿಸ್ ಆಫ್ ಆರ್ಗೈಲ್ (1661) ಮತ್ತು ಅವನ ಮಗ ಅರ್ಲ್ ಆಫ್ ಆರ್ಗೈಲ್ (1685).



ಜರ್ಮನಿಯಲ್ಲಿ ಮಧ್ಯಯುಗದ ಸಮಯದಲ್ಲಿ ಈ ಯಂತ್ರ ಬಳಕೆ ಯಲ್ಲಿತ್ತಲ್ಲದೆ ಆಗ ಇದಕ್ಕೆ ಡೈಲಿ, ಹಾಬೆಲ್ ಅಥವಾ ಡೋಲಬ್ರ ಮುಂತಾದ ಹೆಸರುಗಳಿದ್ದವು.

ಫ್ರಾನ್ಸಿನಲ್ಲಿ ಕೆಲವೆಡೆ ಮಾತ್ರ ಬಳಕೆಯಲ್ಲಿದ್ದ ಈ ಯಂತ್ರ ಅಲ್ಲಿನ ಒಬ್ಬ ಶಸ್ತ್ರವೈದ್ಯ ಮತ್ತು ಒಬ್ಬ ಸರ್ಕಾರಿ ಅಧಿಕಾರಿಯ ಸಲಹೆಯ ಮೇರೆಗೆ ಫ್ರಾನ್ಸಿನ ಇತರ ಭಾಗಗಳಲ್ಲೂ ಬಳಕೆಗೆ ಬಂತು. ಕ್ರಮೇಣ ಫ್ರೆಂಚರು ಗೆದ್ದುಕೊಂಡ ಭಾಗಗಳಲ್ಲೂ ಇದರ ಬಳಕೆ ಹೆಚ್ಚಿತು. ಗಿಲೊಟೀನಿಗೆ ಒಳಗಾದ ಪ್ರಮುಖ ವ್ಯಕ್ತಿಗಳೆಂದರೆ ಫ್ರಾನ್ಸಿನ 14ನೆಯ ಲೂಯಿ ಮತ್ತು ರಾಣಿ ಮೇರಿ ಆಂಟೋಯ್ನಿ.

ಸನ್ನೆ (ಲೀವರ್) ಗಿಲೊಟೀನ್, ಸಮಾಂತರ (ಪ್ಯಾರಲಲ್) ಗಿಲೊಟೀನ್ ಮತ್ತು ವರ್ತುಳೀಯ (ಸರ್ಕ್ಯುಲರ್) ಗಿಲೊಟೀನ್ ಎಂಬ ಮೂರು ಬಗೆಯ ಯಂತ್ರಗಳುಂಟು. ಮೊದಲ ಬಗೆಯದರಲ್ಲಿ ಎರಡು ಅಲಗುಗಳಿದ್ದು, ಕತ್ತರಿಯಂತೆ ಅದು ಕೆಲಸಮಾಡುತ್ತಿತ್ತು. ಎರಡನೆಯ ಬಗೆಯದರಲ್ಲೂ ಎರಡು ಅಲಗುಗಳಿರುತ್ತಿದ್ದುವು. ಒಂದು ಸ್ಥಿರವಾಗಿದ್ದು ಮತ್ತೊಂದನ್ನು ಯಾಂತ್ರಿಕವಾಗಿ ಆಡಿಸಬೇಕಾಗಿತ್ತು. ವರ್ತುಳೀಯ ಗಿಲೊಟೀನಿನಲ್ಲಿ ಅಲಗುಗಳು ಚಕ್ರಾಕಾರವಾಗಿರುತ್ತಿದ್ದುವು. ಲೋಹದ ತಗಡು ಅಥವಾ ಪಟ್ಟಿಯನ್ನು ಕತ್ತರಿಸಲು ಈ ಯಂತ್ರವನ್ನು ಉಪಯೋಗಿಸಲಾಗಿತ್ತು. *

**ಗಿಲ್ಗಮೆಷ್ :** ಸುಮೇರಿಯನ್ನರ ಅತಿಪ್ರಾಚೀನ ಸಂಪ್ರದಾಯಕ್ಕೆ ಸೇರಿದ, ಮೆಸಪೊಟೇಮಿಯದ ಪೌರಾಣಿಕ ಮಹಾಕಾವ್ಯವೊಂದರ ನಾಯಕ. ಈ ಮಹಾಕಾವ್ಯ ಅಕ್ಕೇಡಿಯನ್ ಭಾಷೆಯಲ್ಲಿಯೇ ಒಂದು ಬಹು ಮುಖ್ಯವಾದ ಸಾಹಿತ್ಯ ಕೃತಿ ಮತ್ತು ಇದರ ನಾಯಕ ಗಿಲ್ಗಮೆಷ್ ಸುಮೇರಿಯನ್ ನಾಯಕರಲ್ಲೆಲ್ಲ ಅಗ್ರಗಣ್ಯ. ಈ ಕಥೆ ಪ್ರ.ಶ.ಪೂ. 3000 ವರ್ಷಗಳ ಹಿಂದೆ ದಕ್ಷಿಣ ಮೆಸಪೊಟೇಮಿಯದಲ್ಲಿದ್ದ ನಾಗರಿಕತೆಯ ಸ್ವರೂಪವನ್ನು ತಿಳಿಸುತ್ತದೆ. ಗಿಲ್ಗಮೆಷ್‌ನ ವಿಷಯದಲ್ಲಿ ಹುಟ್ಟಿಕೊಂಡಿರುವಷ್ಟು ಕಥೆಗಳು ಇತರರ ವಿಷಯದಲ್ಲಿಲ್ಲ. ಅಲ್ಲದೆ ಇವನು ತನ್ನ ಸ್ನೇಹಿತ ಎಂಕಿಡುವಿನೊಂದಿಗೆ (**ನೋಡಿ– ಎಂಕಿಡು**) ಸೇರಿ ತೋರಿಸಿದ ಸಾಹಸ ಬೇರೆಯವರಲ್ಲಿ ಕಂಡುಬರದು. ಸುಮೇರಿಯದಲ್ಲಿನ ಈತನ ಕಥೆಯ ಮೂಲವನ್ನು ಪ್ರ.ಶ.ಪೂ. 1500ಕ್ಕಿಂತ ಹಿಂದಕ್ಕೆ ಒಯ್ಯಬಹುದು. ನಿನೆವದಲ್ಲಿ ಅಸ್ಸೀರಿಯದ ದೊರೆ ಅಷೂರ್‌ಬನಿಪಾಲನ (ಪ್ರ.ಶ.ಪೂ. 669–630?) ಗ್ರಂಥ ಭಂಡಾರದಲ್ಲಿ ಈ ಕಥೆಯ ಅಪೂರ್ಣಪಾಠ (ಕೇವಲ 12 ಫಲಕಗಳು ಮಾತ್ರ) ದೊರೆತಿವೆ. ಹಿಟ್ಟೈಟ್ ಮತ್ತು ಹುರಿಯನ್ ಭಾಷೆಗಳಲ್ಲಿ ಏಷ್ಯ ಮೈನರಿನಲ್ಲಿ ಕೆಲವು ಬದಲಾವಣೆಗಳೊಂದಿಗೆ ಪ್ರಚಲಿತವಿದ್ದ ಈ ಕಥೆ ಗ್ರೀಕರ ಒಡಿಸ್ಸಿಯ ಮೇಲೆ ಪ್ರಭಾವ ಬೀರಿರಬಹುದು. ಹೋಮರನಿಗಿಂತ 1500 ವರ್ಷಗಳಷ್ಟು ಹಿಂದೆಯೇ ಇದ್ದ ಅತ್ಯಂತ ಪ್ರಾಚೀನ ಮಹಾಕಾವ್ಯ ಈ ಗಿಲ್ಗಮೆಷ್ ಇತಿಹಾಸ.

ಈ ಕಥೆಯಲ್ಲಿ ಮಾನವ ಮತ್ತು ಪ್ರಕೃತಿ, ಪ್ರೀತಿ ಮತ್ತು ಸಾಹಸ, ಸ್ನೇಹ ಮತ್ತು ಯುದ್ಧ ಮುಂತಾದ ಪ್ರಾಪಂಚಿಕ ವಿಷಯಗಳನ್ನು ಅಪರಿಹಾರ್ಯವಾದ ಸಾವಿನ ಹಿನ್ನೆಲೆಯಲ್ಲಿ ವಿವರಿಸಿದೆ. ಸಾವಿನ ವಿಷಯದಲ್ಲಿ ಆಗಿನ ಜನತೆಯಲ್ಲಿದ್ದ ನಂಬಿಕೆಯನ್ನು ಇದು ವ್ಯಕ್ತಪಡಿಸುತ್ತದೆ.

ಈ ಮಹಾಕಾವ್ಯದ ಗಿಲ್ಗಮೆಷ್ ಬಹುಶಃ ಪ್ರ.ಶ.ಪೂ. 3000 ವರ್ಷಗಳ ಹಿಂದೆ ಕಿಷ್‌ನಲ್ಲಿದ್ದ ಅಗ್ಗನ ಸಮಕಾಲೀನನಾಗಿ ಉರುಕ್‌ನಲ್ಲಿ ಆಳುತ್ತಿದ್ದವನೆನ್ನಲಾಗಿದೆ. ಗಿಲ್ಗಮೆಷ್ ಎಂಬ ಸುಮೇರಿಯನ್ ಭಾಷೆಯ ಹೆಸರನ್ನು ತಂದೆ ವೀರ, ಪುರಾತನ ವೀರ ಎಂದು ಮುಂತಾಗಿ ಅರ್ಥೈಸಿದ್ದಾರೆ. ಕಾವ್ಯ, ಕಥೆಗಳಲ್ಲಿ ವಿವರಿಸಿರುವ ಈತನ ಸಾಹಸ ಕಾರ್ಯಗಳಿಗೆ ಚಾರಿತ್ರಿಕಾಧಾರಗಳೇನೂ ಇಲ್ಲ. ಹಾಗೆಯೆ ಸ್ನೇಹಿತ ಮತ್ತು ಸಂಗಾತಿ ಎಂಕಿಡುವಿನ ಹೆಸರೂ ಬೇರೆಲ್ಲಿಯೂ ಇಲ್ಲ.



ಗಿಲ್ಗಮೆಷ್: ಪ್ರ.ಶ.ಪೂ. 8ನೆಯ ಶತಮಾನದ ಒಂದು ಶಿಲ್ಪ

ಈ ಕಥೆ ಮುಖ್ಯವಾಗಿ ಗಿಲ್ಗಮೆಷ್ ಮತ್ತು ಎಂಕಿಡು ಇವರ ಸ್ನೇಹ ಬಂಧನವನ್ನು ಕುರಿತದ್ದು. ಇಬ್ಬರೂ ವೀರಾಧಿವೀರರು. ಗಿಲ್ಗಮೆಷ್ ಶೌರ್ಯದ ಉನ್ನತ ಆದರ್ಶವುಳ್ಳವ, ಕೀರ್ತಿ ತರುವ ಕಾರ್ಯಕ್ಕಾಗಿ ಏನನ್ನೇ ಆಗಲಿ, ಪ್ರಾಣವನ್ನು ಕೂಡ ತ್ಯಾಗ ಮಾಡಲು ಸಿದ್ಧನಾಗಿದ್ದವ. ಅರೆದೈವತ್ವ ಅರೆ ಮಾನವತ್ವವನ್ನು ಪಡೆದಿದ್ದ ಗಿಲ್ಗಮೆಷನಿಗೆ ಭೂಮಿ, ಸಾಗರಗಳ ಮೇಲಿನ ಎಲ್ಲ ವಿಷಯಗಳೂ ತಿಳಿದಿದ್ದವು. ಅನು ದೇವತೆ ಇವನ ದರ್ಪವನ್ನಡಗಿಸಲು ಎಂಕಿಡುವನ್ನು ಸೃಷ್ಟಿಸುತ್ತಾನೆ. ಗಿಲ್ಗಮೆಷ್‌ನಿಗೂ ಇವನಿಗೂ ನಡೆದ ಶಕ್ತಿ ಪ್ರದರ್ಶನದಲ್ಲಿ ಗಿಲ್ಗಮೆಷ್ ಜಯಶಾಲಿಯಾಗುತ್ತಾನೆ. ಮುಂದೆ ಇಬ್ಬರೂ ನಿಕಟವರ್ತಿಗಳಾಗಿ ಹುಂಬಾಬನ ಮೇಲೆ ಯುದ್ಧ ಹೂಡುತ್ತಾರೆ. ತನ್ನನ್ನು ಮದುವೆಯಾಗಲು ನಿರಾಕರಿಸಿದ ಗಿಲ್ಗಮೆಷ್‌ನ ಮೇಲೆ ಇಷ್ಟಾರ್ ದೇವತೆ ದೇವಲೋಕದ ಗೂಳಿಯನ್ನು ನುಗ್ಗಿಸಿದಾಗ ಎಂಕಿಡುವಿನ ಸಹಾಯದಿಂದ ಅದನ್ನು ಗಿಲ್ಗಮೆಷ್ ಕೊಲ್ಲುತ್ತಾನೆ. ಇದರಿಂದ ಕುಪಿತ ಗೊಂಡ ಅನು ಮೊದಲಾದ ದೇವತೆಗಳು ಎಂಕಿಡು ಸಾಯ ಬೇಕೆಂದು ನಿರ್ಧರಿಸುತ್ತಾರೆ. ರೋಗ ಬಂದು ಎಂಕಿಡು ಸಾಯು ತ್ತಾನೆ. ಸ್ನೇಹಿತನ ಸಾವಿನ ದುಃಖ ದಿಂದ ಪರಿತಪಿಸುತ್ತಿದ್ದ ಗಿಲ್ಗಮೆಷ್ ನಿಗೆ ಸಾವನ್ನೇ ಎದುರಿಸಬೇಕೆಂಬ ಸಂಕಲ್ಪ ಉಂಟಾಗುತ್ತದೆ; ಪ್ರಳಯದಿಂದ ಪಾರಾಗಿ ಸಾವನ್ನು ಗೆದ್ದ ಉತ್ನಪಿಷ್ಟಿಮನನ್ನು ಹುಡುಕಿ ಕೊಂಡು ಹೋಗುತ್ತಾನೆ. ಆಪತ್ಕಾರಕ ವಾದಾಗ ನಿಡುಪಯಣದ ಅನಂತರ ಉತ್ನಪಿಷ್ಟಿಮನ ದರ್ಶನವಾಗುತ್ತದೆ. ಆತನಿಂದ ಪ್ರಳಯದ ಕಥೆಯನ್ನು ತಿಳಿದು ನವ ಯೌವನವನ್ನುಂಟು ಮಾಡುವ

ಗಿಡವೊಂದನ್ನು ಪಡೆಯುತ್ತಾನೆ; ಜೊತೆಗೆ ಅಮರತ್ವ ದೇವತೆಗಳಿಗೆ ಮಾತ್ರ ಎಂಬ ಎಚ್ಚರಿಕೆಯನ್ನೂ ಉತ್ನಪಿಷ್ಟಿಮ್ ಕೊಡುತ್ತಾನೆ. ಮುಂದೆ ಆ ಗಿಡವನ್ನು ಸರ್ಪವೊಂದು ಅಪಹರಿಸುತ್ತದೆ. ಮತ್ತೊಂದು ಐತಿಹ್ಯದಂತೆ ಇಷ್ಟಾರ್ ಗಿಲ್ಗಮೆಷನಿಗೆ ಕೊಟ್ಟಿದ್ದ ಪುಕ್ಕು, ಮಿಕ್ಕು ಎಂಬ ಪದಾರ್ಥಗಳು (ಬಹುಶಃ ಡೋಲು ಮತ್ತು ಅದರ ಕೋಲು) ಕಳೆದು ಹೋದಂತೆಯೂ ಮತ್ತೆ ಬದುಕಿಬಂದ ಎಂಕಿಡು ಅವನ್ನು ಹುಡುಕಿ ತರುವುದಾಗಿ ಮಾತು ಕೊಟ್ಟು ಮೃತ್ಯುಲೋಕದ ಗಂಭೀರವರದಿಯನ್ನು ಒಪ್ಪಿಸಿದಂತೆಯೂ ತಿಳಿದುಬರುತ್ತದೆ. (ಎಂ.ಎಚ್.)

**ಗಿಲ್ಗಿಟ್ :** ಕಾಶ್ಮೀರ ವಾಯುವ್ಯದಲ್ಲಿರುವ ಒಂದು ನಗರ. ಇದೇ ಹೆಸರಿನ ನದಿಯೊಂದಿದೆ. ಅದರ ದಕ್ಷಿಣಕ್ಕಿರುವ ವಜ಼ಾರತ್‌ಗೂ ಈ ಹೆಸರಿದೆ. ಗುಪಿಸ್, ಪುನ್ಯಾಲ್, ಅಷ್ಕುಮಾನ್, ಯಾಸಿನ್ ರಾಜಕೀಯ ಜಿಲ್ಲೆಗಳು, ಗಿಲ್ಗಿಟ್ ಆಸ್ಟರ್‌ನ ಉಪವಿಭಾಗಗಳು, ಹುನ್‌ಜ಼ ಮತ್ತು ನಗರ್ ಸಂಸ್ಥಾನಗಳು ಜಿಲಾಸ್ ಉಪ ಏಜೆನ್ಸಿ–ಇವನ್ನೆಲ್ಲ ಒಳಗೊಂಡ ಏಜೆನ್ಸಿಗೂ ಗಿಲ್ಗಿಟ್ ಎಂದೇ ಹೆಸರು. ಚಿತ್ರಾಲ್, ಅಫ್ಘಾನಿಸ್ತಾನ್, ಸೋವಿಯತ್ ದೇಶ ಮತ್ತು ಸಿಂಕಿಯಾಂಗ್(ಚೀನ)ವರೆಗೆ ಈ ಪ್ರದೇಶ ವ್ಯಾಪಿಸಿದೆ. 1947 ರಿಂದ ಈ ಪ್ರದೇಶ ಪಾಕಿಸ್ತಾನದ ಆಕ್ರಮಣಕ್ಕೊಳಗಾಗಿ ಅದರ ಹತೋಟಿಯಲ್ಲಿದೆ. ಆದರೆ ನ್ಯಾಯವಾಗಿ ಇದು ಭಾರತದ ಭಾಗ.

**ಭೌತಲಕ್ಷಣಗಳು:** ಇದು ಪರ್ವತ ಪ್ರದೇಶ. ಹಿಂದೂಕುಷ್ ಮತ್ತು ಕಾರಕೋರಮ್ ಪರ್ವತಗಳು ಸಂಧಿಸುವ ಸ್ಥಳಕ್ಕೆ ಸಮೀಪದಲ್ಲಿದೆ; ನಗರ್ ಪ್ರದೇಶದ ನೀರ್ಗಲ್ಲ ನದಿಗಳು ಈಶಾನ್ಯದ ಮಜ಼್–ತಾಗ್–ಆಟ ಪರ್ವತಶ್ರೇಣಿಗಳ ಮತ್ತು ನೈರುತ್ಯದ ಕಾಶ್ಮೀರದ ಗಡಿ ಶಿಖರಗಳ ನಡುವೆ ಹರಿದು ಒಟ್ಟಾಗಿ, ಹುನ್‌ಜ಼ ಕಣಿವೆಯಿಂದ ಗಾಡ್ವಿನ್ ಆಸ್ಟೆನ್ ಶಿಖರದ ಬುಡಕ್ಕೆ ಧಾರಾಕಾರವಾಗಿ ಇಳಿಯುತ್ತವೆ. ತಲೆಯಿಂದ ಕೊನೆಯವರೆಗೆ ನೀರ್ಗಲ್ಲ ನದೀಪಾತ್ರದ ಉದ್ದ 144 ಕಿಮೀ ಇದನ್ನು ಬೈಯಾಪೋ ಎಂದು ಕರೆಯುತ್ತಾರೆ. ಹುನಜ಼ ಮತ್ತು ನಗರ್ ಪರ್ವತ ಪ್ರದೇಶದ ಉದ್ದಕ್ಕೂ ಕಣಿವೆಗಳು ಸುಮಾರು 5250 ಮೀಟರ್‌ಗಳಿಗೆ ಕಡಿಮೆ ಇಲ್ಲದ ಮತ್ತು ಸರಾಸರಿ 7000 ಮೀಟರ್ ಎತ್ತರವುಳ್ಳ ಪರ್ವತಶ್ರೇಣಿಗಳ ನಡುವೆ ಆಳವಾಗಿ ಹಬ್ಬಿವೆ. ಇಲ್ಲಿ ಸಾಮಾನ್ಯವಾಗಿ ಯಾವ ಸಸ್ಯವೂ ಇಲ್ಲ.

ಇದುವರೆಗೆ ತಿಳಿದಿರುವಂತೆ ಈ ಪ್ರದೇಶದ ಒಂದು ಅತ್ಯಂತ ಪ್ರಾಚೀನ ಮಾರ್ಗವೆಂದರೆ ಗಿಲ್ಗಿಟ್‌ಗೂ ಚಿತ್ರಾಲ್ ಕಣಿವೆಯ ಮಸ್ತೂಜಿಗೂ ಸಂಬಂಧ ಕಲ್ಪಿಸುವ ಹಾದಿ. ಇದು ಈಗ ಚಿತ್ರಾಲ್– ಗಿಲ್ಗಿಟ್ ಹೆದ್ದಾರಿಯಾಗಿದೆ. ಗಿಲ್ಗಿಟ್ ನದಿಯ ಉತ್ತರದ ಒಂದೊಂದು ಕವಲಿನ ಕೊನೆಗೂ ಒಂದೊಂದು ಅಥವಾ ಹಲವಾರು ಕಣಿವೆ ದಾರಿಗಳಿವೆ. ಇವೆಲ್ಲ ಪಾಮಿರ್ ಪ್ರದೇಶವನ್ನೂ ಪಾಮಿರ್ ಹಾದಿಯ ಉಗಮ ಸ್ಥಳವಾದ ಮೇಲಣ ಯಾರ್ಖುಂ ಕಣಿವೆಯನ್ನೂ ಕೂಡಿಕೊಳ್ಳುತ್ತವೆ. ಯಾಸಿನ್ ಕಣಿವೆಯಲ್ಲಿರುವ ದಾರ್ಕೋಟ್ ಕಣಿವೆ ಮಾರ್ಗದ ಎತ್ತರ 5253.5 ಮೀಟರ್, ಇದು ಯಾರ್ಖುಂ ಕಣಿವೆಗೆ ಇಳಿಯುತ್ತದೆ. ಅಷ್ಕುಮಾನ್ ತಲೆಯ ಬಳಿ ಗಾಜ಼ಾರ್ ಮತ್ತು ಕೋರ ಬೋರ್ಟ್ ಕಣಿವೆಮಾರ್ಗಗಳಾಗಿವೆ. ಇವೆಲ್ಲ ವರ್ಷದಲ್ಲಿ ಸ್ವಲ್ಪಕಾಲ ಮಾತ್ರ ಸಂಚಾರಕ್ಕೆ ಅರ್ಹ.

ಬುಂಜಿಗೆ ಮೇಲೆ ಸ್ವಲ್ಪ ದೂರದಲ್ಲಿ ಗಿಲ್ಗಿಟ್ ನದಿ ಸಿಂಧೂ ನದಿಯನ್ನು ಸೇರುತ್ತದೆ. ಬುಂಜಿಯ ಕೆಳಗೆ ಅಸ್ತಾರ್ ನದಿ ಆಗ್ನೇಯದಿಂದ ಹರಿದು ಬಂದು ಸಿಂಧುವನ್ನು ಸೇರುತ್ತದೆ. ಗಿಲ್ಗಿಟ್‌ನಿಂದ ದಕ್ಷಿಣಕ್ಕೆ ಸಾಗುವ ಹೆದ್ದಾರಿ ದಟ್ಟವಾದ ಪೈನ್ ಮರಗಳಿಂದ ಕೂಡಿದೆ. ಈ ಕಣಿವೆಯ ಮೂಲಕ ಹಾದು ಹೋಗುತ್ತದೆ. ಪಾಕಿಸ್ತಾನಕ್ಕೂ ಗಿಲ್ಗಿಟ್‌ಗೂ ನಡುವಣ ಇನ್ನೊಂದು ಮಾರ್ಗ ಬಾಬುಸಾರ ಕಣಿವೆಯ ಮೂಲಕ ಸಾಗುತ್ತದೆ.

ಗಿಲ್ಗಿಟ್‌ನ ವ್ಯಾಪಕ ಪ್ರದೇಶದಲ್ಲಿ ಬೇರೆ ಬೇರೆ ಭಾಷೆಗಳನ್ನಾಡುವ ವಿವಿಧ ಜನಾಂಗಗಳಿವೆ. ಈ ಜನರನ್ನೆಲ್ಲ ದಾರ್ದ ಎಂಬ ಹೆಸರಿನಿಂದ ಸಾಮಾನ್ಯವಾಗಿ ಕರೆಯಲಾಗುತ್ತಿದೆ. ಚಿತ್ರಾಲ್ ಮತ್ತು ಸಿಂಧೂ ನಡುವೆ ಇರುವ ದಾರ್ದಿಸ್ತಾನದ ದಾರ್ದರು ಮುಖ್ಯವಾಗಿ ಅಷ್ಕುನ್ ಅಥವಾ ಯೆಷ್ಕುನ್ ಹಾಗೂ ಷಿನ್ ಜನ. ಸತತ ಧಾಳಿಗಳ ಪರಿಣಾಮವಾಗಿ ಅಷ್ಕುನ್ನರೂ ಅನಂತರ ಷಿನ್ನರೂ ಸಿಂಧೂ ಕಣಿವೆಯಿಂದ ಇಲ್ಲಿಗೆ ಬಂದಿರಬೇಕು. ಷಿನ್ ಜನರ ಮೂಲಪುರುಷರು ಹಿಂದೂಗಳು. ಇವರು ಉತ್ತರಪೂರ್ವಗಳಲ್ಲಿ ಬಾಲ್ಟಿಸ್ತಾನದವರೆಗೂ ಪ್ರಸರಿಸಿದ್ದಾರೆ. ಅಲ್ಲಿ ಇವರು ತಾತರ್ ಜನರೊಂದಿಗೆ ಬೆರೆತು ಹೋಗಿದ್ದಾರೆ. ಷಿನ್ನರ ಪ್ರಮುಖ ಭಾಷೆ ಷೀನಾ ಇಲ್ಲಿ ವ್ಯಾಪಕವಾಗಿ ಬಳಕೆಯಲ್ಲಿದೆ. ಇದೊಂದು ಪೈಶಾಚೀಭಾಷೆಯೆಂದು ಹೇಳಲಾಗಿದೆ. ಇರಾನಿಯನ್ ಮತ್ತು ಸಂಸ್ಕೃತಗಳ ನಡುವಣ ಆರ್ಯಭಾಷೆಯ ಆರ್ಷೇಯ ರೂಪವಿದು.

ಉತ್ತರದ ಪರ್ವತ ಜಿಲ್ಲೆಗಳ ಎಲ್ಲ ಜನರೂ ಮೈಕಟ್ಟು ವೇಷಭೂಷಣಗಳಲ್ಲಿ ಸಾಮಾನ್ಯವಾಗಿ ಒಂದೇ ತೆರ. ಇವರು ಗಟ್ಟಿಮುಟ್ಟಾಗಿರುವರಲ್ಲದೆ ಸ್ಫುರದ್ರೂಪಿಗಳು. ಇವರು ಮೊಣಕಾಲನ್ನು ಮುಟ್ಟುವ ದಪ್ಪ ಉಣ್ಣೆ ನಿಲುವಂಗಿಗಳನ್ನೂ ಸಡಿಲ ಪೈಜಾಮುಗಳನ್ನೂ ಕಣಕಾಲುಪಟ್ಟಿ ಮತ್ತು ಬೂಟುಗಳನ್ನೂ ಪದರಪದರವಾಗಿ ತಲೆಗೆ ಸುತ್ತಿದಂತಿರುವ ಫೆಲ್ಟ್ ಟೋಪಿಗಳನ್ನೂ ಸಾಮಾನ್ಯವಾಗಿ ಧರಿಸುತ್ತಾರೆ. ಇವರು ಪೋಲೋ ಆಟಪ್ರಿಯರು, ನೃತ್ಯದಲ್ಲಿ ಆಸಕ್ತರು.

ಅಕ್ಕಿ, ಗೋಧಿ ಮತ್ತಿತರ ಆಹಾರಧಾನ್ಯಗಳೂ ಹಣ್ಣುಗಳೂ ವಿಫುಲವಾಗಿ ಗಿಲ್ಗಿಟ್‌ನಲ್ಲಿ ಬೆಳೆಯುತ್ತವೆ. ಅಸ್ತಾರ್‌ನಲ್ಲಿ ಎತ್ತರದ ಬೆಟ್ಟಗುಡ್ಡ ಪ್ರದೇಶದಿಂದಾಗಿ ವ್ಯವಸಾಯ ಕಷ್ಟಕರ, ಉಣ್ಣೆ ನೇಯ್ಗೆ ಪ್ರಮುಖ ಕೈಗಾರಿಕೆ.

**ಚರಿತ್ರೆ:** ಮೇಲಣ ಸಿಂಧೂನದಿಯ ಪಶ್ಚಿಮದಲ್ಲಿ ಸ್ವಾತ್ ನದಿಯ ತಲೆಯ ಬಳಿಯ ಪ್ರದೇಶದಿಂದಾಚೆಗೆ ಗಾಂಧಾರ ಪ್ರದೇಶದ ಉತ್ತರಕ್ಕೆ ವಾಸಿಸುತ್ತಿದ್ದವರೆಂದು ದಾರ್ದರನ್ನು ಬಲು ಹಿಂದೆಯೇ ಟಾಲೆಮಿ ಗುರುತಿಸಿದ್ದ. ಉತ್ತರದಿಂದ ಸು. 400 ರಲ್ಲಿ ಇಲ್ಲಿಗೆ ಬಂದ ಫಾಹಿಯಾನನೂ 629 ರಲ್ಲಿ ಸ್ವಾತ್ ಮೂಲಕ ಬಂದ ಯುವಾನ್‌ಚಾಂಗ್‌ನೂ ಇದರ ಬಗ್ಗೆ ಬರೆದಿದ್ದಾರೆ. ಗಿಲ್ಗಿಟ್ ಪ್ರದೇಶದ ತ್ರಾಕನ್ ಎಂಬ ಮನೆತನಕ್ಕೆ ಸೇರಿದ ದೊರೆಗಳಿಂದ ಆಳಲ್ಪಡುತ್ತಿತ್ತೆಂಬುದು ಹಳೆಯ ಐತಿಹ್ಯ. ಈ ರಾಜಮನೆತನದ ಆಳ್ವಿಕೆ ಕೊನೆಗೊಂಡ ಅನಂತರ ಈ ಪ್ರದೇಶ ನೆರೆಹೊರೆಯ ದೊರೆಗಳ ಸತತ ಧಾಳಿಗೆ ತುತ್ತಾಯಿತು. 1842 ಕ್ಕೆ ಹಿಂದಿನ ಎರಡು ಮೂರು ದಶಕಗಳಲ್ಲಿ ಇದರ ಮೇಲಣ ಒಡೆತನಕ್ಕಾಗಿ ಐದು ಬಾರಿ ರಾಜವಂಶದಲ್ಲೇ ಹೊಡೆದಾಟಗಳಾದವು. 1842 ರ ಸುಮಾರಿನಲ್ಲಿ ಸಿಕ್ಖರು ಇಲ್ಲಿಗೆ ಬಂದು ಇಲ್ಲೊಂದು ಸೇನೆಯನ್ನಿಟ್ಟರು. 1846 ರಲ್ಲಿ ಲಾರ್ಡ್ ಹಾರ್ಡಿಂಜ್ ಜಮ್ಮುವಿನ ಮಹಾರಾಜ ಗುಲಾಬ್ ಸಿಂಗನಿಗೆ ಕಾಶ್ಮೀರವನ್ನು ಒಪ್ಪಿಸಿದಾಗ ಗಿಲ್ಗಿಟ್ ಕೂಡ ಅದರೊಂದಿಗೆ ಅವನ ವಶವಾಯಿತು. ಗುಲಾಬ್ ಸಿಂಗನ ಕಡೆಯ ಡೋಗ್ರ ಜನ 1852 ರಲ್ಲಿ ಇಲ್ಲಿಂದ ಹೊರದೂಡಲ್ಪಟ್ಟರು. ಎಂಟು ವರ್ಷಗಳ ಕಾಲ ಅವರು ಇಲ್ಲಿಗೆ ಪ್ರವೇಶಿಸಿರಲಿಲ್ಲ. ಅವರ ಪೈಕಿ ಎರಡು ಸಾವಿರ ಜನ ಹತರಾದರು. 1860 ರಲ್ಲಿ ಅವರು ಗಿಲ್ಗಿಟ್‌ಗೆ ಹಿಂದಿರುಗಿದರು. ಅವರು ಗಿಲ್ಗಿಟಿನ ಕೆಲವು ಭಾಗಗಳನ್ನು ಹಿಡಿದುಕೊಂಡರಾದರೂ ಚಿರಕಾಲ ಅವರ ಕೈಯಲ್ಲಿ ಅವು ಉಳಿಯಲಿಲ್ಲ. 1889 ರಲ್ಲಿ ರಷ್ಯ ಮುನ್ನಡೆಯದಂತೆ ತಡೆಯಲು ಬ್ರಿಟಿಷ್ ಸರ್ಕಾರ ಗಿಲ್ಗಿಟ್ ಏಜೆನ್ಸಿಯನ್ನು ಸ್ಥಾಪಿಸಿತು. 1947 ರಲ್ಲಿ ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯ ನೀಡಿದಾಗ ಇದರ ಆಡಳಿತದ ಹೊಣೆ ಕಾಶ್ಮೀರದ ರಾಜ್ಯಪಾಲನದಾಯಿತು. 1947 ರ ನವೆಂಬರಿನಲ್ಲಿ ಪಾಕ್ ಆಕ್ರಮಣಕಾರಿ ಪಡೆಗಳು ರಾಜ್ಯಪಾಲನನ್ನು ಸೆರೆಹಿಡಿದು ಗಿಲ್ಗಿಟನ್ನು ವಶಪಡಿಸಿಕೊಂಡವು.

**ಗಿಲ್ಗಿಟ್ ಪಟ್ಟಣ :** ಇದೊಂದು ಚಿಕ್ಕ ಗಿರಿಧಾಮ. ಗಿಲ್ಗಿಟ್ ಪ್ರದೇಶದ ಆಡಳಿತ ಕೇಂದ್ರ ಸಮುದ್ರಮಟ್ಟದಿಂದ 1715 ಮೀಟರ್ ಎತ್ತರದಲ್ಲಿದೆ ಹಿಂದೂಕುಷ್‌ನ ಕೋಡುಗಲ್ಲುಗಳ ಕೆಳಗೆ ಇರುವ ಈ ಪಟ್ಟಣ ಆಯಕಟ್ಟಿನ ಸ್ಥಳದಲ್ಲಿದೆ. ಪರ್ವತ ಮಾರ್ಗಗಳು ಸುತ್ತಮುತ್ತಲ ಕಣಿವೆಗಳತ್ತ ಸಾಗುತ್ತವೆ. ಹಿಂದೂಗಳು ಆಳುತ್ತಿದ್ದಾಗ ಇದಕ್ಕೆ ಸಾರ್ಗಿನ್ ಎಂಬ ಹೆಸರಿತ್ತು. ಅನಂತರ ಇದಕ್ಕೆ ಗಿಲಿಟ್ ಎಂಬ ಹೆಸರು ಬಂತು. ಇದೇ ಕ್ರಮೇಣ ಗಿಲ್ಗಿಟ್ ಆಯಿತು. ಇಲ್ಲಿ ಕೆಲವು ಹಳೆಯ ಕಲ್ಲುಕಟ್ಟಡಗಳೂ ಬೌದ್ಧಶಿಲ್ಪಗಳೂ ಉಂಟು. ಇದು ಬಹಳ ಹಿಂದೆ ಒಂದು ಬೌದ್ಧ ಕೇಂದ್ರವಾಗಿತ್ತು. (ಎಚ್.ಎಂ.ಎಸ್.ಆರ್.)

**ಗಿಲ್ಬರ್ಟ್ ದ್ವೀಪಗಳು :** ಪೆಸಿಫಿಕ್ ಸಾಗರದಲ್ಲಿರುವ ಹದಿನಾರು ಹವಳ ದ್ವೀಪಗಳ ಸಮೂಹ. ಉ.ಅ. $4^0$–ದ.ಅ.$3^0$ ಮತ್ತು ಪೂ.ರೇ.$172^0$–$178^0$ ಮಧ್ಯದಲ್ಲಿ ಇವು ಹರಡಿವೆ. ವಿಸ್ತೀರ್ಣ ಸು. 861 ಚ.ಕಿಮೀ ಈ ಸಮೂಹದಲ್ಲಿ ಮುಖ್ಯವಾದ ದ್ವೀಪಗಳು ಮಾಕಿನ್ ಅಥವಾ ಬೂಟಾರಿಟಾರಿ, ಅಬೈಯಾಂಗ್, ತರಾವಾ. ಈ ದ್ವೀಪಗಳು ಸಾಮಾನ್ಯವಾಗಿ ತಗ್ಗಾಗಿವೆ. ಇಲ್ಲಿಯದು ತೇವದಿಂದ ಕೂಡಿದ ವಾಯುಗುಣ. ಸರಾಸರಿ ಮಳೆ 40"–100". ಕೇದಗೆ, ಹಣ್ಣುಗಳು ಮತ್ತು ತೆಂಗು ಇಲ್ಲಿಯ ಬೆಳೆಗಳು. ಕೊಬ್ಬರಿ ಪರದೇಶಕ್ಕೆ ರಫ್ತಾಗುತ್ತದೆ. ಇಲ್ಲಿಯ ಜನ ಮೈಕ್ರೊನೇಷಿಯನರು. ಎಲ್ಲ ದ್ವೀಪಗಳ ಒಟ್ಟು ಜನಸಂಖ್ಯೆ 98,000(2011). ಗಿಲ್ಬರ್ಟ್ ದ್ವೀಪಗಳನ್ನು ಪರಿಶೋಧಿಸಿದವರು ಜಾನ್ ಬೈರನ್ (1765) ಥಾಮಸ್ ಗಿಲ್ಬರ್ಟ್ ಮತ್ತು ಜಾನ್ ಮಾರ್ಷಲ್(1788). 1892 ರಲ್ಲಿ ಇವು ಬ್ರಿಟಿಷರ ಆಡಳಿತಕ್ಕೆ ಬಂದುವು. 1915 ರಲ್ಲಿ ಈ ದ್ವೀಪಗಳ ಮತ್ತು ಎಲಿಸ್ ದ್ವೀಪಗಳು ಸೇರಿ ಬ್ರಿಟಿಷ್ ವಸಾಹತುಗಳಾದವು. 1941 ರಲ್ಲಿ ಈ ದ್ವೀಪಗಳನ್ನು ಜಪಾನ್ ವಶಪಡಿಸಿಕೊಂಡಿತ್ತು. 1943 ರಲ್ಲಿ ಇವು ಮಿತ್ರಸೇನೆಗಳ ವಶಕ್ಕೆ ಬಂದವು. ಎಲಿಸ್ ದ್ವೀಪಗಳೂ ಸೇರಿದಂತೆ ಇವುಗಳ ಆಡಳಿತ ಬ್ರಿಟಿಷರ ಅಧೀನದಲ್ಲಿ 1979 ಜುಲೈರವರೆಗೆ ಇದ್ದಿತು. ಅನಂತರ 1979 ಜುಲೈ 12ರಿಂದ ಕಿರಿಬತಿ ಎಂಬ ಹೆಸರಿನಿಂದ ಸ್ವತಂತ್ರವಾಗಿದೆ. ಈಗ ಸುಮಾರು 33 ದ್ವೀಪಗಳ ಸಮೂಹವಾಗಿದೆ. ಈಗ ವಿಸ್ತೀರ್ಣ 861 ಚ.ಕಿಮೀ. ಇದರ ರಾಜಧಾನಿ ತರಾವಾ. *

**ಗಿಲ್ಬರ್ಟ್, ವಿಲಿಯಮ್ :** 1544–1603. ಇಂಗ್ಲಿಷ್ ವೈದ್ಯ ಹಾಗೂ ಭೌತವಿಜ್ಞಾನಿ. ಒಂದನೆಯ ಎಲಿಜಬೆತ್ ರಾಣಿಯ ಆಳ್ವಿಕೆಯ ವೇಳೆ ಇಂಗ್ಲೆಂಡಿನಲ್ಲಿ ಬಲು ಪ್ರಸಿದ್ಧನಾಗಿದ್ದ. ಗಿಲ್ಬರ್ಟ್ ಕಾಲ್ಚೆಸ್ಟರ್‌ನಲ್ಲಿ ಹುಟ್ಟಿ ಅಲ್ಲಿನ ಶಾಲೆಯಲ್ಲಿ ಓದಿ


ಕೇಂಬ್ರಿಜ್‌ನ ಸೇಂಟ್ ಜಾನ್ ಕಾಲೇಜು ಸೇರಿ (1558) ಬಿ.ಎ.,ಎಂ.ಎ. ಪದವಿಗಳನ್ನೂ ಬಳಿಕ ಎಂ.ಡಿ. ವೈದ್ಯಪದವಿಯನ್ನೂ (1569) ಪಡೆದು ತನ್ನ ಕಾಲೇಜಿನ ಹಿರಿಯ ಸದಸ್ಯನಾಗಿ ಚುನಾಯಿತನಾದ. ಯುರೋಪಿನಲ್ಲಿ ಸುತ್ತಾಡಿ ಲಂಡನ್ನಿನಲ್ಲಿ ವೈದ್ಯನಾಗಿ ನೆಲೆಸಿದ (1573). ವೈದ್ಯರ ಕಾಲೇಜು ಸದಸ್ಯನಾಗಿ (1576) ಮುಖ್ಯ ಹುದ್ದೆಗಳಲ್ಲಿ ಕೆಲಸ ಮಾಡಿದ. ಆ ಕಾಲೇಜು ಹೊರತರಲು ನಿರ್ಧರಿಸಿದ್ದ ಲಂಡನ್ನಿನ ಔಷಧಸಂಹಿತೆ (ಫಾರ್ಮಕೋಪಿಯ) ಪ್ರಕಟಣೆಯ ಮೇಲ್ವಿಚಾರಕರ ಸಮಿತಿಯಲ್ಲಿ ಈತ ಒಬ್ಬ ಸದಸ್ಯನಾಗಿದ್ದ (1589). ಆದರೆ ಈ ಸಂಹಿತೆ 1618 ರ ತನಕ ಹೊರಬೀಳಲಿಲ್ಲ. ಮೊದಲನೆಯ ಎಲಿಜಬೆತ್ ರಾಣಿಯ ಸ್ವಂತ ವೈದ್ಯನಾಗಿದ್ದ (1601). ಕಾಲ್ಚೆಸ್ಟರಿನ ಹೋಲಿ ಟ್ರಿನಿಟಿ ಚರ್ಚಿನಲ್ಲಿ ಅವನ ಸ್ಮಾರಕವಿದೆ. ವೈದ್ಯರಕಾಲೇಜಿಗೆ ದಾನಮಾಡಿದ ಅವನ ಪುಸ್ತಕಗಳು, ಗೋಳಗಳು, ಪರಿಕರಗಳು, ಲೋಹಸಂಗ್ರಹವೆಲ್ಲ ಲಂಡಿನ್ನಿನ ದಳ್ಳುರಿಯಲ್ಲಿ ನಾಶವಾದವು. ಈತ ಗೆಲಿಲಿಯೋನಂತೆ (1564–1642) ಪ್ರಯೋಗ ಕುಶಲಿ ಹಾಗೂ ಪರಿಣತಮತಿ. ಯಾವುದನ್ನೂ ಪ್ರಾಯೋಗಿಕವಾಗಿ ರುಜುವಾತಿಲ್ಲದೇ ಸ್ವೀಕರಿಸುತ್ತಿರಲಿಲ್ಲ. ಉದಾಹರಣೆಗೆ, ಒಂದು ಅಯಸ್ಕಾಂತದ ಕಾಂತತ್ವವನ್ನು ಬೆಳ್ಳುಳ್ಳಿ ನಾಶಮಾಡುತ್ತದೆ ಎಂದು ವಿಜ್ಞಾನಿಗಳು ಕೂಡ ನಂಬಿದ್ದುದನ್ನು ನೇರ ಪ್ರಯೋಗ ಮಾಡಿ ತೋರಿಸಿ ಅಲ್ಲಗಳೆದ. ಕಾಂತತ್ವದ ವಿಚಾರ ಪ್ರಮುಖ ಲಕ್ಷಣ ಗ್ರಂಥವನ್ನು (1600) ಬರೆದ ಮೊದಲಿಗನಿವ. ಆಗಿನ ಕಾಲದಲ್ಲಿ ಕೇವಲ ವಿಜ್ಞಾನ ವಿಧಾನಗಳನ್ನು ಅನುಸರಿಸಿ ಹಲವು ವರ್ಷ ಸಂಶೋಧನೆ ನಡೆಸಿ ಕಂಡುಹಿಡಿದ ವಿಚಾರಗಳನ್ನು ಮೊತ್ತಮೊದಲು ಇದರಲ್ಲಿ ನಿರೂಪಿಸಿದ್ದ. ಕಾಂತವಾಹಕ ಶಕ್ತಿಯನ್ನು ಅಳತೆ ಮಾಡುವ ಏಕಮಾನವನ್ನು ಈತನ ಗೌರವಾರ್ಥ ಗಿಲ್ಬರ್ಟ್ ಎಂದೇ ಹೆಸರಿಸಲಾಗಿದೆ. ಸೂಜಿಗಲ್ಲು ಗಳು, ಸೂಜಿಗಲ್ಲಿನಂಥ ವಸ್ತುಗಳು, ವಿದ್ಯುತ್ತಿನ ಸೆಳೆತಗಳ ವಿಚಾರ, ಭೂಮಿ ಕೇವಲ ಒಂದು ಭಾರಿ ಸೂಜಿಗಲ್ಲೆಂದೂ, ಸೂಜಿಗಲ್ಲು ಉತ್ತರ ದಕ್ಷಿಣ ತೋರುವುದಕ್ಕೂ ಸೂಜಿಗಲ್ಲಿನ ದಿಕ್ಕಿಗೂ ಈ ಕಲ್ಪನೆಯೇ ಕಾರಣವೆಂದೂ ಆಗಲೆ ಬರೆದಿದ್ದ.

ಕಾಂತಾಕರ್ಷಣ ಬಲವಲ್ಲದೇ ವಿಶ್ವದಲ್ಲಿರುವ ಇತರ ಆಕರ್ಷಣ ಬಲಗಳನ್ನು ಕುರಿತು ಸಹ ಗಿಲ್ಬರ್ಟ್ ತೀವ್ರವಾಗಿ ಅನ್ವೇಷಿಸಿದ. ಉದಾಹರಣೆಗೆ, ಶಿಲಾರಾಳವನ್ನು (ಆ್ಯಂಬರ್) ಉಜ್ಜಿದಾಗ ಅದು ಹಗುರ ಪದಾರ್ಥಗಳನ್ನು ಆಕರ್ಷಿಸುವ ಸಾಮರ್ಥ್ಯ ಪಡೆಯುವುದೆಂದು ಪ್ರಾಚೀನ ಕಾಲದಿಂದಲೂ ತಿಳಿದಿತ್ತು. ಇಂಥ ಆಕರ್ಷಣ ಸಾಮರ್ಥ್ಯವನ್ನು ಪಡೆಯಬಲ್ಲ ಇತರ ವಸ್ತುಗಳ ಸಾಧನೆಯನ್ನು ಗಿಲ್ಬರ್ಟ್ ಮಾಡಿ ಅವೆಲ್ಲವನ್ನೂ 'ಎಲೆಕ್ಟ್ರಿಕ್ಸ್' ಎಂಬ ಸಾಮೂಹಿಕ ನಾಮದಿಂದ ಹೆಸರಿಸಿದ. ಗ್ರೀಕ್ ಭಾಷೆಯ ಎಲೆಕ್ಟ್ರಾನಿನಿಂದ (ಅರ್ಥ ಶಿಲಾರಾಳ) ಈ ಎಲೆಕ್ಟ್ರಿಕ್ ಪದವನ್ನು ಗಿಲ್ಬರ್ಟ್ ಉತ್ಪಾದಿಸಿದ.

ಗಿಲ್ಬರ್ಟ್ ಸತ್ತಮೇಲೆ ಅವನ ಸೋದರ ಗಿಲ್ಬರ್ಟ್‌ನ ಎರಡು ಕೈಬರೆಹಗಳ ಆಧಾರದ ಮೇಲೆ ಒಂದು ಗ್ರಂಥವನ್ನು ಪ್ರಕಟಿಸಿದ (1651). ಕೊಪರ್ನಿಕಸನ ವಾದವನ್ನು ಇಂಗ್ಲೆಂಡಿನಲ್ಲಿ ಮೊತ್ತಮೊದಲು ಪ್ರತಿಪಾದಿಸಿದ ಮತ್ತು ಸ್ಥಿರ ನಕ್ಷತ್ರಗಳು ಭೂಮಿಯಿಂದ ಸಮದೂರದಲ್ಲಿ ಇಲ್ಲವೆಂದು ಹೇಳಿದ. (ಎಸ್.ಟಿ.ಪಿ.;ಡಿ.ಎಸ್.ಎಸ್.)

**ಗಿಲ್ಬರ್ಟ್, ವಿಲಿಯಂ ಷ್ವೆಂಕ್ :** 1836–1911. ಇಂಗ್ಲಿಷ್ ನಾಟಕಕಾರ, ಹಾಸ್ಯ ಲೇಖಕ, ತಂದೆ ಕಾದಂಬರಿಕಾರ ವಿಲಿಯಂ ಗಿಲ್ಬರ್ಟ್. ಎಲಿಜಬೆತ್ ರಾಣಿಯ ಕಾಲದಲ್ಲಿ ಸಾಹಸಿಯಾದ ನಾವಿಕನೆಂದು ರಾಜಮನ್ನಣೆ ಪಡೆದಿದ್ದ ಸರ್ ಹಂಫ್ರಿ ಗಿಲ್ಬರ್ಟ್‌ನ ವಂಶ ಇವನದು. ವಿಲಿಯಂ ಲಂಡನ್ ನಗರದಲ್ಲಿ 1836 ನವೆಂಬರ್ 18ರಂದು ಜನಿಸಿದ. ಷ್ವೆಂಕ್ ಎಂಬ ಹೆಸರು ಈತನಿಗೆ ಅಜ್ಜಿಯಿಂದ ಬಂದದ್ದು. ತಂದೆ ತಾಯಿ ಇಟಲಿಯಲ್ಲಿ ಪ್ರವಾಸ ಮಾಡುತ್ತಿದ್ದ ಸಮಯದಲ್ಲಿ ಡಕಾಯಿತರ ಗುಂಪೊಂದು ಚಿಕ್ಕಮಗುವಾಗಿದ್ದ ವಿಲಿಯಂನನ್ನು ಅಪಹರಿಸಿಕೊಂಡು ಹೋಯಿತು. ಡಕಾಯಿತರ ನಾಯಕನಿಗೆ 25 ಪೌಂಡ್ ಹಣ ಕೊಟ್ಟು ತಂದೆ ಮಗುವನ್ನು ಬಿಡಿಸಿಕೊಂಡು ಬರಬೇಕಾಯಿತು. ಫ್ರಾನ್ಸಿನ ಬೊಲೋನ್ ಈಲಿಂಗ್‌ಗಳ ಶ್ರೀಮಂತ ಶಾಲೆಗಳಲ್ಲಿ ವಿದ್ಯಾಭ್ಯಾಸವಾದ ಅನಂತರ ಲಂಡನಿನ ಕಿಂಗ್ಸ್ ಕಾಲೇಜಿನಲ್ಲಿ ವಿಲಿಯಂ ವ್ಯಾಸಂಗ ಮುಂದುವರಿಯಿತು. 1863ರಲ್ಲಿ ಲಾ ಪದವೀದರನಾಗಿ ವಕೀಲವೃತ್ತಿಯನ್ನು ಆರಂಭಿಸಿದ. ಆದರೆ ಕೇಸುಗಳೇ ಸಿಕ್ಕದೆ ಸಂಪಾದನೆಗೆ ಕಷ್ಟವಾಗಿ, ಸಂತೋಷಕರ ಹವ್ಯಾಸವಾಗಿ ಬೆಳೆದುಬಂದಿದ್ದ ಹಾಸ್ಯಲೇಖನ, ಚಿತ್ರಕಲೆಗಳ ಕಡೆ ಹೆಚ್ಚು ಗಮನವನ್ನು ಕೊಡತೊಡಗಿದ. ತಂದೆ ಬರೆದ ಷರ್ಲಿ ಹಾಲ್ ಅಸೈಲಮ್ (1863), ಡಾಕ್ಟರ್ ಆಸ್ಟಿನ್ಸ್ ಗೆಸ್ಟ್ಸ್ (1866) ಎಂಬ ಕಾದಂಬರಿಗಳಿಗೆ ಚಿತ್ರಗಳನ್ನು ಬರೆದುಕೊಟ್ಟ. 1861ರಲ್ಲಿ ಫನ್ ಎಂಬ ಹಾಸ್ಯ ಪತ್ರಿಕೆಯಲ್ಲಿ ಗಿಲ್ಬರ್ಟ್ ಬ್ಯಾಬ್ ಎಂಬ ಕಾವ್ಯನಾಮದಲ್ಲಿ ಚಿತ್ರಸಹಿತವಾಗಿ ಕಳಿಸಿದ್ದ ಬಹಳ ಸೊಗಸಾದ ವಿನೋದಕವಿತೆಯೊಂದು ಪ್ರಕಟವಾಗಿ ಎಲ್ಲರ ಗಮನವನ್ನೂ ಸೆಳೆಯಿತು. ಬ್ಯಾಬ್ ಎಂಬುದು ಕವಿಯ ಬಾಲ್ಯದ ಅಡ್ಡ ಹೆಸರು. 1866ರಲ್ಲಿ ಪಂಚ್ ಪತ್ರಿಕೆಗೆ ಕಳಿಸಿದ ಸೊಗಸಾದ ಕಥೆ ನ್ಯಾನ್ಸಿಬೆಲ್ ಎಂಬುದು ತಿರಸ್ಕೃತವಾಯಿತು. ಆದರೆ ಇದೇ ಬಗೆಯ ಕತೆಗಳೆಲ್ಲ ಸೇರಿ ಮುಂದೆ 1869ರಲ್ಲಿ ಪ್ರಕಟವಾಗಿ ಬ್ಯಾಬ್ ಬ್ಯಾಲಡ್ಸ್ ಎಂಬುದು ವಿಖ್ಯಾತ ಕೃತಿಯಾಯಿತು. ಹಾಸ್ಯ ಸಾಹಿತ್ಯ ಕ್ಷಿತಿಜದಲ್ಲಿ ಹೊಸದಾಗಿ ಮೂಡಿದ ತಾರೆ ಎಂದು ಈ ಗ್ರಂಥವನ್ನು ವಿಮರ್ಶಕರು ಕೊಂಡಾಡಿದ್ದಾರೆ. ಈ ಪುಸ್ತಕಕ್ಕೆ ಸಿಕ್ಕ ಪ್ರೋತ್ಸಾಹ ಕೆಲವೇ ವರ್ಷಗಳಲ್ಲಿ ಮೋರ್ ಬ್ಯಾಬ್ ಬ್ಯಾಲಡ್ಸ್ ಎಂಬ ಇನ್ನೊಂದು ಸಂಕಲನ ಬರಲು ಕಾರಣವಾಯಿತು. ಸಾಗ್ಸ್ ಆಫ್ ಸವಾಯಾರ್ಡ್ ಎಂಬುದು ಮೂರನೆಯ ಕೃತಿ. 1898ರಲ್ಲಿ ಈ ಮೂರನ್ನೂ ಸೇರಿಸಿ ಇನ್ನೂ ಹಲವು ಚಿತ್ರಗಳನ್ನೂ ಜೋಡಿಸಿ ಸಂಪುಟವಾಗಿ ಪ್ರಕಟಿಸಲಾಯಿತು.

ಆ ವೇಳೆಗೆ ಫನ್ ಪತ್ರಿಕೆಯ ಅಚ್ಚುಮೆಚ್ಚಿನ ಲೇಖಕನೆನಿಸಿದ್ದ ಗಿಲ್ಬರ್ಟ್ ಇಲಸ್ಟ್ರೇಟೆಡ್ ಟೈಮ್ಸ್ ಪತ್ರಿಕೆಯ ನಾಟಕ ವಿಮರ್ಶಕನಾದ. ಒಮ್ಮೆ ಸೇಂಟ್ ಜೇಮ್ಸ್ ರಂಗಮಂದಿರದ ಮಿಸ್ ಹರ್ಬರ್ಟ್ ಲೆಸ್ಸಿ ಎಂಬಾಕೆ ಕ್ರಿಸ್ಮಸ್ ಹಬ್ಬದ ನಾಟ್ಯೋತ್ಸವಕ್ಕಾಗಿ ಹದಿನೈದೇ ದಿನಗಳಲ್ಲಿ ಒಂದು ಹಾಸ್ಯರಸ ಪ್ರಧಾನವಾದ ನಾಟಕವನ್ನು ಬರೆದುಕೊಡಬಲ್ಲವರು ಯಾರಾದರೂ ಸಿಕ್ಕುವರೇ ಎಂದು ರಾಬರ್ಟ್ಸನ್ನನನ್ನು ಕೇಳಿದಳು. ಆತ ಗಿಲ್ಬರ್ಟ್‌ನನ್ನು



ನಾಟಕ ಬರೆದು ಕೊಡಲು ಕೇಳಿದ ಹತ್ತೆ ದಿನಗಳಲ್ಲಿ ಗಿಲ್ಬರ್ಟ್ ಡಲ್‌ಕಾಮರ ಎಂಬ ವಿಕಟನಾಟಕವನ್ನು ಬರೆದುಕೊಟ್ಟ. ಒಂದೇ ವಾರದಲ್ಲಿ ನಾಟಕವನ್ನು ಅಭ್ಯಾಸವಮಾಡಿ ನಾಟ್ಯೋತ್ಸವ ಸಂದರ್ಭದಲ್ಲಿ ಪ್ರದರ್ಶಿಸಿಯೂ ಆಯಿತು. ಅದೇ ಗಿಲ್ಬರ್ಟ್‌ನ ಮೊದಲ ನಾಟಕ. ಯಾವುದೋ ಗಳಿಗೆಯಲ್ಲಿ ನಾಟಕ ಮಂಡಳಿಯವರಿಗೆ ಕೇವಲ ಮೂವತ್ತು ಪೌಂಡಿಗೆ ಆ ನಾಟಕವನ್ನು ಸಂಪೂರ್ಣ ಹಕ್ಕುಗಳ ಸಮೇತ ಮಾರಿಬಿಟ್ಟ ಗಿಲ್ಬರ್ಟ್ ಅನಂತರ ಕೈಕೈ ಹಿಚುಕಿ ಕೊಳ್ಳಬೇಕಾಯಿತು. ಏಕೆಂದರೆ ಆ ನಾಟಕ ಪ್ರದರ್ಶನದ ಮೇಲೆ ಪ್ರದರ್ಶನ ಕಂಡು ದುಡ್ಡಿನ ಮಳೆ ಸುರಿಸಿತು. 1870ರಲ್ಲಿ ಬಕ್‌ಸ್ಟನ್ ಎಂಬಾತ ಸರಳ ರಗಳೆಯಲ್ಲಿ ಒಂದು ಸುಖಾಂತನಾಟಕ ಬರೆದುಕೊಡಲು ಕೇಳಿದ. ಅದರ ಫಲ ಕಿನ್ನರ ಕಥಾವಸ್ತುವಿನ ಮೇಲೆ ರಚಿತವಾದ ದಿ ಪ್ಯಾಲೇಸ್ ಆಫ್ ಟ್ರೂತ್ ಎಂಬ ನಾಟಕ. ಕತೆಯ ಹಂದರ ಶಿಥಿಲವಾಗಿದ್ದರೂ ರಚನಾ ಕೌಶಲದಿಂದಾಗಿ ನಾಟಕ ಮನ್ನಣೆ ಪಡೆಯಿತು. ಹೇ ಮಾರ್ಕೆಟ್ ರಂಗಮಂದಿರದಲ್ಲಿ ಕೆಂಡಲ್ ದಂಪತಿಗಳು ಈ ನಾಟಕವನ್ನು ಆಡಿಸಿದರು. ಮರುವರ್ಷ ಮೂರಂಕದ ಮತ್ತೊಂದು ಹರ್ಷ ನಾಟಕ ಪಿಗ್ಮಲಿಯನ್ ಅಂಡ್ ಗೆಲೇಷಿಯಾ. 1873ರಲ್ಲಿ ದಿ ವಿಕೆಡ್ ವರ್ಲ್ಡ್ ಮತ್ತು ದಿ ಹ್ಯಾಪಿ ಲ್ಯಾಂಡ್ ನಾಟಕಗಳು ಬಂದವು. ಆಮೇಲೆ ಗಿಲ್ಬರ್ಟ್ ತನ್ನ ತಂದೆಯ ಮನೋಭಾವವನ್ನು ಅನುಸರಿಸಿ ವಿಕಟಹಾಸ್ಯದ ಇಲ್ಲವೆ ಭಾವಾತಿರೇಕದ ನಾಟಕಗಳನ್ನು ಬರೆಯತೊಡಗಿದ. ಹೀಗೆ ಬಂದ ನಾಲ್ಕು ನಾಟಕಗಳಲ್ಲಿ ಸ್ವೀಟ್ ಹಾರ್ಟ್ಸ್ ಮತ್ತು ಎಂಗೇಜ್ಡ್ ಎಂಬ ನಾಟಕಗಳು ಬಹು ಜನಪ್ರಿಯವಾದವು. ಗದ್ಯ ಮತ್ತು ಪದ್ಯ ಎರಡರಲ್ಲೂ ಅನೇಕ ವಿನೋದನಾಟಕಗಳನ್ನು ಬರೆದು ರಸಿಕರ ಮೆಚ್ಚುಗೆ ಸಂಪಾದಿಸಿದುದಲ್ಲದೆ ಈತ ಫಾರ್ಗೆಟೀಸ್ ಫೇರಿ ಅಂಡ್ ಅದರ್ ಸ್ಟೋರೀಸ್ ಎಂಬ ಹಾಸ್ಯಕಥೆಗಳ ಸಂಕಲನವನ್ನೂ ಪ್ರಕಟಿಸಿದ.

ಈ ನಡುವೆ ಆರ್ಥರ್ ಸಲಿವನ್ (**ನೋಡಿ – ಸಲಿವನ್ ಆರ್ಥರ್**) ಎಂಬ ಸಂಗೀತಕಾರನೊಂದಿಗೆ ಆದ ನಿಕಟವಾದ ಸ್ನೇಹ ಗಿಲ್ಬರ್ಟನ ಜೀವನದಲ್ಲಿ ಒಂದು ಮಹತ್ತ್ವಪೂರ್ಣವಾದ ಘಟನೆ. ಇಬ್ಬರೂ ಜೊತೆಗೂಡಿ ಗೀತನಾಟಕಗಳನ್ನು (ಆಪೆರ) ರಚಿಸಿ ಪ್ರದರ್ಶಿಸಬೇಕೆಂದು ಮಾತನಾಡಿ ಕೊಂಡರು. ಈ ಜೋಡಿಯಿಂದ ರಚಿತವಾದ ಮಧುರಗೇಯದ ಸವಾಯ್ ಗೀತ ನಾಟಕಗಳು ಅತ್ಯಂತ ಜನಪ್ರಿಯವಾಗಿ ಕೀರ್ತಿ ಶಿಖರದ ತುದಿಯನ್ನೇರಿದವು. ಗಿಲ್ಬರ್ಟ್ ವಿವಿಧ ಛಂದೋವಿಲಾಸಗಳಲ್ಲಿ ಪ್ರವೀಣ. ಜೊತೆಗೆ ಚತುರವಾದ ವಾಕ್ಸರಣಿಯನ್ನು ಹೆಣೆಯುವುದರಲ್ಲಿ, ಪರಿಹಾಸಯುಕ್ತವಾದ ಸಂದಿಗ್ಧ ಸನ್ನಿವೇಶಗಳನ್ನು ಸೃಷ್ಟಿಸುವುದರಲ್ಲಿ, ವಿರೋಧಾಭಾಸ ಅಲಂಕಾರದ ಮಾತಿನ ಚಟಾಕಿಗಳಲ್ಲಿ ಅದ್ವಿತೀಯ. 19ನೆಯ ಶತಕದ ಇತರ ನಾಟಕಕಾರರು ಸಂಗೀತವನ್ನು ಗೌಣವಾಗಿ ಬಳಸಿಕೊಳ್ಳುತ್ತಿದ್ದರು. ಪಾತ್ರ ಪೋಷಣೆಗೂ ಕಥಾಸಂವಿಧಾನಕ್ಕೂ ಅಭಿನ್ನವಾಗಿ

ಸೇರಿಕೊಂಡಂತೆ ಸಂಗೀತವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡ ಮೊದಲಿಗರೆಂದರೆ ಗಿಲ್ಬರ್ಟ್ ಮತ್ತು ಸಲಿವನ್. ಕವಿ ಗಿಲ್ಬರ್ಟ್ ಬಳಸಿದ ಛಂದೋವೈಖರಿಯೇ ತನಗೆ ಇಂಥ ರಾಗ ಹೊಂದುತ್ತೆಂಬು ದನ್ನು ಸಲಿವನನಿಗೆ ಸೂಚನೆ ಕೊಡುವಷ್ಟು ಸಂಗೀತಗುಣವನ್ನು ಒಳಗೊಂಡಿರುತ್ತಿತ್ತಂತೆ ಗೀತ-ಸಂಗೀತ ಅಷ್ಟು ಮಧುರವಾಗಿ ಮೇಳವಿಸುತ್ತಿದ್ದುದರಿಂದಲೇ ನಾಟಕಗಳು ರಸಿಕರ ಮೆಚ್ಚುಗೆ ಪಡೆದವು. ಆಂಗ್ಲೋಸ್ಯಾಕ್ಸನ್ ಸಂಸ್ಕೃತಿಯ ಪರಂಪರೆಯಲ್ಲಿ ಬೆಳೆದುಬಂದ ಸಮಾಜಕ್ಕೆ ಈ ಇಬ್ಬರೂ ತಮ್ಮ ನಾಟಕಗಳ ಮೂಲಕ ಹೊಸ ನುಡಿಗಟ್ಟುಗಳನ್ನೂ ಪಾತ್ರಗಳನ್ನೂ ಹೊಸ ಹೊಸ ರಾಗಗಳನ್ನೂ ಕೊಟ್ಟರು. ಇವರ ಕೃತಿಗಳಲ್ಲಿ ಎಚ್. ಎಂ. ಎಸ್. ಪಿನಾಫೋರ್ ಮತ್ತು ದಿ ಮಿಕ್ಯಾಡೊ ಶ್ರೇಷ್ಠವಾದ ಗೀತನಾಟಕಗಳೆಂದು ಹೆಸರಾಗಿವೆ. ಮೊದಲನೆಯದು ನೌಕಾದಳವನ್ನು ಕುರಿತ ವಿಡಂಬನೆ. ಎರಡೂ ವಿಕ್ಟೋರಿಯ ಕಾಲದ ಸಾಮಾಜಿಕ ಶಿಷ್ಟಾಚಾರದ ಢಾಂಬಿಕತೆಯನ್ನು ಅತಿ ಆಡಂಬರ ದಿಂದ ಕೂಡಿದ ಅಪ್ರಾಮಾಣಿಕತೆಯನ್ನೂ ಕಟುವಾಗಿ ವಿಡಂಬಿಸುವ ನಾಟಕಗಳು. ಅಂದಿನಿಂದ ಇಂದಿನವರೆಗೂ ಈ ನಾಟಕಗಳು ಪ್ರದರ್ಶನವಾದಾಗಲೆಲ್ಲ ರಂಗಮಂದಿರ ತುಂಬ ಜನ ಕಿಕ್ಕಿರಿದು ನೋಡಿ ಆನಂದಿಸುವುದು ಪರಿಪಾಠವಾಗಿದೆ.

ಗಿಲ್ಬರ್ಟ್-ಸಲಿವನ್ ಜೋಡಿ ಮನೆಮಾತಾಯಿತು. ಇಬ್ಬರೂ ಪ್ರತಿಭಾವಂತರೇ. ವೈಯಕ್ತಿಕವಾಗಿ ಸ್ವತಂತ್ರವಾಗಿ ಇಬ್ಬರೂ ತಮ್ಮದೇ ಆದ ಶ್ರೇಷ್ಠಕೃತಿಗಳನ್ನು ರಚಿಸಿದವರೇ. ಆದರೆ ಜೊತೆಗೂಡಿ ರಚಿಸಿದ ಕೃತಿಗಳ ಅಸಾದರಣ ಪ್ರಕಾಶದಲ್ಲಿ ಅವೆಲ್ಲ ಮಸುಕಾಗಿ ಹೋದವು. 1890ರ ಅನಂತರ ಅವರ ಸ್ನೇಹದ ಹಾಲು ಒಡೆಯಿತು. ವೈಮನಸ್ಯ ಬೆಳೆದು ಕೆಲಕಾಲ ಇಬ್ಬರೂ ಬೇರೆಬೇರೆಯಾಗಿ ನಾಟಕಗಳನ್ನು ಬರೆಯ ತೊಡಗಿದರು. ಅವೆಲ್ಲ ಸಪ್ಪೆಯಾದವು. ಮತ್ತೆ ರಾಜಿ ಆಗಿ ಕೆಲವು ನಾಟಕಗಳನ್ನು ಜೊತೆಗೂಡಿ ಬರೆದರು. ಯುಟೋಪಿಯಾ ಅನ್‍ಲಿಮಿಟೆಡ್ (1893), ದಿ ಗ್ರ್ಯಾಂಡ್ ಡ್ಯೂಕ್ (1896) ಹಿಂದಿನ ನಾಟಕಗಳಷ್ಟು ಯಶಸ್ವಿಯಾಗಲಿಲ್ಲ.

ಗಿಲ್ಬರ್ಟ್‍ನಿಗೆ ವಿನೋದಶೀಲತೆ ದೈವದತ್ತವಾಗಿ ಬಂದ ಸ್ವಭಾವವಾಗಿತ್ತು. ಅಸಂಖ್ಯಾತ ಪ್ರೇಕ್ಷಕರನ್ನು ನಗೆಗಡಲಿನಲ್ಲಿ ಮುಳುಗಿಸಿ ಅವರ ಮನಸ್ಸನ್ನು ಆತ ಉಲ್ಲಾಸಗೊಳಿಸಿದ. ಹಾಸ್ಯಪ್ರಕಾರಕ್ಕೆ ಅವನದೇ ಒಂದು ವಿಶಿಷ್ಟ ಕೊಡುಗೆ. ಅವನ ಹಾಸ್ಯ ತುಂಬ ಸೂಕ್ಷ್ಮ, ಮಾರ್ಮಿಕ, ಸರ್ವದಾ ನಿರ್ದುಷ್ಟವಾದ ಮನೋಧರ್ಮದಿಂದ ಕೂಡಿದುದು. ನಿರ್ಮಲವಾದ ಹಾಸ್ಯರಸಾಯನದಲ್ಲಿ ಹಿತವಾಗಿ ಬೆರೆತ ಸರಸವಾದ ಕಟಕಿಯ ಕಂಪು ಗಿಲ್ಬರ್ಟಿಯನ್ ಹಾಸ್ಯ ಎಂಬ ಹೊಸ ಹೆಸರನ್ನೇ ಸಂಪಾದಿಸಿತು.

1907ರಲ್ಲಿ ಚಕ್ರವರ್ತಿಯ ವರ್ಧಂತ್ಯುತ್ಸವ ಸಂದರ್ಭದಲ್ಲಿ ಗಿಲ್ಬರ್ಟ್‍ನಿಗೆ ನೈಟ್ ಹುಡ್ ಪ್ರಶಸ್ತಿಯನ್ನು ಕೊಡಲಾಯಿತು. ಯಶಸ್ಸಿನೊಂದಿಗೆ ಅಪಾರ ಹಣವೂ ಬಂದು ಗಿಲ್ಬರ್ಟ್ ಭಾರಿ ಶ್ರೀಮಂತನಾದ. ಭವ್ಯವಾದ ಗ್ಯಾರಿಕ್ ರಂಗಮಂದಿರವನ್ನು ಕಟ್ಟಿಸಿದ. ಹ್ಯಾರೋದಲ್ಲಿ ಸ್ವಂತ ವಾಸಕ್ಕಾಗಿ ಒಂದು ಸುಂದರವಾದ ಮನೆಯನ್ನೂ ಅದರ ಪಕ್ಕದಲ್ಲೇ ಅವನ ಮೆಚ್ಚಿನ ಹವ್ಯಾಸವಾದ ಜ್ಯೋತಿರ್ವಿಜ್ಞಾನದ ಅಧ್ಯಯನಕ್ಕಾಗಿ ಒಂದು ಪುಟ್ಟ ಖಗೋಳ ವೀಕ್ಷಣಾಲಯವನ್ನು ಕಟ್ಟಿಸಿಕೊಂಡ. ಮನೆಯ ಶ್ರೀಮಂತಿಕೆಗೆ ಶೋಭೆ ಎನಿಸುವಂಥ ಒಂದು ವಿಲಾಸಮಯವಾದ ಈಜುಕೊಳವೂ ಉದ್ಯಾನದಲ್ಲಿ ನಿರ್ಮಿತವಾಗಿತ್ತು. ತನಗೆ ಅತ್ಯಂತ ಪ್ರಿಯವಾದ ಆ ಕೊಳವೇ ಮುಂದೆ ತನಗೆ ಮೃತ್ಯುದ್ವಾರವಾಗುವುದೆಂಬುದನ್ನು ಅರಿಯದೆ ಮನೆಗೆ ಬಂದ ಸ್ನೇಹಿತರಿಗೂ ಅತಿಥಿಗಳಿಗೂ ಅದನ್ನು ತೋರಿಸುತ್ತ ಗಿಲ್ಬರ್ಟ್ ಹೆಮ್ಮೆ ಪಡುತ್ತಿದ್ದ.

ಒಂದು ಸಾರಿ ಅವನ ಅತಿಥಿಯಾಗಿ ಬಂದ ಮಹಿಳೆಯೊಬ್ಬಳು ಆ ಕೊಳದಲ್ಲಿ ಈಜುತ್ತಿರುವಾಗ ಪ್ರಮಾದವಶಾತ್ ಮುಳುಗುವಾಗ ಅಪಾಯದಲ್ಲಿರುವುದನ್ನು ನೋಡಿದ ಗಿಲ್ಬರ್ಟ್ ಆಕೆಯನ್ನು ರಕ್ಷಿಸಲು ನೀರಿನೊಳಕ್ಕೆ ದುಮುಕಿದ. ಆಕೆಯೇನೋ ಅವನ ಸಹಾಯದಿಂದ ಬದುಕಿದಳು. ಆದರೆ ಆತ ತನ್ನ ಪ್ರಾಣವನ್ನೇ ಉಳಿಸಿಕೊಳ್ಳಲಾರದೆ ಹೋದ. ನಿಪುಣ ಈಜುಗಾರನಾದರೂ ಉದ್ವೇಗದಿಂದಲೊ ದಣಿವಿನಿಂದಲೊ ಈಜಿ ದಡ ಸೇರಲು ಅಸಮರ್ಥನಾದ. 1911 ಮೇ 29ರಂದು ನೀರಿನಲ್ಲಿ ಮುಳುಗಿ ಪ್ರಾಣ ನೀಗಿದ. ಆಗಲೇ ಉಂಟಾದ ಹೃದಯಾಘಾತದಿಂದ ಹಾಗಾಗಿರಬಹುದು ಎಂದು ವೈದ್ಯರು ಶಂಕೆ ಪಟ್ಟರು. (ಕೆ.ಬಿ.ಪಿ.)

**ಗಿಲ್ಬರ್ಟ್, ಹಂಫ್ರಿ :** 1539-83. ಬ್ರಿಟಿಷ್ ಸೈನಿಕ. ನಾವಿಕ. 1539ರಲ್ಲಿ ಡಾರ್ಟ್‍ಮತ್ ಬಳಿಯ ಕಾಂಪ್ಟನಿನಲ್ಲಿ ಜನಿಸಿದ. ತಂದೆ ಆತೋ ಗಿಲ್ಬರ್ಟ್. ಸಾಹಸಿಯಾದ ಗಿಲ್ಬರ್ಟ್ ತನ್ನ ಜೀವಮಾನವನ್ನೆಲ್ಲ ವಸಾಹತು ಸ್ಥಾಪನೆಯ ಯೋಜನೆಗಳನ್ನು ರೂಪಿಸುವುದರಲ್ಲಿ ಮತ್ತು ಅವನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಕಳೆದ. ಈಟನ್ ಮತ್ತು ಆಕ್ಸ್‍ಫರ್ಡ್‍ನಲ್ಲಿ ಯುದ್ಧತಂತ್ರ ಮತ್ತು ನಾವಿಕ ಕಲೆಯನ್ನ ಅಭ್ಯಸಿಸಿ 1544 ಅಥವಾ 1545 ರಲ್ಲಿ ರಾಜಕುಮಾರಿ ಎಲಿಜಬೆತಳ ಸೇವೆಗೆ ಸೇರಿಕೊಂಡ. 1563ರಲ್ಲಿ ಲಿ ಹಾವ್ರ್ ಮುತ್ತಿಗೆಯಲ್ಲಿ ಭಾಗವಹಿಸಿ ಗಾಯಗೊಂಡ.

ಗಿಲ್ಬರ್ಟನಿಗೆ ವಿಶೇಷ ಆಸಕ್ತಿಯಿದ್ದದ್ದು ಭೌಗೋಳಿಕ ಅನ್ವೇಷಣೆ ಮತ್ತು ಇಂಗ್ಲೆಂಡಿನ ಸಾಮ್ರಾಜ್ಯ ವಿಸ್ತರಣೆಯ ಯೋಜನೆಗಳಲ್ಲಿ. 1565-66ರಲ್ಲಿ ಆಂಟೋನಿ ಜೆಂಕಿನ್ಸನನೊಡ ಗೂಡಿ ಚೀನಕ್ಕೆ ಉತ್ತಾರಾಭಿಮುಖವಾದ ಮಾರ್ಗವೊಂದನ್ನು ಕಂಡು ಹಿಡಿಯುವ ಯೋಜನೆಗಳಲ್ಲಿ ಮಗ್ನನಾಗಿದ್ದ. ಅಲ್ಲದೆ ಆ ಬಗ್ಗೆ ಒಂದು ಗ್ರಂಥವನ್ನೇ ಬರೆದ. ತನ್ನ ಮೊದಲ ವೃತ್ತಿಯನ್ನು ಬಿಡಲಾರದೆ ಮಧ್ಯದಲ್ಲಿ ಅವನು ಕ್ಯಾಪ್ಟನ್ ಆಗಿ 1566ರಲ್ಲಿ ಐರ್ಲೆಂಡಿಗೆ ಹೋಗಿ ಆ ವರ್ಷದ ಕೊನೆಯಲ್ಲಿ ಹಿಂದಿರುಗಿದ. ಚೀನಕ್ಕೆ ವಾಯವ್ಯ ಮಾರ್ಗವನ್ನು ಕಂಡುಹಿಡಿಯುವ ಬಗ್ಗೆ ಪರಿಶೀಲನಾತ್ಮಕ ಪ್ರವಾಸವೊಂದರ ಯೋಜನೆಯನ್ನು ರೂಪಿಸಿದ. ಆದರೆ ಮಸ್ಕೊವಿ ಕಂಪೆನಿ ಈ ಯೋಜನೆಯನ್ನು ವಿರೋಧಿಸಿದ್ದರಿಂದ ಇದನ್ನು ಕೈಬಿಟ್ಟ.

ವಸಾಹತುಗಳನ್ನು ಸ್ಥಾಪಿಸುವ ಯೋಜನೆಗಳನ್ನು ಐರ್ಲೆಂಡಿನಲ್ಲಿ ಗಿಲ್ಬರ್ಟನೂ ಅವನ ಸಂಗಡಿಗರೂ ಮುಂದುವರಿಸಿದರು. ಐರ್ಲೆಂಡಿನ ಮನ್‍ಸ್ಟರ್ ದಂಗೆಯನ್ನು ಅಡಗಿಸುವ ಕಾರ್ಯಕ್ರಮದ ಹೊಣೆಹೊತ್ತು ಅದನ್ನು ಕೂಡ ಯಶಸ್ವಿಯಾಗಿ ನಿರ್ವಹಿಸಿದ. ಗಿಲ್ಬರ್ಟನ ಸಾಹಸಕಾರ್ಯಕ್ಕಾಗಿ ರಾಣಿ ಎಲಿಜಬೆತ್ ಇವನಿಗೆ 1570ರಲ್ಲಿ ನೈಟ್ ಪ್ರಶಸ್ತಿ ನೀಡಿದಳು. ಆದರೆ ಗಿಲ್ಬರ್ಟ್ ರೂಪಿಸಿದ ಯಾವ ವಸಾಹತು ಯೋಜನೆಗಳೂ ಯಶಸ್ವಿಯಾಗಿರಲಿಲ್ಲ.

ಗಿಲ್ಬರ್ಟ್ ರಾಜಕೀಯವನ್ನು ಪ್ರವೇಶಿಸಿ 1571ರಲ್ಲೂ 1581ರಲ್ಲೂ ಪ್ಲೈಮತ್ ಕ್ಷೇತ್ರದಿಂದ ಪಾರ್ಲಿಮೆಂಟಿಗೆ ಆಯ್ಕೆಹೊಂದಿದ. ನೆದರ್ಲೆಂಡಿನ ಜನ ಸ್ಪೇನಿನ ವಿರುದ್ಧ 1572ರಲ್ಲಿ ದಂಗೆಯೆದ್ದಾಗ ಗಿಲ್ಬರ್ಟ್ ಇಂಗ್ಲೆಂಡಿನ ಸ್ವೇಚ್ಛಿಕ ತಂಡವೊಂದರ ನಾಯಕನಾಗಿ ನೆದರ್ಲೆಂಡಿಗೆ ನೆರವು ನೀಡಿದ. ಅದರಲ್ಲಿ ಅವನು ಅಷ್ಟೇನೂ ಯಶಸ್ಸುಗಳಿಸಲಿಲ್ಲ. ಅಪರಾಧಿಗಳ ಪಾಲನೆಯ ಕ್ರಮವನ್ನು ಸುಧಾರಿಸುವ ಮತ್ತು ಲಂಡನಿನಲ್ಲಿ ಅದಕ್ಕಾಗಿ ಅಕಾಡೆಮಿಯನ್ನು ಸ್ಥಾಪಿಸುವ ಯೋಜನೆಯೊಂದನ್ನು 1573-78ರಲ್ಲಿ ರಚಿಸಿದ. 1575ರಲ್ಲಿ ಅವನು ಮತ್ತೇ ಚೀನಕ್ಕೆ ವಾಯವ್ಯ ದಿಕ್ಕಿನಿಂದ ಸಮುದ್ರ ಮಾರ್ಗ ಕಂಡು ಹಿಡಿಯುವ ಯೋಜನೆಯಲ್ಲಿ ಆಸಕ್ತಿ ತಳೆದ. ಈ ಯತ್ನದಲ್ಲಿ ಮಾರ್ಟಿ ಫ್ರಾಭಿಷರನಿಗೆ ಈತ ಪ್ರೋತ್ಸಾಹ ನೀಡಿದನಾದರೂ ಅದರಲ್ಲಿ ನೇರವಾಗಿ ಭಾಗವಹಿಸಲಿಲ್ಲ. ಇವನ ಗಮನ ಅಮೆರಿಕದ ಕಡೆಗೆ ಹರಿಯಿತು. ನ್ಯೂಫೌಂಡ್‍ಲೆಂಡಿನ ಫ್ರೆಂಚ್, ಸ್ಪ್ಯಾನಿಷ್ ಮತ್ತು ಪೋರ್ಚುಗೀಸ್ ಮತ್ಸ್ಯನೌಕೆಗಳನ್ನು ವಶಪಡಿಸಿಕೊಳ್ಳುವ, ಸಾಂತೊ ಡೊಮಿಂಗೋ ಮತ್ತು ಕ್ಯೂಬವನ್ನು ಆಕ್ರಮಿಸಿಕೊಳ್ಳುವ, ಅಮೆರಿಕದಿಂದ ಸ್ಪೇನಿಗೆ ಸಾಗುತ್ತಿದ್ದ ಬೆಳ್ಳಿಯನ್ನು ಲೂಟಿಮಾಡುವ ಯೋಜನೆಯೊಂದನ್ನು ಈತ ಪ್ರತಿಪಾದಿಸಿದ. ಯಾವ ಕ್ರೈಸ್ತದೊರೆ ಅಥವಾ ಜನಕ್ಕೂ ಸೇರದ ವಿಧರ್ಮೀಯರ ನೆಲವನ್ನು ಹಿಡಿದುಕೊಳ್ಳುವ ಅಧಿಕಾರವನ್ನು ರಾಣಿ ಇವನಿಗೆ 6 ವರ್ಷಗಳ ಅವಧಿಗೆ ನೀಡಿದಳು.

ದುರಾಶಾಪೀಡಿತನಾದ ಗಿಲ್ಬರ್ಟ್ ತನ್ನೆಲ್ಲ ಸಂಪತ್ತನ್ನೂ ವಿನಿಯೋಗಿಸಿ ಈ ಸಾಹಸಕೃತ್ಯದಲ್ಲಿ ತೊಡಗಿದ. ಇವನ ನೌಕಾಪಡೆ ಡಾರ್ಟ್‍ಮತ್‍ನಿಂದ ಹೊರಟಿತು. ಆದರೆ ಇವನಿಗೆ ಯಶಸ್ಸು ದೊರಕಲಿಲ್ಲ. ಇವನ ಕೈಕೆಳಗಿನವರು ಅಶಿಸ್ತಿನಿಂದ ವರ್ತಿಸಿದರು.

1583ರಲ್ಲಿ ಗಿಲ್ಬರ್ಟ್ ಮತ್ತೊಮ್ಮೆ ಇಂಥ ಸಾಹಸ ಕಾರ್ಯದಲ್ಲಿ ತೊಡಗಿದ. ಹಾಗೂ ಹೀಗೂ ಹಣ ಸಂಗ್ರಹಿಸಿ ಮತ್ತೆ ಹೊರಟ. ಉತ್ತರ ಅಮೆರಿಕದ ನ್ಯೂಫೌಂಡ್ ಲೆಂಡನ್ನು ರಾಣಿಯ ಹೆಸರಿನಲ್ಲಿ ವಶಪಡಿಕೊಂಡ. ಗಿಲ್ಬರ್ಟ್ ಸ್ವದೇಶಾಭಿಮುಖವಾಗಿ ಹೊರಟ. ಆದರೆ ಮಧ್ಯಮಾರ್ಗದಲ್ಲಿ ಅವನ ದೋಣಿ ಬಿರುಗಾಳಿಗೆ ಸಿಕ್ಕಿ ಮುಳುಗಿತು. ಆಗ ಗಿಲ್ಬರ್ಟ್ ಶಾಂತವಾಗಿ ಕುಳಿತು ಪುಸ್ತಕವನ್ನು ಓದುವುದರಲ್ಲಿ ಮಗ್ನನಾಗಿದ್ದನೆಂದೂ ಭೂಮಿಯಿಂದ ಸ್ವರ್ಗಕ್ಕೆ ಎಷ್ಟು ದೂರವೋ ಸಮುದ್ರದಿಂದಲೂ ಅಷ್ಟೇ ದೂರವೆಂದು ಕೂಗಿ ಹೇಳಿದನೆಂದೂ ಬಳಿಯ ಇನ್ನೊಂದು ಹಡಗಿನ ಕ್ಯಾಪ್ಟನನಾಗಿದ್ದ ಹೇಯ್ಸ್ ಹೇಳಿದ್ದಾನೆ. (ಕೆ.ಟಿ.ಆರ್.)

**ಗಿಲ್ಲೋಮೆ ಡುಪ್ಯೀಟ್ರಾನ್ :** 1777-1835. ಫ್ರಾನ್ಸಿನ ಶಸ್ತ್ರವೈದ್ಯ ಮತ್ತು ಅಂಗರಚನಾಶಾಸ್ತ್ರಜ್ಞ. ಶಸ್ತ್ರಕ್ರಿಯಾವಿಧಾನಗಳನ್ನು ಸುಧಾರಿಸಿದ್ದು ಮಾತ್ರವಲ್ಲ ಹೊಸ ಉಪಕರಣಗಳನ್ನು ಕಂಡುಹಿಡಿದ. ಡುಪ್ಯೀಟ್ರಾನ್ ತೀರ ಬಡ ಕುಟುಂಬದಲ್ಲಿ 1777ರ ಅಕ್ಟೋಬರ್ 5ರಂದು ಜನಿಸಿದ. ಸ್ವಂತ ಪರಿಶ್ರಮ ಸಾಮರ್ಥ್ಯಗಳಿಂದ ಮುಂದೆ ಬಂದು ವೈದ್ಯಶಾಸ್ತ್ರವನ್ನು ಅಭ್ಯಾಸಿಸಿ 1802ರಲ್ಲಿ ಡಿ ಯು ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸಕನಾದ. ಶಸ್ತ್ರಚಿಕಿತ್ಸೆಯಲ್ಲಿ ಅಗಾಧ ಚಾತುರ್ಯವನ್ನು ಪ್ರದರ್ಶಿಸಿ ಚಿಕಿತ್ಸೆಯಲ್ಲಿ ಅನೇಕ ಹೊಸತಂತ್ರಗಳನ್ನೂ ಉಪಕರಣಗಳನ್ನೂ ಶೋಧಿಸಿದ. ಮೂವತ್ತೆಂಟನೆಯ ವಯಸ್ಸಿನಲ್ಲಿ ಶಸ್ತ್ರಚಿಕಿತ್ಸ ಶಾಸ್ತ್ರದ ಪ್ರಾಧ್ಯಾಪಕನಾದ. ಈತ ನೀಡುತ್ತಿದ್ದ ಪಾಂಡಿತ್ಯಪೂರ್ಣ ಉಪನ್ಯಾಸಗಳು ಮತ್ತು ರೋಗನಿದಾನ ಹಾಗೂ ಚಿಕಿತ್ಸೆಯಲ್ಲಿ ತೋರುತ್ತಿದ್ದ ಕಾರ್ಯಕೌಶಲ ಅನೇಕ ರಾಷ್ಟ್ರಗಳಿಂದ ವಿದ್ಯಾರ್ಥಿಗಳನ್ನು ಇವನೆಡೆಗೆ ಆಕರ್ಷಿಸಿದವು.

ಈತನ ಶಸ್ತ್ರಕೌಶಲಕ್ಕೆ ಸರ್ಕಾರ ಮಾನ್ಯತೆಯನ್ನು ನೀಡಿತು. 18ನೆಯ ಲ್ಯೂಯಿ ಮತ್ತು ಹತ್ತನೆಯ ಚಾರಲ್ಸ್ ದೊರೆಗಳಿಗೆ ಡುಪ್ಯೀಟ್ರಾನನು ಶಸ್ತ್ರಚಿಕಿತ್ಸಕನಾಗಿ ನೇಮಕಗೊಂಡಿದ್ದ. ರಕ್ತನಾಳ ರೋಗಗಳು, ಕಾಳಗದಲ್ಲಿ ಉಂಟಾದ ಹುಣ್ಣುಗಳು, ಮುಂದೆ ಕಣಕಾಲ, ಹೊರ ಎಲುಬು ಶಸ್ತ್ರಚಿಕಿತ್ಸೆ – ಇವುಗಳಲ್ಲಿ ಹೊಸ ವಿಧಾನಗಳನ್ನು ಬಳಕೆಗೆ ತಂದ. ಅಂಗೈ ತಂತುಕಟ್ಟಿನ ಬಿಗಿತದಿಂದ ಕೈಬೆರಳುಗಳು ಹಿಂದಕ್ಕೆಳೆಯಲ್ಪಟ್ಟು ಉಂಟಾದ ವಿಕಲತೆಯನ್ನು ಅಭ್ಯಾಸಿಸಿ, ಆ ತಂತುಕಟ್ಟಿನ ಅಡ್ಡಕೊಯ್ತ ಬೆರಳುಗಳ ಸರಾಗ ಚಲನೆಗೆ ಸಹಾಯಕವಾಗುವುದೆಂದು ತೋರಿಸಿದ; ಅಂಗೈಯಲ್ಲಿ ಉಂಟಾಗುವ ಆ ತೆರನಾದ ಎಳೆದುಕೊಳ್ಳುವಿಕೆಗೆ ಡುಪ್ಯೀಟ್ರಾನನ ಎಳೆದುಕೊಳ್ಳುವಿಕೆ ಎಂದೇ ಹೆಸರಿಡಲಾಗಿದೆ. ಡುಪ್ಯೀಟ್ರಾನನು ಬಲು ಧೈರ್ಯವಂತನಾದ ಶಸ್ತ್ರಕಾರ್ಯತಜ್ಞ, ಎಂಥ ಆತಂಕ ಸನ್ನಿವೇಶಗಳಲ್ಲೂ ಮನಸ್ಸಿನ ಸ್ಥೈರ್ಯವನ್ನು ಕೆಡಿಸಿಕೊಳ್ಳುತ್ತಿರಲಿಲ್ಲ. ಶಸ್ತ್ರಕ್ರಿಯೆಯಿಂದ



ಕೆಳದವಡೆಯನ್ನು ಪೂರ್ತಿಯಾಗಿ ತೆಗೆದು ಹಾಕಿದ ಮೊದಲಿಗ (1812). ಏಡಿಗಂತಿ ಚಿಕಿತ್ಸೆಗೆ ಗರ್ಭಕೋಶದ ಕಂಠವನ್ನು ಶಸ್ತ್ರಕ್ರಿಯೆಯಿಂದ ಪ್ರಥಮವಾಗಿ ತೆಗೆದು ಹಾಕಿದ್ದೂ ಇವನೇ. ತೊಡೆ ಕೀಲಿನ ಆಜನ್ಮ ಸರಿತವನ್ನು (ಕನ್‌ಜೆನಿಟಲ್ ಡಿಸ್‌ಲೊಕೇಷನ್ ಆಫ್ ದಿ ಹಿಪ್) ವಿವರವಾಗಿ, ವೈಜ್ಞಾನಿಕವಾಗಿ ಮೊದಲು ವಿವರಿಸಿದ್ದೂ ಇವನೇ (1826). 1835ರ ಫೆಬ್ರವರಿ 8ರಂದು ಪ್ಯಾರಿಸಿನಲ್ಲಿ ನಿಧನನಾದ. (ಪಿ.ಎಸ್.ಎಸ್.)

**ಗಿಸ್ಸಿಂಗ್, ಜಾರ್ಜ್ ರಾಬರ್ಟ್ :** 1857–1903. ಇಂಗ್ಲಿಷ್ ಕಾದಂಬರಿಕಾರ. ಉತ್ತರ ಇಂಗ್ಲೆಂಡಿನ ಯಾರ್ಕ್‌ಷೈರ್‌ನ ವೇಕ್‌ಫೀಲ್ಡ್ ಎಂಬಲ್ಲಿ ಮಧ್ಯಮವರ್ಗದ ಮನೆತನವೊಂದರಲ್ಲಿ 1857ರ ನವೆಂಬರ್ 22ರಂದು ಹುಟ್ಟಿದ. ತಂದೆ ಔಷಧಿ ಮುಂತಾದ ರಾಸಾಯನಿಕ ವಸ್ತುಗಳ ವ್ಯಾಪಾರಿ. ಸಾಹಿತ್ಯದಲ್ಲೂ ಆಸಕ್ತಿಯಿತ್ತು. ಮ್ಯಾಂಚೆಸ್ಟರಿನ ಓವೆನ್ಸ್ ಕಾಲೇಜಿನಲ್ಲಿ ಓದಿ ಲಂಡನ್ ವಿಶ್ವವಿದ್ಯಾನಿಲಯದ ಪದವೀಧರನಾದ. ಶಾಲೆಯಲ್ಲಿ, ಕಾಲೇಜಿನಲ್ಲಿ ತುಂಬ ಬುದ್ಧಿವಂತನಾದ ವಿದ್ಯಾರ್ಥಿಯೆನಿಸಿಕೊಂಡಿದ್ದ. ಗ್ರೀಕ್ ಮತ್ತು ಲ್ಯಾಟಿನ್ ಭಾಷಾಸಾಹಿತ್ಯಗಳಲ್ಲಿ ಶ್ರೇಷ್ಠವರ್ಗದಲ್ಲಿ ಉತ್ತೀರ್ಣನಾಗಿ ವಿದ್ವತ್‌ವೇತನವನ್ನೂ ಬಹುಮಾನಗಳನ್ನೂ ಪಡೆದ. ಆಗಿನಿಂದಲೇ ಸಾಹಿತ್ಯದಲ್ಲಿ ಅಪರಿಮಿತವಾದ ಶ್ರದ್ಧೆಯನ್ನು ಬೆಳೆಸಿಕೊಂಡ. ಮ್ಯಾಂಚೆಸ್ಟರಿನ ಒಬ್ಬ ವೇಶ್ಯಾತರುಣಿಯನ್ನು ಉದ್ಧಾರಮಾಡುವ ಆದರ್ಶಕ್ಕಾಗಿ, ಕಳ್ಳತನ ಮಾಡಿ ಸಿಕ್ಕಿಕೊಂಡು ತನ್ನ ಉನ್ನತ ವ್ಯಾಸಂಗವನ್ನೇ ಈತ ಬಲಿಕೊಟ್ಟುದನ್ನು ಕಂಡಾಗ ಇವನ ವಿಷಯದಲ್ಲಿ ಭರವಸೆಯಿಟ್ಟುಕೊಂಡವರಿಗೆ ಬಹಳ ನಿರಾಸೆಯಾಯಿತು. ಆ ವೇಶ್ಯೆಯನ್ನೇ ಮದುವೆಯಾಗಿ ಸಂಸಾರವನ್ನಾರಂಭಿಸಿದ. ಮೊದಲು ಗುಮಾಸ್ತನಾದ. ಅನಂತರ ಶಾಲಾ ಅಧ್ಯಾಪಕನಾದ. ಜೀವನ ನಡೆಸುವುದು ದುರ್ಭರವಾಗಿ ಅಮೆರಿಕಕ್ಕೆ ವಲಸೆ ಹೋಗಿ ಬಾಸ್ಟನ್ ನಗರದಲ್ಲಿ ಗ್ಯಾಸ್ ಫಿಟ್ಟರ್ ಆಗಿ ಕೆಲಸ ಮಾಡಿದ. ಷಿಕಾಗೊ ನಗರಕ್ಕೆ ಹೋಗಿ ಅಲ್ಲಿನ ಟ್ರಿಬ್ಯೂನ್ ಪತ್ರಿಕೆಗೆ ಸಣ್ಣಕತೆಗಳನ್ನು ಬರೆದುಕೊಟ್ಟ. ಅದರಿಂದ ಸಾಕಷ್ಟು ಹಣ ಬರಲಿಲ್ಲ. ಬಡತನದ ಬೇಗೆ ಹೆಚ್ಚಾಯಿತು. ಒಪ್ಪೊತ್ತಿನ ಊಟಕ್ಕೂ ಗತಿ ಇಲ್ಲದ ಹಾಗಾಯಿತು. ಆಗಿನ ಬಡತನದ ಬವಣೆ, ಹೊಟ್ಟೆಗಿಲ್ಲದೆ ನರಳಿದ್ದು–ಮುಂತಾದ ಅನುಭವಗಳನ್ನೆಲ್ಲ ಮುಂದೆ 1891ರಲ್ಲಿ ಬರೆದ ನ್ಯೂ ಗ್ರಬ್ ಸ್ಟ್ರೀಟ್ ಎಂಬ ಕಾದಂಬರಿಯಲ್ಲಿ ಈತ ವ್ಯಕ್ತಗೊಳಿಸಿದ್ದಾನೆ. ಇದರಲ್ಲಿ ನೀತಿ ನಿಯಮವಿಲ್ಲದ ಪ್ರಕಾಶಕರನ್ನೂ ಶತಮೂರ್ಖರಾದ ವಾಚಕ ಮಹಾಶಯರನ್ನೂ ತರಾಟೆಗೆ ತೆಗೆದುಕೊಂಡಿದ್ದಾನೆ. ಈತನ ಜೀವನದ ಉದ್ದಕ್ಕೂ ಏಳರ ಶನಿ ಅಂಟಿಕೊಂಡಿದ್ದ ಹಾಗೆ ತೋರುತ್ತದೆ. ಎಲ್ಲೆಲ್ಲೂ ಸೋಲು, ನಿರಾಶೆ, ಕಷ್ಟಕಾರ್ಪಣ್ಯಗಳೇ ಒದಗಿದ್ದರ ಪರಿಣಾಮವಾಗಿ ಈತ ಬರೆದ ಕಾದಂಬರಿಗಳಲ್ಲೆಲ್ಲ ನೈರಾಶ್ಯ ಮನೋಭಾವ, ಉತ್ಸಾಹೀನತೆ, ನೊಂದುಬೆಂದ ಕಂಗೆಟ್ಟ ಮುಖ, ಕಷ್ಟದ ಕಾರ್ಮೋಡ–ಇವೇ ಕಾಣುತ್ತವೆ.

1878ರಲ್ಲಿ ಗಿಸ್ಸಿಂಗ್ ಇಂಗ್ಲೆಂಡಿಗೆ ಹಿಂತಿರುಗಿದ. ಆಗ ಬರೆದ ಇವನ ಪ್ರಥಮ ಕಾದಂಬರಿಯನ್ನು ಪ್ರಕಟಿಸಲು ಯಾವ ಪ್ರಕಾಶಕನೂ ಧೈರ್ಯ ಮಾಡಲಿಲ್ಲ. ಅದರ ಹಸ್ತಪ್ರತಿ ಅಲ್ಲಿ ಬಿದ್ದು ಇಲ್ಲಿ ಬಿದ್ದು ಕಳೆದೇ ಹೋಯಿತು. ತೀವ್ರ ನಿರಾಶೆಯಲ್ಲಿ ಸಿಕ್ಕು ಹೀನ ಭ್ರಷ್ಟಚಾರಕ್ಕೆ ಇಳಿಯುವ ಅಪಾಯದಿಂದ ಈತನನ್ನು ಕೆಲವು ಮಿತ್ರರು ತಪ್ಪಿಸಿ ಇವನ ಲೇಖನ ವ್ಯವಸಾಯವನ್ನು ಪ್ರೋತ್ಸಾಹಿಸಿದರು. 1880ರಲ್ಲಿ ವರ್ಕರ್ಸ್ ಇನ್ ಡಾನ್ ಎಂಬ ಕಾದಂಬರಿಯನ್ನು ಬರೆದು, ಅಲ್ಲಿ ಇಲ್ಲಿ ದುಡಿದು ಉಳಿತಾಯ ಮಾಡಿದ ಹಣ ಹಾಕಿ ತಾನೇ ಪ್ರಕಟಿಸಿದ. ಪ್ರತಿಗಳು ಖರ್ಚಾಗುವುದೇ ಕಷ್ಟವಾಯಿತು. ಮತ್ತೆ ಮಿತ್ರರು ನೆರವಿಗೆ ಬಂದುದರಿಂದ ನಿರಾಶೆಯಿಂದ ಚೇತರಿಸಿಕೊಂಡು ದಿ ಅನ್‌ಕ್ಲ್ಯಾಸ್ಡ್ (1884) ಮತ್ತು ಇಸಾಬೆಲ್ ಕ್ಲ್ಯಾರೆಂಡನ್ (1886) ಎಂಬೆರಡು ಕಾದಂಬರಿಗಳನ್ನು ಬರೆದು ಪ್ರಕಾಶಕರ ಸಹಾಯದಿಂದ ಪ್ರಕಟಿಸಿದ. ಮತ್ತೊಂದು ಕಾದಂಬರಿ ಡಿಮೋಸ್(1886) ಮೊಟ್ಟಮೊದಲಿಗೆ ಯಶಸ್ವಿಯಾಗಿ ಹೆಸರು ತಂದಿತು. ದಿ ಅನ್‌ಕ್ಲ್ಯಾಸ್ಡ್ ಕಾದಂಬರಿ ವೇಶ್ಯಾ ಸಮಸ್ಯೆಯನ್ನು ಕುರಿತದ್ದು. ಡಿಮೋಸ್ ಕಾರ್ಮಿಕರ ಸಾಮಾಜಿಕ ಹೋರಾಟದ ಅಪ್ರಿಯ ಸತ್ಯ ಚಿತ್ರವನ್ನು ಕುರಿತದ್ದು. 1887 ರಲ್ಲಿ ಪ್ರಕಟವಾದ ಥೈರ್ಜಾ ಕಾದಂಬರಿ ಲಂಡನ್ನಿನ ಬಡಹುಡುಗಿಯೊಬ್ಬಳ ದುಡಿತದ ದಾರುಣ ಕತೆ. ಈ ಎರಡೂ ಕಾದಂಬರಿಗಳಲ್ಲಿ ಬಡತನದಿಂದಾಗುವ ಮಾನವನ ಅವನತಿಯನ್ನು ಕಾಣಬಹುದು. 1884 ರಿಂದ 1904ರ ವರೆಗೆ ಸರಾಸರಿ ವರ್ಷಕೊಂದು ಕಾದಂಬರಿಯಂತೆ ಹಲವು ಕಾದಂಬರಿಗಳನ್ನು ಈತ ಬರೆದ. ಒಟ್ಟು ಈತ ಬರೆದ ಕಾದಂಬರಿಗಳು 23. ದೀನದಲಿತರು ವಾಸಿಸುವ ಕೊಳಚೆ ಪ್ರದೇಶದ ವಾಸ್ತವಕತೆ ಹೇಳುವ ನೆದರ್ ವರ್ಲ್ಡ್ (1889) ಸಾಹಿತಿಯಾಗಿ ತಾನು ಅನುಭವಿಸಿದ ಬವಣೆಗಳನ್ನು ಹೇಳುತ್ತದೆ. ಬಡವರ ಬಗ್ಗೆ ಈತನಿಗೆ ಅನುಕಂಪವಿಲ್ಲ. ಇಂದಲ್ಲ ನಾಳೆ ಸಮಾಜ ಸುಧಾರಣೆ ಆದಿತೆಂಬ ಆಶಾವಾದವಿಲ್ಲ. ಈತನ ಎಲ್ಲ ಕತೆಗಳಲ್ಲೂ ವಾಸ್ತವ ಜೀವನದ ವ್ಯಥೆಯೇ ಹಬ್ಬಿದೆ. ಪ್ರೀತಿ–ಮರುಕ ಮುಂತಾದ ಯಾವ ಭಾವನೆಗಳೂ ಇಲ್ಲ; ನಗು ಇಲ್ಲ; ಆಸೆ ಭರವಸೆಗಳಿಲ್ಲ.

ಇವನ ಕಾದಂಬರಿಗಳಲ್ಲಿ 1888ರಲ್ಲಿ ಪ್ರಕಟವಾದ ಎ ಲೈಫ್ಸ್ ಮಾರ್ನಿಂಗ್ ಹೆಚ್ಚು ಪ್ರಸನ್ನವಾಗಿಯೂ ಲಘುವಾಗಿಯೂ ಇದೆ. ದಿ ನೆದರ್ ವರ್ಲ್ಡ್. ದಿ ಆಡ್ ವಿಮೆನ್ (1893) ಮತ್ತು ಇನ್ ದಿ ಈಯರ್ ಆಫ್ ಜ್ಯೂಬಿಲಿ (1894)– ಇವು ಇವನ ಶ್ರೇಷ್ಠ ಕಾದಂಬರಿಗಳೆನಿಸಿವೆ.

ಕಾದಂಬರಿಗಳಲ್ಲದೆ ದಿ ಪ್ರೈವೇಟ್ ಪೇಪರ್ಸ್ ಆಫ್ ಹೆನ್ರಿ ರೈಕ್ರ್ಯಾಫ್ಟ್ ಎಂಬ ಆತ್ಮೀಯ ಶೈಲಿಯ ಆಹ್ಲಾದಕರವಾದ ಪ್ರಬಂಧಗಳ ಸಂಕಲನವನ್ನೂ (1903) ಚಾರ್ಲ್ಸ್ ಡಿಕನ್ಸನ ಸಾಹಿತ್ಯವನ್ನು ಕುರಿತ ಅತ್ಯುತ್ತಮವಾದ ಒಂದು ವಿಮರ್ಶಾತ್ಮಕ ಸಮೀಕ್ಷಾಗ್ರಂಥವನ್ನೂ (1898) ಈತ ಬರೆದಿದ್ದಾನೆ.


ಗಿಸ್ಸಿಂಗ್ ಆದರ್ಶ ಮನೋಭಾವದಿಂದ ಆದ ಮದುವೆ ಸುಖದಾಂಪತ್ಯವನ್ನು ತರಲಿಲ್ಲ. ಇಂಗ್ಲೆಂಡಿಗೆ ಹಿಂತಿರುಗಿದ ಮೇಲೆ, ತನ್ನ ಸರ್ವಸ್ವವನ್ನೂ ತ್ಯಾಗಮಾಡಿ ಮದುವೆಯಾದ ಆ ವೇಶ್ಯಾ ತರುಣಿಯೊಡನೆ ಬಾಳನ್ನು ನಡೆಸಲು ಸಾಧ್ಯವಿಲ್ಲವೆಂಬ ಕಟು ನಿರ್ಧಾರಕ್ಕೆ ಬಂದು ವಿವಾಹ ವಿಚ್ಛೇದನ ಮಾಡಿಕೊಂಡ. ಕೆಲವು ಕಾಲಾನಂತರ ಆದ ಮತ್ತೊಂದು ಮದುವೆಯೂ ಶಾಪವಾಗಿ ಪರಿಣಮಿಸಿತು. ಬಾಳಿನ ಉದ್ದಕ್ಕೂ ಕಟುವಾದ ಅನುಭವಗಳನ್ನೆ ಕಂಡ ಈತ ಸುಖದ ಹೊಂಬಿಸಿಲನ್ನು ಕಂಡದ್ದು ಕಡೆಯ ಕಾಲದಲ್ಲಿ. ದಕ್ಷಿಣ ಫ್ರಾನ್ಸಿಗೆ ಹೋಗಿ ಅಲ್ಲಿ ನೆಲಸಿದ ಮೇಲೆ ಹೊಟ್ಟೆ ಬಟ್ಟೆಗಳ ತಾಪತ್ರಯವಿರಲಿಲ್ಲ. ತನ್ನ ಮನಸ್ಸನ್ನರಿತು ನಡೆದುಕೊಳ್ಳುವ ಸುಸಂಸ್ಕೃತ ಫ್ರೆಂಚ್ ಮಹಿಳೆಯೊಬ್ಬಳ ಸಖ್ಯದಲ್ಲಿ ದಿನಗಳು ಮಧುರವಾಗಿ ಕಳೆದವು. ಆ ದಿನಗಳಲ್ಲೇ ದಿ ಐಯೊನಿಯನ್ ಸೀಸ್ ಎಂಬ ಒಂದು ಸೊಗಸಾದ ಪ್ರವಾಸ ಕಥನವನ್ನು ಬರೆದ. 1904ರಲ್ಲಿ ವೆರಾನಿಲ್ಡಾ ಎಂಬ ರೋಮನ್ ಇತಿಹಾಸದ ವಸ್ತುವೊಂದನ್ನು ಕುರಿತ ಕಾದಂಬರಿಯನ್ನು ಬರೆಯಲು ಆರಂಭಿಸಿದ. ಆದರೆ ಅದು ಪೂರ್ಣವಾಗಲಿಲ್ಲ. ದಕ್ಷಿಣ ಫ್ರಾನ್ಸಿನ ಸೇಂಟ್ ಜೀನ್ ಡಿ ಲುಫ಼್ ಎಂಬಲ್ಲಿ 1903ರ ಡಿಸೆಂಬರ್ 28 ರಂದು ಕೊನೆಯುಸಿರೆಳೆದ. ಈತನ ಕಾದಂಬರಿಗಳು ಸ್ವರೂಪದಲ್ಲಿ ವಿಕ್ಟೋರಿಯನ್ ಸಾಹಿತ್ಯ ಮಾದರಿಯಂತೆ ಇದ್ದರೂ ವಸ್ತುವಿನಲ್ಲಾಗಲಿ ಮನೋಧರ್ಮದಲ್ಲಾಗಲೀ ಹಾಗಿಲ್ಲ. ಸಾಮಾನ್ಯವಾಗಿ ಈತನ ಎಲ್ಲ ಕಾದಂಬರಿಗಳಲ್ಲೂ ವಿಷಾದದ ಛಾಯೆಯ ತುಂಬಿದೆ. ತುಂಬ ಬುದ್ಧಿವಂತನೂ ಪ್ರತಿಭಾಶಾಲಿಯೂ ಆಗಿದ್ದ ಈತ ತನ್ನ ಜೀವನದಲ್ಲಿ ಕೊಂಚ ಉತ್ತಮವಾದ ಸನ್ನಿವೇಶದಲ್ಲಿ ಇದ್ದಿದ್ದರೆ ಪ್ರಥಮ ದರ್ಜೆಯ ಕಾದಂಬರಿಕಾರನೇ ಆಗುತ್ತಿದ್ದನೇನೋ. ಜೋಲಾ ಮುಂತಾದ ಫ್ರೆಂಚ್ ನಿಸರ್ಗವಾದಿಗಳ ಪ್ರಭಾವ ಈತನ ಮೇಲೆ ತುಂಬ ಬಿದ್ದಿರುವುದು ಈತನ ಕತೆಗಳ ವಾಸ್ತವ ಚಿತ್ರಣಗಳಲ್ಲೆಲ್ಲ ಕಂಡುಬರುತ್ತದೆ.

ಹೆನ್ರಿ ಜೇಮ್ಸ್, ಎಚ್. ಜಿ. ವೆಲ್ಸ್, ವರ್ಜೀನಿಯ ವುಲ್ಫ್ ಮೊದಲಾದ ಹೆಸರಾಂತ ಶ್ರೇಷ್ಠ ಕಾದಂಬರಿಕಾರರು ಈತ ಒಬ್ಬ ಉತ್ತಮ ಕಾದಂಬರಿಕಾರನೆಂದು ಪ್ರಶಂಸಿಸಿದ್ದಾರೆ. (ಬಿ.ಪಿ.)

**ಗಿಳಿ :** ಸಿಟಾಸಿಫಾರ್ಮೀಸ್ ಗಣದ ಸಿಟಾಸಿಡೀ ಕುಟುಂಬಕ್ಕೆ ಸೇರಿದ ಸಿಟಾಕ್ಯುಲ ಜಾತಿಯ ವಿವಿಧ ಪ್ರಭೇದಗಳಿಗಿರುವ ಸಾಮಾನ್ಯ ಹೆಸರು (ಪ್ಯಾರೆಟ್, ಪ್ಯಾರಕೀಟ್). ಭಾರತದಲ್ಲಿ ಈ ಜಾತಿಯ ಯೂಪ್ಯಾಟ್ರಿಯ, ಕ್ರಾಮೆರಿ ಮತ್ತು ಸಯಾನೊಸಿಫ್ಯಾಲ

ಎಂಬ ಮೂರು ಪ್ರಭೇದಗಳು ಕಂಡುಬರುತ್ತವೆ. ಅಲ್ಲದೆ ಗಿಳಿಗಳ ಕುಟುಂಬದಲ್ಲಿ ಗಿಳಿಗಳನ್ನೇ ಹೋಲುವ ಕಾಕಟೂ, ಕಾಕಟೀಲ್, ಲೋರಿಸ್, ಲೋರಿಕೀಟ್, ಮಕಾವ್, ಬಡ್ಜರಿಗಾರ್, ಕಿಯಾ, ಒಲವಿನ ಹಕ್ಕಿಗಳು (ಲವ್ ಬರ್ಡ್ಸ್) ಮುಂತಾದವೂ ಸೇರಿವೆಯಾದ್ದರಿಂದ ಒಟ್ಟಾಗಿ ಇವನ್ನೂ ಗಿಳಿಗಳೆಂದು ನಿರ್ದೇಶಿಸುವುದುಂಟು. ಮೈ ಬಣ್ಣದ ಬೆಡಗಿಗೂ ಮನುಷ್ಯನ ಧ್ವನಿಯನ್ನು ಅನುಕರಿಸುವ ಅಸಾಧಾರಣ ಶಕ್ತಿಗೂ ಹೆಸರಾಗಿ ರುವ ಇವನ್ನು ಬಹುಪ್ರಾಚೀನ ಕಾಲದಿಂದಲೂ ಮಾನವ ಸಾಕುತ್ತಿದ್ದಾನೆ. ಇವನ್ನು ಸಾಕುವುದು ಸುಲಭವೂ ಹೌದು. ಗಿಳಿಯನ್ನು ಗಿಣಿ, ಪಂಡಿತವಕ್ಕಿ, ಕನ್ನಡವಕ್ಕಿ ಎಂದೂ ಕೀರ, ಶುಕ ಎಂದೂ ಕವಿಗಳು ಕರೆದಿದ್ದಾರೆ. ಪುರುಳಿ ಎಂಬುದು ಹೆಣ್ಣು ಗಿಳಿಯ ಹೆಸರು. ಗಿಳಿ ಬಹುಹಿಂದಿನಿಂದಲೂ ಕವಿಗಳಿಗೆ, ರಸಿಕರಿಗೆ ಬಹು ಮೆಚ್ಚಿನ ಹಕ್ಕಿಯಾಗಿದೆ.


ಗಿಳಿ ಎಲ್ಲರಿಗೂ ಪರಿಚಿತವಾದ ಪಕ್ಷಿ. ದೊಡ್ಡ ತಲೆ, ಮೋಟುಕತ್ತು, ವಿಶಿಷ್ಟವಾದ ಕೊಕ್ಕೆಯಂತೆ ಬಾಗಿದ, ಬಲಯುತವಾದ ಹಾಗೂ ಕೆಂಪು ಬಣ್ಣದ ಕೊಕ್ಕು, ಹಸಿರು ಮೈಬಣ್ಣ, ಚೂಪು ಬಾಲ ಇವೆಲ್ಲ ಗಿಳಿಯ ಪ್ರಮುಖ ಲಕ್ಷಣಗಳು. ಗಿಳಿಯ ಇನ್ನೊಂದು ಮುಖ್ಯ ಲಕ್ಷಣ ಅದರ ಕಾಲು. ಕಾಲಿನ 4 ಬೆರಳುಗಳಲ್ಲಿ ಎರಡು ಹಿಂದಕ್ಕೂ ಎರಡು ಮುಂದಕ್ಕೂ ಬಾಗಿವೆ. ಇದರಿಂದ ಗಿಳಿ ಮರದ ರೆಂಬೆಗಳನ್ನು ಹಿಡಿದುಕೊಂಡು ಚಲಿಸಬಲ್ಲದು. ಅಲ್ಲದೆ ಆಹಾರವನ್ನು ಹಿಡಿದುಕೊಂಡು ಬಾಯಿಗೆ ಸಾಗಿಸುವ ಸೌಲಭ್ಯವೂ ಗಿಳಿಗೆ ಇದರಿಂದ ದೊರೆತಿದೆ. ಇದು ಬೇರಾವ ಹಕ್ಕಿಗಳಲ್ಲೂ ಇಲ್ಲ. ಇದೊಂದು ಜೀವಿಕಾಸದ ಪ್ರಕ್ರಿಯೆ. ಕೊಕ್ಕಿನ ಬುಡದಲ್ಲಿ ಸೆರೆ ಎಂಬ ಅಗಲವಾದ ಭಾಗವಿದೆ. ಇದರ ಮೂಲಕ ನಾಸಿಕ ರಂಧ್ರಗಳು ಹೊರತೆರೆಯುತ್ತವೆ. ಕೊಕ್ಕಿನ ಮೇಲ್ಭಾಗ ತಲೆಬುರುಡೆಗೆ ಬಂಧಿತವಾಗಿರುವುದರಿಂದ ಇದು ಅತ್ಯಂತ ಬಲಯುತವಾಗಿದೆ. ಅಲ್ಲದೆ ಗಿಳಿ ತನ್ನ ಕೊಕ್ಕನ್ನು ಮೂರನೆಯ ಕಾಲಿನಂತೆ ಬಳಸಿಕೊಂಡು ಮರವನ್ನು ಹತ್ತಬಲ್ಲದು. ಗಿಳಿಯ ನಾಲಗೆ ಉರುಳೆಯಾಕಾರದ್ದೂ, ತುಂಬ ಮೆತುವಾದದೂ ಆಗಿದೆ.



ಬಹುಪಾಲು ಗಿಳಿಗಳು ಮರದ ಪೊಟರೆಗಳಲ್ಲಿ ಗೂಡುಗಳನ್ನು ಕಟ್ಟುತ್ತವೆ. ಕೆಲವು ಮಾತ್ರ ನೆಲದ ಬಿಲಗಳಲ್ಲಿ ಗೂಡುಮಾಡಿ ಕೊಳ್ಳುತ್ತವೆ. ಹೆಣ್ಣು 1 ರಿಂದ 12 ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆಗಳ ಬಣ್ಣ ಬಿಳಿ. ಕಾವು ಕೂರುವ ಕೆಲಸದಲ್ಲಿ ಸಾಮಾನ್ಯವಾಗಿ ಗಂಡು ಹೆಣ್ಣುಗಳೆರಡೂ ಪಾಲುಗೊಳ್ಳುತ್ತವೆ. ಕಾವು ಕೊಡುವ ಅವಧಿ ಚಿಕ್ಕ ಜಾತಿಗಳಲ್ಲಿ 16–19 ದಿವಸಗಳವರೆಗೂ ದೊಡ್ಡ ಜಾತಿಗಳಲ್ಲಿ ಸುಮಾರು 30 ದಿವಸಗಳವರೆಗೂ ಇರುತ್ತದೆ. ಆಗ ತಾನೆ ಹುಟ್ಟಿದ ಮರಿಗಳಿಗೆ ಪುಕ್ಕದ ಹೊದಿಕೆಯಿರುವುದಿಲ್ಲ; ಕಣ್ಣುಗಳೂ ಮುಚ್ಚಿರುತ್ತವೆ. ಸುಮಾರು 2–3 ತಿಂಗಳ ವರೆಗೆ ಮರಿಗಳನ್ನು ತಂದೆ ಮತ್ತು ತಾಯಿ ಗಿಳಿಗಳು ಗುಟುಕು ಕೊಟ್ಟು ಪೋಷಿಸುತ್ತವೆ. ಗಿಳಿಗಳು ಸುಮಾರು 50 ವರ್ಷ ಬದುಕಬಲ್ಲವು (ಕೆಲವು ದೊಡ್ಡ ಜಾತಿ ಗಿಳಿಗಳು 80 ಕ್ಕೂ ಹೆಚ್ಚು ವರ್ಷ ಬದುಕಿರುವ ಅನಧಿಕೃತ ವರದಿ ಉಂಟು.) ಆದರೆ ಚಿಕ್ಕ, ಪಂಜರದ ಗಿಳಿಗಳಾದ ಪ್ಯಾರಕೀಟ್ ಮತ್ತು ಬಡ್ಜರಿಗಾರ್‌ಗಳು 5 ವರ್ಷ ಮಾತ್ರ ಬದುಕುತ್ತವೆ. ಬಡ್ಜರಿಗಾರ್ ಆಸ್ಟ್ರೇಲಿಯಾದ ಹಕ್ಕಿಯಾಗಿದ್ದು ಪಂಜರದ ಹಕ್ಕಿಯಾಗಿ ಶೋಷಣೆಗೊಳಗಾಗಿದೆ. ಹೊರಬಿಟ್ಟರೆ ಇವು ಪರಿಸರದಲ್ಲಿ ಬದುಕಲಾರವು.

ಗಿಳಿಗಳು ಸಮಭಾಜಕವೃತ್ತಪ್ರದೇಶಕ್ಕೆ ಸೀಮಿತವಾಗಿವೆ. ಅದರಲ್ಲೂ ಆಸ್ಟ್ರೇಲಿಯ ಖಂಡದಲ್ಲಿ ವಿವಿಧ ಜಾತಿಗಳು ಅಧಿಕಸಂಖ್ಯೆಯಲ್ಲಿ ವಾಸಿಸುತ್ತವೆ. ಕೆಲವು ಪ್ರಭೇದದ ಗಿಳಿಗಳು ಮಣ್ಣಿನಲ್ಲಿರುವ ಖನಿಜಾಂಶಗಳನ್ನು ಬಳಸಿಕೊಳ್ಳುವ ಸಲುವಾಗಿ ಆಯ್ದ ಸ್ಥಳದ ಮಣ್ಣನ್ನು ತಿನ್ನುತ್ತವೆ. ಇದನ್ನು ಆನೆಗಳು ಉಪ್ಪುನೆಕ್ಕುವುದಕ್ಕೆ ಹೋಲಿಸಬಹುದು **(ನೋಡಿ–ಆನೆ).** (ಕೆ.ಎಂ.ವಿ)

**ಗಿಳಿಮೀನು :** ಪರ್ಸಿಫಾರ್ಮೀಸ್ ಗಣದ ಸ್ಕಾರಿಡೀ ಕುಟುಂಬಕ್ಕೆ ಸೇರಿದ ಸ್ಕಾರಸ್ ಜಾತಿಯ ಮೀನಗಳಿಗೆ ಇರುವ ಸಾಮಾನ್ಯ ಹೆಸರು (ಪ್ಯಾರಟ್ ಫಿಶ್). ಅಟ್ಲಾಂಟಿಕ್, ಫೆಸಿಫಿಕ್, ಹಿಂದೂ ಮಹಾಸಾಗರ, ಮೆಡಿಟರೇನಿಯನ್ ಸಮುದ್ರಗಳಲ್ಲೆಲ್ಲ ಇವೆ. ಇವುಗಳ ದೇಹ ವರ್ಣ ರಂಜಿತವಾಗಿರುವುದರಿಂದ ಹಾಗೂ ಮೂತಿಯು ಗಿಳಿಯ ಕೊಕ್ಕಿನಂತೆ ಇರುವುದರಿಂದ ಇವಕ್ಕೆ ಗಿಳಿಮೀನುಗಳೆಂಬ ಹೆಸರು ಬಂದಿದೆ.



ಈ ಮೀನುಗಳ ದೇಹದ ಉದ್ದ ಸುಮಾರು 30.5–71ಸೆಂಮೀ ಕೆಲವು ಪ್ರಭೇದಗಳು 2 ಮೀ ಗಳವರೆಗೆ ಬೆಳೆಯುವುದುಂಟು. ಕೆಲವು ಗಂಡು ಮೀನುಗಳಲ್ಲಿ ವಯಸ್ಸು ಮತ್ತು ಗಾತ್ರ ಹೆಚ್ಚಿದಂತೆ ಅವುಗಳ ತಲೆಯ ಮೇಲೆ ಎಲುಬಿನ ಒಂದು ಗುಬುಟು ಬೆಳೆಯುತ್ತದೆ. ಗಿಳಿಮೀನುಗಳ ದವಡೆಗಳಲ್ಲಿ ಒಂದೊಂದು ಜೊತೆ ಬಹಳ ಗಡುಸಾದ ಹಲ್ಲುಗಳಿವೆ. ಬಾಯಿ ಗಿಳಿಯ ಕೊಕ್ಕಿನಂತಿರುವುದಕ್ಕೆ ಅದೇ ಕಾರಣ. ಗಿಳಿಮೀನಿನ ಗಂಟಲಿನಲ್ಲಿರುವ ಹಲ್ಲುಗಳೂ ಬಹಳ ಗಟ್ಟಿಯಾಗಿವೆ. ಇವು ಲಗೂನ್ ಗಳಲ್ಲಿ ಹವಳ ದಿಬ್ಬಗಳಲ್ಲಿ ಇತರೆ ರಾಸ್, ಮತ್ತು ಚಿಟ್ಟೆ ಮೀನುಗಳ ಜೊತೆ ಇರುತ್ತವೆ. ವಯಸ್ಕ ಮೀನುಗಳು ಒಂಟಿಯಾಗಿ ಅಥವಾ ಸಣ್ಣ ಗುಂಪಿನಲ್ಲಿ ಕಂಡುಬರುತ್ತವೆ. ಬಂಡೆಗಳ ಮೇಲಿನ ಹವಳ ದಿಬ್ಬದ ಮೇಲೆ ಬೆಳೆಯುವ ವಿವಿಧ ರೀತಿಯ ಪಾಚಿ (ಆಲ್ಗೀ) ಗಳನ್ನು ತಮ್ಮ ಗಟ್ಟಿಯಾದ ಹಲ್ಲುಗಳಿಂದ ಕೆರೆದು ತಿನ್ನುತ್ತವೆ. ರಾಸ್ ಮೀನುಗಳಂತೆಯೇ ಇವು ರಾತ್ರಿ ವೇಳೆ ಸಮುದ್ರದ ತಳದಲ್ಲಿ ನಿದ್ರಿಸುತ್ತವೆ. ಹೀಗೆ ವಿಶ್ರಮಿಸುವಾಗ ತಮ್ಮ ಸುತ್ತ ಲೋಳೆವಸ್ತುವಿನ ಹೊದಿಕೆಯನ್ನು ನಿರ್ಮಿಸಿಕೊಳ್ಳುವುದುಂಟು. ಗಿಳಿಮೀನುಗಳಲ್ಲಿ ಮುಖ್ಯವಾದವು ಮೆಡಿಟರೇನಿಯನ್ ಸಮುದ್ರದ ಸ್ಕಾರಸ್ ಕ್ರಟೆನ್ಸಿಸ್, ಅಟ್ಲಾಂಟಿಕ್ ಸಾಗರದ ಸ್ಕಾರಸ್ ಟೀನಿಯಾಪ್ಟರಸ್ ಮತ್ತು ಹಿಂದೂ ಮತ್ತು ಫೆಸಿಫಿಕ್ ಸಾಗರಗಳಲ್ಲಿ ಕಂಡು ಬರುವ ಕ್ಲೋರಸ್ ಪ್ರಭೇದ. (ಆರ್.ಎಲ್.)

**ಗೀಗೀ ಪದ :** ಉತ್ತರ ಕರ್ನಾಟಕದಲ್ಲಿ ಪ್ರಚಲಿತವಾಗಿರುವ ಗೀಯ ಗೀಯ ಗೀಗೀ ಹರೇ ಗೀಯ ಗಾ ಎಂಬ ಪಲ್ಲವಿಯೊಂದಿಗೆ ಹಾಡುವ ಒಂದು ಜನಪದ ಗೀತಸಂಪ್ರದಾಯ. ಈ ಗೀಗೀ ಪದದ ಜನನವಾದುದು 1875ರಲ್ಲಿ. ಮೊದಲಿನಿಂದಲೂ ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಚಿಂಚಲಿ ಗ್ರಾಮದ ಮಾಯಾಮ್ಮನ ಜಾತ್ರೆಯಲ್ಲಿ ಕನ್ನಡ ಲಾವಣಿಕಾರರೂ ಮರಾಠಿ ಲಾವಣಿಕಾರರೂ ಕೂಡಿ ವಾದದ ಲಾವಣಿಗಳನ್ನು ಹಾಡುತ್ತಿದ್ದರು. 1875ರ ಮಾಯಮ್ಮನ ಜಾತ್ರೆಯಲ್ಲಿ ಮರಾಠಿ ಲಾವಣಿಕಾರರು ಡಪ್ಪು ಉಪಯೋಗಿಸಿ ಲಾವಣಿ ಹಾಡಿದರು. ಅದೇ ದಿನ ರಾತ್ರಿ ಕನ್ನಡಿಗರು ಡಪ್ಪು, ತುಂತುಣಿ, ತಾಳ ಬಾರಿಸಿ ಮೇಳ ಮಾಡಿದರು. ತುಂತುಣಿ, ತಾಳ ಬಾರಿಸುವವರು ಗೀಗೀ ದನಿ ಎಳೆದರು. ಈ ರಚನೆ ಮಾಡಿದವರಲ್ಲಿ ತೇರದಾಳ ಅಣ್ಣು ಯಂಕಾರಾಮ ಮುಖ್ಯನಾದವ. ಇವನೇ ಗೀಗೀ ಶ್ರುತಿ ಹಾಕಿ, ಶ್ರುತಿದೇವ (ಗಣಪತಿ) ಶ್ರುತಿದೇವಿ (ಸರಸ್ವತಿ) ಎಂದು ಹಾಡಿ ಗೀಗೀ ಪದಗಳ ಜನಕನೆಂದು ಕರೆಯಿಸಿಕೊಂಡ. ಅನಂತರ ಚಿಂಚಲಿ ಜಾತ್ರೆಯಲ್ಲಿ ಹಾಡುಗಳನ್ನು ಕೇಳಲು ಜನ ಕೂಡುವ ಸ್ಥಳ (ನಾಕಾಕಟ್ಟೆ) ಗೀಗೀಕಟ್ಟೆ ಎಂದು ಹೆಸರಾಯಿತು. ಗೀಗೀ ಮೇಳದವರಿಗೆ ಚಿಂಚಲಿ ಮೂಲಸ್ಥಳವಾಯಿತು. ಕನ್ನಡ ಲಾವಣಿಯೇ ಗೀಗೀ ಪದವಾಗಿ ಮಾರ್ಪಟ್ಟಿತು. ಅನಂತರ ಕನ್ನಡ ಗೀಗೀ ಪದ ಮರಾಠಿ ಜೀಜೀ ಪದಗಳ ಹುಟ್ಟಿಗೆ ಕಾರಣವಾಯಿತು.

ಗೀಗೀ ಪದಗಳಲ್ಲಿ ಮುಖ್ಯ ಗೀಗೀ ಹಾಡುಗಾರ 'ಡಪ್ಪಿಗೆ' ಗತ್ತಿನ ಕಡಿತ (ಪೆಟ್ಟು) ಹಾಕಿ ಪದ ಹಾಡುತ್ತಾನೆ. ಅವನ ಹಿಂದೆ ತುಂತುಣಿ ಹಾಗೂ ತಾಳ ಹಿಡಿದ ಇಬ್ಬರು ತಾಳ ಮತ್ತು ಲಯಗಳನ್ನೊಳಗೊಂಡ ಗೀಗೀ ದನಿ ಬೀರುತ್ತಾರೆ. ಜನಾಕರ್ಷಣೆಗಾಗಿ ರಮ್ಯವಾಗಿ ಡಪ್ಪು, ತುಂತುಣಿ ಮತ್ತು ತಾಳನುಡಿಸುತ್ತಾರೆ. ಡಪ್ಪು ವರ್ತುಳಾಕಾರದ 5–7.5ಸೆಂಮೀ. ದಪ್ಪವಾದ, 1.20–1.5ಮೀ ಪರಿಘವಿರುವ ಗಾಲಿಗೆ ಮತ್ತು ಅದಕ್ಕಿಂತ ಸಣ್ಣದಾದ ಕಬ್ಬಿಣದ ವರ್ತುಲಕ್ಕೆ ಸೇರಿದಂತೆ ಆಡಿನ ಚರ್ಮದಿಂದ ಹಲಗೆ ತಯಾರಿಸಿ ಎಡಗೈಯಲ್ಲಿ ಹಿಡಿದು ಬಲಗೈಯಿಂದ ಹದರು ಹಚ್ಚಿ ಬೆರಳು ಆಡಿಸಿ ಬಡಿದು ನಾದ ಹೊರಡಿಸುವ ವಾದ್ಯ. ತುಂತುಣಿ ಮರದ ತುಂಡಿನ 2.5ಸೆಂ.ಮೀ ಸಿಲಿಂಡರಿನಾಕಾರದ್ದಾಗಿದ್ದು, ಹಿಂಬದಿಗೆ ಮೇಕೆಯ ಆಡಿನ ಚರ್ಮವನ್ನು ಬಿಗಿದು ಒಂದು 90ಸೆಂಮೀ. ಬಿದರಿನ ತುಂಡನ್ನು ಸಿಲಿಂಡರಿಗೆ ಜೋಡಿಸಿ, ಅದರ ತುದಿಯಲ್ಲಿ ಒಂದು ಬೆಣೆಯನ್ನು ಕೂರಿಸಿ ತಂತಿಯನ್ನು ಬೆಣೆಗೂ ಹಿಂಬದಿಯ ಚರ್ಮದ ಮಧ್ಯಕ್ಕೂ ಜೋಡಿಸಿ ತಯಾರಿಸಿದ, ಬಲಗೈಯಲ್ಲಿ ಹಿಡಿದ ಕಡ್ಡಿಯಿಂದ ತಂತಿಯನ್ನು ಮಿಡಿದು ನಾದ ಹೊಮ್ಮಿಸುವ ವಾದ್ಯ. ಗೀಗೀ ಮೇಳದವರಿಗೆ ಚಾಲು (ಆರಂಭ) ನುಡಿತ, ಏರು ನುಡಿತಗಳೂ ಮುಖ್ಯ. ಇಳುವಿನಲ್ಲಿ ಸೌಮ್ಯ ಸಂಗೀತವಿರುತ್ತದೆ. ಒಮ್ಮೇಳವಾಗಿ (ಸಂಗಡಿಗರು) ಹಾಡುವುದು, ಬಾರಿಸುವುದು ಸಾಗುತ್ತದೆ.

ಗೀಗೀ ಮೇಳದಲ್ಲಿ ಮೊದಲಿಗೆ ಹರದೇಶಿ (ತುರಾಯಿ) ಗೀಗೀ ಮೇಳ, ನಾಗೇಶಿ (ಕಲ್ಗಿ) ಗೀಗೀ ಮೇಳ ಎಂದು ಗಂಡು–ಹೆಣ್ಣಿನ ವಾದದ ಮೇಳಗಳು ಪ್ರಾರಂಭವಾದವು. ಗಂಡಸರ ಪಂಗಡ ಪುರುಷನನ್ನು (ಶಿವ) ಹೆಚ್ಚುಮಾಡಿ ಹಾಡುವುದು, ಹೆಂಗಸರ ಪಂಗಡ ಸ್ತ್ರೀಯನ್ನು (ಶಕ್ತಿ) ಹೆಚ್ಚುಮಾಡಿ ಹಾಡುವುದು ಸಂಪ್ರದಾಯವಾಯಿತು. 1925ರಿಂದ ಈಚೆಗೆ ಗೀಗೀ ಮೇಳದವರು ಲೌಕಿಕ ಹಾಡುಗಾರರಾಗಿ ಮಾರ್ಪಟ್ಟರು. ರಾಷ್ಟ್ರೀಯ ಗೀಗೀಮೇಳಗಳು ಹುಟ್ಟಿಕೊಂಡವು. ಭಾರತದೇಶ, ದೇಶದ ಜನ, ದೇಶದ ಸ್ಥಿತಿ, ಸಂಸ್ಕೃತಿ, ರೀತಿ, ನೀತಿ ಇತ್ಯಾದಿ ಕುರಿತು ಗೀಗೀ ಪದಗಳು ಪ್ರಾರಂಭವಾದವು. ಇಂಥ ಗೀಗೀಮೇಳಗಳಲ್ಲಿ ಹುಲಕುಂದ ಗೀಗೀ ಮೇಳ ಮುಖ್ಯವಾದ್ದು. ಹುಲಕುಂದದ ಭೀಮಸಿಂಗ ಕವಿ, ಶಿವಲಿಂಗ, ಪಾಂಡುರಂಗ, ಚನಬಸು, ಕಂದಭೀಮಸಿಂಗ ಇವರು ಗೀಗೀ ಗಂಗೋತ್ರಿಯನ್ನೇ ಹರಿಸಿದರು. ತಿಗಡೊಳ್ಳಿ ಗೀಗೀಮೇಳ, ಹೊಸೂರು ಗೀಗೀ ಮೇಳ, ಹೊಸಕೋಟೆ ತಮ್ಮಣ್ಣನ ಗೀಗೀಮೇಳ, ಗೋಕಾಂವಿ ಗೀಗೀ ಮೇಳ, ಬಿದರೆ ಗೀಗೀ ಮೇಳ, ರಾಯಚೂರು ಗೀಗೀ ಮೇಳ, ಬೆಳಗಾಂವಿ ಗೀಗೀ ಮೇಳ, ಬಿಜಾಪುರ ಗೀಗೀಮೇಳ, ಕಲಬುರ್ಗಿ ಗೀಗೀಮೇಳ, ಚಿತ್ರದುರ್ಗ ಗೀಗೀಮೇಳ, ಬೆಂಗಳೂರು ಗೀಗೀಮೇಳ, ಇತ್ಯಾದಿ ಮೇಳಗಳು ಹುಟ್ಟಿಕೊಂಡು ರಾಷ್ಟ್ರದ ಸ್ವಾತಂತ್ರ್ಯಹೋರಾಟ ಕಾಲದಲ್ಲಿ ಜನಜಾಗೃತಿಯನ್ನುಂಟುಮಾಡಿದವು. ಜ್ಞಾನಪ್ರಸಾರಕಾರ್ಯ ಕೈಗೊಂಡವು. ಇಂದು ಕರ್ನಾಟಕದಲ್ಲಿ ಎರಡು ನೂರಕ್ಕೂ ಹೆಚ್ಚು ಗೀಗೀ ಮೇಳಗಳಿವೆಯೆಂದು ತಿಳಿದುಬರುತ್ತದೆ.

ಗೀಗೀ ಪದದ ಹಾಡುಗಾರರು ಸ್ತೋತ್ರ ಪದಗಳು, ಪೌರಾಣಿಕ ಪದಗಳು, ಐತಿಹಾಸಿಕ ಪದಗಳು, ಚಾರಿತ್ರಿಕ ಪದಗಳು, ಆರ್ಥಿಕ ಪದಗಳು, ಸಾಮಾಜಿಕ ಪದಗಳು, ನೈತಿಕ ಪದಗಳು, ಹಾಸ್ಯದ ಪದಗಳು, ಒಗಟಿನ ಪದಗಳು ಇತ್ಯಾದಿಗಳನ್ನು ಹಾಡುತ್ತಾರೆ. ಪದಗಳ ಮುಕ್ತಾಯದಲ್ಲಿ ಹಾಡು ರಚಿಸಿದ ಕವಿಯ ಊರು ಹೆಸರುಗಳಿರುತ್ತವೆ. ಗೀಗೀ ಪದಗಳು ಜನಮನವನ್ನು ತಿದ್ದುವ, ಜ್ಞಾನ ಹೆಚ್ಚಿಸುವ, ನೀತಿ ತಿಳಿಸುವ, ವೈಚಾರಿಕ ಜನಪದ ಪರಂಪರೆಯ ಗೀತೆಗಳಾಗಿವೆ. ಈ ಪದಗಳಲ್ಲಿ ಜಾನಪದ ಶಬ್ದಸಂಪತ್ತು ಬಹುವಾಗಿವೆ. ಉತ್ತರ ಕರ್ನಾಟಕದಲ್ಲಿ ಗೀಗೀ ಮೇಳ ಕಟ್ಟಿಕೊಂಡು ಗೀಗೀ ಪದ ಹಾಡುವವರು ಹೆಚ್ಚಾಗಿ ಹರಿಜನ ಮಹಿಳೆಯರು. ಸ್ತ್ರೀಪಂಗಡದಲ್ಲಿ ಒಬ್ಬರು ಮುಮ್ಮೇಳ ಹಾಡುಗಾರ್ತಿಯೂ ಹಿಮ್ಮೇಳಕ್ಕೆ ಈರ್ವರು ಪುರುಷರೂ ಇರುತ್ತಾರೆ. ಈ ಕಲೆ ಅವರ ಹೆಮ್ಮೆಯ ಪರಂಪರೆಯಾಗಿದೆ. ಹಾಡುಗಾರರು ತಮಗೆ ಸುಂದರವಾಗಿ ಕಾಣುವ ಇಷ್ಟವಾದ ಉಡುಗೆ ತೊಡುಗೆಗಳನ್ನು ಧರಿಸುತ್ತಾರೆ.

ಗೀಗೀ ಪದಗಳನ್ನು ಚೌಡಿಕೆಯವರೂ ಗೊಂದಲಿಗರೂ ಸಿದ್ಧಕ ಸಿದ್ಧಿಗಳೂ (ಜಾತಿಗಾರರು) ಕರ್ಬಲ್ ಹಾಡುಗಾರರೂ ಹಾಡತೊಡಗಿದ್ದಾರೆ.

ಹುಲಕುಂದ ಭೀಮಕವಿಯ ಸರ್ವೋದಯ ಗ್ರಾಮೀಣ ಜನಪದ ಗೀತೆಗಳು (1962), ಹುಬ್ಬಳ್ಳಿಯ ಕರಡಿ ಪ್ರಕಾಶಕರ 3–4 ಗೀಗೀ ಪದಗಳ ಸಣ್ಣ ಪುಸ್ತಕಗಳು ಈ ಸಾಹಿತ್ಯವನ್ನು ಕುರಿತು ಪ್ರಕಟಗೊಂಡಿವೆ. (ಎಸ್.ಎಸ್.ಎಸ್.)

**ಗೀಜ಼ :** ಉತ್ತರ ಈಜಿಪ್ಟಿನಲ್ಲಿ ನೈಲ್ ನದಿಯ ಪಶ್ಚಿಮ ದಂಡೆಯ ಮೇಲೆ, ಕೈರೋ ನಗರಕ್ಕೆ ಇದಿರಾಗಿದ್ದ ಒಂದು ನಗರ. ಗೀಜ಼ ಆಡಳಿತ ವಿಭಾಗದ ಮುಖ್ಯ ಪಟ್ಟಣ. ಕೈರೋದ ಉಪನಗರದಂತಿದೆ. ಕೈರೋಗೂ ಗೀಜ಼ಕ್ಕೂ ನೈಲ್ ನದೀ ದ್ವೀಪಗಳಾದ ರೋಡ ಮತ್ತು ಗೆಜೀರಗಳ ಮೂಲಕ ಸೇತುವೆಗಳಿವೆ. ಇದು ಕೈರೋ ವಿಶ್ವವಿದ್ಯಾಲಯದ ಕೇಂದ್ರ. ಇಲ್ಲಿ ಪ್ರಾಣಿ ಮತ್ತು ಸಸ್ಯಶಾಸ್ತ್ರಕ ಉದ್ಯಾನಗಳುಂಟು. ಇದು ಈಜಿಪ್ಟಿನ ಚಲನಚಿತ್ರ ಉದ್ಯಮದ ಕೇಂದ್ರ. ಇಲ್ಲಿ ಹತ್ತಿ, ಜವಳಿ, ಪಾದರಕ್ಷೆ, ಬೀರ್, ಇಟ್ಟಿಗೆ ಕೈಗಾರಿಕೆಗಳಿವೆ. ಪ್ರಸಿದ್ಧ ಪಿರಮಿಡ್‌ಗಳು ಇರುವುದು ಇಲ್ಲಿಂದ ಪಶ್ಚಿಮಕ್ಕೆ, 8 ಕಿಮೀ ದೂರದಲ್ಲಿ.

ಹಳೆಯ ಈಜಿಪ್ಟ್ ರಾಜ್ಯವನ್ನು ಆಳಿದ ಮೂರನೆಯ ವಂಶದ ರಾಜರ (ಪ್ರ.ಶ.ಪೂ. 2649–2620) ಕಾಲದಿಂದ ಕಲ್ಲಿನ ಪಿರಮಿಡ್ಡುಗಳನ್ನು ಕಟ್ಟುವ ಪದ್ಧತಿ ಆರಂಭವಾಯಿತು. ಈ ವಾಸ್ತುಶಿಲ್ಪ ಕುಶಲತೆ ಬಹುಬೇಗ ನಾಲ್ಕನೆಯ ವಂಶದ ರಾಜರ ಕಾಲದಲ್ಲಿ (ಪ್ರ.ಶ.ಪೂ. 2600–2500) ಅತ್ಯಂತ ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿತು. ಇವರು ಗೀಜ಼ದಲ್ಲಿ ಕಟ್ಟಿಸಿದ 2 ಪಿರಮಿಡ್‌ಗಳಲ್ಲಿ ಈ ವಾಸ್ತುಶಿಲ್ಪದ ಶ್ರೇಷ್ಠಮಟ್ಟವನ್ನು ನೋಡಬಹುದು. ಗೀಜ಼ದಲ್ಲಿ ಪಿರಮಿಡ್‌ಗಳಲ್ಲದೆ, ಒಂದು ಸಿಂಹದ ದೇಹ ಮತ್ತು ಮನುಷ್ಯನ ತಲೆಯುಳ್ಳ ಸ್ಫಿಂಕ್ಸ್, ಭೂಮಿಯಲ್ಲಿ ಸುಮಾರು 25 ಮೀ ಕೆಳಗೆ ಕೊರೆದು ಮಾಡಿದ ಸುರಂಗಮಾರ್ಗವುಳ್ಳ ಅನೇಕ ಕೋಣೆ ಗೋರಿಗಳು ಇವೆ.

ಗೀಜ಼ದಲ್ಲಿ 10 ಪಿರಮಿಡುಗಳಿವೆ. ಇವುಗಳಲ್ಲಿ 3 ದೊಡ್ಡ ಪಿರಮಿಡುಗಳು. ಇವುಗಳನ್ನು ಈಜಿಪ್ಟಿನ ನಾಲ್ಕನೆಯ ರಾಜವಂಶದ (ಪ್ರ.ಶ.ಪೂ 2720–2560) ಖುಫು (ಚಿಯೋಸ್), ಖಾಫ್ರೆ (ಖೆಫ್ರೆನ್) ಮತ್ತು ಮೆಂಕುರೆ (ಮೈಸಿರಿನಸ್) ರಾಜರುಗಳು ಕಟ್ಟಿಸಿದರು. ಇವುಗಳು ಪ್ರ.ಶ.ಪೂ 2600 ರಿಂದ 2500ರಲ್ಲಿ ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿತು. ಇವರು ಗೀಜ಼ದಲ್ಲಿ ನಿರ್ಮಿಸಿದ 2 ಪಿರಮಿಡುಗಳಲ್ಲಿ ಈ ವಾಸ್ತು ಶಿಲ್ಪದ ಶ್ರೇಷ್ಠಮಟ್ಟವನ್ನು ಕಾಣಬಹುದು. ಹಿರೋಡಾಟಸ್ ಇವನ್ನು ಪ್ರಪಂಚದ ಏಳು ಪ್ರಾಚೀನ ಅದ್ಭುತಗಳಲ್ಲಿ ಸೇರಿಸಿದ್ದಾನೆ.

ಇವುಗಳಲ್ಲಿ ಅತ್ಯಂತ ದೊಡ್ಡದೂ ಪುರಾತನವೂ ಆದ ಖುಫುವಿನ ಪಿರಮಿಡು ಸು. 232 ಮೀ ಉದ್ದಗಲದ 5 ಹೆಕ್ಟೇರು ವಿಸ್ತೀರ್ಣದ ಮತ್ತು ಸು. 147 ಮೀ ಎತ್ತರದ ಬೃಹತ್ ನಿರ್ಮಾಣ. ಇದರ ಪಾರ್ಶ್ವಗಳು $51^0$–52’ ಕೋನದಲ್ಲಿದೆ ಮತ್ತು ಪ್ರತಿ ಮೂಲೆಯೂ ದಿಕ್ಕುಗಳಿಗೆ ಸರಿಯಾಗಿವೆ. ಪಿರಮಿಡಿನ ಒಳಭಾಗವನ್ನು ಹಳದಿ ಬಣ್ಣದ ಸುಣ್ಣಕಲ್ಲಿನ ದಿಮ್ಮಿಗಳಿಂದ ನಿರ್ಮಿಸಲಾಗಿದೆ. ಒಳಗಿನ ಮೊಗಸಾಲೆಗಳಿಗೆ ಜಬಾಲ್ ಟುರಾ ಪ್ರಾಂತ್ಯದ ಸುಣ್ಣಕಲ್ಲನ್ನು ಉಪಯೋಗಿಸಲಾಗಿದೆ. ಶವಕೋಣೆಗೆ ಆಸ್ವಾನ್ ಪ್ರಾಂತ್ಯದ



ಗೀಜ಼ಪಿರಮಿಡ್ಡುಗಳು

ಗ್ರಾನೈಟ್ ಕಲ್ಲಿನ ದೊಡ್ಡ ದಿಮ್ಮಿಗಳನ್ನು ಬಳಸಲಾಗಿದೆ. ಇದರ ನಿರ್ಮಾಣಕ್ಕೆ 2.3 ಮೆಟ್ರಿಕ್ ಟನ್ ತೂಕದ 23 ಲಕ್ಷ ಕಲ್ಲುಗಳನ್ನು ಬಳಸಲಾಗಿದೆ. ಅಷ್ಟು ಭಾರದ ಕಲ್ಲು ದಿಮ್ಮಿಗಳನ್ನು ಎತ್ತಲು (ಕೆಲವು ದಿಮ್ಮಿಗಳು 16.25 ಮೆಟ್ರಿಕ್ ಟನ್ ತೂಕದ್ದಾಗಿವೆ) ಇಳಿಜಾರಾದ ರಸ್ತೆಗಳನ್ನು ನಿರ್ಮಿಸಿದ್ದರೆಂದು ಊಹಿಸಲಾಗಿದೆ. ಅಷ್ಟು ದೊಡ್ಡ ದಿಮ್ಮಿಗಳನ್ನು ಕೂಡಿಸಿರುವ ಸಂಧಿಗಳು ಕಣ್ಣಿಗೆ ಕಾಣಿಸದಷ್ಟು ಸೂಕ್ಷ್ಮವಾಗಿವೆ. ಇದರ ಪಾರ್ಶ್ವಗಳೂ ಸು. 233 ಮೀ ಉದ್ದವಿದ್ದರೂ ವಕ್ರತೆ 1/2 ಡಿಗ್ರಿಗಳಷ್ಟೂ ಇಲ್ಲ. ಇದರ ನಾಲ್ಕು ಕೋನಗಳು ನಿರ್ದಿಷ್ಟ $90^0$ಗೆ ಸಮವಾಗಿವೆ. ಪಿರಮಿಡಿನೊಳಕ್ಕೆ ಹೋಗುವ ಮಾರ್ಗ ಇದರ ಉತ್ತರದಿಕ್ಕಿನಲ್ಲಿ ಭೂ ಮಟ್ಟದಿಂದ ಸು. 18ಮೀ ಎತ್ತರದಲ್ಲಿದೆ. ಕಟ್ಟಡದೊಳಗಿನ ಇಳಿಜಾರಾದ ಮಾರ್ಗ ಒಳಕೋಣೆಗೆ ಸಾಗುತ್ತದೆ. ಅಲ್ಲಿಂದ ಮುಂದೆ ಭೂ ಮಟ್ಟದಿಂದ ತಳಕ್ಕೆ ಒಂದು ಸುರಂಗ ಮಾರ್ಗ ಹೋಗಿ ಒಳಗಿನ ಶವಕೋಣೆಯನ್ನು ತಲುಪುತ್ತದೆ. ಮತ್ತೊಂದು ಮಾರ್ಗ ಹೆಚ್ಚು ಕಡಿಮೆ ಸಮಾನಾಂತರವಾಗಿ ಮುಂದೆ ಸಾಗಿ ರಾಣಿಯ ಕೋಣೆಯನ್ನು ತಲುಪುತ್ತದೆ. ಒಳಕೋಣೆಯಿಂದ ಮತ್ತೊಂದು ಮಾರ್ಗ ಮೇಲ್ಮುಖವಾಗಿ ಸಾಗಿ ಸು. 8.5 ಮೀಗಳೆತ್ತರ ಮತ್ತು ಸು. 47 ಮೀ ಗಳುದ್ದದ ಮೊಗಸಾಲೆಗೆ ಹೋಗುತ್ತದೆ. ಮೊಗಸಾಲೆಯ ತುದಿಯಲ್ಲಿ ರಾಜನ ಕೋಣೆ ಅಥವಾ ಮುಖ್ಯ ಶವಕೋಣೆ ಇದೆ. ಇದು ಸು. 10 ಮೀ X 5ಮೀ X 3ಮೀ ಪ್ರಮಾಣದಲ್ಲಿದೆ. ರಾಜನ ಕೋಣೆ ಭೂ ಮಟ್ಟದಿಂದ ಸು. 42 ಮೀ ಎತ್ತರದಲ್ಲಿದೆ. ಈ ಕೋಣೆಯಿಂದ ಪಿರಮಿಡಿನ ಹೊರಕ್ಕೆ ಎರಡು ಬೆಳಕಿನ ಕೊಳವೆಕಿಂಡಿಗಳಿವೆ. ರಾಜನ ಕೋಣೆಯಲ್ಲಿ ಬರಿದಾದ ಕೆಂಪು ಗ್ರಾನೈಟ್ ಶಿಲೆಯ ಶವತೊಟ್ಟಿಯಿದೆ. ಕೋಣೆಯ ಮೇಲೆ ಗ್ರಾನೈಟ್ ಚಪ್ಪಡಿಗಳಿಂದ ಪ್ರತ್ಯೇಕಿಸಲ್ಪಟ್ಟ 5 ಅಂತಸ್ತುಗಳಿವೆ. ಬಹುಶಃ ಬೃಹತ್ ಪಿರಮಿಡಿನ ಅಗ್ರಭಾಗದ ಭಾರವನ್ನು ವಹಿಸಲು ಇಂಥ ಖಾಲಿ ಅಂತಸ್ತುಗಳನ್ನು ನಿರ್ಮಿಸಿರಬಹುದು. ಪಿರಮಿಡಿನ ಪ್ರವೇಶ ಮಾರ್ಗದ ಬಾಯನ್ನು ಭಾರವಾದ ಆದರೆ, ನಿಖರವಾಗಿ ಹೊಂದುವ ಕಲ್ಲಿನ ದಿಮ್ಮಿಯಿಂದ ಮುಚ್ಚಲಾಗಿತ್ತು. ಬಾಗಿಲಿನ ಸ್ಥಳ ಗೊತ್ತಾಗದಂತೆ ಕಟ್ಟಡದ ಇಡೀ ಹೊರಭಾಗವನ್ನು ಚಪ್ಪಡಿಗಳಿಂದ ಆವರಿಸಲಾಗಿತ್ತು. 19ನೆಯ ಶತಮಾನದಲ್ಲಿ ಪಿರಮಿಡುಗಳ ಬಗ್ಗೆ ವಿಶೇಷ ಅಧ್ಯಯನ ನಡೆಸಿದುದೇ ಅಲ್ಲದೆ, ಖುಫುವಿನ ಬೃಹತ್ ಪಿರಮಿಡಿನ ಯಂತ್ರ ಶಿಲ್ಪಿಕ ವಿವರಗಳನ್ನು ಒದಗಿಸಿದ ಕೀರ್ತಿ 1880–82 ನಡುವೆ ಸಂಶೋಧನೆ ಮಾಡಿದ ಸರ್‌ಫ್ಲಿಂಡರ್ಸ್‌ಪೆಟ್ರಿಗೆ ಸಲ್ಲುತ್ತದೆ. (ಬಿ.ಕೆ.ಜಿ)

ಪ್ರತಿಯೊಂದು ಪಿರಮಿಡೂ ಸಣ್ಣ ಪಿರಮಿಡ್‌ಗಳಿಂದ ಕೂಡಿದೆ. ಅಲ್ಲದೆ ತಾತ್ಕಾಲಿಕವಾಗಿ ಶವಗಳನ್ನಿಡುವ ಮನೆಗಳೂ ಇವೆ. ಇವೆಲ್ಲವೂ ಪೌಳಿಗೋಡೆಯಿಂದ ಸುತ್ತುವರಿಯಲ್ಪಟ್ಟಿದೆ. ಇವುಗಳಿಂದ ನೈಲ್ ನದಿಯ ದಂಡೆಯ ಮೇಲಿರುವ ಒಂದು ದೇವಾಲಯಕ್ಕೆ ಹೋಗಲು ಸುರಂಗ ಮಾರ್ಗವಿದೆ.

ಮೂರನೆಯ ರಾಜ ಖಾಫ್ರೆ (ಪ್ರ.ಶ.ಪೂ. 2552–2521). ಪಿರಮಿಡ್ಡು ಖುಫುವಿನ ಪಿರಮಿಡ್ಡಿಗಿಂತ ಸ್ವಲ್ಪ ಸಣ್ಣ ಪ್ರಮಾಣದ್ದಾಗಿದೆ. ಇದರ ಉದ್ದಗಲ ಸು. 217 ಮೀ ಎತ್ತರ ಸು. 145 ಮೀ ಆದರೆ, ಖುಫುವಿನ ಪಿರಮಿಡ್ಡಿಗಿಂತಲೂ ಎತ್ತರ ಸ್ಥಾನದಲ್ಲಿರುವುದರಿಂದ ದೊಡ್ಡದಾಗಿ ಕಾಣುತ್ತದೆ. ಪಿರಮಿಡಿನ ಕೆಂಪು ಗ್ರಾನೈಟ್ ಕಲ್ಲಿನ ಮೇಲ್ಹಾವಣಿ ಕೆಳಗಿನ ಕಿಟಕಿಯಿಂದ ಬರುವ ಸೂರ್ಯನ ಬೆಳಕು ನೆಲಕ್ಕೆ ಹಾಸಿದ ಹೊಳಪಾದ ಹಾಲುಗಲ್ಲಿನ ಮೇಲೆ ಬಿದ್ದು, ಅಲ್ಲಿಂದ ಬೂದು ಜೇಡಿಮಣ್ಣು ಮತ್ತು ಹಸುರು ಡಯೊರೈಟ್‌ನಿಂದ ಮಾಡಿದ 23 ರಾಜರುಗಳ ಮೂರ್ತಿಗಳ ಮೇಲೆ ಸೌಮ್ಯವಾಗಿ ಪ್ರಸರಿಸಿ ಅವುಗಳ ಚೆಲುವನ್ನು ಹೆಚ್ಚಿಸಿದೆ.

ಮೊದಲನೆಯ ರಾಜ ಸ್ನೆಫೆರುವಿನ (ಪ್ರ.ಶ.ಪೂ. 2590–2575) ಮಹಾರಾಣಿ ಖುಫುವಿನ ತಾಯಿ ಹೆಟೆಪ್–ಹೆರಸಳ್ ಕುರ್ಚಿ, ಆಭರಣ ಪೆಟ್ಟಿಗೆ, ತಲೆ ಕೊರಡುಳ್ಳ ಹಾಸಿಗೆ, ಮೇಲ್ಛಾವಣಿಯನ್ನು ಕೊರೆದು ತುಂಬಿದ ಚಿತ್ರಗಳುಳ್ಳ ಕಾಲುಮಣೆ ಮುಂತಾದ ಭೋಗವಸ್ತುಗಳ ಆಕಾರ, ಪ್ರಮಾಣಬದ್ಧತೆ, ಕರಕುಶಲತೆ ಇವು ಆಗಿನ ಉತ್ಕೃಷ್ಟ ಕಲಾವಂತಿಕೆಗೆ ಉತ್ತಮ ನಿದರ್ಶನಗಳು.

ಖಾಫ್ರೆಯ ಪಿರಮಿಡ್‌ನ ಹತ್ತಿರ ಸುಮಾರು 4,000 ಜನ ವಾಸ ಮಾಡಬಹುದಾದ ಉದ್ದ ಕೋಣೆಗಳುಳ್ಳ ಕೆಲಸಗಾರರ ಸಾಲುಮನೆಗಳಿವೆ.

ಒಂದೇ ಕಲ್ಲಿನಲ್ಲಿ ಕೊರೆದ ಸುಮಾರು 56.5 ಮೀ ಉದ್ದವಾದ ಬೃಹದಾಕಾರದ ಸ್ಫಿಂಕ್ಸ್ ಪ್ರತಿಮೆ ನೈಲ್‌ನದಿ ಬಯಲನ್ನು ರಕ್ಷಣೆ ಮಾಡುವ ಹಾಗೆ ನಿಂತಿದೆ. ಇದರ ಕಾಲುಗಳ ಮಧ್ಯದಲ್ಲಿ ಹರ್ಮಾಕಿಸ್ ಸೂರ್ಯದೇವತೆಯ ಸಣ್ಣ ಗುಡಿಯಿದೆ.

ಮೆಂಕುರೆ ಪಿರಮಿಡ್ಡು ಖುಫುವಿನ ಪಿರಮಿಡ್ಡಿನಲ್ಲಿ ಅರ್ಧದಷ್ಟು ಮಾತ್ರವಿದೆ. ಆದರೆ, ಅತ್ಯಂತ ಗಟ್ಟಿಕಲ್ಲನ್ನು ಅಳತೆಗೆ ಸರಿಯಾಗಿ ಕಂಡರಿಸುವ ಕುಶಲತೆ ಸಾಕಷ್ಟು ಕರಗತವಾಗಿತ್ತೆಂದು ಇದರಲ್ಲಿ ಕಾಣುತ್ತದೆ. ಇದರ ಹೊದಿಕೆಗೆ ಕೆಂಪು ಗ್ರಾನೈಟನ್ನು ಉಪಯೋಗಿಸಿದೆ. ಈ ಪಿರಮಿಡ್ಡು ಮಾತ್ರ ಚಿತ್ರಿತ ದೃಶ್ಯಗಳಿಂದ ಅಲಂಕೃತವಾಗಿದೆ.

(ಎ.ಎಸ್.)

ನೈಲ್ ನದಿಯ ಆಚೀಚೆ, ಉತ್ತರದಲ್ಲಿರುವ ನೈಲ್‌ನದಿ ಶಾಖೆಯಾದ ರೊಸೆಟ್ಟದಿಂದ ಹಿಡಿದು ದಕ್ಷಿಣದ ಬನಿಸುವೇಫ್ ಆಡಳಿತ ವಿಭಾಗದವರೆಗೆ, ಇರುವ ಕಿರಿದಾದ ಪ್ರದೇಶ ಗೀಜ಼ ಆಡಳಿತ ವಿಭಾಗವಾಗಿದೆ. ಇದರ ವಿಸ್ತೀರ್ಣ 867.5 ಚ.ಕಿಮೀ ಸ್ಫಿಂಕ್ಸ್ ಮತ್ತು ಹಲವು ಪ್ರಸಿದ್ಧ ಪಿರಮಿಡ್‌ಗಳು ಇರುವುದು ಈ ಪ್ರದೇಶದಲ್ಲಿ. ಕಟ್ಟಡಗಳಿಗೆ ಉಪಯುಕ್ತವಾದ ಸುಣ್ಣದ ಕಲ್ಲುಗಳನ್ನು ತೆಗೆಯುತ್ತಿದ್ದ ಸ್ಥಳ ಟುರಾ. ಈಗಲೂ ಸಿಮೆಂಟ್ ಕೈಗಾರಿಕೆಗಳಿಗೆ ಇಲ್ಲಿಂದ ಸುಣ್ಣಕಲ್ಲುಗಳನ್ನು ಸಾಗಿಸಲಾಗುತ್ತಿದೆ. ಈ ಪ್ರದೇಶದ ಮುಖ್ಯ ಕಸಬು ಬೇಸಾಯ. ಉದ್ಯೋಗನಿರತರಾದ ಜನರಲ್ಲಿ ಶೇ.55 ಮಂದಿ ಬೇಸಾಯದಲ್ಲಿ ತೊಡಗಿದವರು. ನೀರಾವರಿ ಸೌಲಭ್ಯವಿದೆ. ಮುಸುಕಿನ ಜೋಳ, ಹತ್ತಿ, ಗೋದಿ ಮುಖ್ಯವಾದ ಬೆಳೆಗಳು. ಟುರಾಗೆ ದಕ್ಷಿಣದಲ್ಲಿ ಸಕ್ಕರೆ ಕಾರ್ಖಾನೆ ಇದೆ. ಮದ್ಯ ಇಲ್ಲಿಯ ಒಂದು ಉಪೋತ್ಪನ್ನ.

*

**ಗೀಜಗನ ಹಕ್ಕಿ :** ಪೆಸ್ಸಾರಿಡೇ ಕುಟುಂಬಕ್ಕೆ ಸೇರಿದ ಒಂದು ಹಕ್ಕಿ. ನೇಯ್ಗೆ ಹಕ್ಕಿ ಪರ್ಯಾಯನಾಮ. ಪ್ಲೋಸಿಯಸ್ ಈ ಜಾತಿಯ ವೈಜ್ಞಾನಿಕ ನಾಮ. ಭಾರತದಲ್ಲಿ ಪ್ಲೋಸಿಯಸ್ ಫಿಲಿಪಿನೆನ್ಸಿಸ್, ಪ್ಲೊ. ಮನ್ಯಾರ್ ಮತ್ತು ಪ್ಲೊ. ಬೆಂಗಾಲೆನ್ಸಿಸ್ ಎಂಬ ಮೂರು ಪ್ರಭೇಧಗಳಿವೆ. ಇವುಗಳಲ್ಲಿ ಬಲು ಸಾಮಾನ್ಯವಾದ ಪ್ರಭೇದವೆಂದರೆ ಪ್ಲೋಸಿಯಸ್ ಫಿಲಿಪಿನೆನ್ಸಿಸ್. ಈ ಹಕ್ಕಿ ಗುಬ್ಬಚ್ಚಿಯ ಗಾತ್ರದಷ್ಟೆ ಇದೆ : ಸಂತಾನೋತ್ಪತ್ತಿ ಕಾಲದಲ್ಲಿ ಬಿಟ್ಟು ಮಿಕ್ಕ ಕಾಲದಲ್ಲಿ ಇದರ ಬಣ್ಣ ಗುಬ್ಬಚ್ಚಿಯ ಬಣ್ಣದಂತೆಯೆ ಇರುತ್ತದೆ. ಕೊಕ್ಕು ದೃಢವಾಗಿ ಶಂಕುವಿನಾಕಾರಕ್ಕಿದೆ. ಬಾಲ ಮೋಟಾಗಿ ಚಚ್ಚೌಕವಾಗಿ ಕತ್ತರಿಸಿದ ಹಾಗಿದೆ. ಗೀಜಗನ ಹಕ್ಕಿಗಳ ವಾಸ ಕೃಷಿಯ ಬಯಲು ಪ್ರದೇಶಗಳಲ್ಲಿ. ಸಾಮಾನ್ಯವಾಗಿ ಗುಂಪುಗಳಲ್ಲಿರುವುದೇ ವಾಡಿಕೆ. ಭಾರತ, ಪಾಕಿಸ್ತಾನ, ಶ್ರೀಲಂಕಾ ಮತ್ತು ಬರ್ಮಾಗಳಲ್ಲಿ ಈ ಹಕ್ಕಿಗಳ ವ್ಯಾಪ್ತಿ ಇದೆ. ಇವುಗಳಲ್ಲಿ ವಲಸೆ ಹೋಗುವ ಕ್ರಮವೂ ಉಂಟು. ಸಾಮಾನ್ಯವಾಗಿ ದೊಡ್ಡ ಗುಂಪುಗಳು ಕೊಯ್ಲಿಗೆ ಬಂದ ಬತ್ತ ಮತ್ತು ಇತರ ಧಾನ್ಯಗಳ ಕೃಷಿಭೂಮಿಗಳ ಬಳಿ ಮಾತ್ರ ಇರುತ್ತವೆ. ಕೆಲವೊಮ್ಮೆ ಬಲಿಯುತ್ತಿರುವ ತೆನೆಗಳನ್ನು ಹಾಳು ಮಾಡುವುದುಂಟು. ಸಾಮಾನ್ಯವಾಗಿ ಸಸ್ಯಾಹಾರಿಗಳಾದ ಇವು ಕೆಲವೊಮ್ಮೆ ಕೀಟಗಳನ್ನೂ ತಿನ್ನುತ್ತವೆ. ಸಂತಾನೋತ್ಪತ್ತಿ ಕಾಲದಲ್ಲಿ ಗಂಡು ಚೀ ಚೀ ಎಂದು ಕೂಗುತ್ತ ಹೆಣ್ಣನ್ನು ಬಹುದೂರ ಅಟ್ಟಿಸಿಕೊಂಡು ಹೋಗುವುದುಂಟು. ಗೂಡು ಕಟ್ಟುವ ಕಾಲ ಮೇ ತಿಂಗಳಿಂದ ಸೆಪ್ಟೆಂಬರ್ ತಿಂಗಳವರೆಗೆ, ಈ ಅವಧಿ ಮುಂಗಾರು ಮಳೆಗಾಲಕ್ಕೂ ಬತ್ತದ ಅಥವಾ ದವಸಗಳ ಕೊಯ್ಲಿಗೂ ಹೊಂದಿಕೊಳ್ಳುತ್ತದೆ. ಗೀಜಗನ ಹಕ್ಕಿಗಳು ಗೂಡುಕಟ್ಟುವುದರಲ್ಲಿ ಬಹಳ ಬುದ್ಧಿಶಕ್ತಿಯನ್ನೂ ಕುಶಲತೆಯನ್ನೂ ಪ್ರದರ್ಶಿಸುತ್ತದೆ. ಸಾಧಾರಣವಾಗಿ ನದಿ, ಕೆರೆ ನೀರಿನ ಮೇಲೆ ಬಾಗಿರುವ ಮರದ ರೆಂಬೆಗಳ, ಈಚಲುಗರಿಗಳ ತುದಿಯಲ್ಲಿ ಇಲ್ಲವೆ ನೀರಿನಲ್ಲಿ ಬೆಳೆಯುವ ಜೋಡುಗಳ



ಮಧ್ಯೆ ಗೂಡನ್ನು ನಿರ್ಮಿಸುತ್ತವೆ. ಗೂಡುಗಳ ನಿರ್ಮಾಣಕ್ಕೆ ಬತ್ತದ ಹುಲ್ಲುಗಳನ್ನು ಬಳಸುತ್ತವೆ. ತಮ್ಮ ಕೊಕ್ಕು ಕಾಲುಗಳನ್ನು ಕುಶಲತೆಯಿಂದ ಬಳಸುತ್ತ ರೆಕ್ಕೆಗಳನ್ನು ಬಡಿಯುತ್ತ ಗೂಡು ನಿರ್ಮಿಸುವುದನ್ನು ನೋಡಲು ಚೆನ್ನ. ಗೂಡು ಹೂಜಿಯಂತೆ ಇಲ್ಲವೆ ಬಟ್ಟಿಪಾತ್ರೆಯಂತೆ ಇರುತ್ತದೆ. ಇದರಲ್ಲಿ ಕೊಂಬೆಗೆ ತೂಗುಹಾಕುವ ಭಾಗ, ಮೊಟ್ಟೆಯಿಡುವ ವಿಶಾಲವಾದ ಗುಂಡು ಭಾಗ ಮತ್ತು ಉದ್ದವಾದ ನೇರವಾದ ಪ್ರವೇಶದ್ವಾರ ಭಾಗ ಎಂಬ ಮೂರು ಭಾಗಗಳಿವೆ. ಪ್ರವೇಶದ್ವಾರ ಕೆಳಮುಖವಾಗಿ ತೆರೆಯುತ್ತದೆ. ಮೊಟ್ಟೆಯಿಡುವ ಭಾಗದ ತಳಕ್ಕೆ ಹಸಿ ಜೇಡಿಮಣ್ಣನ್ನು ಮೆತ್ತಿರುವುದುಂಟು. ಗೂಡು ನಿರ್ಮಾಣದ ಕೆಲಸ ಗಂಡಿನದಾದರೆ, ಮೊಟ್ಟೆಗೆ ಕಾವು ಕೊಡುವ ಕೆಲಸ ಹೆಣ್ಣಿನದು. ಸಾಮಾನ್ಯವಾಗಿ ಒಂದು ಗಂಡು ಹಕ್ಕಿ ಹಲವಾರು ಹೆಣ್ಣು ಹಕ್ಕಿ ಗಳೊಂದಿಗೆ ಸಂಪರ್ಕವಿಟ್ಟು ಕೊಂಡಿರುತ್ತದೆ.

ನೇಯ್ಗೆ ಹಕ್ಕಿಯು ಹೆಣ್ಣನ್ನು ಒಲಿಸಿಕೊಳ್ಳುವ ಪರಿ ವಿಶೇಷ ವಾದದ್ದು. ಗಂಡುಹಕ್ಕಿ ತನ್ನ ಪ್ರಭೇದಕ್ಕೆ ವಿಶಿಷ್ಟವಾದ (ಮೇಲೆ ವಿವರಿಸಿರುವ)ಗೂಡನ್ನು ಅರ್ಧ ನಿರ್ಮಿಸಿ ಹೆಣ್ಣಿಗೆ ತೋರಿಸುತ್ತದೆ. ಅದು ಒಪ್ಪಿದರೆ, ಗಂಡು ಮುಂದುವರೆದು ಗೂಡನ್ನು ಪೂರೈಸಿ ಸಂತಾನೋತ್ಪತ್ತಿ ಯಾಗುತ್ತದೆ. ಇಲ್ಲದಿದ್ದಲ್ಲಿ ಗಂಡು ಆ ಗೂಡನ್ನು ಅಷ್ಟಕ್ಕೇ ಬಿಟ್ಟು ಮತ್ತೊಂದು ಗೂಡು ನಿರ್ಮಿಸಿ ಹೆಣ್ಣಿಗೆ ತೋರಿಸುತ್ತದೆ ಮತ್ತು ಪ್ರಕ್ರಿಯೆ ಮುಂದುವರೆಯುತ್ತದೆ. ಹೀಗಾಗಿ ಅರೆನಿರ್ಮಿತ ಅನೇಕ ಗೂಡುಗಳು ನೇಯ್ಗೆ ಹಕ್ಕಿ ಗೂಡು ಮಾಡುವ ಸ್ಥಳಗಳಲ್ಲಿ (ಸಾಮಾನ್ಯವಾಗಿ ನೀರಿನ ಬಳಿ ಬಳಸದ ಆದರೆ ನೀರಿರುವ ಬಾವಿಗಳು) ಕಂಡುಬರುತ್ತದೆ. ಈ ಹಕ್ಕಿಗಳ ವಿಶಿಷ್ಟ ಈ ನಡವಳಿಕೆಯನ್ನು ಜಗತ್ತಿಗೆ ಪರಿಚಯಿಸಿದವರು ಭಾರತದ ಹಕ್ಕಿ ಮನುಷ್ಯ ಸಲೀಂ ಅಲಿ. ಸಲೀಂ ಅಲಿಯವರ ಮುಖ್ಯ ವೈಜ್ಞಾನಿಕ ಕೊಡುಗೆಗಳಲ್ಲಿ ಇದು ಪ್ರಮುಖವಾದದ್ದು (**ನೋಡಿ–ಸಲೀಂ ಅಲಿ**).

(ಎನ್.ವಿ.ಎ.)

**ಗೀಜೋ಼ ಫ್ರಾಂಕಾಯ್ :** 1787–1874. ಫ್ರಾನ್ಸಿನ ಒಬ್ಬ ರಾಜಕಾರಣಿ, ಇತಿಹಾಸಕಾರ, ಪ್ರಾಟೆಸ್ಟಂಟ್ ಮತಸ್ಥ. ಸಂಪ್ರದಾಯವಾದಿ ರಾಜತ್ವದ ಪ್ರತಿಪಾದಕ. ನೆಪೋಲಿಯನ್ ಪ್ರಭುತ್ವವನ್ನು ವಿರೋಧಿಸಿದ. ರಾಜತ್ವದ ಪುನರ್ ಸ್ಥಾಪನೆಗೆ ಇವನ ಬೆಂಬಲವಿತ್ತು. ಜನನ: 1787ರ ಅಕ್ಟೋಬರ್ 4ರಂದು, ನೀಮ್‌ನಲ್ಲಿ. ತಂದೆ ನ್ಯಾಯವಾದಿ; ಫ್ರಾನ್ಸಿನ ಕ್ರಾಂತಿಯ ಆರಂಭದಲ್ಲಿ ಸ್ಥಳೀಯ ಪೇಟ್ರೀಯಟ್ ಪಕ್ಷದ ನಾಯಕರಲೊಬ್ಬ. ಕನ್ವೆನ್ಷನ್ ವಿರುದ್ಧ ಒಕ್ಕೂಟವಾದಿ ಬಂಡಾಯವನ್ನೆಬ್ಬಿಸಿದ್ದಕ್ಕಾಗಿ ತಂದೆ ಮರಣದಂಡನೆಗೆ ಗುರಿಯಾದ. ತಾಯಿ ತನ್ನ ಮಕ್ಕಳೊಂದಿಗೆ ಜಿನೀವಕ್ಕೆ ಹೋದಳು. ಅಲ್ಲಿ ಗೀಜೋ಼ ಲ್ಯಾಟಿನ್, ಗ್ರೀಕ್, ಇಟಾಲಿಯನ್ ಮತ್ತು ಜರ್ಮನ್ ಭಾಷೆಗಳನ್ನು ಕಲಿತ. ಇವನು ವಿಧ್ಯಾಭ್ಯಾಸ ಮಾಡಿ ಸ್ಥಳದ ವಾತಾವರಣ, ಇವನ ತಾಯಿಯ ಧೀಶಕ್ತಿ, ನಿಷ್ಠೆ ಗೀಜೋ಼ನ ಮೇಲೆ ಪ್ರಭಾವ ಬೀರಿದುವು. ಆರು ವರ್ಷಗಳ ಅನಂತರ ತಾಯಿ–ಮಕ್ಕಳು ನೀಮ್‌ಗೆ ಹಿಂದಿರುಗಿದರು. 1805ರಲ್ಲಿ ಗೀಜೋ಼ ಪ್ಯಾರಿಸ್‌ಗೆ ನ್ಯಾಯಶಾಸ್ತ್ರ ಕಲಿಯಲು ಹೋದ. 1812ರಲ್ಲಿ ಪ್ಯಾರಿಸ್ ವಿಶ್ವವಿದ್ಯಾನಿಲಯದ ಇತಿಹಾಸ ಪ್ರಾಧ್ಯಾಪಕನಿಗೆ ಸಹಾಯಕನಾಗಿ ನೇಮಕವಾದ. ಅನಂತರ ಗ್ರೀಜೋಗಾಗಿ ಆಧುನಿಕ ಇತಿಹಾಸ ಪ್ರಾಧ್ಯಾಪಕ ಸ್ಥಾನವೊಂದು ನಿರ್ಮಿತವಾಯಿತು. ಇತಿಹಾಸದ ಅಧ್ಯಯನಕ್ಕೆ ಇವನ್ನೊಂದು ಹೊಸ ದೃಷ್ಟಿಯನ್ನು ಮೂಡಿಸಲು ಯತ್ನಿಸಿದ. 1814ರಲ್ಲಿ ನೆಪೋಲಿಯನನ ಪತನವಾದ ಅನಂತರ ಗೀಜೋ಼

ಗೃಹಸಚಿವಾಲಯದಲ್ಲಿ ಮಹಾಕಾರ್ಯದರ್ಶಿಯಾಗಿ ನೇಮಕಗೊಂಡ. ಅನಂತರ ಇವನು ನ್ಯಾಯಸಚಿವಾಲಯದಲ್ಲಿ ಮಹಾಕಾರ್ಯದರ್ಶಿಯಾಗಿದ್ದ. 1816ರಲ್ಲಿ ಗ್ರೀಜೋ ಆ ಹುದ್ದೆಗೆ ರಾಜೀನಾಮೆ ನೀಡಿದ. 1819ರಲ್ಲಿ ಗೃಹಸಚಿವಾಲಯದಲ್ಲಿ ಸ್ಥಳೀಯ ಆಡಳಿತ ವಿಭಾಗದ ನಿರ್ದೇಶಕನಾಗಿದ್ದ. 1820ರಲ್ಲಿ ಈತ ವಿಶ್ವವಿದ್ಯಾಲಯಕ್ಕೆ ಮರಳಿ ಇತಿಹಾಸಕಾರನಾಗಿ ಪತ್ರಿಕೋದ್ಯಮಿಯಾಗಿ ಕೆಲಸ ಮುಂದುವರಿಸಿದ. ಇವನು ಪ್ರಸಿದ್ಧನಾಗಿರುವುದು ಈ ಕಾರ್ಯದಿಂದಾಗಿ.

1830ರಲ್ಲಿ ಈತ ಒಬ್ಬ ಪ್ರತಿನಿಧಿಯಾಗಿ ಶಾಸನಸಭೆಗೆ ಆಯ್ಕೆ ಹೊಂದಿದ. ಇವನ 18 ವರ್ಷಗಳ ರಾಜಕೀಯ ಚಟುವಟಿಕೆ ಆರಂಭವಾದದ್ದು ಆಗ. ದೊರೆ 10ನೆಯ ಚಾರಲ್ಸನ ಆಳ್ವಿಕೆಯ ಉದಾರವಾದಿ ಧೋರಣೆಗಳಲ್ಲಿ ಇವನಿಗೆ ನಂಬಿಕೆ ಹೋಯಿತು. ಲೂಯಿ ಫಿಲಿಪ್ಪನ ಆಡಳಿತದಲ್ಲಿ ಗೀಜೋ ಗೃಹಶಾಖಾ ಮಂತ್ರಿಯಾಗಿ (1830) ಮೂರು ತಿಂಗಳುಗಳ ಕಾಲ ಇದ್ದ. ಮತ್ತೆ 1832ರಲ್ಲಿ ಶಿಕ್ಷಣಮಂತ್ರಿಯಾಗಿ (ನಡುವೆ ಆರು ತಿಂಗಳ ವಿನಾ) 1839ರವರೆಗೂ ಆ ಸ್ಥಾನದಲ್ಲಿದ್ದು ಅನೇಕ ಶಿಕ್ಷಣ ಸುಧಾರಣೆಗಳನ್ನು ತಂದ. 1840ರಲ್ಲಿ ಇವನಿಗೆ ಲಂಡನಿನಲ್ಲಿ ರಾಯಭಾರಿ ಹುದ್ದೆ ಪ್ರಾಪ್ತವಾಯಿತು. ಬ್ರಿಟನಿನೊಂದಿಗೆ ಫ್ರಾನ್ಸಿನ ಸ್ನೇಹ ಸ್ಥಾಪಿಸಲು ಇವನು ಪ್ರಯತ್ನ ನಡೆಸಿದ. ಅದೇ ವರ್ಷ ಅಕ್ಟೋಬರ್‌ನಲ್ಲಿ ಮಾರ್ಷಲ್ ಸೌಲ್ಟನ ಸರ್ಕಾರದಲ್ಲಿ ವಿದೇಶಾಂಗ ಖಾತೆಯ ಮಂತ್ರಿಯಾಗಿದ್ದ. ಸೌಲ್ಟ ಮುದುಕನಾಗಿದ್ದುದರಿಂದ ತಾನೇ ಪ್ರಧಾನ ಮಂತ್ರಿಯ ಅಧಿಕಾರ ಚಲಾಯಿಸುತ್ತಿದ್ದ ಗ್ರೀಜೋ 1847ರಲ್ಲಿ ಪ್ರಧಾನಿಯಾಗಿದ್ದು, ಅನಂತರ ರಾಜೀನಾಮೆ ನೀಡಿದ. ರಾಜತ್ವವೂ ಕುಸಿಯಿತು.

ಗೀಜೋ ಬೆಲ್ಜಿಯಂನಲ್ಲೂ ಇಂಗ್ಲೆಂಡಿನಲ್ಲೂ ತಲೆಮರೆಸಿಕೊಂಡಿದ್ದು ಅನಂತರ ಫ್ರಾನ್ಸಿಗೆ ಮರಳಿದ. (1849). ತನ್ನ ಕೊನೆಯ 25 ವರ್ಷಗಳ ಅವಧಿಯಲ್ಲಿ ಇವನು ಆಂತರಿಕ ರಾಜಕೀಯದಲ್ಲಿ ಭಾಗವಹಿಸಲಿಲ್ಲ. ಗೀಜೋ ಅನೇಕ ಅಕಾಡೆಮಿಗಳ ಸದಸ್ಯನಾಗಿ ಆಯ್ಕೆ ಹೊಂದಿದ. ಇವನು ತೀರಿಕೊಂಡದ್ದು 1874ರ ಅಕ್ಟೋಬರ್ 12 ರಂದು. ಗ್ರೀಜೋ ಅನೇಕ ಇತಿಹಾಸ ಗ್ರಂಥಗಳನ್ನು ರಚಿಸಿದ್ದಾನೆ. ಹಿಸ್ಟಾಯಿರ್ ದ ಲ ರೆವಲ್ಯೂಷನ್ ದ ಆಂಗ್ಲಟೆರ್, ಜನರಲ್ ಹಿಸ್ಟೊರಿ ಆಫ್ ಸಿವಿಲಿಸೇಷನ್ ಇನ್ ಮಾಡರ್ನ್ ಯುರೋಪ್–ಇವು ಇವನ ಮುಖ್ಯ ಕೃತಿಗಳು. (ಎಸ್.ಬಿ.ಪಿ.; ಕೆ.ಜಿ.)

**ಗೀಟ್ರೀ, ಸಾಚಾ :** 1885–1957. ಫ್ರೆಂಚ್ ನಟ, ನಾಟಕಕಾರ, ಚಲನಚಿತ್ರ ನಿರ್ಮಾಪಕ ಹಾಗು ನಿರ್ದೇಶಕ. ಹುಟ್ಟಿದುದು ರಷ್ಯದ ಸೇಂಟ್ ಪೀಟರ್ಸ್‌ಬರ್ಗಿನಲ್ಲಿ. ತಂದೆ ಲೂಸಿಯನ್ ಗೀಟ್ರೀ ರಂಗಭೂಮಿಯ ನಟ. ವಂಶಾನುಗುಣವಾಗಿ ಬಂದ ಅಭಿನಯಕಲೆಯ ಜೊತೆಗೆ ಸ್ವಪ್ರತಿಭೆಯೂ ಸೇರಿ 21ರ ಕಿರಿಯ ಪ್ರಾಯದಲ್ಲೇ ನೋನೊ ಎಂಬ ನಾಟಕವನ್ನು ಬರೆದು ಪ್ರಯೋಗ ಮಾಡಿ ಯಶಸ್ಸನ್ನು ಸಂಪಾದಿಸಿದ. ಪ್ರೋತ್ಸಾಹಿತ ನಾಗಿ ಚೆಜ್‌ಲೆ ಜೋವಾಕ್ಸ್ (1906) ಎಂಬ ಮತ್ತೊಂದು ನಾಟಕವನ್ನು ಬರೆದು ಪ್ರದರ್ಶಿಸಿದ. ಹೀಗೆಯೇ 1908ರಲ್ಲಿ ಪೆಟೀಟ್ ಹಾಲ್ಲಂಡ್ ಮತ್ತು ಲೆ ಸ್ಕ್ಯಾಂಡಲ್ ಡಿ ಮಾಂಟ್ ಕಾರ್ಲೋ ಎಂಬ ಮತ್ತೆರಡು ನಾಟಕಗಳನ್ನು ರಂಗಭೂಮಿಯ ಮೇಲೆ ತಂದ. 1911ರಲ್ಲಿ ಇವನ ಅತ್ಯುತ್ಕೃಷ್ಟ ನಾಟಕಗಳಲ್ಲಿ ಒಂದಾದ ಲೆ ವೀಲ್ಯೂರ್ ಡಿ ನ್ಯೂಟ್ ಮತ್ತು ಉನ್ ಬೊ ಮ್ಯಾರಿಯೇಜ್ ಎಂಬ ನಾಟಕಗಳೂ ಪ್ರಕಾಶಗೊಂಡವು.

ಲಘು ಪ್ರಹಸನಗಳಲ್ಲಿ ಸಾಚಾ ಗೀಟ್ರೀ ಎತ್ತಿದ ಕೈ ಎಂದೆನಿಸಿ ಬಹುಜನರ ಮೆಚ್ಚುಗೆಯನ್ನು ಪಡೆದ. ಮೊಲ್ಯೇರನ ಹರ್ಷಕಗಳಿಗೆ ಸಮನಾದ ಶ್ರೇಷ್ಠ ಪ್ರಹಸನಗಳನ್ನು ಈತ ಬರೆದಿದ್ದಾನೆ. ರಂಗದ ಮೇಲೆ ಪ್ರದರ್ಶಿತವಾದಾಗ ಮನ ಸೆಳೆಯುವಂತಿದ್ದರೂ ಈ ನಾಟಕಗಳು ಓದಿದಾಗ ತೀರ ಸಾಧಾರಣ ಎನಿಸುತ್ತವೆ. ನಾಟಕ ಪ್ರಯೋಗ ತಂತ್ರ ಪರಿಣಿತನೂ ಅಭಿನಯ ವಿಶಾರದನೂ ಆಗಿದ್ದ ಗೀಟ್ರೀಯ ನಿರ್ದೇಶನ ಕೌಶಲದಿಂದ ಅವು ರಂಗದ ಮೇಲೆ ರಂಜಿಸುತ್ತಿದ್ದವು. ಅವು ಎಂದಿಗೂ ಅಲ್ಪತೆಗಿಳಿಯದೆ ಸದಾ ಜನಮನೋರಂಜನೆ ಮಾಡುತ್ತಿದ್ದುದರಿಂದ ಜಾರ್ಜ್ ಬರ್ನಾಡ್ ಷಾ ಇವನ್ನು ಬಹುವಾಗಿ ಪ್ರಶಂಸಿಸಿದ್ದಾನೆ.

ಈತ ಸುಮಾರು 90 ನಾಟಕಗಳನ್ನು ಬರೆದು ಆಡಿಸಿದ. ತನ್ನ ತಂದೆಯ ಅಭಿನಯಕ್ಕೆಂದು ವಿಶೇಷವಾಗಿ ಬರೆದ ನಾಟಕಗಳಾದ ಡಿ ಬ್ಯೂರೊ (1918), ಬಿರೇಂಜರ್ (1920), ಪ್ಯಾಶ್ಚರ್ (1919) ನಿಜವಾಗಿಯೂ ಪ್ರತಿಭಾಪೂರ್ಣವಾಗಿವೆ

ಗೀಟ್ರೀ ಚಲನಚಿತ್ರ ಪ್ರಪಂಚವನ್ನೂ ಪ್ರವೇಶಿಸಿ ಹಲವಾರು ಚಿತ್ರಗಳ ನಿರ್ಮಾಪಕನೂ ನಿರ್ದೇಶಕನೂ ಆಗಿ ಹೆಸರುಗಳಿಸಿದ. 1935ರ ಅನಂತರ ಈತನ ದಿಗ್ದರ್ಶನದಲ್ಲಿ ನಿರ್ಮಿತವಾದ ಚಿತ್ರಗಳಲ್ಲಿ ರೋಮನ್ ಡಿ' ಉನ್ ಟ್ರಿಚ್ಯೂರ್ ಮತ್ತು ನೆಪೋಲಿಯನ್ ಎಂಬ ಚಿತ್ರಗಳು ಬಹು ಪ್ರಸಿದ್ಧವಾದವು. 1935ರಲ್ಲಿ ಈತನ ಆತ್ಮಕಥೆ ಮೆಮಾಯಿರ್ಸ್ ಡಿ ಉನ್ ಟ್ರಿಚ್ಯೂರ್ ಎಂಬ ಹೆಸರಿನಲ್ಲಿ ಪ್ರಕಟವಾಯಿತು. ಇಫ್ ಐ ರಿಮೆಂಬರ್ ರೈಟ್ ಎಂದು ಈ ಪುಸ್ತಕ ಇಂಗ್ಲಿಷಿಗೂ ಭಾಷಾಂತರವಾಗಿದೆ. ಗೀಟ್ರೀಯ ಜೀವನ ಅವನ ನಾಟಕಗಳ ವಸ್ತುವಿನಂತೆಯೇ ಚತುರ, ಅದ್ಭುತ ಹಾಗೂ ಅಸಂಭಾವ್ಯ; ಅವನ ವ್ಯಕ್ತಿತ್ವ ಸದಾ ಆಕರ್ಷಕ, ಸಂಕೀರ್ಣ–ಎಂದು ವಿಮರ್ಶಕರ ಅಭಿಪ್ರಾಯ. (ಕೆ.ಬಿ.ಪಿ.)

**ಗೀತಪ್ರಿಯ :** 1931–. ಕನ್ನಡ ಚಲನಚಿತ್ರ ನಿರ್ದೇಶಕ, ಗೀತೆ ಹಾಗೂ ಸಂಭಾಷಣೆಯ ರಚನಕಾರ. ಇವರ ನಿಜವಾದ ಹೆಸರು ಲಕ್ಷ್ಮಣರಾವ್ ಮೋಹಿತೆ. 1931ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ತಂದೆ ರಾಮರಾವ್ ಮೋಹಿತೆ, ತಾಯಿ ಲಕ್ಷ್ಮೀಬಾಯಿ. ಬೆಂಗಳೂರಿನ ಮಲ್ಲೇಶ್ವರಂ ಪ್ರೌಢಶಾಲೆಯಲ್ಲಿ ಓದಿದ ಇವರಿಗೆ ಕವಿ ಹೊಯಿಸಳರು ಗುರುಗಳಾಗಿದ್ದರು. ಇಂಟರ್‌ಮೀಡಿಯಟ್‌ನಲ್ಲಿ ಜಿ.ಪಿ.ರಾಜರತ್ನಂ ಗುರುಗಳಾಗಿ ದೊರೆತರು. ಸಾಹಿತ್ಯ ದಿಗ್ಗಜಗಳ ಪರಿಚಯ ಪ್ರಭಾವಗಳಿಂದಾಗಿ ಸುಪ್ತವಾಗಿದ್ದ ಇವರ ಸಾಹಿತ್ಯ ರಚನಾಶಕ್ತಿಗೆ ಇಂಬು ದೊರೆಯಿತು. ಇವರು ಪ್ರೌಢಶಾಲೆಯ ದಿನಗಳಲ್ಲೇ ಪದ್ಯ, ನಾಟಕಗಳನ್ನು ಬರೆಯಲಾರಂಭಿಸಿದರು. ಇವರ ರಚನೆಗಳು ಅಂದಿನ ತಾಯಿನಾಡು ಪತ್ರಿಕೆಯಲ್ಲಿ ಬೆಳಕು ಕಂಡವು. ಶಾಲಾದಿನಗಳಲ್ಲಿಯೇ



ಉರ್ದು ಶಾಯರಿಗಳು ಇವರನ್ನು ವಿಶೇಷವಾಗಿ ಆಕರ್ಷಿಸಿದವು. ನಾಟಕದತ್ತ ಒಲವು ಬೆಳೆದು ಹವ್ಯಾಸಿ ಕಲಾವಿದರ ಒಡನಾಟ ಒದಗಿ ಬಂತು. ಆ ವೇಳೆಯಲ್ಲಿ ಇವರು ಬರೆದ ಮದ್ವೆ ಮಾರ್ಕೆಟ್ ನಾಟಕ ಅಂದಿನ ದಿನಗಳಲ್ಲಿ ಅತ್ಯಂತ ಜನಪ್ರಿಯತೆ ಗಳಿಸಿತು. ತಾವೇ ನಾಟಕಗಳಲ್ಲಿ ಕೂಡ ಅಭಿನಯಿಸಿದರು. ಹೆಸರಾಂತ ಬಿ.ಆರ್.ಕೃಷ್ಣಮೂರ್ತಿಯವರು ಶ್ರೀರಾಮಪೂಜಾ ಚಿತ್ರಕ್ಕೆ ಗೀತರಚನಾಕಾರರಾಗಿ ಇವರನ್ನು ನಿಯೋಜಿಸಿದರು. ಮೋಹಿತೆಯವರಿಗೆ ಗೀತಪ್ರಿಯ ಎಂಬ ಕಾವ್ಯನಾಮ ಇಟ್ಟವರು ಸಂಗೀತ ಸಂಯೋಜಕ ವಿಜಯಭಾಸ್ಕರ್. ಹೀಗೆ ಗೀತಪ್ರಿಯರಾಗಿ ಇವರು ಚಿತ್ರಗಳಿಗೆ ಗೀತರಚನೆಯ ಜವಾಬ್ದಾರಿ ಹೊತ್ತರು. ಭಾಗ್ಯ ಚಕ್ರ (1956) ಎಂಬುದು ಇವರು ಸಂಭಾಷಣೆ ಹಾಗೂ ಹಾಡುಗಳನ್ನು ರಚಿಸಿದ ಮೊದಲ ಚಿತ್ರ. ಇವರಲ್ಲಿ ಅಡಗಿದ್ದ ನಿರ್ದೇಶಕನನ್ನು ಗುರುತಿಸಿದವರು ಕರ್ನಾಟಕ ಫಿಲಂಸ್ ಸಂಸ್ಥೆಯಲ್ಲಿದ್ದ ಎಂ.ವಿ. ವೆಂಕಟಾಚಲಂ. ಅವರು ತಮ್ಮ ಮಣ್ಣಿನ ಮಗ ಚಿತ್ರದ ನಿರ್ದೇಶನದ ಹೊಣೆಗಾರಿಕೆಯನ್ನು ಇವರಿಗೆ ವಹಿಸಿದರು (1968). ಬೆಂಗಳೂರಿನ ಕಪಾಲಿ ಚಿತ್ರ ಮಂದಿರದಲ್ಲಿ ಶತದಿನೋತ್ಸವ ಕಂಡ ಪ್ರಥಮ ಕನ್ನಡ ಚಿತ್ರವೆಂಬ ಹೆಗ್ಗಳಿಕೆಗೆ ಈ ಚಿತ್ರ ಪಾತ್ರವಾಯಿತು. ಎಂ.ಪಿ. ಶಂಕರರ ಕಾಡಿನ ರಹಸ್ಯ (1969) ಇವರು ನಿರ್ದೇಶಿಸಿದ ಎರಡನೆಯ ಚಿತ್ರ. ಅದೇ ವರ್ಷ ಮದುವೆ, ಮದುವೆ, ಮದುವೆ, ಎಂಬ ಹಾಸ್ಯ ಚಿತ್ರವನ್ನೂ ಇವರು ನಿರ್ದೇಶಿಸಿ ದರು. ಇವರು ನಿರ್ದೇಶಿಸಿದ ಬಹುತೇಕ ಚಿತ್ರಗಳ ಸಾಹಿತ್ಯವನ್ನು ರಚಿಸಿದವರು ಇವರೇ. ಹಿಂದಿ, ಮರಾಠಿ, ಉರ್ದು, ಕನ್ನಡ ಭಾಷೆಗಳಲ್ಲಿ ಇವರಿಗಿರುವ ಪರಿಣತಿಯಿಂದಾಗಿ ಕವಿಯಾಗಿ, ಸಾಹಿತಿಯಾಗಿ ತಮ್ಮ ಕಲ್ಪನೆಗಳಿಗೆ ಈ ಚಲನಚಿತ್ರಗಳು ಒಂದು ಯಶಸ್ವಿ ಮಜಲಾಗಿ ಪರಿಣಮಿಸಿದುವು. ಪುಟಾಣಿ ಏಜೆಂಟ್ 1 2 3, ಪ್ರಚಂಡ ಪುಟಾಣಿಗಳು ಇವರ ನಿರ್ದೇಶನದಲ್ಲಿ ಮೂಡಿಬಂದ ಮಕ್ಕಳ ಚಿತ್ರಗಳು. ಪುಟಾಣಿ ಏಜೆಂಟ್ 1 2 3 ಇವರದೇ ನಿರ್ದೇಶನದಲ್ಲಿ ಅನ್ಮೋಲ್ ಸಿತಾರೆ ಎಂಬ ಹೆಸರಿನಲ್ಲಿ ಹಿಂದಿ ಚಲನಚಿತ್ರವಾಗಿ ಪುನರ್‌ನಿರ್ಮಾಣ ಗೊಂಡಿದೆ. ಇವಲ್ಲದೆ ಕನ್ನಡ ಕಾದಂಬರಿಗಳನ್ನು ಆಧರಿಸಿ ಅನೇಕ ಚಲನಚಿತ್ರಗಳನ್ನು ಇವರು ನಿರ್ದೇಶಿಸಿದ್ದಾರೆ. ಯಾವ ಜನ್ಮದ ಮೈತ್ರಿ, ಬೆಸುಗೆ, ಬೆಳುವಲದ ಮಡಿಲಲ್ಲಿ, ಹೊಂಬಿಸಿಲು, ಸುವರ್ಣಸೇತುವೆ ಅವುಗಳಲ್ಲಿ ಮುಖ್ಯವಾದವು.

ಭಾರತೀಯ ಸಂಸ್ಕೃತಿ, ಪರಂಪರೆ, ಶ್ರಮ ಜೀವಿಗಳು, ಮಣ್ಣಿನ ಮಕ್ಕಳ ಬಗೆಗೆ ಅಪಾರ ಕಾಳಜಿ ಸೈನಿಕ ಕುಟುಂಬದಿಂದ ಬಂದ ಕಾರಣ, ಜೈ ಜವಾನ್, ಜೈ ಕಿಸಾನ್ ಕಲ್ಪನೆಗೆ ಒತ್ತು ಕೊಡುವುದು ಇವರ ಚಿತ್ರಗಳಲ್ಲಿನ ವಿಶೇಷ. ಇವರ ಚಿತ್ರಗಳಲ್ಲಿ ನಾಯಕ ಭಾರತೀಯ ಮೌಲ್ಯಗಳ ಪ್ರತಿಪಾದಕ, ಹಿಂಸೆಯಿಂದ ದೂರ, ನ್ಯಾಯಪರ, ನಾಯಕಿಯೂ ಆದರ್ಶನಾರಿ. ಇವರು ತಮ್ಮ ನಿರ್ದೇಶನದ ಚಿತ್ರಗಳಲ್ಲಿ ಉತ್ತಮ ಮೌಲ್ಯವನ್ನು ಕಾಪಾಡಿಕೊಂಡು ಬಂದಿದ್ದಾರೆ.

ಇವರಿಗೆ ಅನೇಕ ಗೌರವ, ಪ್ರಶಸ್ತಿ, ಸನ್ಮಾನಗಳು ದೊರೆತಿವೆ. ಪುಟ್ಟಣ್ಣ ಕಣಗಾಲ್ ಪ್ರಶಸ್ತಿ(1992–93),ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘದ ಕೆ.ಸಿ.ಎನ್.ಪ್ರಶಸ್ತಿ

(1993), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1992), ಸಿಂಗಾನಲ್ಲೂರು ಪುಟ್ಟಸ್ವಾಮಯ್ಯ ರಾಜಕುಮಾರ್ ಪ್ರಶಸ್ತಿ (1996–97) –ಇವು ಕೆಲವು ಮುಖ್ಯ ಪ್ರಶಸ್ತಿಗಳು. (ಎಚ್.ಆರ್.ಎಲ್.)

**ಗೀತರೂಪಕ :** ಸಂಗೀತಕ್ಕೆ ಅಳವಡಿಸಿರುವ ನಾಟಕಗಳಿಗೆ ಈ ಹೆಸರಿದೆ. ಇವನ್ನು ಸಂಗೀತನಾಟಕ, ಗೇಯರೂಪಕ ಎಂದೂ ಕರೆವುದಿದೆ. ಸಾಮಾನ್ಯವಾಗಿ ಹಿಂದಿನ ಮತ್ತು ಇಂದಿನ ಅನೇಕ ನಾಟಕಗಳಲ್ಲಿ ನಡುನಡುವೆ ವಿಫುಲವಾಗಿ ಛಂದೋಬದ್ಧವಾದ ಪದ್ಯಗಳು, ಹಾಡುಗಳೂ ಇರುತ್ತವೆ. ಅವನ್ನು ರಾಗವಾಗಿ ಹಾಡುವುದೂ ಸಂಪ್ರದಾಯ. ಆದರೆ ಅವುಗಳಲ್ಲಿ ಉಳಿದ ಭಾಗಗಳು ಗದ್ಯದಲ್ಲಿರುತ್ತವೆ. ಆದ್ದರಿಂದ ಆ ಭಾಗಗಳನ್ನು ಯಾರೂ ಹಾಡುವುದಿಲ್ಲ. ಹೀಗಾಗಿ ಅವನ್ನು ಗೀತರೂಪಕಗಳೆನ್ನಲಾಗದು. ಗೀತರೂಪಕಗಳಲ್ಲಿ ಎಲ್ಲವೂ ಗೇಯಯೋಗ್ಯವಾದ ಮಾತುಗಳೇ ಬರುತ್ತವೆ.

ಇಂದಿನ ರಂಗಭೂಮಿಯ ಪ್ರದರ್ಶನ ವೈವಿಧ್ಯಗಳಲ್ಲಿ ಗೀತರೂಪಕ ಪರಿಪೂರ್ಣವಾದ ಒಂದು ಪ್ರಭೇದವಾಗಿ ಬೆಳೆದಿದೆ. (ಮುಂದೆ ಆಪೆರ ಎಂಬ ಉಪಶಿರೋನಾಮೆಯಲ್ಲಿ ಇದರ ವಿವರಗಳಿವೆ.) ಇಲ್ಲಿ ಸಾಹಿತ್ಯ ಸಂಗೀತಗಳೆರಡಕ್ಕೂ ಒಂದಕ್ಕೊಂದು ಪೋಷಕವಾಗಿ, ಒಂದಕ್ಕೊಂದು ಎರಕಗೊಂಡಂತೆ ಜೊತೆ ಸೇರುತ್ತವೆ. ಸಂಗೀತದಲ್ಲಿ ರಸಾಭಿವ್ಯಕ್ತಿಗೆ ಅವಕಾಶ ಹೆಚ್ಚು. ಭಾವಗಳು ಪ್ರಭಾವಪೂರ್ಣವಾಗಿ, ತೀವ್ರತೆಯಿಂದ ಈ ಮಾಧ್ಯಮದಲ್ಲಿ ಪ್ರಕಟವಾಗುತ್ತವೆ; ಆದರೆ, ವಿವಿಧ ಭಾವ, ರಸಗಳ ಚಿತ್ರಣ ಒಡಮೂಡಿದರೂ ಸನ್ನಿವೇಶಗಳ ವಿವರವಾದ ಪರಿಸ್ಥಿತಿಗಳ ಅರಿವು ಮಾತುಗಳಷ್ಟು ಸ್ಪಷ್ಟವಾಗುವುದು ಇಲ್ಲಿ ಕಷ್ಟಸಾಧ್ಯ. ಈ ಕಾರ್ಯವನ್ನು ಇಲ್ಲಿ ಗೀತಗಳು ಮಾಡುತ್ತವೆ. ಆಗ ರಂಗಭೂಮಿಯ ಮೇಲೆ ಪರಿಪೂರ್ಣವಾದ ಪ್ರದರ್ಶನ ಸ್ಥಿತಿಯೊದಗುತ್ತದೆ.

ಗೀತರೂಪಕಗಳಲ್ಲಿ ಸಾಹಿತ್ಯ ಅಥವಾ ಗೀತಗಳನ್ನು ಪಾತ್ರವರ್ಗ ಮತ್ತು ಹಿಮ್ಮೇಳದವರು ಹಾಡುತ್ತಾರೆ. ಸಂಗೀತ ವಾದ್ಯಮೇಳದ ರೂಪದಲ್ಲಿ ಮೊದಲಿನಿಂದ ಕೊನೆಯವರೆಗೂ ಜೊತೆಗೂಡಿರುತ್ತದೆ. ಕೆಲವೊಮ್ಮೆ, ರೂಪಕಗಳ ಆರಂಭ, ಮಧ್ಯಂತರಗಳಲ್ಲಿ ಪಾತ್ರಗಳೆರಡರ ಮಾತುಗಳ ನಡುವೆ, ವಿಶೇಷ ರಸಭಾವಗಳ ನಿರೂಪಣೆಗಾಗಿ ವಾದ್ಯಮೇಳವನ್ನು ಮಾತ್ರ ಹೊಂದಿಸಿಕೊಳ್ಳುವುದೂ ಇದೆ.

ಸ್ಥೂಲವಾಗಿ ನಾವು ಗೀತರೂಪಕಗಳೆಂದು ಕರೆಯುವ ಪ್ರದರ್ಶನ ಪ್ರಕಾರವನ್ನು ಅವುಗಳ ನಿರೂಪಣಾ ವೈವಿಧ್ಯಗಳಿಗನುಸಾರವಾಗಿ ಹಲವು ರೀತಿಗಳಲ್ಲಿ ವರ್ಗೀಕರಿಸಲು ಸಾಧ್ಯವಾಗುತ್ತದೆ. ಹಾಡುಗಳನ್ನು ಹಿನ್ನಲೆಯಲ್ಲಿ ಮಾತ್ರ ಇರಿಸಿಕೊಂಡು ಅವುಗಳಿಗನುಗುಣವಾಗಿ ಪಾತ್ರಗಳು ರಂಗದ ಮೇಲೆ ಮೂಕಾಭಿನಯವೆಸಗುವ ರೀತಿಯವು ಮೂಕರೂಪಗಳು. ಬಿಳಿದೆರೆಯ ಹಿಂದೆ ಪಾತ್ರಗಳಿದ್ದು ಅವುಗಳ ಅಭಿನಯವನ್ನು ತೆರೆಯ ಮೇಲೆ ಛಾಯರೂಪದಲ್ಲಿ ಮೂಡಿಸುವ ವಿಧಾನವು ಛಾಯರೂಪಕ. ಹಿನ್ನಲೆಯ ಹಾಡುಗಳಿಗನುಗುಣವಾಗಿ ರಂಗದ ಮೇಲೆ ಪಾತ್ರಗಳು ನೃತ್ಯಾಭಿನಯ ಮಾಡಿದಾಗ ಇಲ್ಲವೇ ಹಾಡುಗಳೇ ಇಲ್ಲದೆ ವಾದ್ಯಸಂಗೀತದ ಹಿನ್ನಲೆಯಲ್ಲಿ ಕೇವಲ ನಾಟ್ಯರೂಪದಲ್ಲಿ ನಿರೂಪಣೆಯೊದಗಿಸಿದಾಗ ಅವು ನೃತ್ಯರೂಪಕಗಳಾಗುತ್ತವೆ.

ಭಾರತದಲ್ಲಿ ಪ್ರಚಾರದಲ್ಲಿರುವ ಹಳೆಯ ಗೀತರೂಪಕಗಳು ಈ ಬಗೆಯ ನಿರ್ದಿಷ್ಟವಾದ ವಿಭಜನೆಗೆ ಅಳವಡುವುದಿಲ್ಲ. ಅವು ಗೀತನೃತ್ಯಗಳ ಪ್ರತ್ಯೇಕತೆಯನ್ನು ಇರಿಸಿಕೊಂಡು ರಚನೆಗೊಂಡವುಗಳೂ ಅಲ್ಲ; ಆ ರೀತಿಯಲ್ಲಿ ಬೆಳೆದುಬಂದುವುಗಳೂ ಅಲ್ಲ. ಗೀತರೂಪಕಗಳಲ್ಲಿ ನೃತ್ಯವೂ ನೃತ್ಯರೂಪಕಗಳಲ್ಲಿ ಗೀತವೂ ಬೆರೆದುಕೊಂಡೇ ರೂಪಕಗಳು ರಚನೆಯಾಗಿರುವ ಕಾರಣ ಭಾರತೀಯ ಸಂಗೀತವೆಂದರೆ ಗೀತವಾದ್ಯ ನೃತ್ಯಗಳೆಂಬ ತ್ರಿವಿಧಗಳ ಸಮ್ಮಿಲನವಾಗಿದ್ದುದೂ ಇರಬಹುದು. ಗೀತಂ ವಾದ್ಯಂಚ ನೃತ್ಯಂಚ ತ್ರಯಂ ಸಂಗೀತಮುಚ್ಯತೇ ಎನ್ನುವುದು ಸಂಗೀತಕ್ಕೆ ಹಿಂದಿನ ಶಾಸ್ತ್ರಕಾರರು ಹೇಳಿದ ಲಕ್ಷಣ. ಮುಂದೆ ಸಂಗೀತ ನೃತ್ಯಗಳು ತಮ್ಮ ಪ್ರತ್ಯೇಕತೆಯನ್ನು ಪ್ರದರ್ಶಿಸಿ ಬೆಳೆದಾಗ ಲಾಕ್ಷಣಿಕರು ಗೀತ ವಾದ್ಯೋಭಯಂ ಯತ್ರ ಸಂಗೀತಮಿತಿ ಕೇಚನ ಎಂದರು.

ಭಾರತೀಯ ಗೀತರೂಪಕಗಳ ಮೂಲವನ್ನು ಪ್ರಚಲಿತಶಕದ ಪ್ರಾರಂಭದಿಂದಲೇ ಗುರುತಿಸಬಹುದು. ಕಾಳಿದಾಸನ ವಿಕ್ರಮೋರ್ವಶೀಯ ನಾಟಕದ ನಾಲ್ಕನೆಯ ಅಂಕ ಅಭಿನಯದೊಂದಿಗೆ ಹಾಡಿದ ಗೀತಗಳ ಸಂಕಲನವಾಗಿದೆ. ಪುರೂರವ ಊರ್ವಶಿಯ ವಿರಹದಿಂದ ಉನ್ಮತ್ತನಾಗಿ ವನದಲ್ಲಿ ಅಲೆಯುತ್ತ ಗಿಡಮರ ಪಕ್ಷಿಸಂಕುಲಗಳನ್ನು ಕುರಿತು ಊರ್ವಶಿಯನ್ನು ಕಂಡಿರಾ ಎಂದು ಕೇಳುವ ಸಂದರ್ಭಗಳೆಲ್ಲ ಸಂಸ್ಕೃತ ಭಾಷೆಯಲ್ಲಿರದೆ ಪ್ರಾಕೃತ ಅಪಭ್ರಂಶ ಗೀತಗಳಾಗಿವೆ. ಇವನ್ನು ರಂಗನಿರ್ದೇಶನದಲ್ಲಿ ಕವಿ ಚರ್ಚರಿಕಾ ಎಂದು ಕರೆದಿದ್ದಾನೆ. ಚರ್ಚರಿಕಾ ಎಂದರೆ ನೃತ್ಯಗೀತೆ, ಸಂಗೀತ ನೃತ್ಯವಿಧಾನವಿಶೇಷ ಎಂದು ಪಂಡಿತರು ಅಭಿಪ್ರಾಯಪಟ್ಟಿದ್ದಾರೆ. ಆದುದರಿಂದ ಕಥಾಭಾಗಗಳನ್ನು ರಂಗದ ಮೇಲೆ ಪ್ರದರ್ಶಿಸುವಾಗ ಗೀತನೃತ್ಯರೂಪಕಗಳಾಗಿ ಪ್ರದರ್ಶಿಸುವ ಕ್ರಮವೂ ಭರತಖಂಡದಲ್ಲಿ ಹಿಂದಿನಿಂದಲೇ ಇತ್ತೆಂದು ಕಂಡುಬರುತ್ತದೆ.

ಸಂಪೂರ್ಣ ಕಥಾನಕವನ್ನು ಗೀತನೃತ್ಯವಾಗಿ ಪ್ರದರ್ಶಿಸಿದ ಆಧುನಿಕ ಗೀತರೂಪಕಗಳ ಮತ್ತು ನೃತ್ಯರೂಪಕಗಳ ಮೂಲವನ್ನು 12ನೆಯ ಶತಮಾನದ ಜಯದೇವ ಕವಿಯ ಗೀತಗೋವಿಂದ ಕಾವ್ಯದಲ್ಲಿ ಕಾಣುತ್ತೇವೆ. ಇದು ನೃತ್ಯಸಂಗೀತಗಳಿಂದಲೇ ಪ್ರದರ್ಶಿಸುವ ಸಲುವಾಗಿ ರಚಿಸಲ್ಪಟ್ಟ ಕಾವ್ಯವೆಂಬುದನ್ನು ಅಷ್ಟಪದಿಗಳಿಗೆ ಹೇಳಿರುವ ರಾಗತಾಳಗಳ ಸ್ಪಷ್ಟವಾದ ನಿರ್ದೇಶನದಿಂದ ಕಂಡುಕೊಳ್ಳಬಹುದು. ಈ ಸಂಸ್ಕೃತ ಕಾವ್ಯ 12 ಸರ್ಗಗಳಿಂದಲೂ 24 ಅಷ್ಟಪದಿಗಳಿಂದಲೂ ಕೂಡಿದೆ. ಇದನ್ನೇ ಅನುಸರಿಸಿದ ಇನ್ನೊಂದು ಸಂಸ್ಕೃತಗೀತ–ನೃತ್ಯರೂಪಕವೆಂದರೆ 16ನೆಯ ಶತಮಾನದ ಯತಿನಾರಾಯಣತೀರ್ಥರ ಕೃಷ್ಣಲೀಲಾ ತರಂಗಿಣಿ. ಈ ಕಾವ್ಯ 12 ತರಂಗಗಳಿಂದಲೂ ಹಲವು ಶ್ಲೋಕ, ಗದ್ಯನಿರ್ದೇಶನಗಳಿಂದಲೂ ಕೂಡಿದೆ.

ಕರ್ನಾಟಕ ಸಂಗೀತ ಪಿತಾಮಹಾರೆನಿಸಿದ ವಾಗ್ಗೇಯಕಾರ ತ್ಯಾಗರಾಜರು (1759–1847) ನೌಕಚರಿತ್ರೆ, ಪ್ರಹ್ಲಾದಭಕ್ತಿವಿಜಯ ಮತ್ತು ಸೀತಾರಾಮವಿಜಯ ಎಂಬ ಮೂರು ತೆಲುಗು ಸಂಗೀತನಾಟಕಗಳನ್ನು ಬರೆದಿದ್ದಾರೆ. ಅರುಣಾಚಲ ಕವಿರಾಯ (1711–1778) ಎಂಬುವವರು ತಮಿಳಿನಲ್ಲಿ ರಾಮನಾಟಕ ಎಂಬವ ಸಂಗೀತ ನಾಟಕವನ್ನು ರಚಿಸಿದ್ದಾರೆ. 19ನೆಯ ಶತಮಾನದಲ್ಲಿದ್ದ ಗೋಪಾಲಕೃಷ್ಣಭಾರತಿ ಎಂಬುವರಿಂದ ರಚಿತವಾದ ನಂದನಾರ್ ಚರಿತ್ರೆ ತಮಿಳಿನಲ್ಲಿ ಅತ್ಯಂತ ಪ್ರಸಿದ್ಧವಾದ ಸಂಗೀತನಾಟಕ ವೆನಿಸಿದೆ. ಇವುಗಳೆಲ್ಲವನ್ನು ಗೀತನಾಟಕ ಎನ್ನುವುದಕ್ಕಿಂತ ಸಂಗೀತನಾಟಕ ಎಂದು ಕರೆಯುವುದು ಉಚಿತ. ಭಕ್ತಶಿರೋಮಣಿಗಳೂ ಅಪ್ರತಿಮ ಸಂಗೀತವಿದ್ವಾಂಸರೂ ವಾಗ್ಗೇಯಕಾರರೂ ಆದ ಇವರ ಈ ನಾಟಕಗಳು ಅತ್ಯುತ್ತಮ ಸಂಗೀತಕೃತಿಮಾಲಿಕೆಗಳಾಗಿ ಕಂಗೊಳಿಸಿದವು. ರಂಗಭೂಮಿಯ ಮೇಲೆ ವಿವಿಧಪಾತ್ರಗಳು ಇವನ್ನು ಹಾಡುವಾಗ ಸಾಹಿತ್ಯಕ್ಕಿಂತಲೂ ಸಂಗೀತದ ಕಡೆಗೇ ಇವುಗಳ ಭಾರ ಹೆಚ್ಚಾಗುವುದು ಸ್ವಾಭಾವಿಕವಾದುದರಿಂದ ಆಧುನಿಕ ಗೀತರೂಪಕಗಳಿಗೆ ಇವನ್ನು ಮೊದಲ ಮೆಟ್ಟಲುಗಳೆನ್ನಬಹುದು.

ಹೀಗೆಯೇ, ಉತ್ತರ ದಕ್ಷಿಣ ಕನ್ನಡ ಜಿಲ್ಲೆಗಳ ಯಕ್ಷಗಾನ, ಕೇರಳದ ಕಥಕಳಿ ತಮಿಳು ನಾಡಿನ ಭಾಗವತಮೇಳ, ಆಂಧ್ರದ ಕೂಚುಪುಡಿಗಳಲ್ಲೂ ಇಂದಿನ ಗೀತರೂಪಕಗಳ ಮೂಲವನ್ನು ಗುರುತಿಸಬಹುದು. ಕಥಾನಕವನ್ನು ಹಿಮ್ಮೇಳವಾಗಿ ಹಾಡುವುದು. ರಂಗದಲ್ಲಿ ಉಚಿತವಾದ ವೇಷಭೂಷಣಗಳನ್ನು ಧರಿಸಿದ ಪಾತ್ರವರ್ಗ ಹಾಡುಗಳಿಗನುಗುಣವಾಗಿ ನೃತ್ಯ, ಅಭಿನಯಗಳನ್ನೆಸಗುವುದು– ಇದು ಈ ಬಗೆಯ ಪ್ರದರ್ಶನಗಳಲ್ಲಿ ಕಂಡುಬರುವ ಸಾಮಾನ್ಯಕ್ರಮ. ಕನ್ನಡದ ಯಕ್ಷಗಾನದಲ್ಲಿ ಪಾತ್ರಗಳಿಗೆ ನೃತ್ಯದೊಂದಿಗೆ ಮಾತುಗಾರಿಕೆಗೂ ಅವಕಾಶವಿದೆ. ಕಥಕಳಿಯಲ್ಲಿ ಪಾತ್ರಗಳ ಕಾರ್ಯವೆಲ್ಲವೂ ನೃತ್ಯ, ಮೂಕಾಭಿನಯಗಳ ಮೂಲಕವೇ ಸಾಗುತ್ತದೆ. ಆದುದರಿಂದ ಈ ಬಗೆಯ ಪ್ರದರ್ಶನಗಳು ಗೀತ ನೃತ್ಯಸಂಗೀತಗಳಿಂದ ಕೂಡಿದಂಥವು, ಅಷ್ಟೆ.

**ಆಪೆರ:** ಇಂದು ನಾವು ಗೀತರೂಪಕ ಎನ್ನುವಾಗ ಪಾಶ್ಚಾತ್ಯನಾಟಕ ಪ್ರಕಾರಗಳಲ್ಲೊಂದಾದ ಆಪೆರ ಎಂಬ ನಿರೂಪಣ ವಿಧಾನವೊಂದನ್ನು ಲಕ್ಷ್ಯದಲ್ಲಿರಿಸಿಕೊಂಡಿರುತ್ತೇವೆ. ಪಾಶ್ಚಾತ್ಯ ವಿದ್ವಾಂಸರು ಆಪೆರಗಳ ಮೂಲವನ್ನು ಗ್ರೀಕ್ ದುರಂತನಾಟಕಗಳಿಗೆ ಕೊಂಡೊಯ್ಯುತ್ತಾರೆ. ದುರಂತ ಚಿತ್ರಣವನ್ನು ಕಾವ್ಯ, ಸಂಗೀತ, ನೃತ್ಯಗಳ ಮೂಲಕ ಪ್ರದರ್ಶಿಸುವ ವಿಧಾನದಿಂದಲೇ ಆಪೆರ ವಿಧಾನಗಳ ಅನುಸರಣೆಯಿಂದಲೇ ಇಂದಿನ ಗೀತರೂಪಕಗಳು ಉಂಟಾದುವು ಎಂದೂ ಹೇಳುತ್ತಾರೆ. ಇಂದು ನಾವು ಆಪೆರ ಎಂದು ಖಚಿತವಾಗಿ ಕರೆಯುವ, ಪಾಶ್ಚಾತ್ಯ ರಂಗಭೂಮಿ ಪ್ರದರ್ಶನ ಪ್ರಕಾರ ಹುಟ್ಟಿದುದು ಇಟಲಿಯಲ್ಲಿ, 16ನೆಯ ಶತಮಾನದ ಬರೋಕ್ ಕಲಾವಿಧಾನ ಪ್ರಬುದ್ಧ ಸ್ಥಿತಿಯಲ್ಲಿದ್ದಾಗ. ಸದ್ಯಕ್ಕೆ ಸಿಕ್ಕಿರುವ ಸಾಹಿತ್ಯದ ದೃಷ್ಟಿಯಿಂದ ಹೇಳುವುದಾದರೆ ಇಟಲಿಯ ಪ್ರಥಮ ಆಪೆರ ಜಾಕೊಪೊ ಪೆರಿಯ (1597) ದಾಫ್ನೆ. ಈಗ ಇದರ ಸಂಗೀತ ವಿವರಗಳು ಕಳೆದುಹೋಗಿವೆ. ನಿಜವಾಗಿ ಆಪೆರಗಳನ್ನು ಮೊದಲ ಬಾರಿಗೆ ಸಮರ್ಥವಾಗಿ ರಚಿಸಿದವನೆಂದರೆ ಮಾಂಟೆವೆರ್ಡಿ. ಮೊದಲ ಆಪೆರ ಭವನ ನಿರ್ಮಾಣವಾದದ್ದು ವೆನಿಸಿನಲ್ಲಿ, 1637ರಲ್ಲಿ. ಸಂಗೀತ ಭಾಷಣ ಮತ್ತು ಮೇಳ ವಾದ್ಯ ಹಾಗೂ ಹಾಡುಗಾರಿಕೆಗಿದ್ದ ಪ್ರಾಶಸ್ತ್ಯ ಕಡಿಮೆಯಾಗಿ ರಾಗಕ್ಕೂ ತಜ್ಞ ಹಾಡುಗಾರನಿಗೂ ಪ್ರಾಧಾನ್ಯ ಬಂದಾಗ ಆಪೆರಕ್ಕೆ ನಿರ್ದಿಷ್ಟವಾದ ಒಂದು ರೂಪು ಬಂದಿತೆನ್ನಬಹುದು. ಪ್ರಾರಂಭದಲ್ಲಿ ಪುರಾಣಗಳಿಂದ ಆಪೆರ ಕಥಾವಸ್ತುವನ್ನು ಆಯ್ಕೆ ಮಾಡುತ್ತಿದ್ದರು. ಅನಂತರ ಹರ್ಷನಾಟಕಗಳು ಪ್ರಹಸನಗಳು ಬಳಕೆಗೆ ಬಂದುವು. 17ನೆಯ ಶತಮಾನದಲ್ಲಿ ಮೂರು ಅಂಕಗಳ ಆಪೆರ ಸೀರಿಯ ಉದಯವಾಗಿ ಹಿಂದಿನ ಆಪೆರಗಳಲ್ಲಿರುತ್ತಿದ್ದ ಅಸಂಬದ್ಧ ಸಂಗತಿಗಳು ಅತ್ಯಲಂಕಾರ ಮಾತುಕತೆಗಳು ಕಡಿಮೆಯಾದವು. ಆಪೆರ ಬಫಾದಲ್ಲಿ ಸಂಗೀತವಿಲ್ಲದ ಸಂಭಾಷಣೆಗೆ ಸ್ಥಾನವಿರಲಿಲ್ಲ. ಆಪೆರಕಾಮೀಕ್ ಬಂದ ಮೇಲೆ ಸಂಗೀತವಿಲ್ಲದ ಸಂಭಾಷಣೆಗೆ ಎಡೆಸಿಕ್ಕಂತಾಯಿತು. ಫ್ರೆಂಚ್ ಮಹಾಕ್ರಾಂತಿಯಾದ ಮೇಲೆ, ನಯನಮನೋಹರವೂ, ರಸೋದ್ರೇಕ ಉಳ್ಳವೂ ಆದ ಅನೇಕ ಆಪೆರಗಳು

ನಿರ್ಮಾಣವಾದವು. ಅನಂತರ, ಐತಿಹಾಸಿಕ ವಸ್ತುವನ್ನುಳ್ಳ, ಧಾರ್ಮಿಕ, ಮನೋಭಾವವನ್ನು ಶ್ರುತಪಡಿಸುವ ತೀವ್ರರಾಗಭಾವಗಳನ್ನುಳ್ಳ ಗ್ರಾಂಡ್ ಆಪೆರಗಳು ಬಂದವು. ಆಪೆರ ಕರ್ತೃಗಳಲ್ಲಿ ಬಹು ಮುಖ್ಯರಾದವರೆಂದರೆ ಗ್ಲುಕ್, ಮೋಟ್ಸಾರ್ಟ್, ವೆರ್ಡಿ, ಪೂಷೀನಿ.

ಆಪೆರಕಾಮೀಕ್‌ನಿಂದ ಕವಲೊಡೆದು ಮೇಲೆದ್ದ ಒಂದು ಬಗೆಯ ನಾಟಕವನ್ನು ಆಪೆರೆಟ್ಟ ಎನ್ನುತ್ತಾರೆ. ಇವುಗಳ ವಸ್ತು ಲಘುವೂ ಕರುಳು ಕರಗಿಸುವಂಥದ್ದೂ ಆಗಿರುತ್ತದೆ. ಅನೇಕ ವೇಳೆ ಇವುಗಳಲ್ಲಿ ವ್ಯಂಗ್ಯ ಪ್ರಧಾನವಾಗಿರುತ್ತದೆ. ಸಂಭಾಷಣೆ ಗದ್ಯದಲ್ಲಿದ್ದರೂ ಹಿತವಾದ ಲಘುಸಂಗೀತ ಉದ್ದಕ್ಕೂ ಇರುತ್ತದೆ. ಆಫೆನ್‌ಬಾಕ್, ಜೋಹಾನ್ ಸ್ಟ್ರೌಸ್ (ಕಿರಿಯ), ಗಿಲ್ಬರ್ಟ್ ಮತ್ತು ಸಲಿವನ್, ವಿಕ್ಟರ್ ಹರ್ಬರ್ಟ್, ರಾಮ್‌ಬರ್ಗ್ ಸಿಗ್ಮಂಡ್–ಇವರು ಪ್ರಸಿದ್ಧ ಆಪರೆಟ್ಟ ಕರ್ತೃಗಳು.

ಮಾರಿಯಾ ಕಲಾಸ್, ಲಿಸಾ ಡೆಲ್ಲ ಕಾಸಾ, ಸಿಯೊ ಪಿಂತ್ಯಾ, ಆನಾ ಲಿಸೆ ರಾಥೆನ್‌ಬರ್ಗರ್, ಎನ್ರಿಕೊ ಕರೂಸೊ, ಜಾನ್ ಪಿಯರ್ಸ್, ಜೋನ್ ಸದರ್ಲೆಂಡ್, ಕ್ಯಾತಲೀನ್ ಫೆರಿಯರ್ ಮೊದಲಾದವರು. ಆಧುನಿಕರಲ್ಲಿ ಖ್ಯಾತ ಆಪೆರ ಕಲಾವಿದರು.

ಪಾಶ್ಚಾತ್ಯ ಆಪೆರಗಳು ಒಬ್ಬ ವ್ಯಕ್ತಿಯ ಕಲ್ಪನೆ ಅಥವಾ ರಚನೆಗಳಲ್ಲ; ನಾಲ್ಕು ಮಂದಿ ಪ್ರತಿಭಾಶಾಲಿಗಳ ಒಮ್ಮತದ ನಿರ್ಮಾಣಗಳು. ಸಂಯೋಜಕನಾದವ ವಸ್ತು ಮತ್ತು ಇಡಿಯ ರೂಪಕದ ರೀತಿ, ನೀತಿಗಳ ವಿವರಗಳನ್ನು ನಿಶ್ಚಯಿಸುತ್ತಾನೆ; ಸಾಹಿತಿ ಹಾಡುಗಳನ್ನು ರಚಿಸುತ್ತಾನೆ; ಸಂಗೀತ ವಿದ್ವಾಂಸ ಇಡಿಯ ರೂಪಕವನ್ನು ಸ್ವರ ಸಂಯೋಜನೆಗೆ ಒಳಪಡಿಸುತ್ತಾನೆ; ನಿರ್ದೇಶಕ ರಂಗಸಿದ್ಧತೆ, ವೇಷಭೂಷಣ, ಪರಿಕರಗಳನ್ನು ತೀರ್ಮಾನಿಸುತ್ತಾನೆ. ಆಪೆರಗಳಲ್ಲಿ ವಾದ್ಯಸಂಗೀತಕ್ಕೆ ತುಂಬ ಪ್ರಾಮುಖ್ಯ ಇದೆ. ವಿವಿಧ ಸನ್ನಿವೇಶಗಳಲ್ಲಿ ಭಾವಪ್ರದರ್ಶನ, ಪರಿವರ್ತನೆ, ತೀವ್ರತೆ, ಪ್ರಖರತೆಗಳನ್ನು ಪರಿಣಾಕಾರಿಯಾಗಿ ನಿರೂಪಿಸಲು ವಾದ್ಯಮೇಳ ಸಂಗೀತ ಅತ್ಯಂತ ಸಹಕಾರಿಯಾಗುವಂತೆ ಮಾಡಿದ್ದಾರೆ. ಕಥಾ ಸಂದರ್ಭಗಳಿಗೆ ಪೋಷಕವಾಗಿ ಮತ್ತು ರೂಪಕದ ಮಧ್ಯಂತರಗಳಲ್ಲಿ ನೃತ್ಯವನ್ನೂ ಸಂಯೋಜಿಸುತ್ತಾರೆ. ಆದರೆ ಇಡಿಯ ಪ್ರದರ್ಶನವೇ ನೃತ್ಯಗಳಿಂದ ಪೂರೈಸುವ ರೀತಿ ರೂಪುಗೊಂಡಾಗ ಬ್ಯಾಲೆ ಎಂಬ ಇನ್ನೊಂದು ಬಗೆಯ ನಿರೂಪಣ ವಿಧಾನ ರೂಪುಗೊಳ್ಳುತ್ತದೆ.

ಪಾಶ್ಚಾತ್ಯ ಆಪೆರಗಳು ಅವುಗಳ ವಸ್ತುಭಿನ್ನತೆಯಿಂದಾಗಿ ಎರಡು ವಿಧಗಳಲ್ಲಿ ವರ್ಗೀಕರಣ ಹೊಂದಿವೆ. ಆಪೆರ ಗ್ರಾಂಡ್ ಎಂಬುದು ಗಂಭೀರವಾದ ಕಥಾ ವಸ್ತುವನ್ನೊಳಗೊಂಡಿದ್ದು ಕಾರುಣ್ಯ, ದುರಂತಗಳಲ್ಲಿ ಅಂತ್ಯವಾಗುತ್ತದೆ. ಆಪೆರ ಕಾಮಿಕ್ ಎಂಬುದು ಇನ್ನೊಂದು ವರ್ಗ. ಇದರಲ್ಲಿನ ಕಥಾಸನ್ನಿವೇಶದಲ್ಲಿ ಹಾಸ್ಯ, ವಿಡಂಬನೆಗಳಿಗೆ ಅವಕಾಶ ಹೆಚ್ಚು. ಪಾತ್ರಧಾರಿಗಳಲ್ಲಿ ಹೆಚ್ಚಿನವರು ವಿದೂಷಕವರ್ಗಕ್ಕೆ ಸೇರಿದವರು. ವಿನೋದಪೂರ್ಣವಾದ ಹಾಡುಗಳೂ ಕೆಲವೊಮ್ಮೆ ಗದ್ಯ ಸಂಭಾಷಣೆಗಳೂ ಇದರಲ್ಲಿ ಕಾಣಿಸಿಕೊಳ್ಳುತ್ತವೆ. ಕೇವಲ ಉತ್ತೇಜಕ ಪರಿಸರಗಳ ಪ್ರದರ್ಶನ ವಿನ್ಯಾಸಗಳಿಂದಲೇ ಈ ವರ್ಗದ ಆಪೆರಗಳು ಮುಂದುವರಿಯುತ್ತವೆ.

**ಸಂಗೀತದ ಸ್ಥಾನ:** ಗೀತರೂಪಕಗಳು ಸಾಹಿತ್ಯ ಸಂಗೀತಗಳ ಸಂಗಮ. ಆದರೆ ಪ್ರದರ್ಶನಾವಕಾಶದಲ್ಲಿ, ಅವು ಒಂದನ್ನೊಂದು ಮೀರಿಸುವಂತೆ ತಮ್ಮ ವೈಯಕ್ತಿಕತೆಯನ್ನು ಮೆರೆಸಬಾರದು. ಸಾಹಿತ್ಯ ವೈಖರಿಯ ಅಥವಾ ಸಂಗೀತ ಸೌಂದರ್ಯದ ಪ್ರದರ್ಶನ ಗೀತರೂಪಕಗಳ ಉದ್ದೇಶವಲ್ಲ. ಇಡಿಯ ರೂಪಕದ ಯಾವುದೇ ಒಂದು ಭಾಗವೂ ಕೇವಲ ಸಾಹಿತ್ಯ ಇಲ್ಲವೆ ಸಂಗೀತಕ್ಕೆ ಪ್ರಧಾನ್ಯ ತೋರಿಸುವ ಲಕ್ಷಣವನ್ನು ಹೊಂದಿರಬಾರದು. ಸಂಗೀತ ಸಾಹಿತ್ಯಗಳು ಪ್ರತಿಯೊಂದು ಹೆಜ್ಜೆಗೂ ಒಂದನ್ನೊಂದು ಅನುಸರಿಸಬೇಕು; ಒಂದರಲ್ಲೊಂದು ಬೆರೆಯಬೇಕು; ಒಂದೇ ಆಗಿ ಕಂಗೊಳಿಸಬೇಕು.

ಹಿನ್ನಲೆಯ ವಾದ್ಯಮೇಳ ಗೀತರೂಪಕಗಳಲ್ಲಿ ಪ್ರಮುಖವಾದ ಒಂದು ಅಂಗ. ಆದರೆ ಇದು ಯಾವುದೇ ಒಂದು ವಾದ್ಯವೈಖರಿಯನ್ನು ಪ್ರದರ್ಶಿಸುವ ಅಂಗವಲ್ಲ. ಒಂದು ಭಾವಪ್ರತಿಪಾದನೆಯ ಅವಕಾಶದಲ್ಲಿ ಒಂದೊಂದು ವಾದ್ಯ ವಿಶೇಷ ಪ್ರಮುಖಪಾತ್ರವಹಿಸಿದರೂ ಅವುಗಳೆಲ್ಲವುಗಳ ಒಮ್ಮತವೇ ಕೊನೆಯಲ್ಲಿ ಉಳಿಯುವಂತಾಗಬೇಕು. ವಾದ್ಯಮೇಳದ ಸಾಮೂಹಿಕ ಧ್ವನಿರೂಪಕದ ಸಾಹಿತ್ಯವನ್ನು ಮುಳುಗಿಸಬಾರದು; ಅಭಿನಯಕ್ಕೆ ರಸಾನುಭವಕ್ಕೆ ಅದು ಆತಂಕವಾಗಬಾರದು.

ಗೀತರೂಪಕಗಳಲ್ಲಿ ಸಾಹಿತ್ಯ ಅನಿವಾರ್ಯವಾದರೂ ಅದು ಕಾವ್ಯಲಕ್ಷಣಗಳನ್ನೆಲ್ಲ ಹೊಂದಿರಬೇಕಾಗಿಲ್ಲ. ಚಿಂತನಾವಕಾಶವುಳ್ಳ ಸಾಹಿತ್ಯದ ಸ್ವಾರಸ್ಯನುಭವ ಓದು ಗಬ್ಬವಾಗಿ ರಂಜಿಸಬಹುದಲ್ಲದೆ ರಂಗಭೂಮಿ ಪ್ರದರ್ಶನಗಳಲ್ಲಿ ಕಂಗೊಳಿಸಲಾರದು. ವಾದ್ಯಮೇಳ ಸಂಗೀತದ ಹೊನಲಿನಲ್ಲಿ, ರಂಗವ್ಯವಸ್ಥೆ, ವೇಷಭೂಷಣಗಳ ಅಪೂರ್ವ ಶೋಭೆಗಳಲ್ಲಿ ಪ್ರದರ್ಶನ ಸಾಗುತ್ತಿರುವಾಗ ವಿರಾಮ ವಿಶ್ಲೇಷಣಾರ್ಹವಾದ ಸಾಹಿತ್ಯ ಸ್ವಾರಸ್ಯಾನುಭವಕ್ಕೆ ಅವಕಾಶ ದೊರೆಯುವುದಿಲ್ಲ. ಸಂಗೀತದಲ್ಲಿ ಮೂಡಿದ ಭಾವಗಳನ್ನು ಸ್ಪಷ್ಟಪಡಿಸುವ, ಕಥಾನಕವನ್ನು ವಿವರಿಸಿ ಮುಂದುವರಿಸುವ, ಸುಲಭ ಸ್ವರಸಂಯೋಜನೆಗೆ ಅವಕಾಶವಿರುವಂತೆ ಲಾಲಿತ್ಯಪೂರ್ಣವಾದ ಪದರಚನೆಗಳುಳ್ಳ, ಅಂತ್ಯಪ್ರಾಸಹಿತವಾದ ಸಾಹಿತ್ಯವೇ ಗೀತರೂಪಕಗಳಿಗೆ ಉತ್ತಮ ಸಾಹಿತ್ಯವೆನಿಸುತ್ತದೆ.

ಗೀತರೂಪಕ ಸಂಗೀತ ಕಥಾವಸ್ತುವಿನ ಭಾವ, ರಸಗಳನ್ನು ಪ್ರತಿಬಿಂಬಿಸುವಂತಿರಬೇಕು. ಇವುಗಳ ಸಂಗೀತ ಮಾರ್ಗಪದ್ಧತಿಯಲ್ಲೇ ಇರಬೇಕಾದ ಅವಶ್ಯವಿಲ್ಲ. ಭಾರತೀಯ ಮಾರ್ಗಸಂಗೀತ ಪದ್ಧತಿಯಲ್ಲಿ ರಾಗಗಳು ಕರುಣ, ಶೃಂಗಾರ ವೀರರಸಗಳನ್ನು ಪ್ರತಿಬಿಂಬಿಸಿದಷ್ಟು ಪ್ರಭಾವಯುತವಾಗಿ ಉಳಿದ ರಸಗಳನ್ನು ಪ್ರತಿಪಾದಿಸುವುದಿಲ್ಲ. ಹಿಂದಿನ ಸಂಗೀತ ವಿದ್ವಾಂಸರು, ವಾಗ್ಗೇಯಕಾರರು, ಎಲ್ಲರೂ ಪರಮಭಾಗವತರೂ ಭಕ್ತಿಪಂಥಿಗಳೂ ಆಗಿದ್ದು ಸಂಗೀತವನ್ನು ಪರಮಾರ್ಥ ಸಾಧನಮಾರ್ಗವೆಂದು ತಿಳಿದಿದ್ದರು. ಅಂಥವರಿಗೆ ಲೌಕಿಕ ರೀತಿನೀತಿಗಳಿಗಾಗಿ ಸಂಗೀತವನ್ನು ಬಳಸುವ ಅವಶ್ಯಕತೆಯಾಗಲಿ ಔಚಿತ್ಯವಾಗಲಿ ಕಾಣಿಸಲಿಲ್ಲ. ಆದುದರಿಂದ ಭಾರತೀಯ ಮಾರ್ಗ ಸಂಗೀತದಲ್ಲಿ ಹಾಸ್ಯ, ಅದ್ಭುತ, ಭೀಭತ್ಸ, ರೌದ್ರ ಮೊದಲಾದ ಯಶಸ್ವೀ ನಿರೂಪಣ ಕಷ್ಟಸಾಧ್ಯವಾಗುತ್ತದೆ. ರಂಗಭೂಮಿಯ ಮೇಲೆ ಎಲ್ಲ ರಸಗಳ ಪ್ರತಿಪಾದನೆಯೂ ಅನಿವಾರ್ಯ. ಆದುದರಿಂದ ದೇಶ್ಯರಾಗಗಳೂ ರಸಭಾವಗಳಿಗನುಗುಣವಾಗಿ ಮೇಳೈಸಿದ ಸಂಗೀತ ಸ್ವರಗಳೂ, ಮಿಶ್ರರಾಗಗಳು ಲಲಿತ ಅಥವಾ ಸುಗಮ ಸಂಗೀತ ಎನಿಸಿ ಗೀತರೂಪಕಗಳಲ್ಲಿ ಮಾರ್ಗಸಂಗೀತದೊಡನೆ ಪ್ರಮುಖ ಸ್ಥಾನ ಪಡೆಯಬೇಕಾಗುತ್ತದೆ.

ಸಾಹಿತ್ಯ ಸಂಗೀತಗಳೆರಡರ ಎರಕವಾದ ಗೀತರೂಪಕದ ನಿರ್ಮಾಣ ಇಬ್ಬಗೆಯಲ್ಲಾಗಬಹುದು. ಸಾಹಿತಿ ವಸ್ತು ವಸ್ತುವನ್ನು ಆರಿಸಿಕೊಂಡು ಉಚಿತನುಡಿಗಳಿಂದ ರೂಪಕವನ್ನು ಪೂರೈಸಿದ ಬಳಿಕ ಸಂಗೀತಗಾರ ಆ ಹಾಡುಗಳಿಗೆ ಸನ್ನಿವೇಶಗಳಿಗೆ ಒಪ್ಪುವ ಸ್ವರಸಂಯೋಜನೆಯನ್ನು ಮಾಡುವುದು ಒಂದು ವಿಧದ ರಚನಾಕ್ರಮ. ಸಂಗೀತಗಾರ ವಸ್ತುವಿನ ರಚನಾವಿಧಾನವನ್ನು ಕಲ್ಪಿಸಿಕೊಂಡು ವಿವಿಧ ಸನ್ನಿವೇಶಗಳಿಗೆ ಮತ್ತು ಹಾಡುಗಳ ಸ್ಥಳಗಳಿಗೆ ಅನುಗುಣವಾದ ಸ್ವರಸಂಯೋಜನೆಯನ್ನು ಪೂರೈಸಿದ ಬಳಿಕ ಗೀತಭಾಗಗಳನ್ನು ರಚಿಸುವ ಹೊಣೆಯನ್ನು ಸಾಹಿತಿಗೊಪ್ಪಿಸುವುದು ಎರಡನೆಯ ವಿಧ. ಸಂಗೀತ ಸಾಹಿತ್ಯಗಳೆರಡರಲ್ಲೂ ರಚನಾಶಕ್ತಿಯನ್ನು ಹೊಂದಿದವರು ವಿರಳವಾದುದರಿಂದ ಕವಿ ಮತ್ತು ಸಂಗೀತಗಾರರ ಈ ರೀತಿಯ ಪರಸ್ಪರ ಸಹಕಾರ ಅನಿವಾರ್ಯವಾಗುತ್ತದೆ. ಸಾಮಾನ್ಯ ಸಂಗೀತಜ್ಞಾನವಿದ್ದ ಸಾಹಿತಿ, ಸಾಹಿತ್ಯಾಭಿರುಚಿವುಳ್ಳ ಸಂಗೀತಗಾರ, ಇವರಿಂದ ನಿರ್ಮಾಣವಾದ ಗೀತರೂಪಕಗಳು ಉತ್ತಮವಾಗಿರುತ್ತವೆ. ಆದರೂ, ಸಾಹಿತಿ ಮತ್ತು ಸಂಗೀತಗಾರರು ತಮಗೆ ಪಾಂಡಿತ್ಯವಿಲ್ಲದ ಕ್ಷೇತ್ರದಲ್ಲಿ ಎಷ್ಟೊಂದು ಅಭಿರುಚಿಯುಳ್ಳವರಾಗಿದ್ದರೂ ಒಬ್ಬರೊಡನೊಬ್ಬರು ಎಷ್ಟೇ ಸಹಮತದಿಂದ ವರ್ತಿಸಿದರೂ ಭಾವರಸಗಳ ಪರಿಪೋಷಣೆಯಲ್ಲಿ ಹೆಜ್ಜೆ ಹೆಜ್ಜೆಗೂ ಏಕತ್ವವನ್ನು ಸಾಧಿಸಿ ಗೀತರೂಪಕಗಳನ್ನು ಪರಿಪೂರ್ಣಗೊಳಿಸುವುದು ಅಷ್ಟೊಂದು ಸುಲಭವಲ್ಲ. ಆದುದರಿಂದ ಸಂಗೀತ–ಗೀತ ಅಥವಾ ಧಾತು ಮಾತುಗಳೆರಡೂ ಒಬ್ಬನಿಂದಲೇ, ಎಂದರೆ ವಾಗ್ಗೇಯ ಕಾರನಿಂದ ರಚನೆಗೊಂಡ ಗೀತರೂಪಕಗಳು ಮಾತ್ರ ಅತ್ಯುತ್ತಮ ಗೀತರೂಪಕಗಳಾಗುತ್ತವೆ.

ಆಧುನಿಕ ಗೀತರೂಪಕಗಳಲ್ಲಿ ಪೌರಾಣಿಕ, ಚಾರಿತ್ರಿಕ, ಅಥವಾ ಕಾಲ್ಪನಿಕವಾದ ನಿರುಪಾಧಿಕ ವಸ್ತುಗಳಿರುವಂಥವು. ಮತ್ತು ಲಘು ವಿನೋದ ಅಥವಾ ಕುಚೇಷ್ಟೆಯೇ ಉದ್ದೇಶವಾಗಿರುವ ವಿಡಂಬನಾತ್ಮಕ ರೂಪಕಗಳು ಎಂಬ ಎರಡು ವರ್ಗಗಳನ್ನು ಗುರುತಿಸಬಹುದು. ಮೊದಲನೆಯ ವರ್ಗದಲ್ಲಿ ಸಾಹಿತ್ಯ ಸಂಗೀತಗಳೆರಡಕ್ಕೂ ಸಮಾನವಾದ ಪ್ರಾಧಾನ್ಯ. ಗೀತಗಳು ಕಾವ್ಯಲಕ್ಷಣಗಳನ್ನೂ, ಸಂಗೀತವು ಮಾರ್ಗಸಂಪ್ರದಾಯವನ್ನು ಹೆಚ್ಚಾಗಿ ಹೊಂದಿರುತ್ತದೆ. ಕೆಲವೊಮ್ಮೆ ಸಂಗೀತಕ್ಕೆ ಹೆಚ್ಚಿನ ಪ್ರಾಧಾನ್ಯ ದೊರೆಯುವುದೂ ಇದೆ. ವಿಡಂಬನ ವರ್ಗದಲ್ಲಿ ಸಾಹಿತ್ಯಕ್ಕೆ ಪ್ರಾಧಾನ್ಯ ಹೆಚ್ಚು. ಗೀತಗಳೆಲ್ಲವೂ ಸಾಮಾನ್ಯವಾಗಿ ಜಾನಪದಶೈಲಿಯಲ್ಲಿರುತ್ತವೆ ಅಥವಾ ಪದ್ಯ ಗಂಧಿ ಗದ್ಯಗಳಾಗಿರುತ್ತವೆ. ಸರಳ ರಗಳೆಗಳಾಗಿರುವುದೂ ಉಂಟು. ಇಂಥ ರೂಪಕಗಳಲ್ಲಿ ಸಾಹಿತ್ಯದ ಪ್ರತಿಯೊಂದು ಶಬ್ದವೂ ಅರ್ಥವಾಗದಿದ್ದಲ್ಲಿ ಸ್ವಾರಸ್ಯಾನುಭವಕ್ಕೆ ಕೊರತೆಯಾಗುತ್ತದೆ. ಸಂಗೀತ ಇಲ್ಲಿ ಕೇವಲ ಹಿನ್ನಲೆಯನ್ನಾಶ್ರಯಿಸುತ್ತದೆ; ಕೆಲವೊಮ್ಮೆ ಮಧ್ಯಂತರಗಳಲ್ಲಿ ಸ್ವಲ್ಪ ಪ್ರಾಮುಖ್ಯವನ್ನು ಪಡೆಯಲೂಬಹುದು. ಗೀತಗಳೆಲ್ಲವನ್ನೂ ಜಾನಪದ ಧಾಟಿಗಳಲ್ಲಿ ಅಥವಾ ಸಂಗೀತಸ್ವರಗಳ ಆಧಾರದಲ್ಲಿ ರಾಗ ನಿರ್ದೇಶನವಿರಹಿತವಾಗಿ, ಕೇವಲ ಭಾವಕ್ಕನುಗುಣವಾದ, ಶ್ರಾವ್ಯ ಮೌಲ್ಯದ ಸ್ವರಜೋಡಣೆಗಳಿಂದ ರೂಪಿಸಿಕೊಳ್ಳಬೇಕಾಗುತ್ತದೆ.

**ಕನ್ನಡ ಗೀತರೂಪಕಗಳು:** ಕನ್ನಡದಲ್ಲಿ ಆಧುನಿಕ ಗೀತರೂಪಕಗಳ ಮೂಲ ಪುರುಷರು ಇಬ್ಬರು –ಶಿವರಾಮ ಕಾರಂತರು ಮತ್ತು ಪು. ತಿ.ನರಸಿಂಹಾಚಾರ್ಯರು. ಕಾರಂತರ ಗೀತರೂಪಕಗಳು ಸಂಗೀತ ಮಾಧ್ಯಮದ ಮೂಲಕವೇ ಸಾಗುವಂಥವು. ಅವುಗಳಿಂದ ಸಂಗೀತವನ್ನು ಹೊರತಾಗಿಸಿದರೆ ರೂಪಕವೇ ಇಲ್ಲವಾಗುತ್ತದೆ. ಗೀತಗಳ

ಹಾಡುವಿಕೆಯನ್ನು ಅವರು ಹಿಂದೂಸ್ತಾನೀ ಸಂಗೀತ ಪದ್ಧತಿಯಲ್ಲಿರಿಸಿದ್ದಾರೆ. ಅವರ ರೂಪಕಗಳನ್ನು ಸಂಗೀತ ರಹಿತವಾಗಿ ಓದಿದಲ್ಲಿ ನೀರಸವಾಗಿ ಕಾಣಿಸಬಹುದು. ಆದರೆ, ರಂಗಭೂಮಿಯ ಮೇಲೆ, ಪ್ರದರ್ಶನದಲ್ಲಿ ಇವು ಸಂಗೀತದೊಡನೆ ಸೇರಿದಾಗ ಸತ್ತ್ವಪೂರ್ಣವಾದ ಹಾಡುಗಳಾಗಿ ಪರಿಣಮಿಸುತ್ತವೆ; ಇವು ಸಂಗೀತದೊಂದಿಗೆ ಸಮರಸವಾಗಿ ಬೆರೆಯುತ್ತವೆ; ಸಾಹಿತ್ಯ ಸಂಗೀತಗಳೆರಡರ ಸಂಗಮವಾದ ಅದ್ಭುತ ರಸಲೋಕವೊಂದನ್ನು ಕಾಣಿಸುತ್ತವೆ. ಗೀತರೂಪಕಗಳ ಎಲ್ಲ ಪ್ರಕಾರಗಳಿಗೂ ಕಾರಂತರ ರೂಪಕಗಳಲ್ಲಿ ಉದಾಹರಣೆಗಳಿವೆ. ಲವಕುಶ, ಸಾವಿತ್ರಿ ಸತ್ಯವಾನ ರೂಪಕಗಳು ಗಂಭೀರವಾದ ಪೌರಾಣಿಕ ಕಥಾವಸ್ತುವನ್ನೊಳಗೊಂಡವು. ಬುದ್ಧೋದಯ, ಕಿಸಾಗೌತಮಿಗಳು ಚಾರಿತ್ರಿಕ ರೂಪಕಗಳು. ಮುಕ್ತದ್ವಾರವೆಂಬುದು ನರ್ತನ ಸಹಿತವಾದ ನೇಪಥ್ಯಮೇಳ ಗಾನವನ್ನೊಳಗೊಂಡ, ವಿಚಾರಪೂರ್ಣವಾದ ಸುಂದರ ಕಲ್ಪನೆ. ಸೋಮಿಯ ಸೌಭಾಗ್ಯ, ಯಾರೋ ಅಂದರು– ರೂಪಕಗಳ ವಸ್ತು, ಶೈಲಿಗಳು ಜಾನಪದ. ಸುಲಿಗೆಗೆ ಇಲ್ಲವು ಸಾವು ಎಂಬುದು ವಿಡಂಬನಾತ್ಮಕ ಪ್ರಹಸನ. ನರಸಿಂಹಾಚಾರ್ಯರ ಗೀತರೂಪಕಗಳಲ್ಲಿನ ಹಾಡುಗಳು ಕಾವ್ಯಸೌರಭವನ್ನು ಸೂಸುತ್ತಿರುವ ಸುಂದರಕವನಗಳು. ಕರ್ಣಾಟಕ ಸಂಗೀತಜ್ಞಾನ ಅವರಿಗೆ ಸಾಕಷ್ಟು ಚೆನ್ನಾಗಿಯೇ ಇರುವುದರಿಂದ ಹಾಡುಗಳೆಲ್ಲವನ್ನೂ ಛಂದೋಬದ್ಧ ಸಂಗೀತ ಕೃತಿಗಳನ್ನನುಸರಿಸಿ ರಚಿಸಿದ್ದಾರೆ. ಅವರ ರೂಪಕಗಳಲ್ಲಿ ಕೆಲವು ಬಿಡಿಗೀತಗಳನ್ನು ರಾಗತಾಳ ನಿಬದ್ಧವಾದ ಸಂಗೀತಕೃತಿಗಳಂತೆಯೇ ಹಾಡಲು ಸಾಧ್ಯವಾಗುತ್ತದೆ; ಮಾತ್ರವಲ್ಲ, ಹಾಗೆ ಹಾಡಿದಾಗ ಅವುಗಳ ಶೋಭೆಗೂ ಕೊರತೆ ಯಾಗುವುದಿಲ್ಲ. ಆಚಾರ್ಯರ ಗೀತರೂಪಕಗಳನ್ನು ಓದುಗಬ್ಬವಾಗಿ, ಸಂಗೀತ ವಿರಹಿತವಾಗಿ ಹಾಡಿದಾಗಲೂ ಅವುಗಳ ಅನುಪಮ ಸೌಂದರ್ಯದ ಅರಿವಾಗುತ್ತದೆ. ಕವಿಯ ಚಿಂತನಫಲವಾದ ವಿಶ್ಲೇಷಣೆ, ವಿಶೇಷಾರ್ಥಗಳು ಮನಮುಟ್ಟುತ್ತವೆ. ರಂಗಭೂಮಿಯ ಮೇಲೆ ಈ ರೂಪಕಗಳನ್ನು ಅಭಿನಯಿಸುವಾಗಲಂತೂ ಅವಕ್ಕೆ ಇನ್ನೂ ಹೆಚ್ಚಿನ ಶೋಭೆಯುಂಟಾಗುತ್ತದೆ. ಆದರೆ ಕವಿಯ ಪ್ರತಿಭಾ ಮೂಲವಾದ ಚಿಂತನವೈಶಿಷ್ಟ್ಯಗಳನ್ನು ಮಾತ್ರ, ಮೊದಲೊಮ್ಮೆ ಗೀತರೂಪಕಗಳನ್ನು ಓದಿರದ ಪ್ರೇಕ್ಷಕರು ಸಂಪೂರ್ಣವಾಗಿ ಅರಿತು, ಅನುಭವಿಸುವುದು ಕಷ್ಟಸಾಧ್ಯ. ಆದುದರಿಂದ ಆಚಾರ್ಯರ ಗೀತರೂಪಕಗಳು ರಂಗಪ್ರದರ್ಶನದಲ್ಲಿ ಸಂಗೀತಕ್ಕೆ ಅತ್ಯುತ್ತಮವಾಗಿ ಅಳವಡಿಸುವ ಕೃತಿಮಾಲಿಕೆಗಳಾಗಿ ಪರಿಣಮಿಸಲೂ ಸಾಧ್ಯವಿದೆ. ಅವರ ಹಂಸದಮಯಂತಿ, ಗೋಕುಲ ನಿರ್ಗಮನಗಳು ಶ್ರಾವ್ಯ ಗೀತರೂಪಕಗಳ ದೃಷ್ಟಿಯಿಂದ ಅತ್ಯುತ್ತಮವಾದ ಗೀತರೂಪಕಗಳು. ಡಿ.ವಿ. ಗುಂಡಪ್ಪನವರ ಭಸ್ಮಾಸುರ ಮೋಹಿನಿ ಗೀತ ಶಾಕುಂತಲ ಎಂಬೆರಡು ಗೀತರೂಪಕಗಳು ಇದೇ ವರ್ಗಕ್ಕೆ ಸೇರುವಂಥವು. (ಎಸ್‌ಆರ್.ಯು.;ಎಚ್.ಕೆ.ಆರ್.;ಸಿ.ಎಚ್.ಡಿ.)

ಶಿವರಾಮ ಕಾರಂತ ಮತ್ತು ಪು.ತಿ.ನರಸಿಂಹಾಚಾರ್ಯರು ಕನ್ನಡದಲ್ಲಿ ಆಧುನಿಕ ಗೀತರೂಪಕಗಳ ಮೂಲ ಪುರುಷರು. ಗೀತಗಳ ಹಾಡುವಿಕೆಯನ್ನು ಕಾರಂತರು ಹಿಂದುಸ್ತಾನೀ ಸಂಗೀತ ಪದ್ಧತಿಯಲ್ಲಿರಿಸಿದ್ದಾರೆ. ಇವರ ರೂಪಕಗಳನ್ನು ಸಂಗೀತ ರಹಿತವಾಗಿ ಓದಿದಲ್ಲಿ ನೀರಸವಾಗಿ ಕಾಣಿಸಬಹುದು. ಆದರೆ ರಂಗಭೂಮಿಯ ಮೇಲೆ, ಪ್ರದರ್ಶನದಲ್ಲಿ ಇವು ಸಂಗೀತದೊಡನೆ ಸೇರಿದಾಗ ಸತ್ತ್ವಪೂರ್ಣವಾದ ಹಾಡುಗಳಾಗಿ ಪರಿಣಮಿಸುತ್ತವೆ; ಸಂಗೀತದೊಂದಿಗೆ ಸಮರಸವಾಗಿ ಬೆರೆಯುತ್ತವೆ; ಸಾಹಿತ್ಯ ಸಂಗೀತಗಳೆರಡರ ಸಂಗಮವಾದ ಅದ್ಭುತ ರಸಲೋಕವೊಂದನ್ನು ಕಾಣಿಸುತ್ತವೆ. ಗೀತರೂಪಕಗಳ ಎಲ್ಲ ಪ್ರಕಾರಗಳಿಗೂ ಕಾರಂತರ ರೂಪಕಗಳಲ್ಲಿ ಉದಾಹರಣೆಗಳಿವೆ. ಲವಕುಶ, ಸಾವಿತ್ರಿ ಸತ್ಯವಾನ ರೂಪಕಗಳು ಗಂಭೀರವಾದ ಪೌರಾಣಿಕ ಕಥಾವಸ್ತುವನ್ನೊಳಗೊಂಡವು. ಬುದ್ಧೋದಯ, ಕಿಸಾಗೌತಮಿಗಳು ಚಾರಿತ್ರಿಕ ರೂಪಕಗಳು. ಮುಕ್ತದ್ವಾರವೆಂಬುದು ನರ್ತನಸಹಿತವಾದ ನೇಪಥ್ಯಮೇಳ ಗಾನವನ್ನೊಳಗೊಂಡ, ವಿಚಾರಪೂರ್ಣವಾದ ಸುಂದರ ಕಲ್ಪನೆ. ಸೋಮಿಯ ಸೌಭಾಗ್ಯ, ಯಾರೋ ಅಂದರು ರೂಪಕಗಳ ವಸ್ತು ಶೈಲಿಗಳು ಜನಪದದವು. ಸುಲಿಗೆಗೆ ಇಲ್ಲವು ಸಾವು ಎಂಬುದು ವಿಡಂಬನಾತ್ಮಕ ಪ್ರಹಸನ. ಪು.ತಿ.ನರಸಿಂಹಾಚಾರ್ಯರ ಗೀತರೂಪಕಗಳಲ್ಲಿನ ಹಾಡುಗಳು ಕಾವ್ಯಸೌರಭವನ್ನು ಸೂಸುತ್ತಿರುವ ಸುಂದರ ಕವನಗಳು. ಕರ್ಣಾಟಕ ಸಂಗೀತಜ್ಞಾನದ ಹಿನ್ನೆಲೆಯಲ್ಲಿ ಹಾಡುಗಳೆಲ್ಲವನ್ನೂ ಛಂದೋಬದ್ಧ ಸಂಗೀತ ಕೃತಿಗಳನ್ನನುಸರಿಸಿ ಇವರು ರಚಿಸಿದ್ದಾರೆ. ಇವರ ರೂಪಕಗಳಲ್ಲಿನ ಕೆಲವು ಬಿಡಿಗೀತಗಳನ್ನು ರಾಗತಾಳನಿಬದ್ಧವಾದ ಸಂಗೀತಕೃತಿಗಳಂತೆಯೇ ಹಾಡಲು ಸಾಧ್ಯ; ಮಾತ್ರವಲ್ಲ, ಹಾಗೆ ಹಾಡಿದಾಗ ಅವುಗಳ ಶೋಭೆಗೂ ಕೊರತೆಯಾಗುವುದಿಲ್ಲ. ಈ ಗೀತರೂಪಕಗಳನ್ನು ಓದುಗಬ್ಬವಾಗಿ, ಸಂಗೀತರಹಿತವಾಗಿ ಹಾಡಿದಾಗಲೂ ಅವುಗಳ ಅನುಪಮ ಸೌಂದರ್ಯದ ಅರಿವಾಗುತ್ತದೆ. ಕವಿಯ ಚಿಂತನಫಲವಾದ ವಿಶ್ಲೇಷಣೆ ವಿಶೇಷಾರ್ಥಗಳು ಮನಮುಟ್ಟುತ್ತವೆ. ರಂಗಭೂಮಿಯ ಮೇಲೆ ಈ ರೂಪಕಗಳನ್ನು ಅಭಿನಯಿಸುವಾಗಲಂತೂ ಅವಕ್ಕೆ ಇನ್ನೂ ಹೆಚ್ಚಿನ ಶೋಭೆಯುಂಟಾಗುತ್ತದೆ. ಆದರೆ ಕವಿಯ ಪ್ರತಿಭಾಮೂಲವಾದ ಚಿಂತನವೈಶಿಷ್ಟ್ಯಗಳನ್ನು ಮಾತ್ರ ಮೊದಲೊಮ್ಮೆ ಗೀತರೂಪಕಗಳನ್ನು ಓದಿರದ ಪ್ರೇಕ್ಷಕರು ಸಂಪೂರ್ಣವಾಗಿ ಅರಿತು ಅನುಭವಿಸುವುದು ಕಷ್ಟಸಾಧ್ಯ. ಆದುದರಿಂದ ಪು.ತಿ.ನ. ಅವರ ಗೀತರೂಪಕಗಳು ರಂಗಪ್ರದರ್ಶನದಲ್ಲಿ ಸಂಗೀತಕ್ಕೆ ಅತ್ಯುತ್ತಮವಾಗಿ ಅಳವಡುವ ಕೃತಿಮಾಲಿಕೆಗಳಾಗಿ ಪರಿಣಮಿಸಲೂ ಸಾಧ್ಯವಿದೆ. ಇವರ ಹಂಸದಮಯಂತಿ, ಗೋಕುಲನಿರ್ಗಮನ ಇವು ಶ್ರವ್ಯ ಗೀತರೂಪಕಗಳ ದೃಷ್ಟಿಯಿಂದ ಅತ್ಯುತ್ತಮವಾದವು. ಡಿ.ವಿ.ಗುಂಡಪ್ಪನವರ ಭಸ್ಮಾಸುರ ಮೋಹಿನಿ, ಗೀತ ಶಾಕುಂತಲ ಎಂಬೆರಡು ಗೀತರೂಪಕಗಳೂ ಇದೇ ವರ್ಗಕ್ಕೆ ಸೇರುವಂಥವು. *

**ಗೀತಾನಾಗಭೂಷಣ :** 1942–. ಕನ್ನಡದ ಹೆಸರಾಂತ ದಲಿತ ಲೇಖಕಿ. ಇವರು ಗುಲ್ಬರ್ಗ ಜಿಲ್ಲೆ ಸಾವಳಗಿ ಗ್ರಾಮದಲ್ಲಿ 1942 ಮಾರ್ಚ್ 25ರಂದು ಜನಿಸಿದರು. ತಂದೆ ಶಾಂತಪ್ಪ, ತಾಯಿ ಶರಣಮ್ಮ. ಬಿ.ಎಡ್. ಹಾಗೂ ಕನ್ನಡ ಎಂ.ಎ. ಪದವಿ ಪಡೆದು ಅಧ್ಯಾಪಕಿಯಾಗಿ, ಕಾಲೇಜಿನಲ್ಲಿ ಪ್ರಾಚಾರ್ಯರಾಗಿ ಮೂರು ದಶಕಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿ 35ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರು 26 ಕಾದಂಬರಿ ಗಳನ್ನೂ 5 ನಾಟಕಗಳನ್ನೂ 2 ಕಥಾ ಸಂಕಲನಗಳನ್ನೂ ಪ್ರಕಟಿಸಿದ್ದಾರೆ. ತಾವರೆಯ ಹೂ ಇವರ ಮೊದಲ ಕಾದಂಬರಿ (1968). ಚಂದನದಚಿಗುರು(1969),



ಸಪ್ತವರ್ಣದ ಸ್ವಪ್ನ (1973), ಪ್ರೀತಿಸಿದ್ದು ನಿನ್ನನ್ನೇ (1986), ನಿನ್ನ ತೋಳುಗಳಲ್ಲಿ (1987), ನನ್ನ ನಿನ್ನ ನಡುವೆ (1992), ಆಸರೆಗಳು (1996), ಅಭಿಮಾನ (1998) – ಈ ಕೃತಿಗಳು ಮಧ್ಯಮ ವರ್ಗದ ಬದುಕಿನ ಪ್ರೀತಿ, ಪ್ರಣಯ ಮತ್ತು ಕೌಟುಂಬಿಕ ಸಮಸ್ಯೆಗಳ ಸುತ್ತ ಹೆಣೆದ ಜನಪ್ರಿಯ ಸ್ವರೂಪದ ಕಾದಂಬರಿಗಳು. ಹಸಿ ಮಾಂಸ ಮತ್ತು ಹದ್ದುಗಳು (1978), ಮಾಪುರ, ತಾಯಿಯ ಮಕ್ಕಳು (1978), ಆಘಾತ (1980), ಚಿಕ್ಕಿಯು ಹರೆಯದ ದಿನಗಳು (1983), ನೀಲಗಂಗಾ (1986), ದುಮ್ಮಸು (1994), ದಂಗೆ (1997), ಬದುಕು (2001) – ಈ ಕಾದಂಬರಿಗಳಲ್ಲಿ ಸ್ತ್ರೀಪ್ರಪಂಚದ ದುರಂತ ಚಿತ್ರಗಳಿವೆ. ಜಾತಿವ್ಯವಸ್ಥೆಯ ಅಮಾನವೀಯ ಆಚರಣೆಗಳಿಂದ ಅಪಮಾನಿತರಾದ ದಲಿತವರ್ಗದ ತಾಪತಲ್ಲಣಗಳನ್ನೂ ಬಡತನ, ಮೌಢ್ಯ, ಲೈಂಗಿಕ ಹಿಂಸೆಗಳಿಂದ ನೊಂದ ಶೋಷಿತ ಸ್ತ್ರೀಯರ ಸಂಕಟ ಸಮಸ್ಯೆಗಳನ್ನೂ ಅವುಗಳಲ್ಲಿ ಸೂಕ್ಷ್ಮತೆ ಭಾವತೀವ್ರತೆಯೊಂದಿಗೆ ಕಲಾತ್ಮಕವಾಗಿ ಅನಾವರಣ ಗೊಳಿಸಿದೆ. ಅಪೂರ್ವ ಸೃಜನ ಶೀಲತೆ, ಸಾಮಾಜಿಕ ಕಾಳಜಿ ಇವರ ಕಥೆ ಕಾದಂಬರಿಗಳ ಅನನ್ಯತೆ. ದಲಿತಸಂವೇದನೆ, ಸ್ತ್ರೀಪರತೆ, ಪ್ರತಿಭಟನೆ ಮತ್ತು ಪರಿಷ್ಕಾರದ ಆಶಯಗಳು ಇವರ ಕೃತಿಗಳ ಜೀವಪರ ನೆಲೆಯನ್ನು ಗಟ್ಟಿಗೊಳಿಸಿವೆ.

ಜ್ವಲಂತ (1989), ಅವ್ವ ಮತ್ತು ಇತರ ಕಥೆಗಳು (1993) ಇವು ಕಥಾ ಸಂಕಲನಗಳು. ಜೋಗಿಣಿ ಎಂಬುದು ಕೆಳವರ್ಗದ ಮಹಿಳೆಯರ ಲೈಂಗಿಕ ಶೋಷಣೆಯ ಸುತ್ತ ಹೆಣೆದ ನಾಟಕ. ಅವ್ವ, ಸತ್ತ ಹೆಣ್ಣಿನ ಸುತ್ತ, ಜೀವನಚಕ್ರ, ನೀಲಗಂಗಾ – ಇವು ಮುಗ್ಧ ಗ್ರಾಮೀಣ ಮಹಿಳೆಯರ ಭಾವನಾತ್ಮಕ ಸಂಘರ್ಷಗಳನ್ನೂ ಅವರ ಜ್ವಲಂತ ಸಮಸ್ಯೆಗಳನ್ನೂ ಬಿಂಬಿಸುವ ಇತರ ನಾಟಕಗಳು.

ಅಲೆಮಾರಿ ಜನಾಂಗವಾದ ದುರಗ ಮುರಗಿಯವರನ್ನು ಕುರಿತಂತೆ ಇವರು ಸಂಶೋಧನೆ ನಡೆಸಿ ದುರಗ ಮುರಗಿಯವರ ಸಂಸ್ಕೃತಿ (1993) ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಖೇಮಣ್ಣ (1998) ಇವರ ಒಂದು ಸಂಪಾದಿತ ಕೃತಿ.

ಇವರ ಹಸಿ ಮಾಂಸ ಮತ್ತು ಹದ್ದುಗಳು ಕಾದಂಬರಿಗಳು ಮರಾಠಿಗೆ ಅನುವಾದಗೊಂಡಿವೆ. ಹೆಣ್ಣಿನ ಕೂಗು ಎಂಬ ಹೆಸರಿನಲ್ಲಿ ಕನ್ನಡದಲ್ಲಿ ಚಲನಚಿತ್ರವಾಗಿವೆ. ಇವರ ಅನೇಕ ಕಥೆಗಳು ತೆಲುಗು ಮತ್ತು ತಮಿಳಿಗೆ ಭಾಷಾಂತರಗೊಂಡಿವೆ.

ಇವರ ಸಾಹಿತ್ಯ ಸೇವೆಗಾಗಿ ಅನೇಕ ಪ್ರಶಸ್ತಿಗಳು ದೊರಕಿವೆ. ಕನ್ನಡ ಸಾಹಿತ್ಯ ಪರಿಷತ್ತಿನ ಮಲ್ಲಿಕಾ ಪ್ರಶಸ್ತಿ, ಬಿ.ಸರೋಜಾದೇವಿ ಪ್ರಶಸ್ತಿ, ಗುಲ್ಬರ್ಗದ ಎಸ್.ಆರ್. ಪಾಟೀಲ ಪ್ರತಿಷ್ಠಾನದ ಕಾಯಕರತ್ನ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ವಿಶೇಷ ಗೌರವ ಪ್ರಶಸ್ತಿ (1995), ಕರ್ನಾಟಕರಾಜ್ಯೋತ್ಸವ ಪ್ರಶಸ್ತಿ (1998) ಮತ್ತು ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ (2002) ಇವರಿಗೆ ಲಭ್ಯವಾಗಿವೆ. ಹಂಪಿ ಕನ್ನಡ ವಿಶ್ವವಿದ್ಯಾನಿಲಯದ

ನಾಡೋಜ ಗೌರವಕ್ಕೆ ಇವರು ಪಾತ್ರರಾಗಿದ್ದಾರೆ (2004). ಇವರ ಬದುಕು ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಲಭಿಸಿದೆ (2004). ಇವರು ಈಗ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾರೆ (2005). (ಎಸ್‌ಎಚ್‌ಎ.ಐ.)

ನಾಡೋಜ ಪದವಿ ಪಡೆದ ಪ್ರಥಮ ಮಹಿಳೆ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷಳಾದ ಪ್ರಥಮ ಮಹಿಳೆ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದ ಕರ್ನಾಟಕದ ಪ್ರಥಮ ಮಹಿಳೆ. ಹೀಗೆ ಹಲವಾರು ಪ್ರಥಮಗಳನ್ನು ತಮ್ಮದಾಗಿಸಿಕೊಂಡು ವಿಶಿಷ್ಟ ವ್ಯಕ್ತಿತ್ವ ಇವರದು. (?)

**ಗೀತಾಂಜಲಿ :** ಕವಿವರ್ಯ ರವೀಂದ್ರನಾಥ ಠಾಕೂರರ (1861–1941) ಭಕ್ತಿ ಅಥವಾ ಅನುಭಾವಗೀತಗಳ ಸಂಕಲನವಿದು. ಒಂದೇ ಹೆಸರಿನ ಈ ಗ್ರಂಥ ಬಂಗಾಳಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರಕಟವಾಗಿದ್ದರೂ ಆವೃತ್ತಿಗಳು ಏಕರೂಪವಾಗಿರದೆ ಬಹು ಭಿನ್ನವಾಗಿವೆ. ಗೀತಾಂಜಲಿಯ ಬಂಗಾಳಿ ಆವೃತ್ತಿ 1909–10ರಲ್ಲಿ ಪ್ರಕಟಿತವಾಗಿದ್ದು ಒಟ್ಟು 157 ಗೀತಗಳನ್ನು ಒಳಗೊಂಡಿದೆ; ಇಂಗ್ಲಿಷ್ ಆವೃತ್ತಿಯಲ್ಲಿಯೋ ಒಟ್ಟು 103 ಪದ್ಯಗಳಿದ್ದು ಅವು ಕವಿವರ್ಯರ ನಾನಾ ಬಂಗಾಳಿ ಕವನ ಸಂಕಲಗಳಿಂದ ಆಯ್ದವುಗಳಾಗಿ ಅವರಿಂದಲೇ ಹೃದ್ಯ ಗದ್ಯದಲ್ಲಿ ಅನುವಾದಿತವಾದವಾಗಿವೆ. ಈ 103 ಪದ್ಯಗಳಲ್ಲಿ 51 ಮಾತ್ರ ಗೀತಾಂಜಲಿಯೊಳಗಿನವು; ಮಿಕ್ಕ 52 ಪದ್ಯಗಳಲ್ಲಿ ಗೀತಿಮಾಲ್ಯದಿಂದ 17, ನೈವೇದ್ಯದಿಂದ 16, ಖೇಯಾದಿಂದ 11, ಶಿಶುವಿನಿಂದ 3 ಮತ್ತು ಚೈತಾಲಿ, ಸ್ಮರಣ, ಕಲ್ಪನಾ ಉತ್ಸರ್ಗ, ಅಚಲಾಯತನ ಎಂಬುವುಗಳಿಂದ ಒಂದೊಂದು –ಹೀಗೆ ಆಯ್ದುಕೊಳ್ಳಲಾಗಿದೆ. ಈ ಎಲ್ಲ ಬಂಗಾಳಿ ಗ್ರಂಥಗಳು ಗೀತಾಂಜಲಿಗಿಂತ ಮೊದಲು ಎಂದರೆ 1900ರ ಎಡಬಲದಲ್ಲಿ ರಚಿತವಾದವು. ನೈವೇದ್ಯವೇ ಕವಿಯ ಭಕ್ತಿಗೀತಗಳ ಪ್ರಥಮ ಸಂಕಲನ. ಸ್ಮರಣವೆಂಬುದು 1902ರಲ್ಲಿ ತೀರಿಕೊಂಡ ಕವಿಪತ್ನಿಯ ಸ್ಮರಣ ಗೀತಗಳ ಸಂಕಲನ.

ಇಂಗ್ಲಿಷ್ ಗೀತಾಂಜಲಿ 1912ರಲ್ಲಿ ಕವಿ ಇಂಗ್ಲೆಂಡಿನಲ್ಲಿದ್ದಾಗ, ಅಲ್ಲಿಯ ಆಂಗ್ಲ ಕವಿವರ್ಯ ಡಬ್ಲ್ಯೂ. ಬಿ. ಯೇಟ್ಸ್‌ನ ಮುನ್ನುಡಿಯೊಂದಿಗೆ ಮೊತ್ತಮೊದಲು ಅಚ್ಚಾಯಿತು. ಮುಖ್ಯವಾಗಿ ಈ ಆವೃತ್ತಿಗೇನೆ ವಿಶ್ವದ ಸರ್ವೋಚ್ಚ ಸಾಹಿತ್ಯಿಕ ಗೌರವವೆನಿಸಿದ ನೊಬೆಲ್ ಬಹುಮಾನ 1913ರಲ್ಲಿ ದೊರೆಯಿತು. ಹೀಗೆ ರವೀಂದ್ರರನ್ನು ವಿಶ್ವಕವಿಗಳನ್ನಾಗಿ ಮಾಡಿದ ಅಮರ ಕೃತಿಯೇ ಗೀತಾಂಜಲಿ. ಈ ಕೃತಿ ಲೋಕಪ್ರಿಯವಾಗಲು ಕಾರಣಪುರುಷರಾದ ಆಂಗ್ಲ ಚಿತ್ರಶಿಲ್ಪಿವರ್ಯ ವಿಲಿಯ್‌ಂ ರೊಥೇನ್‌ಸ್ಟೇನ್‌ಗೆ ಇದು ಅರ್ಪಿತವಾಗಿದೆ. ಈ ಕಿರು ಗ್ರಂಥ ಪ್ರಪಂಚದ ಸುಮಾರು 35 ಭಾಷೆಗಳಲ್ಲಿ ಗದ್ಯ ಇಲ್ಲವೆ ಪದ್ಯದಲ್ಲಿ ಅನುವಾದಿತವಾಗಿದ್ದು ಇಂಗ್ಲಿಷ್ ಆವೃತ್ತಿ ಲಕ್ಷಗಟ್ಟಲೇ ಪ್ರಸಾರವುಳ್ಳ 50 ಮುದ್ರಣಗಳನ್ನು ಇದುವರೆಗೆ ಕಂಡಿದೆ. ಕೆಲವು ಭಾಷೆಗಳಲ್ಲಂತೂ ಬೇರೆ ಬೇರೆ ಅನುವಾದಕರಿಂದ ರೂಪಾಂತರಗೊಂಡ ನಾಲ್ಕೈದು ಆವೃತ್ತಿಗಳೂ ಬೆಳಕಿಗೆ ಬಂದದುಂಟು. ಕನ್ನಡದಲ್ಲಿಯೇ ನಾಲ್ಕು ಅನುವಾದಗಳು ಪುಸ್ತಕರೂಪದಲ್ಲಿ ಪ್ರಕಟವಾಗಿದ್ದು ಅವುಗಳಲ್ಲಿ ಒಂದು ನೇರವಾಗಿ ಬಂಗಾಳಿ ಆವೃತ್ತಿಯಿಂದ ಗೀತರೂಪದಲ್ಲಿ ಕನ್ನಡಿಸಲ್ಪಟ್ಟಿದೆ. (ಪ್ರಹ್ಲಾದ ನರೇಗಲ್ಲ); ಉಳಿದ ಮೂರು ಅನುವಾದಗಳು ಇಂಗ್ಲಿಷ್ ಆವೃತ್ತಿಯಿಂದ ಕನ್ನಡಕ್ಕೆ ಇಳಿದಿದ್ದು ಅವುಗಳಲ್ಲಿ ಒಂದು ಪದ್ಯರೂಪದಲ್ಲಿಯೂ ಇನ್ನೆರಡು ಗದ್ಯರೂಪದಲ್ಲಿಯೂ ಇವೆ (ಸ.ಪ. ಗಾಂವಕರ, ಮೃತ್ಯುಂಜಯ ಬಸವಯ್ಯ ಬೂದಿಹಾಳಮಠ, ಶಣೈ)

ಶ್ರೀ ರವೀಂದ್ರರ 80 ವರ್ಷಗಳ ತುಂಬು ಬಾಳುವೆಯಲ್ಲಿ 1905ರಿಂದ 1941 ರವರೆಗಿನ ಅವಧಿ ನಿಜಕ್ಕೂ ಮಹತ್ತ್ವದ್ದಾಗಿದೆ. ನವಸಾಂಕೇತಿಕತೆಯ ಬೆಳವಣಿಗೆ, ದೈವಸಿದ್ಧಿಯ ಕುರುಹುಗಳಾದ ಭಕ್ತಿಗೀತಗಳ ಉದಯ, ನವೋನವನಾಟಕಗಳ ನಿರ್ಮಾಣ, ಸ್ವದೇಶಿ ಚಳವಳಿಯಲ್ಲಿ ಅಗ್ರನಾಯಕತ್ವ ಮತ್ತು ಪಲ್ಲೀಸಂಘಟನೆ, ರಾಷ್ಟ್ರೀಯತೆ ಅಂತಾರಾಷ್ಟ್ರೀಯತೆಗೆ ದಾರಿದೀಪವಾದದ್ದು, ವಿಶ್ವಭಾರತೀಯ ಮನುಕುಲದೈಕ್ಯದ ಭವ್ಯ ಆದರ್ಶಸಿದ್ಧಿಗಾಗಿ ತಪಗೈಯುತ್ತ ಭಾರತದ ಸಾಂಸ್ಕೃತಿಕ ರಾಯಭಾರಿಯಾಗಿ ನಾನಾಪೃಥ್ವೀ ಪ್ರವಾಸಗಳ ಯೋಜನಾಬದ್ಧ ದಿಗ್ವಿಜಯ ನಡೆಸಿದ್ದು –ಇಂಥ ಅಪೂರ್ವಸಂಘಟನೆಗಳ ಹಿನ್ನಲೆಯಲ್ಲಿ ರಚಿತವಾದ ಮಹಾಕೃತಿಯೇ ಗೀತಾಂಜಲಿ.

ಉಪನಿಷತ್ತುಗಳ ಪ್ರಾಚೀನಯುಗದ ಅದ್ವೈತಜ್ಞಾನ, ಮಧ್ಯಯುಗೀನ ವೈಷ್ಣವ ಸಂತರ ಭಕ್ತಿ ಪ್ರೇಮ ಹಾಗೂ ಆಧುನಿಕಯುಗದ ಸಾಮಾಜಿಕ ಆದರ್ಶಮಯ ಕರ್ಮ ಪ್ರವೃತ್ತಿ–ಇವುಗಳ ತ್ರಿವೇಣಿ ಸಂಗಮ ಶ್ರೀ ರವೀಂದ್ರರ ಜೀವನದರ್ಶನದಲ್ಲಿದೆ. ಆದುದರಿಂದ ವಿಶ್ವದಲ್ಲಿ ಶಾಂತಿ–ಶಿವ–ಆನಂದಗಳ ಪ್ರೇಮಸಾಮ್ರಾಜ್ಯ ನೆಲೆಗೊಳ್ಳಬೇಕೆಂಬ ವೈಚಾರಿಕ ಭೂಮಿಕೆಯೇ ಈ ಗ್ರಂಥದಲ್ಲಿ ಪ್ರತಿಪಾದಿತವಾಗಿದೆ. ಅಂತೆಯೇ ಅರವಿಂದರು ರವೀಂದ್ರರ ಸ್ವರ್ಣಗ್ರಂಥದಲ್ಲಿ ರವೀಂದ್ರರ ಕಾವ್ಯವೈಶಿಷ್ಟ್ಯವನ್ನು ಕುರಿತು ಹೇಳಿರುವ ಈ ಮಾತುಗಳು ಅವರ ಗೀತಾಂಜಲಿಗೂ ಅನ್ವಯವಾಗುತ್ತವೆ : ರವೀಂದ್ರನಾಥರಲ್ಲಿ ಹೆಚ್ಚು ಒಡೆದು ಕಾಣುವ ಅಂಶವೆಂದರೆ– ಅವರು ವೈಷ್ಣವ ಕಾವ್ಯದ, ಭಾಗವತಭಕ್ತಿಯ ಭಾವರಹಸ್ಯವನ್ನು ಚೆನ್ನಾಗಿ ಅಳವಡಿಸಿಕೊಂಡಿದ್ದಾರೆ. ಮತ್ತು ತಮ್ಮದೇ ಆದ ಹೊಸಬಗೆಯಲ್ಲಿ, ಹೊಸಮನ್ವಂತರಕ್ಕೆ ಹೊಂದಿಕೆಯಾಗುವ ಹಾಗೆ ಅದನ್ನು ಹೊರಹೊಮ್ಮಿಸಿದ್ದಾರೆ. ಹೀಗೆ ಮಾಡುವಾಗ ಅವರು ವೈಷ್ಣವ ವೈಶಿಷ್ಟ್ಯಕ್ಕೆ ಎಳ್ಳಷ್ಟೂ ಕುಂದು ತಂದಿಲ್ಲ. ಅವರು ಭಾರತದ ಸರ್ವಶ್ರೇಷ್ಠ ಭಾವಕವಿಗಳು; ಅವರ ಸುಕುಮಾರ ಮೃದುಮಾಧುರ್ಯ, ಭಾವಾವೇಗ, ರುಚಿರತೆ, ರಮ್ಯತೆ, ಅವರ ಆಧ್ಯಾತ್ಮಿಕ ಗಂಭೀರತೆ, ರಹಸ್ಯಮಯ ಕವನಕೌಶಲ ಸದಾ ಬೆಂಬತ್ತಿಬರುವ ಮತ್ತು ಗುಣುಗುಣಿಸಿ ಅನುಕರಿಸುವ ಕಾಲ–ಲಯಗಳ ತರಲ ತರಂಗಲೀಲೆ, ಅವರ ಮಧುಸಿಕ್ತವಾದ ಹಿತಮಿತದ ಅಭಿವ್ಯಕ್ತಿ ಇವು ಎಲ್ಲರಿಗೂ ಹೇಗೆ ಸಿದ್ಧಿಸಿಯಾವು ? ಈ ಜಾಣ್ಮೆ ನಿಗೂಢ ಆತ್ಮಾನುಭವದಿಂದ ಮಾತ್ರ ಸಾಧಿಸತಕ್ಕಂಥದು.

ಇದೇ ಮಾತನ್ನು ಪಾಶ್ಚಾತ್ಯ ಮನೀಷಿ ಯೇಟ್ಸ್ ಗೀತಾಂಜಲಿಗೆ ಬರೆದ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾರೆ: 'ಠಾಕೂರರು ಭಾರತೀಯ ಸಂಸ್ಕೃತಿಯಂತೆ ಅಂತರಾತ್ಮವನ್ನು ಶೋಧಿಸುವುದರಲ್ಲಿ ತೃಪ್ತಿಪಡುತ್ತಾರೆ. ಅಂತರಂಗದ ಅಧಿನಾಯಕನ ಅಂತಃಪ್ರೇರಣೆಗೆ ತಮ್ಮನ್ನು ಕೊಟ್ಟುಕೊಂಡು ಬಿಡುತ್ತಾರೆ. ಜಗತ್ತಿನ ಬೇರಾವ ಸಾಹಿತ್ಯದಲ್ಲಿಯೂ ಸಿಗದ ಅದೊಂದು ಸರಳ ಸುಂದರ ಮುಗ್ಧತೆ ಇಲ್ಲಿ ಕಂಡು ಬರುವುದು..., ನಮಗೆ ಅತೀವ ಅಪರಿಚಿತವಾಗಿರುವ ಅದೊಂದು ಸಂಸ್ಕೃತಿಯು ಜನಾಂಗವೂ ಈ ಭಾವಕಾವ್ಯದ ಭಾವಲೋಕದಲ್ಲಿ ಕಂಡುಬರುವುವು... ದೇಶದ ಹಿಂಸಾಮಯ ಚರಿತ್ರೆಯಲ್ಲಿ ನಾವು ಮರೆತುಬಿಟ್ಟಂಥ ಸಂತ ಫ್ರಾನ್ಸಿಸ್, ವಿಲಿಯಂ ಬ್ಲೇಕರಂಥವರ ಧ್ವನಿ ನಮಗೆ ಇಲ್ಲಿ ಕೇಳಿಬರುತ್ತದೆ.'

ಕನ್ನಡದಲ್ಲಿ ಠಾಕೂರರ ಚರಿತ್ರಕಾರರಾದ ಮಾಸ್ತಿ ವೆಂಕಟೇಶ ಅಯ್ಯಂಗಾರರು ಗೀತಾಂಜಲಿಯಲ್ಲಿ ಕಂಡುಬರುವ ದೈವಸಿದ್ಧಿಯನ್ನು ಹೀಗೆ ಪ್ರಶಂಸಿಸಿದ್ದಾರೆ.

'ಕವಿವರರು ತಮ್ಮ ಬಾಳಿನಲ್ಲಿ ಭಗವಂತನ ಲೀಲೆಯನ್ನು ಕಂಡಿದ್ದಾರೆ... ಠಾಕೂರರ ಜೀವ ಹತ್ತಾರು ಸಲ ಕರೆದಿದೆ; ಅದರ ದೈವ ಅದಕ್ಕೆ ಓ ಎಂದು ಉತ್ತರ ಕೊಟ್ಟಿದೆ... ಠಾಕೂರರ ದೈವ ಅದರ ಒಡನಾಡಿ; ತನ್ನ ಸಿಂಹಾಸನವನ್ನುಳಿದು ಅವರ ಜೊತೆಗೆ ಆಡಬಂದಿರುವ ರಾಜ; ಅವರನ್ನು ಹಾಡಹೇಳಿ ಸಂತೋಷಿಸುವ ಪ್ರಭು; ಅವರ ತಪ್ಪುಗಳನ್ನು ಮನ್ನಿಸುವ ಅವರ ಗುಣಕ್ಕೆ ಮೆಚ್ಚುವ ಸದಾ ಅವರನ್ನು ಹಿಡಿದು ಮೇಲಕ್ಕೆ ಎತ್ತುವ ಸುಹೃತ್‌ತತ್ತ್ವ... ಠಾಕೂರರು ಬಾಳು ದೇವರ ಲೀಲೆಯೆಂದರಿತು ಅವನ ನಿಯಮವನ್ನು ಸದಾ ದೃಷ್ಟಿಯಲ್ಲಿ ಇಟ್ಟುಕೊಂಡಿದ್ದಾರೆ; ಸೋತು ಬಿದ್ದಂದು ನನ್ನನ್ನು ಹಿಡಿದೆತ್ತು ಎಂದು ದೈವವನ್ನು ಬೇಡಿಕೊಂಡಿದ್ದಾರೆ. ಆ ದೈವ ತಮ್ಮನ್ನು ಹಿಡಿದೆತ್ತಿ ಸಲಹುತ್ತಿರುವುದನ್ನು ಅನುಭವಿಸಿದ್ದಾರೆ. ಇದೇ ದೈವಸಿದ್ಧಿ. ಇದರಿಂದಲೇ ಅವರು ಪ್ರಪಂಚದ ಸಾವಿರಾರು ಚೇತನಗಳನ್ನೂ ಎತ್ತಿ ಎಚ್ಚರಗೊಳಿಸಲು ಶಕ್ತರಾದುದು.'

ಸರೋಜಿನಿ ನಾಯ್ಡು ಅವರು ಒಂದೆಡೆ ಠಾಕೂರರ ಬಗ್ಗೆ ಬರೆಯುತ್ತ ಸ್ವೀಡನ್, ನಾರ್ವೆ, ಫ್ರಾನ್ಸ್ ಜರ್ಮನಿ, ಇಟಲಿ, ಅಮೆರಿಕ, ಕೆನಡ ಮೊದಲಾದ ದೇಶಗಳಲ್ಲಿ ಠಾಕೂರರ ಮತ್ತು ಅವರ ಗೀತಾಂಜಲಿಯ ಬಗೆಗೆ ಜನರಲ್ಲಿ ಹೇಗೆ ಅದರ ಕುತೂಹಲಗಳು ಇದ್ದವೆಂಬುದನ್ನು ಚೆನ್ನಾಗಿ ಬಣ್ಣಿಸಿದ್ದಾರೆ. ಆ ದೇಶಗಳಲ್ಲಿ ಮನೆಮನೆಯಲ್ಲೂ ಈ ಗ್ರಂಥದ ಪ್ರತಿಗಳು ಇದ್ದವೆಂದೂ ಬುಡಾಪೆಸ್ಟ್ ನಗರದಲ್ಲಂತೂ ರುಗ್ಣಾಲಯ ಒಂದರಲ್ಲಿ ಪ್ರತಿಯೊಬ್ಬ ರೋಗಿಯ ತಲೆದಿಂಬಿನ ಬುಡದಲ್ಲಿ ಗೀತಾಂಜಲಿಯ ಒಂದೊಂದು ಪ್ರತಿ ಇದ್ದುದನ್ನು ಕಂಡು ತಾವು ಬೆರಗಾದುದಾಗಿಯೂ ಅವರು ತಿಳಿಸುತ್ತಾರೆ.

ಗೀತಾಂಜಲಿಯ ಯಾವುದೇ ಆವೃತ್ತಿಯ ಗೀತಗಳಲ್ಲಿಯ ಭಾವಾವೇಗಗಳನ್ನು ಸನ್ನಿವೇಶಗಳನ್ನು ವಿಶ್ಲೇಷಿಸಿ ನೋಡಿದಾಗ ಅವುಗಳಲ್ಲಿ ಈ ಮುಂದಿನ ಏಳು ನೆಲೆಗಳನ್ನು ನಾವು ಕಾಣುತ್ತೇವೆ:

1 ಭಗವತ್ ಪ್ರಾರ್ಥನೆಯ ಪದ್ಯಗಳು : ಬಾಳಿನಲ್ಲಿಯ ಆಶೆನಿರಾಶೆಗಳಲ್ಲಿ ಹೊಯ್ದಾಡುತ್ತ ಉಚ್ಚಜೀವನಕ್ಕಾಗಿ ಅಲವರಿಯುವ ಹಿರಿಹಂಬಲದ ಪದ್ಯಗಳು :

ಅಂತರಂಗವನು ಅರಳಿಸು ಒಲವೇ, ಅಂತಃಕರಣದ ಒಳನಲಿವೇ !
ನಿರ್ಮಲಗೊಳಿಸೈ ಉಜ್ಜ್ವಲಗೊಳಿಸೈ ಸುಂದರಗೊಳಿಸೈ ಓ ಚೆಲುವೇ !
ನವನವ ರೂಪದಿ ಬಾರೈ ಪ್ರಾಣದಲಿ
ವಿಧವಿಧ ವರ್ಣದಿ ಗಂಧದಿ ಗಾನದಲಿ

* * *

ಸಂಕಟದಲಿ ಸಂರಕ್ಷಿಸು ಎಂಬುದು ನನ್ನ ಪ್ರಾರ್ಥನೆಯೆ ಅಲ್ಲಾ !
ಸಂಕಟದಲಿ ಭಯವಿರದಿರೆ ಸಾಕೈ ಹೆಚ್ಚಿನ ಬಯಕೆಯೆ ಇಲ್ಲಾ !

* * *

ಇಕೋ ನನ್ನ ಈ ಶಿರವ ಬಾಗಿಸಿಕೊ ಚರಣಧೂಳಿತಲದಿ
ಸಕಲ ಈ ಅಹಂಕಾರ ಮುಳುಗಿಸೈ ನನ್ನ ನಯನಜಲದಿ !
ನನ್ನಯ ಬಾಳೊಳು ನಿನ್ನಯ ಲೀಲೆಯು ಒಡಮೂಡಿರಲೆಂದು
ಸುಂದರನೇ ಓ ಬಂದಿಹೆನೋ ಈ ಭವದಲಿ ನಾನಿಂದು

* * *

ಒಂದೆ ನಮಸ್ಕಾರ ಪ್ರಭೋ ಒಂದೆ ನಮಸ್ಕಾರಾ !
ಒಂದೆ ನಮಸ್ಕಾರದಲ್ಲಿ ಇಂದು ನಿನ್ನ ಚರಣದಲ್ಲಿ
ದೇಹವೆಲ್ಲ ಚಾಚಲಿ–ವಿಶ್ವವೆಲ್ಲ ತೋಚಲಿ
ಒಂದೆ ನಮಸ್ಕಾರದಿ –ಸಕಲ ಸಂಸಾರದಿ !

2 ಬಾಳುವೆಯ ಸಾಧನೆಯಲ್ಲಿ ಅಂತರ್ಮುಖತೆಯ ಮತ್ತು ಆತ್ಮ ವಿಕಾಸದ ಹಂತಗಳನ್ನು ಸೂಕ್ಷ್ಮವಾಗಿ ಬಣ್ಣಿಸುವ ಮನೋವಿಶ್ಲೇಷಣೆಯ ಪದ್ಯಗಳು :

ಕೊರಗಿಸಿವೆ ಬಹು ಆಸೆ ಪ್ರಾಣವ ಗಾಸಿಗೊಳಿಸುತೆ ಪೀಡಿಸಿ !
ಪೊರೆಯುತಿಹೆ, ಪ್ರಿಯ ವಂಚಕನೆ, ಈ ಆಸೆಗಳ ಹುಡಿಗೂಡಿಸಿ !

* * *

ನಿನ್ನನು ಕಾಣುವ ಪುಣ್ಯವೆ ಇರದಿರೆ ನನ್ನೀ ಜೀವನದಿ–
ನಿನ್ನನೆ ಪಡೆಯದೆ ಖಿನ್ನತೆ ಉಳಿಯಲಿ ಪ್ರಭುವೇ ಈ ಮನದಿ !
ಕರುಣದ ಕಥೆಯಿದು ಮರೆಯದೆ ಇರಲೈ ಎಂದಿಗು ಸ್ಮರಣದಲಿ
ಕೊರಗಿದು ಜನ್ಮಾಂತರದಲಿ ಸಾಗಲಿ ಸ್ವಪ್ನದಿ ಶಯನದಲಿ !

* * *

ತಡವೇಕೆ ತಡವೇಕೆ ಈ ಹೂವ ಕೊಯ್ದುಕೊಳ್ಳೈ
ಹುಡಿಗೂಡುವುದೊ ಎಂಬ ಸ್ನೇಹಮಯ ಭಯವ ತಳ್ಳೈ !
ಇಂದು ಹೂವೊಳು ಬಣ್ಣ ಕಳಕಳಿಸುತಿರುವಾಗಲೇ
ಗಂಧ ಮಕರಂದಗಳು ನಳನಳಿಸುತಿರುವಾಗಲೇ
ಚೆನ್ನ, ಇಕೊ ಕೊಯ್ದುಕೋ ಇಲ್ಲದ ವಿಲಂಬ ಬೇಡೈ
ಬಿನ್ನವಿಸುವೆನು ಕರದಿ ಮೆಲ್ಲನೆಯ ಮುದ್ದಿ ಸಾಡೈ !

3. ಜೀವಾತ್ಮ ವಿಶ್ವಾತ್ಮನೊಂದಿಗೆ ಸಹಯೋಗ ಗೈಯುತ್ತ ಸಮರಸನಾಗಿ ಆನಂದಿಸುವ ಅನುಭವಗೀತೆಗಳು :

ಅಹಹ, ನನ್ನಯ ದೇವ, ತುಂಬುತ ತುಂಬುತಲಿ ತನುಪ್ರಾಣವ
ಇಹದಿ ಈಗಳೆ ಮಾಡಬಯಸುವೆ ಯಾವ ಅಮೃತದ ಪಾನವ ?
ನನ್ನ ಕಣ್ಣೊಳು ನಿನ್ನ ವಿಶ್ವವ ಕಂಡುಕೊಳ್ಳುತ ನಲಿವೆಯಾ?
ನಿನ್ನ ಹಾಡನೆ ಕೇಳಿಕೊಳ್ಳಲು, ಕವಿಯೇ ಕಿವಿಯೊಳು ಸುಳಿವೆಯಾ ?

* * *

ಓವೊ ನೀನಿಹೆ ನನ್ನ ಬಾಳ್ವೆಯ ಕೊನೆಯ ಗಳಿಗೆಯ ಪೂರ್ಣತೆ !
ಸಾವೆ, ನನ್ನಯ ಸಾವೆ, ಒಡನುಡಿ ಕಿವಿಯೊಳೇ ಆ ಈ ಕಥೆ !

* * *

ಹೊರಡುವ ದಿನದೊಳು ಒರೆಯಲು ಬಳಗಕೆ ನನ್ನೊಳು ಈ ಮಾತೊಂದಿರಲಿ!
ಕಂಡುದುದೆಲ್ಲಾ ಉಂಡುದುದೆಲ್ಲಾ ಉಪಮಾತೀತವೆ ಎಂದಿರಲಿ !

4 ನಿಸರ್ಗನಿಷ್ಠ ಕವಿ ಪ್ರತಿ ವರ್ಷ ನಾನಾ ಋತುಗಳಲ್ಲಿ ಮತ್ತು ಪಂಚಮಹಾಭೂತ ಗಳಲ್ಲಿ ಭಗವಂತನ ಬಹುಮುಖಗಳನ್ನು ಕಂಡು ಕೊಂಡಾಡುವ ಪ್ರಕೃತಿ ಪ್ರೇಮದ ಪದ್ಯಗಳು :

ಇಂದು ಬಸಂತನು ಬಂದಿಹನೈ ಬಾಗಿಲಲಿ
ನಿಂದಿಹನೈ ಬಾಳ್‌ದೇಗುಲಲಿ
ಕುಂಠಿತವಿರೆ ಅವಗುಂಠಿತವಿರೆ ತವ ಜೀವನಾ
ಎಂಥ ವಿಡಂಬನೆಯೋ ಅವನಾ !

* * *

ಮತ್ತೆ ಬಂತಾಷಾಢಮಾಸವು ಮುಚ್ಚುತಲಿ ಆಕಾಶವಾ
ವೃಷ್ಟಿಯೊಳಗಿನ ಕಂಪು ಭರದಲಿ ಬಂತು ಗಾಳಿಗೆ ಅಹ ಅಹಾ

* * *

ಇಂದು ಮೇಘದಲಿ ಜಲ ವೇಗದಿಂದಲಿ ತುಂಬಿ ಧೋಧೋಗರೆವುದು !
ಮುಗಿಲ ಕರುಳನು ಬಗಿದು ವ್ಯಾಕುಲಧಾರೆ ಸಂತತ ಹರಿವುದು !
ಶಾಲಿಬನದಲಿ ಗಾಳಿ ತೂಗುಯ್ಯಾಲೆಯಲಿ ಗುಡುಗುಡುಗಿರೆ
ನೀರು ಹರಿವುದು ಮೇರೆವರಿಯುತ ನೆಲದ ನೆಲೆಯೇ ಅಡಗಿರೆ
ಅಂತರಂಗದೊಳೆಂಥ ಕಳವಳ ! ಬಾಗಿಲಡೆತಡೆ ಒಡೆದಿದೆ
ಭದ್ರ ಹೃದಯದಿ ಭಾದ್ರಪದದೊಳು ಮರುಳಿನಾಟವು ನಡೆದಿದೆ!

* * *

ಬಾರೆ ಬಾರೌ ಶರದಲಕ್ಷ್ಮಿಯೆ ಶುಭ್ರಮೇಘದ ರಥದಲಿ
ನೀಲ ನಿರ್ಮಲ ಪಥದಲಿ
ಬೆಳಗಿ ತೊಳಗುವ ಶಾಂತಿಶ್ಯಾಮಲ ವನದಿ ಗಿರಿಪರ್ವತದಲಿ
ಶಿಶಿರ ಶೀತಲ ಶ್ವೇತ ಶತದಲ ಮುಕುಟ ಧರಿಸುತ ಧ್ರುತದಲಿ
ನಿನ್ನ ಆ ಬಂಗಾರಬೀಣೆಯ ಮಿಡಿದು ಮಧುಮಧು ತಾನದಿ
ನುಡಿಸು ಇಂಚರ ಧ್ಯಾನದಿ !

5 ಪ್ರವೃತ್ತಿಮಾರ್ಗದ ಪ್ರೇಯಃಪಥದ ಜಯಘೋಷವನ್ನು ಗೈವ ಉತ್ಸಾಹಮಯ ಉಜ್ಜ್ವಲ ಪದ್ಯಗಳು :

ಜಗದ ಈ ಆನಂದಯಜ್ಞಕೆ ಬಂತು ನನಗೆ ನಿಮಂತ್ರಣಾ !
ಸೊಗದ ಬಾಳ್ ಇದು; ಧನ್ಯಧನ್ಯವು ಇಂತು ಮಾನವ ಜೀವನಾ !
ಸಾಕು ಸಾಕೀ ಭಜನೆ ಪೂಜನೆ ಸಾಕು ಈ ಆರಾಧನೆ !
ದೇಗುಲದ ಕದ ಬಿಗಿದು ಮೂಲೆಯೊಳೇಕೆ ಪಡುತಿಹೆ ವೇದನೆ ?

* * *

ಎನಿತೊ ಅರಿಯದಂಥ ಜನರ ಗುರುತುಗೊಳಿಸಿಹೆ !
ಎನಿತೊ ಮನೆಯೊಳೆನಗೆ ಸ್ಥಳವನಿರಿಸಿ ಬೆಳೆಸಿಹೆ !

* * *

ಅಧಮರಲಿ ಅಧಮರಾದವರ ಅಡಿಯಲ್ಲಿ
ಕಳೆದು ಕಂಗೆಟ್ಟವರ ಕಟ್ಟಕಡೆಯಲ್ಲಿ ನಿನ್ನಡಿಯು ರಾಜಿಸುವುದು !
ಬಡವರಲಿ ಬಡವರಾದವರ ಬುಡದಲ್ಲಿ
ದೀನರಲಿ ದೀನರಾದವರ ದಡದಲ್ಲಿ ನಿನ್ನಡಿಯು ರಾಜಿಸುವುದು !

6 ನಾದಪ್ರಿಯ ಕವಿ ತನ್ನ ಹೃದಯದಲಿ ಗಾನದೊಂದಿಗೆ ಧ್ಯಾನಸ್ಥನಾದಾಗ ತನ್ಮಯತೆಯನ್ನು ಪಡೆಯುವ ಸ್ವಾನಂದಾನುಭೂತಿಯ ಪದ್ಯಗಳು :

ಎಂತು ಹಾಡುತಲಿರುವೆಯೋ ಗುಣವಂತ ! ನನಗತಿ ವಿಸ್ಮಯಾ !
ಇಂತು ಕೇಳುತ ಕೇಳುತಲಿ ಏಕಾಂತದಲಿ ಮತಿ ತನ್ಮಯಾ !
ನಿನ್ನ ಇನಿದನಿ ತುಳುತುಳುಕುತಿದೆ ಬೆಳಕ ಭುವನದಿ ಚೆಲ್ಲುತ
ಚೆನ್ನ! ತವಸ್ವರ ಕುಸುರುತಿದೆ–ಆ ಪುಳಕ ಗಗನದಿ ಗೆಲ್ಲುತ !

* * *

ಗಾನದಿಂದಲೆ ಒಳಗು ಹೊರಗೂ ನಿನ್ನನರಸುವೆ ಮನದಲಿ
ನನ್ನ ಇಡಿ ಜೀವನದಲಿ !
ನನ್ನ ಹಾಡಿವು ನನ್ನನೊಯ್ದಿವೆ ದೂರದೂರಕೆ ದೂರಕೆ
ಚಾರುಗೃಹಗಳ ದ್ವಾರಕೆ !

7 ಕವಿ ಸಾಕ್ಷಾತ್ತಾಗಿ ಭಗವಂತನ ಬಿಂಬಾನುಭವವನ್ನು ಪಡೆದು ಅದನ್ನು ಪ್ರತಿಬಿಂಬಿಸುವ ಅಂತಃಸತ್ತ್ವದ ಪದ್ಯಗಳು. ಭಗವಂತ ಭಕ್ತನಿಗೆ ರಾಜ, ಒಡೆಯ, ಗೆಳೆಯ, ಮಾತೆ, ಪಿತ, ಪತಿ, ಎಂಬುದಾಗಿ ತೋರುತ್ತಾನೆ. ಭಗವಂತನಿಗಾಗಿ ಭಕ್ತನ ಅಭಿಸಾರವೂ ಭಕ್ತನಿಗಾಗಿ ಭಗವಂತನ ಅಭಿಸಾರವು ಇಲ್ಲಿ ವರ್ಣಿತವಾಗಿವೆ :

ಬಳಿಯಲಿ ಬಂದನು ಕೆಲದಲಿ ಕುಳಿತನು ಅರಿವೆ ಆಗ್ಗೆ ಇಲ್ಲಾ
ಎಂಥಾ ನಿದ್ದೆಯು ಬಂತೋ ಕಣ್ಣಿಗೆ ಬರಿದು ಭಾಗ್ಯವೆಲ್ಲಾ
ನೀರವ ನಿಶೆಯಲಿ ತೋರಿದನಾತನು ಕನಸೋ ನನಗಂತೂ !
ಪಾಣಿಯೊಳಿಂಪಿನ ಬೀಣೆಯ ಬಾಜನೆ ! –ಕನಸಿಗು ಸವಿಬಂತು !

* * *

ನನ್ನಲಿ ಬೆರೆಯಲು ಎಂದಿನ ದಿನದಿಂದಿಲ್ಲಿಗೆ ಬರುತಿರುವಿ !
ನಿನ್ನನು ತಡೆಯಲು ಯಾರಿಹರಾರ್ಪರು ಇಲ್ಲವೊ ಚಂದ್ರ–ರವಿ !

* * *

ಬೆಳಕಿನ ಬೆಳಕೇ ಬೆಳಕಿಗೆ ಬೆಳಕನು ಸುರಿಯುತ ನೀ ಬಂದೆ !
ಕಳೆಯಿತು ಕತ್ತಲೆ, ಬೆಳಕೋ ಬೆಳಕಿದೆ ನನ್ನಯ ಕಣ್ಮುಂದೆ !

* * *

ಇಲ್ಲಿಯೆ ಹಾಡನು ಮುಗಿಸಲು ಬಯಸುವೆ ಎಲ್ಲಿದೆಯೋ ಕೊನೆಯು ?
ತವ ಸಭೆಯಿಂದಿದೆ ಪುನರಾದೇಶವು ತಪ್ಪಿತು ಯೋಜನೆಯು !

ಹೀಗೆ ಗೀತಗಳ ಅಂಜಲಿ, ಇಷ್ಟದೈವಕ್ಕೆ ಕವಿಯಿಂದ ಅನಂತ ರೀತಿಯಲ್ಲಿ ಅರ್ಪಿತವಾಗಿದೆ. (ಪಿ.ಬಿ.ಎನ್.)

**ಗೀತಿಕೆ :** ಅಚ್ಚಕನ್ನಡ ಛಂದಸ್ಸಿನ ಒಂದು ಮಟ್ಟು. ನಾಗವರ್ಮನ (ಸು. 990) ಛಂದೋಂಬುಧಿಯ ಪಂಚಮಾಧಿಕಾರದಲ್ಲಿಯೂ (ಪ. 18) ಜಯಕೀರ್ತಿಯ (ಸು. 1050) ಸಂಸ್ಕೃತ ಛಂದೋನುಶಾಸನದ ಸಪ್ತಮಾಧಿಕಾರದಲ್ಲಿಯೂ (ಪ. 20) ಇದರ ಲಕ್ಷಣವನ್ನು ಕುರಿತಿದೆ. ಸಾಮಾನ್ಯವಾಗಿ ವಿದ್ವಾಂಸರಿಂದ ಅಂಗೀಕೃತವಾಗಿರುವ ಪದ್ಯಪಾಠದ ಪ್ರಕಾರ, ಛಂದೋಬುಧಿಯಲ್ಲಿ ಉಕ್ತವಾಗಿರುವ ಗೀತಿಕೆಯ ಲಕ್ಷಣ ಹೀಗಿದೆ: ನಾಲ್ಕು ಪಾದಗಳು; ಎರಡೆರಡು ಪಾದಗಳಿಗೆ ಒಂದು ಅರ್ಧ; ಪ್ರತಿಯರ್ಧದಲ್ಲಿಯೂ 2ನೆಯ ಮತ್ತು 6ನೆಯ ಗಣಗಳು ಬ್ರಹ್ಮಗಣಗಳಾಗಿಯೂ ಉಳಿದವು ಕವಿಯ ಇಷ್ಟಪ್ರಕಾರವಾಗಿಯೂ (ಎಂದರೆ ಬ್ರಹ್ಮ ಇಲ್ಲವೆ ವಿಷ್ಣು ಇಲ್ಲವೆ ರುದ್ರ ಯಾವುದಾದರೂ ಗಣಗಳಾಗಿರುವಂತೆಯೂ) ಇರುತ್ತವೆ. ಜಯಕೀರ್ತಿಯ ಛಂದೋನುಶಾಸನದಲ್ಲಿ ಈ ರೀತಿಯಾಗಿದೆ : ನಾಲ್ಕು ಪಾದಗಳು; ಎರಡೆರಡು ಪಾದಗಳಿಗೆ ಒಂದು ಅರ್ಧ ಪ್ರತಿಯರ್ಧದಲ್ಲಿಯೂ 2ನೆಯ ಮತ್ತು 6ನೆಯ ಗಣಗಳು ರತಿಗಣಗಳಾಗಿಯೂ ಉಳಿದ 5 ಗಣಗಳು ಮದನಗಣಗಳೋ ಶರಗಣಗಳೋ ಆಗಿರುತ್ತವೆ; ಸಮಪಾದಗಳಲ್ಲಿ 4 ಗಣಗಳೂ ವಿಷಮಪಾದಗಳಲ್ಲಿ 3 ಗಣಗಳೂ ಇರುತ್ತವೆ.

ಮೇಲಿನ ಎರಡು ಗ್ರಂಥಗಳಲ್ಲಿಯೂ ಗೀತಿಕೆಯ ಲಕ್ಷಣದ ಮುಖ್ಯಾಂಶ ಒಂದೇ ಆಗಿದೆ ಎನ್ನುವುದು ಲಕ್ಷಣ ಮತ್ತು ಲಕ್ಷ್ಯ ಏಕೀಭವಿಸಿರುವ ಆಯಾ ಗೀತಿಕೆಯ ಪದ್ಯವನ್ನು ಪರಸ್ಪರವಾಗಿ ಹೋಲಿಸಿದಾಗ ತಿಳಿಯುತ್ತದೆ. ಜಯಕೀರ್ತಿ ನಾಗವರ್ಮ ನಿಗಿಂತ ಸ್ಪಷ್ಟವಾಗಿ ಕೆಲವು ವಿವರಗಳನ್ನು ಕೊಟ್ಟಿದ್ದಾನೆ. ಪಾದಪಾದಕ್ಕೆ ಎಷ್ಟುಗಣಗಳಿರ ಬೇಕೆಂಬ ಸೂಚನೆ ಜಯಕೀರ್ತಿಯದು; 2ಮತ್ತು 6ನೆಯ ಸ್ಥಾನಗಳನ್ನು ಬಿಟ್ಟು ಉಳಿದವು ವಿಷ್ಣುವೋ ರುದ್ರವೋ ಆಗಿರುತ್ತವೆ ಎಂಬ ಸೂಚನೆಯೂ ಆತನದೇ. 'ಉಱುದವು ಮಚ್ಚುವ ತೆಱದಿಂ' ಎಂಬ ನಾಗವರ್ಮನ ಮಾತಿನಲ್ಲಿ ವಿಷ್ಣು ರುದ್ರಗಳ ಜೊತೆಗೆ ಬ್ರಹ್ಮವೂ ಬರಬಹುದು– ಎಂಬ ತಿಳಿವಳಿಕೆಗೆ ಅವಕಾಶವಿದೆ. ಆದರೆ ಆತನ ಲಕ್ಷಣ–ಲಕ್ಷ್ಯ ಸಮೀಕೃತವಾದ ಗೀತಿಕೆಯ ಪದ್ಯವನ್ನು ಪ್ರಸ್ತಾರಿಸಿದರೆ ಅಲ್ಲಿ ವಿಷ್ಣು ರುದ್ರಗಳೇ ಕಂಡುಬರುವುದರಿಂದ ಜಯಕೀರ್ತಿಯ ಆಶಯವೇ ಸರಿಯಿರಬಹುದು ಎಂದೆನಿಸುತ್ತದೆ. ಈತನಿಗಾದರೂ ಲಕ್ಷಣನಿರ್ವಚನಕ್ಕೆ ನಾಗವರ್ಮನ ಪದ್ಯವೇ ಮಾದರಿಯಾಗಿದ್ದರ ಬಹುದು. ಹಾಗಾದರೆ ನಾಗವರ್ಮ 'ಉಱುದವು ಮಚ್ಚುವ ತೆಱದಿಂ' ಎಂದು ಹೇಳಿದ್ದೇಕೆ? ಗೀತಿಕೆಯ ಆ ಉಳಿದೈದು ಗಣಗಳಲ್ಲಿ ವಿಷ್ಣು ಅಥವಾ ರುದ್ರ ಬರುವುದೇ ಸಾಮಾನ್ಯವಾಗಿದ್ದರೂ ಆಗಾಗ ಬ್ರಹ್ಮವೂ ಬರುವ ಸಾಧ್ಯತೆಯನ್ನು ಲಕ್ಷ್ಯಪದ್ಯಗಳಿಂದ ಮನಗಂಡು ಹಾಗೆ ಹೇಳಿರಬಹುದು; ಮಾದರಿಯನ್ನು ಮಾತ್ರ ವಿಷ್ಣುರುದ್ರರು ಬರುವಂತೆಯೇ ಕಟ್ಟಿರಬಹುದು. ಈಗ ನಮಗೆ ದೊರೆಯುತ್ತಿರುವ ನಿದರ್ಶನಗಳು, ಹಾಗೆ ವಿಷ್ಣುರುದ್ರಗಳು ಬರುವ ಹಾಗೆಯೇ ಬ್ರಹ್ಮ ಬರುವುದನ್ನೂ ತೋರಿಸುತ್ತವೆ. ಇಷ್ಟು ಮಾತ್ರವಲ್ಲದೆ ಅಂಶವೃತ್ತಗಳಿಗೆ ಸಹಜವಾದ ಪ್ರವೃತ್ತಿಯಂತೆ 2 ಮತ್ತು 6ನೆಯ ಬ್ರಹ್ಮಗಣಸ್ಥಾನದಲ್ಲಿಯೂ ಅಪೂರ್ವವಾಗಿ ವಿಷ್ಣುವೂ ರುದ್ರವೂ ಬರುವುದಾದರೆ, ಅದರಲ್ಲಿ ಆಶ್ಚರ್ಯವೇನಿಲ್ಲ. ಗೀತಿಕೆಯ ಉಪಲಬ್ಧ ನಿದರ್ಶನಗಳನ್ನು ಪ್ರಸ್ತಾರಿಸುವಾಗ, ಕೆಲವೊಮ್ಮೆ ಈ ಪ್ರವೃತ್ತಿ ಕಾಣುವ ಹಾಗೆ ತೋರುತ್ತದೆ.

ಮುಖ್ಯವಾಗಿ ಕವಿರಾಜಮಾರ್ಗದ ಗೀತಿಕೆಯ ಪದ್ಯಗಳಲ್ಲಿ ಕೆಲವು ಕಡೆ ನಿರ್ದಿಷ್ಟಗಣ ಸಂಖ್ಯೆಯ ಅಗತ್ಯಕ್ಕಿಂತ ಹೆಚ್ಚಾಗಿ ಕೆಲವು ಅಕ್ಷರಗಳು ಉಳಿದುಬಿಡುತ್ತಿರುವುದು ಗೀತಿಕೆಯನ್ನು ಒಂದು ಸಮಸ್ಯಾತ್ಮಕ ಛಂದೋಬಂಧವನ್ನಾಗಿ ಮಾಡಿದೆ. ಒಂದೆರಡೇ ಅಕ್ಷರಗಳು ಉಳಿಯುವಂತಿದ್ದರೆ ಅದೊಂದು ಬಗೆಯಾಗಿ ಸಮಾಧಾನವನ್ನು ಹೇಳಬಹುದು; ಗೀತಿಕೆಯ ವೈಲಕ್ಷಣ್ಯದಲ್ಲಿ ಅದನ್ನು ಸೇರಿಸಬಹುದು. ಆದರೆ ಒಮ್ಮೊಮ್ಮೆ ದೀರ್ಘತರ ಪಾದಗಳ ಪದ್ಯಗಳು ಕೂಡ ಎದುರಾಗಿ ಇವೇನು ದಿಟವಾಗಿ ಗೀತಿಕೆಗಳೇ ಎಂಬ ಸಂಶಯವನ್ನೂ ಉಂಟುಮಾಡುತ್ತವೆ. 2 ಮತ್ತು 6ರ ಬ್ರಹ್ಮಗಣಗಳಿಗೆ ಅಪೂರ್ವವಾಗಿ ವಿಷ್ಣು (ಇಲ್ಲವೆ ರುದ್ರ) ಬರಬಹುದು ಎಂಬ ಗ್ರಹಿಕೆಯಿಂದ ಮುನ್ನಡೆದರೆ ತೊಡಕು ಕೆಲಮಟ್ಟಿಗೆ ಬಗೆಹರಿಯುತ್ತದೆಂದು ಹೇಳಬಹುದು; ಆದರೆ ಸಮಸ್ಯೆಯ ಪರಿಹಾರ ಈಗಿನ ಮಟ್ಟಿಗೆ ಪೂರ್ತಿಯಾಗಿ ಸಾಧ್ಯವಿಲ್ಲ.

ಇದನ್ನು ಗಮನಿಸಿ ಗೀತಿಕೆಯ ಲಕ್ಷಣವನ್ನು ತಾತ್ಕಾಲಿಕವಾಗಿ ಹೀಗೆ ಹೇಳಬಹುದು: ನಾಲ್ಕು ಪಾದಗಳು; ಎರಡೆರಡು ಪಾದಗಳಿಗೆ ಒಂದು ಅರ್ಧ; ಪ್ರತಿಯರ್ಧದಲ್ಲಿಯೂ 7ರಂತೆ ಗಣಗಳಿರುತ್ತವೆ. ಅವುಗಳ ಮೊದಲನೆಯ ಪಾದದಲ್ಲಿ 3 ಗಣಗಳೂ ಎರಡನೆಯ ಪಾದದಲ್ಲಿ 4 ಗಣಗಳೂ ಇರುತ್ತವೆ. (ಅಥವಾ ಒಟ್ಟು ಪದ್ಯದಲ್ಲಿ 1 ಮತ್ತು 3ನೆಯ ಪಾದಗಳಲ್ಲಿ 3 ಗಣಗಳು 2 ಮತ್ತು 4ನೆಯ ಪಾದಗಳಲ್ಲಿ 4 ಗಣಗಳೂ ಇರುತ್ತವೆ.) ಪ್ರತಿಯರ್ಧದ 2 ಮತ್ತು 6ನೆಯ ಗಣಗಳು ಬ್ರಹ್ಮ ಗಣಗಳು; ಉಳಿದ 5 ಗಣಗಳು ಬ್ರಹ್ಮ ಅಥವಾ ವಿಷ್ಣು ಅಥವಾ ರುದ್ರ ಆಗಿರುತ್ತವೆ. (ಅಪೂರ್ವವಾಗಿ 2 ಮತ್ತು 6ನೆಯ ಬ್ರಹ್ಮಗಣ ಸ್ಥಾನದಲ್ಲಿ ಲಯಕ್ಕೆ ಹೊಂದಿ ವಿಷ್ಣು ಇಲ್ಲವೆ ರುದ್ರ ಬರಬಹುದು.)

ಲಕ್ಷಣಾನ್ವಿತವಾದ ಗೀತಿಕೆಯ ಎರಡು ಪದ್ಯಗಳು :

ಕಾವ್ಯಾವಲೋಕನದಿಂದ :

ಇಂತಿರೆ, ಶಬ್ದಂ. ಸಂದೇಹ
ಧ್ವಾಂತೌಘಂ. ಪಿಂಗಿರೆ. ಜಲಕ. ನಾಗೆ ಬುಧಂ
ಸಂತತಿಗ. ಪ್ಪಂತು. ಪೇಟ್ದಿನಿದಂ
ಶಾಂತಮ. ನಂ ಕವಿ. ತಾಗು. ಣೋದಯಂ (ಪದ್ಯ 422)

ಕವಿರಾಜಮಾರ್ಗದಿಂದ :

ಪ್ರತಿಪದಾರ್ಥ. ತತ್ತ್ವ. ಭೇದದೊಳ್
ಪ್ರತಿಷೇಧಮಂ, ನೆಗಟ್ಟ್ಗಿ. ಮನಿತೆ. ಮಾಟ್ಕೆಯಿಂ
ದತಿಶಯಾ. ಕ್ಷೇಪ. ಗಣನಾವೃತಿ
ಗತಿ ನೃಪ.ತುಂಗ ದೇವ. ಮಾರ್ಗದೊಳ್ ॥ (ಪ. 3–107)

2 ಮತ್ತು 6ನೆಯ ಸ್ಥಾನಗಳಲ್ಲಿ ಪರ್ಯಾಯ ಗಣ ಬರಬಹುದೆಂಬುದಕ್ಕೆ ಒಂದು ನಿದರ್ಶನ :

ಇಂತು. ಮಿಕ್ಕ. ವರ್ಣನೆಗಳ್
ಸಂತತ. ಮೊಂದಾಗಿ. ಪೇಟ್ದಿ **ಕಾವ್ಯಂ** ಧರೆಯೊಳ್
ಸಂತತಿ ಕೆಡದೆ. ನಿಲ್ಕುಮಾಕ.
ಲ್ಪಾತಂ. ಬರ. ಮರ್ಮೋಘ. ವರ್ಷಯ. ಶಂಬೋಲ್ (ಪ. 3–217)

(ಟಿ.ವಿ.ವಿ.)

## ಗೀತೆ : ನೋಡಿ–ಭಗವದ್ಗೀತೆ

**ಗೀಸ಼ರ್ :** ಸರಿ ಸುಮಾರು ನಿಯತಾಂತರಗಳಲ್ಲಿ ಬಿಸಿನೀರಿನ ಒಂದು ರಾಶಿಯನ್ನೋ ಉಗಿಯ ಮೊತ್ತವನ್ನೋ ವಾಯು ಮಂಡಲಕ್ಕೆ ಚಿಮ್ಮಿಸುವ ನೈಸರ್ಗಿಕ ಚಿಲುಮೆ ಇಲ್ಲವೇ ಒರತೆ. ಇದೊಂದು ವಿಶಿಷ್ಟ ರೀತಿಯ ಊಟೆ. ಗೀಸ಼ರಿನಿಂದ ಚಿಮ್ಮಿದ ನೀರು ಕೆಲವು ಮೀಟರುಗಳಿಂದ ಹಲವು ನೂರು ಮೀಟರುಗಳಷ್ಟು ಎತ್ತರಕ್ಕೂ ರಟ್ಟುವುದುಂಟು. ಆ ವೇಳೆಗೆ ಉಗಿ ಇನ್ನಷ್ಟು ಎತ್ತರ ಏರಬಹುದು. ಗೀಸ಼ರ್ ಪದ ಐಸ್‌ಲೆಂಡಿನವರ ಭಾಷೆಯದು; ಇದರ ಅರ್ಥ ಚಿಮ್ಮುಗ ಎಂದು.



ಗೀಸ಼ರುಗಳು ಪ್ರಪಂಚದ ಅಪೂರ್ವ ವಿದ್ಯಮಾನಗಳಲ್ಲಿ ಒಂದು. ಅಮೆರಿಕದ ಸಂಯುಕ್ತ ಸಂಸ್ಥಾನಗಳ ವ್ಯೋಮಿಂಗಿನ ಎಲ್ಲೋಸ್ಟೋನ್ ನ್ಯಾಷನಲ್ ಪಾರ್ಕ್, ನ್ಯೂಜಿಲೆಂಡ್, ಐಸ್‌ಲೆಂಡ್, ಅಲಾಸ್ಕ, ಚಿಲಿ, ಟಿಬೆಟ್, ಜಪಾನ್ ಮತ್ತು ಇಂಡೊನೇಷ್ಯಗಳಲ್ಲಿ ಗೀಸ಼ರುಗಳನ್ನು ಕಾಣಬಹುದು. ಇವುಗಳ ಪೈಕಿ ಯೆಲ್ಲೋಸ್ಟೋನ್ ಪಾರ್ಕ್

ಸುಪ್ರಸಿದ್ಧವಾದದ್ದು. ಅಲ್ಲಿ 100ಕ್ಕೂ ಮಿಕ್ಕಿದ ಪಟುಗೀಸರುಗಳೂ 3,000ಕ್ಕೂ ಮಿಕ್ಕಿದ ಚಿಮ್ಮದ ಬಿಸಿನೀರಿನ ಒರತೆಗಳೂ ಇವೆ. ಇವುಗಳ ಪೈಕಿ ಓಲ್ಡ್ ಫೇತ್‌ಫುಲ್ ಎಂಬ ಹೆಸರಿನ ಗೀಸರ್ ಪ್ರಸಿದ್ಧವಾದದ್ದು. ಸುಮಾರಾಗಿ ಗಂಟೆಗೊಂದು ಸಲ ಇದು ನೆಗೆಯುತ್ತದೆ. ಐದು ಮಿನಿಟುಗಳ ವರೆಗೆ ಚಿಮ್ಮುತ್ತಿದ್ದು ಮತ್ತೆ ಶಾಂತವಾಗುತ್ತದೆ. ಇದರಿಂದ ರಟ್ಟುವ ಕುದಿನೀರು ಸುಮಾರು 45.5 ಮೀ.ಗಳಷ್ಟು ಎತ್ತರ ಏರುವುದು; ಅದರೊಂದಿಗೆ ಸಾಕಷ್ಟು ಉಗಿಯೂ ಹೊರ ಹೊಮ್ಮುವುದು. ಅದೇ ಪಾರ್ಕಿನಲ್ಲಿರುವ ಕ್ಯಾಸಲ್ ಎನ್ನುವ ಇನ್ನೊಂದು ಗೀಸರಿನಿಂದ ಹಾರುವ ನೀರು 79 ಮೀ.ಗಳನ್ನು ಮೀರಿದ ಎತ್ತರ ತಲಪುವುದುಂಟು.

ಗೀಸರುಗಳ ಉದ್ಭೇದಕ ಪ್ರವೃತ್ತಿಯ ಕಾರಣ ನೆಲದಡಿಯಲ್ಲೇ ಅನತಿ ಆಳದಲ್ಲಿರುವ ಬಲುಕಾವಿನ ಕಲ್ಲುಗಳ ರಾಶಿ ಎಂದು ಊಹಿಸಲಾಗಿದೆ. ಜ್ವಾಲಾಮುಖಿಪಟುತ್ವ ತೀರ ಈಚೆಗಿದ್ದ ಪ್ರದೇಶಗಳಿಗೆ ಮಾತ್ರ ಗೀಸರುಗಳ ವಿತರಣೆ ಸೀಮಿತವಾಗಿರುವುದು ಮೇಲಿನ ಊಹೆಗೆ ಸಮರ್ಥನೆ ನೀಡುವುದು. ಗೀಸರಿನ ಕತ್ತು ಸಾಮಾನ್ಯವಾಗಿ ಅನಿಯತಾಕಾರದ ಒಂದು ನಾಳ. ಆಸುಪಾಸಿನ ಕಲ್ಲುಗಳಿಂದ ಒಸರಿದ ನೀರು ಅದರಲ್ಲಿ ಆಂಶಿಕವಾಗಿ ತುಂಬಿಕೊಂಡಿರುತ್ತದೆ. ಅಲ್ಲಿಂದ ಸಾಕಷ್ಟು ಆಳದಲ್ಲಿರುವ ನೀರು ತಳದ ಸುಡುಗಲ್ಲಿನ ಪ್ರಭಾವದಿಂದ ಕುದಿಬಿಂದುವಿನಲ್ಲಿರುತ್ತದೆ. ಒಸರು ನೀರು ಈ ವಲಯದಲ್ಲಿ ಒಟ್ಟಾದಂತೆ ನೀರಿನ ಗಾತ್ರ ಮತ್ತು ಒತ್ತಡ ಉಷ್ಣತೆಯೊಂದಿಗೆ ಏರುತ್ತವೆ. ಒಂದಷ್ಟು ಅಂಶ ಉಗಿಯಾಗಿ ರಭಸದಿಂದ ಮೇಲೇರಲು ತೊಡಗುತ್ತದೆ. ಅದರೊಂದಿಗೆ ನೀರು ಮೇಲಕ್ಕೆ ಚಿಮ್ಮುತ್ತದೆ. ಈ ಉಗಿಮಿಶ್ರಿತ ಬಿಸಿನೀರು ಗೀಸರಿನ ಕತ್ತಿನಲ್ಲಿದ್ದ ನೀರನ್ನು ಬಾಯಿಯೆಡೆಗೆ ತಳ್ಳುತ್ತ ದಾರಿಮಾಡಿಕೊಂಡು ಮಹಾ ವೇಗದಿಂದ ಆಕಾಶಕ್ಕೆ ನೆಗೆಯುತ್ತದೆ. ಇದೇ ಗೀಸರ್. (ಎ.ಎನ್.ಎಸ್.ಐ.)

**ಗೀಳು :** ಅಭಿಪ್ರಾಯ. ಕಲ್ಪನೆ, ಆಶೆ ಇತ್ಯಾದಿಗಳಲ್ಲಿ ಯಾವುದಾದರೂ ಒಂದು ವ್ಯಕ್ತಿಯ ಆಲೋಚನೆಗಳನ್ನು ಇಲ್ಲವೆ ಭಾವನೆಗಳನ್ನು ಆಕ್ರಮಿಸಿ ಕಾಡುವುದು (ಅಬ್‌ಸೆಷನ್). ಅಸಂಬದ್ಧ ಎಂಬುದಾಗಿ ವ್ಯಕ್ತಿಗೆ ಅರಿವಿದ್ದರೂ ಅವನನ್ನು ಎಡೆ ಬಿಡದೆ ಪಟ್ಟುಹಿಡಿದು ಕಾಡುವ ಅಂಥ ಅಹಿತವಾದ ಯೋಚನೆಗಳು ಇಲ್ಲವೆ ಭಾವನೆಗಳಿಗೂ ಇದೇ ಹೆಸರಿದೆ. ಇವು ವ್ಯಕ್ತಿಯ ಇಚ್ಛಾ ಪೂರ್ಣ ಹತೋಟಿಗೆ ಹೊರತಾಗಿಯೇ ಇರುತ್ತವೆ. ಅಸಂಗತ ರೀತಿಯಲ್ಲಿ ಅವನ ಚೇತನಕ್ಕೆ ಹಾಯ್ದು ಬರುತ್ತವೆ ಮತ್ತು ಎಷ್ಟೇ ಪ್ರಯತ್ನಪಟ್ಟರು ಸ್ವಇಚ್ಛೆಯಿಂದ ಅವನ್ನು ಹೊರಹಾಕುವುದು ವ್ಯಕ್ತಿಗೆ ಅಸಾಧ್ಯವಾಗಿ ತೋರಬಹುದು. ಕಾಯಂ ಅಲ್ಲದ, ಲಘು ಗೀಳಿನ ಅನುಭವಕ್ಕೆ ಪ್ರತಿಯೊಬ್ಬನೂ ಒಂದಲ್ಲ ಒಂದು ಭಾರಿ ತುತ್ತಾಗಿಯೇ ಇರುತ್ತಾನೆ. ಇಂದು ಮನೆಯಿಂದ ಹೊರಟಾಗ ಬಾಗಿಲಿಗೆ ಬೀಗ ಹಾಕಿದೆನೇ ಅಥವಾ ಕಾಗದವನ್ನು ಅಂಚೆಗೆ ಕಳಿಸುವ ಮುನ್ನ ಸಹಿ ಮಾಡಿದೆನೇ ಈ ಮುಂತಾದ ಯೋಚನೆಗಳು ಲಘು ಗೀಳಿನ ನಿದರ್ಶನಗಳಾಗಿವೆ. ಶಬ್ದಗಳು ತಲೆಯಲ್ಲಿ ಗುಂಯ್‌ಗುಟ್ಟುವಿಕೆ ಲಘು ಗೀಳಿನ ಇನ್ನೊಂದು ಅನುಭವ. ಈ ಬಗೆಯ ಲಘು ಗೀಳಿನ ಅನುಭವಗಳು ವ್ಯಕ್ತಿಗೆ ಕಿರಿಕಿರಿ ಎನ್ನಿಸಬಹುದಾದರೂ ಅವನ ಮಾನಸಿಕ ಹೊಂದಾಣಿಕೆಗೆ ಅಡ್ಡಿ ಬರುವುದಿಲ್ಲ.

ತೀವ್ರತರವಾದ ಗೀಳುಗಳು ಮನೋಬೇನೆಯ ರೂಪಗಳೇ ಆಗಿವೆ. ಅವು ವ್ಯಕ್ತಿಯ ಹೊಂದಾಣಿಕೆಗೆ ಅಡ್ಡಿಯುಂಟುಮಾಡುತ್ತವೆ. ಅಂಥವು ಸಾವು, ಆತ್ಮಹತ್ಯೆ, ಕೊಲೆ– ಈ ವಿಚಾರಗಳ ಸುತ್ತ ಕೇಂದ್ರಿಕೃತವಾಗಿರುತ್ತವೆ. ಸಾಮಾನ್ಯವಾಗಿ ಗೀಳುಗಳು ಹತ್ತಿಕ್ಕಲಾರದ ಹಠಾತ್ತಾದ ಪ್ರವೃತ್ತಿಗಳಲ್ಲಿ ತೊಡಗಬಹುದೆಂಬ ಭಯವನ್ನು ಒಳಗೊಂಡಿರುತ್ತವೆ. ಯಾರ ಎದುರಿನಲ್ಲಾದರೂ ಅಶ್ಲೀಲ ಪದವೊಂದನ್ನು ಕೂಗಿಕೊಳ್ಳುತ್ತೇನೋ ಏನೋ ಅಥವಾ ನನ್ನ ಗಂಡನನ್ನು ಚೂರಿಯಿಂದ ತಿವಿದು ಹಾಕುತ್ತೀನೇನೋ ಈ ಮೊದಲಾದ ಭಯಗಳು ವ್ಯಕ್ತಿಯನ್ನು ಕಾಡಬಹುದು. ಕೆಲವೊಮ್ಮೆ ಗೀಳುಗಳು ಹಠಾತ್ತಾದ ಕಾರ್ಯಪ್ರವೃತ್ತಿಗಳ ರೂಪದಲ್ಲಿ ಕಾಣಿಸಿಕೊಳ್ಳಬಹುದು. ಉದಾ: ತನ್ನ ತಾಯಿಯೋ ಅತ್ತೆಯೋ ಸತ್ತುಹೋದರೊಳ್ಳೆಯದೆಂದು ಪದೇ ಪದೇ ಹಾರೈಸುವಿಕೆ. ಈ ಬಗೆಯ ಯೋಚನೆಗಳು ಅಸಂಬದ್ಧ ಮಾತ್ರವಲ್ಲ ; ಅನೈತಿಕವೂ ಜುಗುಪ್ಸೆ ಮತ್ತು ಭಯ ಹುಟ್ಟಿಸುವಂಥವೂ ಆಗಿರುತ್ತವೆ. ಆ ಯೋಚನೆಗಳು ಕಾರ್ಯರೂಪಕ್ಕೆ ಬಾರದಿದ್ದರೂ ವ್ಯಕ್ತಿಗೆ ನೋವನ್ನು ಒದಗಿಸುವ ಮೂಲಗಳಾಗಿರುತ್ತವೆ. ಅನೇಕ ವೇಳೆ ರೋಗಿ ತಾನು ಹುಚ್ಚನಾಗುತ್ತಿದ್ದೇನೆಂದು ಭಾವಿಸುತ್ತಾನೆ. ಇಲ್ಲವೆ ತಾನು ಬದುಕಿರಲು ಯೋಗ್ಯನಲ್ಲ ಎಂದುಕೊಳ್ಳುತ್ತಾನೆ. ಗೀಳು ತೀವ್ರತರವಾದಾಗ ವ್ಯಕ್ತಿಯು ಸಂಪೂರ್ಣ ಅಪ್ರಯೋಜಕನಾಗುತ್ತಾನೆ ; ಇನ್ನಾವುದೇ ಬಗೆಯ ಯೋಚನೆಯನ್ನು ಮಾಡಲು ಅಸಮರ್ಥನಾಗುತ್ತಾನೆ.

ಕ್ರೈಯನ್ಸ್ ಎಂಬಾತ ವರದಿ ಮಾಡಿರುವ ಒಬ್ಬ ಹುಡುಗಿಯ ಘಟನೆ ಗೀಳಿನ ತೀವ್ರಾವಸ್ಥೆಯ ಒಂದು ಉತ್ತಮ ನಿದರ್ಶನವನ್ನು ಒದಗಿಸುತ್ತದೆ. ಆ ಹುಡುಗಿ ಭೀಕರ ಯೋಚನೆಯನ್ನು ಹೊಂದಿದ್ದಳು. ಅವಳು ತಾನು ಪ್ರೀತಿಸಿದ ಸ್ನೇಹಿತನ ಬಗೆಗೆ ಯೋಚಿಸಿದಾಗ ಅವನು ಸಾಯಬಾರದೇ ಎಂದು ಹಾರೈಸುತ್ತಿದ್ದಳು ; ಅವಳ ತಾಯಿ ಮೆಟ್ಟಿಲುಗಳನ್ನಿಳಿದು ಕೆಳಕ್ಕೆ ಹೋಗುತ್ತಿದ್ದರೆ ಅವಳು ಕೆಳಕ್ಕೆ ಬಿದ್ದು ಕತ್ತನ್ನು ಮುರಿದುಕೊಳ್ಳ ಬಾರದೇ ಎಂದು ಹಾರೈಸುತ್ತಿದ್ದಳು ; ಅವಳ ಸೋದರಿ ತನ್ನ ಪುಟ್ಟ ಮಗಳೊಂದಿಗೆ ಸಮುದ್ರತೀರಕ್ಕೆ ಹೋಗುವ ಪ್ರಸ್ತಾಪ ಮಾಡಿದಾಗ, ಅವರಿಬ್ಬರೂ ನೀರಿನಲ್ಲಿ ಮುಳುಗಿ ಸಾಯಬಾರದೇ ಎಂದು ಆಶಿಸುತ್ತಿದ್ದಳು. 'ಈ ಬಗೆಯ ಯೋಚನೆಗಳು ನನ್ನನ್ನು ಉದ್ರೇಕಗೊಳಿಸುತ್ತವೆ. ನಾನು ಅವರನ್ನು ಪ್ರೀತಿಸುತ್ತೇನೆ. ಹಾಗಾದರೂ ನಾನೇಕೆ ಈ ಬಗೆಯ ಭಯಂಕರ ವಿಚಾರಗಳನ್ನು ಹಾರೈಸಬೇಕು? ಇದೆಲ್ಲ ನನಗೆ ಹುಚ್ಚನ್ನೇ ಹಿಡಿಸುತ್ತದೆ. ನಾನು ಪ್ರೀತಿಸುವವರ ಬಗೆಗೆ ಈ ರೀತಿಯ ಭಯಂಕರ ಯೋಚನೆಗಳನ್ನು ಮಾಡುವುದಕ್ಕೆ ಬದಲಾಗಿ ನಾನು ಸಾಯುವ ಮೂಲಕ ಈ ಯೋಚನೆಗಳನ್ನು ಕೊನೆಗೊಳಿಸುವುದು ಮೇಲು ಎಂದು ಅವಳು ಅಂದುಕೊಳ್ಳುತ್ತಿದ್ದುದುಂಟು.

ಒಂದು ದೃಷ್ಟಿಯಲ್ಲಿ ಗೀಳುಗಳನ್ನು ಆಂತರಿಕ ಘರ್ಷಣೆಯಿಂದ ಪರಿಣಮಿಸುವ ಉದ್ವಿಗ್ನತೆಯನ್ನು ಪರಿಹರಿಸುವ ರಕ್ಷಣಾತಂತ್ರಗಳು ಎಂಬುದಾಗಿ ತಿಳಿಯಬಹುದು. ವ್ಯಕ್ತಿಯಲ್ಲಿ ಹುದುಗಿರುವ ಆಶೆಗಳು ಮತ್ತು ದ್ವೇಷಭಾವನೆಗಳನ್ನೂ ಕ್ರಿಯಾರೂಪಕ್ಕೆ ಬಾರದಂತೆ ತಡೆಹಿಡಿಯುವಲ್ಲಿ ಗೀಳುಗಳು ಸಹಾಯಕವಾಗಬಹುದು. ಗೀಳುಗಳನ್ನು ಹೆಚ್ಚು ಆತಂಕಕಾರಿ ವಿಚಾರಗಳಿಂದ ವಿಮುಕ್ತಿ ಪಡೆಯಲು ಸಹಾಯಮಾಡುವ ಬದಲೀ ಚಟುವಟಿಕೆಗಳು ಎಂಬುದಾಗಿಯೂ ವಿವರಿಸಬಹುದು (**ನೋಡಿ–ಚಟ**). (ಎಚ್.ಎಸ್.ಐ.)

**ಗುಂಜಿ :** ಬೆಳಗಾಂವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಒಂದು ಗ್ರಾಮ. ಖಾನಾಪುರ ದಿಂದ 13ಕಿಮೀ ದೂರದಲ್ಲಿ ಬೆಳಗಾಂವಿ ಪಣಜಿ ಹೆದ್ದಾರಿಯಲ್ಲಿದೆ. ಇಲ್ಲಿ ಕಮಲೇಶ್ವರ, ಗಣಪತಿ, ರಾವಳನಾಥ, ಮಾವೂಲಿದೇವಿ ಮುಂತಾದ ದೇವಾಲಯಗಳಿವೆ. ಕಮಲೇಶ್ವರ ದೇವಾಲಯದ ಗರ್ಭಗುಡಿ ಮಾತ್ರ ಪುರಾತನವಾದ್ದು, ಶಿವಲಿಂಗ ಪೀಠ ತರುವಾಯದ ಚಾಳುಕ್ಯ ಶೈಲಿಯಲ್ಲಿದೆ. ಗಣಪತಿ ದೇವಾಲಯವನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡಲಾಗಿದೆ. ಈ ದೇವಾಲಯದ ಗರ್ಭಗುಡಿಯಲ್ಲಿ ಚಾಳುಕ್ಯ ಶೈಲಿಯ ಶಿವಲಿಂಗ ಮತ್ತು ವಿಷ್ಣು ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ರಾವಳನಾಥ ದೇವಾಲಯ ಇತ್ತೀಚಿನ ಸಿಮೆಂಟ್ ಕಟ್ಟಡವಾಗಿದ್ದು ಸೊಗಸಾಗಿದೆ. ಈ ದೇವಾಲಯದ ಮುಂದೆ ಐದು ವೀರಗಲ್ಲುಗಳಿವೆ. ದೊಡ್ಡದಾದ ಶಿವಲಿಂಗವನ್ನೊಳಗೊಂಡ ಶಿವ ದೇವಾಲಯವೂ ಊರ ಹೊರವಲಯದಲ್ಲಿದೆ. ದಸರ ಮಹೋತ್ಸವದಲ್ಲಿ ಈ ದೇವಾಲಯ ಮತ್ತು ರಾವಳನಾಥ ದೇವಾಲಯದಲ್ಲಿ 5 ದಿನಗಳಕಾಲ ಹಬ್ಬವನ್ನು ಆಚರಿಸಲಾಗುತ್ತದೆ. ಈ ಊರಲ್ಲಿ ಖಾಜಿ ಪೀರ್‌ರ ದರ್ಗಾ ಇದೆ. ಗುಂಜಿಗೆ ಸು.5ಕಿಮೀ ಅಂತರದಲ್ಲಿರುವ ಕಿರವಾಲಿ ಎಂಬ ಸ್ಥಳ ನಾಥಪಂಥದ ಒಂದು ಪ್ರಾಚೀನ ಕೇಂದ್ರವಾಗಿತ್ತು. ಅಲ್ಲಿ ಗೋರಖನಾಥ ಮಠವಿದೆ; ಕಾಲಭೈರವನ ಉಪಾಸನೆ ನಡೆಯುತ್ತದೆ. ನಾಥಪಂಥಕ್ಕೆ ಸೇರಿದ ಮತ್ಸ್ಯೆಂದ್ರನಾಥ ಮಠ ಗುಂಜಿಗೆ ಸು.7ಕಿಮೀ ದೂರದ ದೊಂಗುಗಾಂವ್‌ನಲ್ಲಿದೆ. (ಎಂ.ಬಿ.ಎಚ್.)

**ಗುಂಟಕಲ್ :** ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಗುಟ್ಟಿ ತಾಲ್ಲೂಕಿನ ಒಂದು ಪಟ್ಟಣ. ಉ. ಅ. $15^0$ 9' ಮತ್ತು ಪೂ. ರೇ. $72^0$ 23' ಮೇಲೆ ಇದೆ. ಬಳ್ಳಾರಿ–ಗೂಟಿ ಹೆದ್ದಾರಿಯಲ್ಲಿರುವ ಈ ಪಟ್ಟಣ ದಕ್ಷಿಣ–ಮಧ್ಯ ರೈಲ್ವೆಯ ಪ್ರಮುಖ ಜಂಕ್ಷನ್. ಮುಂಬಯಿ, ಮದ್ರಾಸು, ಬೆಂಗಳೂರು, ಬಳ್ಳಾರಿ, ಸಿಕಂದರಬಾದ್, ಗುಂಟೂರು, ಹುಬ್ಬಳ್ಳಿಗಳ ರೈಲು ಮಾರ್ಗಗಳು ಇಲ್ಲಿ ಕೂಡುತ್ತವೆ. ಆದ್ದರಿಂದ ಈ ನಿಲ್ದಾಣ ಹಗಲು–ರಾತ್ರಿ ರೈಲುಗಳ ಓಡಾಟವೂ ಜನಸಂದಣಿಯೂ ಇರುತ್ತದೆ. ಒಂದು ವಿಭಾಗದಿಂದ ಮತ್ತೊಂದು ವಿಭಾಗಕ್ಕೆ ಹೋಗುವ ಅಂಚೆ ಚೀಲಗಳನ್ನು ಕೊಡುವ ತೆಗೆದುಕೊಳ್ಳುವ ಕೆಲಸ ಸತತವಾಗಿ ನಡೆದಿರುತ್ತದೆ.

ರೈಲ್ವೆ ಬರುವುದಕ್ಕೆ ಮುಂಚೆ ಇದೊಂದು ಸಣ್ಣ ಹಳ್ಳಿಯಾಗಿತ್ತು. ಈಗ ಆ ಭಾಗ ಹಳೆ ಗುಂಟಕಲ್ ಎನಿಸಿಕೊಂಡಿದೆ. ಗುಂಟಕಲ್ ರಾಯಲಸೀಮೆ ಪ್ರದೇಶದ ಒಂದು ಮುಖ್ಯ ವ್ಯಾಪಾರ ಕೇಂದ್ರ. ಸುತ್ತಣ ಪ್ರದೇಶದಲ್ಲಿ ಬೆಳೆಯುವ ಹತ್ತಿ, ನೆಲಗಡಲೆ, ಎಣ್ಣೆಬೀಜ ಇಲ್ಲಿ ಸಂಗ್ರಹವಾಗುತ್ತವೆ. ಇಲ್ಲಿ ಅರಳೆ ಬಿತ್ತುವ ಮತ್ತು ಹಿಂಜುವ ಗಿರಣಿಗಳಿವೆ. ನೀರಿನ ಅಭಾವದಿಂದಾಗಿ ಇದರ ಬೆಳವಣಿಗೆ ಕುಂಠಿತವಾಗಿದೆ.

ಗುಂಟಕಲ್ಲಿನ ಸುತ್ತ ಅನೇಕ ಪ್ರಾಚೀನ ಅವಶೇಷಗಳುಂಟು. ಇಲ್ಲಿಂದ 8 ಕಿ.ಮೀ. ದೂರದಲ್ಲಿರುವ ಚಿಪ್ಪಗಿರಿಯಲ್ಲಿ ವಿಜಯದಾಸರು ತಪಸ್ಸು ಮಾಡಿದ ಸ್ಥಳವಿದೆ. *

**ಗುಂಟೂರು :** ಆಂಧ್ರ ಪ್ರದೇಶದ ಒಂದು ಜಿಲ್ಲೆ. ಮತ್ತು ಆ ಜಿಲ್ಲೆಯ ಮುಖ್ಯಪಟ್ಟಣ. ಉ. ಅ. $16^0$ 18' ಮತ್ತು ಪೂ.ರೇ. $80^0$ 28' ಮೇಲೆ. ಹೈದರಾಬಾದ್ ನಗರದ ಆಗ್ನೇಯಕ್ಕೆ 400 ಕಿ.ಮೀ. ದೂರದಲ್ಲಿದೆ. ಇದು ದಕ್ಷಿಣ ರೈಲ್ವೆಯ ವಿಜಯವಾಡ–ಗುಂಟಕಲ್ ಮಾರ್ಗದ ಒಂದು ಮುಖ್ಯ ರೈಲು ನಿಲ್ದಾಣ. ಜಂಕ್ಷನ್, ವಿಶಾಖಪಟ್ಟಣ–ಮದ್ರಾಸ್ ರಸ್ತೆಯಲ್ಲಿದೆ. ಬೇಸಗೆಯಲ್ಲಿ ಉಷ್ಣತೆಯ ಸರಾಸರಿ $32^0$ ಸೆಂ., ಚಳಿಗಾಲದಲ್ಲಿ $20^0$ ಸೆಂ. ಇಲ್ಲಿ ಆಂಧ್ರ ವಿಶ್ವವಿದ್ಯಾಲಯದ ಮನ್ನಣೆ ಪಡೆದ ಕಾಲೇಜುಗಳಿವೆ.

ಸೆಣಬು, ಎಣ್ಣೆ, ಮತ್ತು ಅಕ್ಕಿ ಗಿರಣಿಗಳು, ಹೊಗೆಸೊಪ್ಪು ಪರಿಷ್ಕರಣ, ಎಂಜಿನಿಯರಿಂಗ್– ಇವು ಇಲ್ಲಿಯ ಕೈಗಾರಿಕೆಗಳು. ಇತರ ಪಟ್ಟಣಗಳೊಂದಿಗೆ ರೈಲ್ವೆ ಮತ್ತು ರಸ್ತೆ ಸಂಪರ್ಕ ಹೊಂದಿರುವುದರಿಂದ ಇದೊಂದು ಪ್ರಮುಖ ವ್ಯಾಪಾರ ಸ್ಥಳ. 18ನೆಯ ಶತಮಾನದ ಉತ್ತರಾರ್ಧದಲ್ಲಿ ಫ್ರೆಂಚರು ಈ ಪಟ್ಟಣವನ್ನು ಸ್ಥಾಪಿಸಿದರೆಂದು ಕಾಣುತ್ತದೆ. ಗುಂಟೂರು ಸ್ವಲ್ಪ ಕಾಲ ನಿಜಾಮನ ಅಧೀನದಲ್ಲಿತ್ತು. 1788ರಲ್ಲಿ ಇದು ಬ್ರಿಟಿಷರ ಅಧೀನಕ್ಕೆ ಬಂತು. 1866ರಲ್ಲಿ ಇಲ್ಲಿ ಪೌರಸಭೆ ಸ್ಥಾಪಿತವಾಯಿತು.

ಗುಂಟೂರು ಜಿಲ್ಲೆಯ ವಿಸ್ತೀರ್ಣ 5,802 ಚ.ಕಿ.ಮೀ ಜನಸಂಖ್ಯೆ 48.89.230 (2011) ಕೃಷ್ಣಾ ನದಿಯಿಂದ ನೀರಾವರಿ ಸೌಲಭ್ಯವುಂಟು. ಅಕ್ಕಿ, ಜೋಳ, ಮೆಣಸಿನಕಾಯಿ, ನೆಲಗಡಲೆ, ಹೊಗೆಸೊಪ್ಪು ಇಲ್ಲಿಯ ಬೆಳೆಗಳು, ವನಸ್ಪತಿ, ಜವಳಿ, ಸಿಮೆಂಟ್ ಮತ್ತು ಹೊಗೆಸೊಪ್ಪಿನ ಕಾರ್ಖಾನೆಗಳು ಈ ಜಿಲ್ಲೆಯಲ್ಲಿವೆ. ಜಿಲ್ಲೆಗೆ ಸೇರಿದ ಅಮರಾವತಿಯಲ್ಲಿ ಆಂಧ್ರ ಸಾತವಾಹನ ರಾಜರು ಕಟ್ಟಿಸಿದ ಮಹಾಯಾನ ಬೌದ್ಧಧರ್ಮದ ಚೈತ್ಯಗಳನ್ನೂ ವಿಹಾರಗಳನ್ನೂ ಸ್ತೂಪಗಳನ್ನು ಮತ್ತ ನಾಗಾರ್ಜುನ ಕೊಂಡಗಳು ಬೌದ್ಧರ ಕಾಲದ ಅವಶೇಷಗಳ ನೆಲೆಗಳು. (ಆರ್.ಪಿ.ಎಸ್.)

**ಗುಂಡಪ್ಪ, ಡಿ. ವಿ. :** 1889–1975. ಪ್ರಸಿದ್ಧ ಸಾಹಿತಿ, ಪತ್ರಿಕೋದ್ಯಮಿ, ಸಾರ್ವಜನಿಕ. ಡಿ.ವಿ.ಜಿ. ಎಂಬ ಮೂರಕ್ಷರದ ಸಂಕ್ಷಿಪ್ತನಾಮದಿಂದ ಚಿರಪರಿಚಿತ ರಾಗಿದ್ದಾರೆ. ಹುಟ್ಟಿದ್ದು ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ. ತಂದೆ ದೇವನಹಳ್ಳಿ ವೆಂಕಟರಮಣಯ್ಯ. ತಾಯಿ ಅಲಮೇಲಮ್ಮ. ವಿದ್ಯಾಭ್ಯಾಸ ಲೋಯರ್ ಸೆಕೆಂಡರಿವರೆಗೆ– ಮುಳಬಾಗಿಲಿನ ಆಂಗ್ಲೋ ವೆರ್ನಾಕ್ಯುಲರ್ ಶಾಲೆಯಲ್ಲಿ; ಮೆಟ್ರಿಕ್ಯುಲೇಷನ್‌ವರಗೆ–ಮೈಸೂರು ಮತ್ತು ಕೋಲಾರ ಪ್ರೌಢಶಾಲೆಗಳಲ್ಲಿ.

ಗುಂಡಪ್ಪನವರಿಗೆ ಪತ್ರಿಕೋದ್ಯಮದಲ್ಲಿ ಮೊದಲಿನಿಂದಲೂ ಅಮಿತವಾದ ಆಸಕ್ತಿ. ಬೆಂಗಳೂರಿನ ಸೂರ್ಯೋದಯ ಪ್ರಕಾಶಿಕಾ ವಾರಪತ್ರಿಕೆಯ ಕಾರ್ಖಾನೆಯಲ್ಲಿವರು ಎರಡು ವರ್ಷ ಕೆಲಸಮಾಡಿದರು (1905–06). ಸ್ಥಾಪಕ–ಸಂಪಾದಕರಾಗಿ 'ಭಾರತಿ' ಎಂಬ ಕನ್ನಡ ದಿನಪತ್ರಿಕೆಯನ್ನು ಕೆಲವು ಕಾಲ (1907–08) ನಡೆಸಿದರು. ಮೈಸೂರು ಸ್ಟ್ಯಾಂಡರ್ಡ್, ನಗೆಗನ್ನಡಿ, ಮೈಸೂರು ಮೇಲ್, ಇಂಡಿಯನ್ ಪೇಟ್ರಿಯಟ್, ಹಿಂದೂ, ಇಂಡಿಯನ್ ರೆವ್ಯು ಮುಂತಾದ ಪತ್ರಿಕೆಗಳಿಗೆ ಇವರು ಮೂರು ವರ್ಷಕಾಲ (1908–11) ಲೇಖನಗಳನ್ನು ಬರೆದುದುಂಟು. ಸಹಸಂಪಾದಕರಾಗಿ ಮೈಸೂರು ಟೈಮ್ಸ್ ಎಂಬ ವಾರಾರ್ಧ ಪತ್ರಿಕೆಯನ್ನೂ (1909–10) ಪ್ರಕಾಶಕ–ಸಂಪಾದಕರಾಗಿ ಕರ್ನಾಟಕ ಎಂಬ ಇಂಗ್ಲಿಷಿನ ವಾರಾರ್ಧಪತ್ರಿಕೆಯನ್ನೂ (1921–22) ಇವರು ನಡೆಸಿರುವುದುಂಟು. ತಾವೇ ಕಟ್ಟಿದ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಅಂಗಪತ್ರಿಕೆಯಾದ ಪಬ್ಲಿಕ್ ಅಫೇರ್ಸ್ ಎಂಬ ಮಾಸ ಪತ್ರಿಕೆಗೆ 1949 ರಿಂದಲೂ ಸಂಪಾದಕರಾಗಿದ್ದರು. ಗುಂಡಪ್ಪನವರು ಬಾಗಲಕೋಟೆಯಲ್ಲಿ ಸಮಾವೇಶಗೊಂಡ (1928) ಅಖಿಲ ಕರ್ನಾಟಕ ವೃತ್ತಪತ್ರಿಕಾಕರ್ತರ ಪ್ರಥಮ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದುದಲ್ಲದೇ ಮೈಸೂರು ಸಂಸ್ಥಾನದ ಪತ್ರಿಕೋದ್ಯಮಿಗಳ ಸಂಘದ ಪ್ರಥಮ ಅಧ್ಯಕ್ಷರಾಗಿಯೂ ಕೆಲಸಮಾಡಿದ್ದರು.



ಭಾರತದ ನೂತನ ಸಂವಿಧಾನದಲ್ಲಿ ದೇಶೀಯ ಸಂಸ್ಥಾನಗಳ ಹಾಗೂ ಸಾಂಸ್ಥಾನಿಕ ಪ್ರಜೆಗಳ ಸ್ಥಾನಮಾನಗಳೇನಿರಬೇಕೆಂಬುದನ್ನು ಕುರಿತು ಗುಂಡಪ್ಪನವರು ಗಾಢವಾದ ಅಧ್ಯಯನ ನಡೆಸಿ ಅನೇಕ ಲೇಖನಗಳನ್ನು ಬರೆದಿದ್ದಾರಲ್ಲದೇ ಪ್ರಮುಖರಿಗೆ ಮನವಿಗಳನ್ನು ಸಲ್ಲಿಸಿದ್ದುಂಟು. ಅವುಗಳಲ್ಲಿ ಬಿಕನೀರ್ ಮಹಾರಾಜರಿಗೆ (1917). ಮಾಂಟೆಗು ಅವರಿಗೆ (1928) ಮತ್ತು ಬಟ್ಲರ್ ಸಮಿತಿಗೆ (1928) ಸಲ್ಲಿಸಿದ ಮನವಿಗಳನ್ನು ನೆನೆಯಬಹುದು.

ಈ ಬಗ್ಗೆ ಶ್ರೀಯುತರು ಇಂಗ್ಲಿಷಿನಲ್ಲಿ 'ದಿ ಪ್ರಾಬ್ಲಮ್ ಆಫ್ ಇಂಡಿಯನ್ ನೇಟಿವ್ ಸ್ಟೇಟ್ಸ್' (1917), 'ದಿ ಗೌರ್ನಮೆಂಟ್ ಆಫ್ ಇಂಡಿಯ ಅಂಡ್ ದಿ ಇಂಡಿಯನ್ ಸ್ಟೇಟ್ಸ್' (1926), 'ದಿ ಸ್ಟೇಟ್ಸ್ ಅಂಡ್ ದೇರ್ ಪೀಪಲ್ ಇನ್ ದಿ ಇಂಡಿಯನ್ ಕಾನ್ಸ್ಟಿಟ್ಯೂಷನ್' (1931)_ ಈ ಪುಸ್ತಕಗಳನ್ನು ರಚಿಸಿದ್ದಾರೆ. ತಿರುವಾಂಕೂರಿನಲ್ಲಿ ನಡೆದ ದಕ್ಷಿಣ ಭಾರತ ದೇಶೀಯ ಪ್ರಜೆಗಳ ಸಮ್ಮೇಳನದ ಸಂದರ್ಭದಲ್ಲಿ (1929) ಅಧ್ಯಕ್ಷರಾದ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರಿಗೆ ಗುಂಡಪ್ಪ ನವರು ಕಾರ್ಯದರ್ಶಿಗಳಾಗಿ ಕೆಲಸ ಮಾಡಿದ್ದಾರೆ.

ಬೆಂಗಳೂರಿನಲ್ಲಿ (1) ಪಾಪ್ಯುಲರ್ ಎಜ್ಯುಕೇಷನ್ ಲೀಗ್, (2) ಸೋಷಿಯಲ್ ಸರ್ವೀಸ್ ಲೀಗ್ (1915–20), (3) ಪ್ರಜಾಜನ ಪರಿಷತ್ತು (ಮೈಸೂರು ಪೀಪಲ್ಸ್ ಕನ್‌ವೆನ್ಷನ್, 1919 ಡಿಸೆಂಬರ್), (4) ದೇಶೀಯ ಸಂಸ್ಥಾನಗಳ ಪ್ರಜಾಪರಿಷತ್ತು (ಸ್ಟೇಟ್ಸ್ ಪೀಪಲ್ಸ್ ಕಾನ್‌ಫರೆನ್ಸ್. 1931). (5) ದ್ವಿತೀಯ ಮಹಾಯುದ್ಧ ಸಮಯದಲ್ಲಿ ಸೆಲ್ಫ್–ಪ್ರೊಟೆಕ್ಷನ್ ಲೀಗ್ (1938–39) ಮೊದಲಾದ ಹತ್ತಾರು ಸಾರ್ವಜನಿಕ ಸಂಘ ಸಮಾರಂಭಗಳ ಮುಖ್ಯ ಪ್ರವರ್ತಕರಾದವರು ಗುಂಡಪ್ಪನವರು. ಬೆಂಗಳೂರು ಪುರಸಭೆಯ ಸದಸ್ಯರಾಗಿ (1912ರಿಂದ), ಮೈಸೂರು ಸಂಸ್ಥಾನ ಶಾಸನ ಪರಿಷತ್ತಿನ ಸದಸ್ಯರಾಗಿ (1926–40), ಮೈಸೂರು ವಿಶ್ವವಿದ್ಯಾನಿಲಯದ ಸನೆಟ್ ಸದಸ್ಯರಾಗಿ (1927–43), ಯೂನಿವರ್ಸಿಟಿ ಕೌನ್ಸಿಲ್ ಸದಸ್ಯರಾಗಿ (1933–39), ಮಿರ್ಜಾ ಸರ್ಕಾರ ನಿಯಮಿಸಿದ ರಾಜ್ಯಾಂಗ ಸುಧಾರಣ ಸಮಿತಿ (1939) ಹಾಗೂ ಇತರ ವಿಶೇಷ ಸಮಿತಿಗಳ ಸದಸ್ಯರಾಗಿ ಶ್ರೀಯುತರು ಅಪಾರ ಜನಸೇವೆಯನ್ನು ಮಾಡಿರುವರಲ್ಲದೆ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ (1945ರಿಂದ) ಸ್ಥಾಪಕ ಪ್ರಮುಖರೂ ಕಾರ್ಯದರ್ಶಿಗಳೂ ಆಗಿ ಕೆಲಸಮಾಡಿದ್ದಾರೆ. ಈ ಸಂಸ್ಥೆಯ ಬಗೆಗಿನ ವಿವರಗಳು ಈ ಲೇಖನದ ಕೊನೆಯಲ್ಲಿವೆ.

ಸಾರ್ವಜನಿಕ ಕ್ಷೇತ್ರದಲ್ಲಿ ಹೇಗೋ ಹಾಗೇ ಸಾಹಿತ್ಯ ಕ್ಷೇತ್ರದಲ್ಲೂ ಗುಂಡಪ್ಪನವರ ಕಾರ್ಯವ್ಯಾಪ್ತಿ ಅಮೋಘವಾದದು. ಮಡಿಕೇರಿಯಲ್ಲಿ ಸಮಾವೇಶಗೊಂಡ 18ನೆಯ ಕನ್ನಡ ಸಾಹಿತ್ಯ ಸಮಾವೇಶಕ್ಕೆ (1932) ಅವರು ಅಧ್ಯಕ್ಷರಾಗಿದ್ದರು. ಕರ್ನಾಟಕ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ (1933–37) ಅವರು ವಸಂತ ಸಾಹಿತ್ಯೋತ್ಸವ, ಗಮಕ ಕಲಾಭ್ಯಾಸ ತರಗತಿಗಳು, ಕನ್ನಡ ಶಿಕ್ಷಕರಿಗೆ ತರಬೇತಿ ಶಿಬಿರ, ಗ್ರಂಥಪ್ರದರ್ಶನ ಮುಂತಾದ ನಾಲ್ಕಾರು ನೂತನ ಯೋಜನೆಗಳ ಪ್ರವರ್ತಕರೆಂಬ ಗೌರವಕ್ಕೆ ಪಾತ್ರರಾಗಿದ್ದಾರೆ. ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದೊಂದಿಗೆ ಅವರು ನಿಕಟ ಸಂಬಂಧವನ್ನು (1928–44) ಇಟ್ಟುಕೊಂಡಿದ್ದರಲ್ಲದೆ ಆ ಸಂಘದ ರಜತೋತ್ಸವದ ಅಧ್ಯಕ್ಷರೂ ಆಗಿದ್ದರು. (1944). ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟಿನ ಸಂಪಾದಕ ಮಂಡಲಿಯ ಸದಸ್ಯರಾಗಿ (1933–46), ಬೆಂಗಳೂರಿನ ರಾಮಾಯಣ ಪ್ರಕಾಶನ ಸಮಿತಿ, ರಾಮಾಯಣ ಮಹಾಭಾರತಾದಿ ಪ್ರಕಟನ ಸಮಿತಿ (1964–70) ಮೊದಲಾದ ಸಂಸ್ಥೆಗಳಿಗೆ ಮಾರ್ಗದರ್ಶಕರಾಗಿ ಗುಂಡಪ್ಪನವರು ಅವಿರತವಾಗಿ ಸಾಹಿತ್ಯಸೇವೆ ಮಾಡಿದ್ದಾರೆ.

ಸಾಹಿತ್ಯ ರಾಜಕೀಯಾದಿ ವಿಭಿನ್ನ ಕ್ಷೇತ್ರಗಳಲ್ಲಿ ಶತಮಾನದ ಪ್ರಾರಂಭದಿಂದ 65 ವರ್ಷಕಾಲ ಡಿ.ವಿ.ಜಿ. ಯವರಷ್ಟು ಸತತವಾಗಿ ಸಾರ್ವಜನಿಕ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ವ್ಯವಸಾಯ ಮಾಡಿದವರು ನಾಡಿನಲ್ಲಿ ಹೆಚ್ಚು ಮಂದಿ ಇಲ್ಲ. ನಿರಂತರ ಪತ್ರಿಕೋದ್ಯಮ, ವಿಪುಲ ಸಾಹಿತ್ಯ ಸೃಷ್ಟಿ, ಸಂಗೀತಾದಿ ಕಲಾಭಿಜ್ಞತೆ, ರಾಜಕೀಯ ಚರ್ಚೆ, ಸಮಾಜಸೇವೆ, ನಾನಾ ಸಂಸ್ಥೆಗಳ ನೇತೃತ್ವ, ಇವೆಲ್ಲಕ್ಕೂ ಹಿನ್ನೆಲೆಯಾಗಿ ಉದ್ದಾಮಪಾಂಡಿತ್ಯ, ಪ್ರತಿಭೆ, ದೈವಶ್ರದ್ಧೆ, ಆದರ್ಶನಿಷ್ಠೆ, ಉದಾರಚಿಂತನೆ, ಪೂರ್ವ ಸಂಪ್ರದಾಯಕ್ಕೂ ಸಾಂಪ್ರತಲೋಕದ ರೀತಿನೀತಿಗೂ ಸ್ನೇಹಸೇತುವಾಗಿ ಅವೆರಡಕ್ಕೂ ವಿರಸ ಬಾರದಂಥ ಒಂದು ಜೀವನದರ್ಶನವನ್ನು ಜನತೆಗೀಯುವ ಮಹೋತ್ಸಾಹ, ತಮ್ಮ ವೈಯಕ್ತಿಕ ಜೀವನವನ್ನು ಬದಿಗಿರಿಸಿ ಸಮಾಜದ ಎಲ್ಲ ವರ್ಗಗಳಲ್ಲೂ ಸರಸವಾಗಿ ಬೆರೆತುಕೊಳ್ಳುವ ಸಹೃದಯತೆ– ಈ ಹಲವಾರು ಕಾರಣಗಳಿಂದ ಡಿ.ವಿ.ಜಿ. ಭಾರತ ಜನತೆಯ, ವಿಶೇಷವಾಗಿ ಕನ್ನಡ ಜನತೆಯ ಅಭಿಮಾನವನ್ನು ಗಳಿಸಿದ್ದಾರೆ. ಜನತೆಯಲ್ಲಿ ರಾಷ್ಟ್ರಕಪ್ರಜ್ಞೆಯನ್ನು ಜಾಗೃತಗೊಳಿಸಲು ಗೋಖಲೆ ಸಂಸ್ಥೆ ಮತ್ತು ಇತರ ಸಂಘಸಂಸ್ಥೆಗಳ ನಿರ್ಮಿತಿ– ಪೋಷಣೆ, ಆರ್ಥಿಕ–ಸಾಮಾಜಿಕ ಶೈಕ್ಷಣಿಕ ವಿಚಾರಗಳ ವಿದ್ವತ್‌ಪೂರ್ಣ ಪರಾಮರ್ಶೆ, ಪ್ರಾಂತೀಯ ಹಾಗೂ ಕೇಂದ್ರದ ಆಡಳಿತಗಳ ನಿರಂತರ ಪರೀಕ್ಷಣೆ, ವಿಮರ್ಶೆ–ಮನವಿ– ನಿರೂಪಗಳು– ಈ ದಿಶೆಯಲ್ಲಿ ಆರು ದಶಕಗಳುದ್ದಕ್ಕೂ ಡಿ.ವಿ.ಜಿ. ಮಾಡಿರುವ ಕಾರ್ಯ ಅವರ ಸಾಹಿತ್ಯ ಸೃಷ್ಟಿಯಷ್ಟೇ ಗಣನೀಯವಾಗಿದೆ. ಒಂದೇ ಸಮ್ಯಗ್ದರ್ಶನದ ಚಿಲುಮೆ ಡಿ.ವಿ.ಜಿ.ಯವರಲ್ಲಿ ಒಂದೆಡೆ ತಾತ್ತ್ವಿಕ ಚಿಂತನೆಯಾಗಿ ಇನ್ನೊಂದೆಡೆ ಕಾವ್ಯಾದಿ ಸಾಹಿತ್ಯನಿರ್ಮಿತಿಯಾಗಿ, ಮತ್ತೊಂದೆಡೆ ರಾಜಕೀಯ ಟೀಕೆಯಾಗಿ ಹೊರಹೊಮ್ಮಿದೆ.

ಈ ಸಮನ್ವಯ ಬುದ್ಧಿಯ ಪ್ರಕಟರೂಪಗಳೇ ವಸಂತ ಕುಸುಮಾಂಜಲಿ (1922). ನಿವೇದನೆ (1924) ಮುಂತಾದ ಕಾವ್ಯಮಾಲೆಗಳು; ಜೀವನ ಸೌಂದರ್ಯ ಮತ್ತು ಸಾಹಿತ್ಯ (1932). ಸಾಹಿತ್ಯ ಶಕ್ತಿ (1950) ಮುಂತಾದ ವೈಚಾರಿಕ ಪ್ರಬಂಧ ಸಂಚಯಗಳು; ಅನುವಾದದ ಆಕಾರ ತಳೆದಿದ್ದರೂ ನೂತನ ಕಾವ್ಯದಂತೆ ಸೊಗಯಿಸುವ ಉಮರನ

ಒಸಗೆ (1930), ಷೇಕ್ಸ್‌ಪಿಯರ್‌ನ ಮ್ಯಾಕ್‌ಬೆತ್ ನಾಟಕದ ಪದ್ಯಾನುವಾದ (1936); ಶ್ರೀರಾಮ ಕಥೆಯ ನೆವದಿಂದ ಧರ್ಮದ್ವೈಧಕ್ಲೇಶಗಳಿಗೆ ಪರಿಹಾರವನ್ನು ವಿವೇಚಿಸುವ ಶ್ರೀರಾಮಪರೀಕ್ಷಣಂ (1945); ಬೇಲೂರು ಚೆನ್ನಕೇಶವ ಅಂತಃಪುರದ ಮದನಿಕೆಯರ ಶೃಂಗಾರವಿಲಾಸಗಳ ಸಂಗೀತ ಚಿತ್ರಣವಾದ ಅಂತಃಪುರ ಗೀತೆ (1950), ಶಾಕುಂತಲ ನಾಟಕದ ಸರಸ ಸಂದರ್ಭಗಳ ಸಂಗೀತಾನುವಾದ ಗೀತ ಶಾಕುಂತಲ (1960); ಉತ್ತಮ ಜೀವಿತದ ನಡೆವಳಿಕೆಗಳನ್ನು ವರ್ಣಿಸುವ ಬಾಳಿಗೊಂದು ನಂಬಿಕೆ (1950), ಸಂಸ್ಕೃತಿ (1953) ಮುಂತಾದ ಪ್ರಬಂಧಗಳು; ವಿದ್ಯಾರಣ್ಯರು, ರಂಗಾಚಾರ್ಲು, ಗೋಖಲೆ ಇತ್ಯಾದಿ ಜೀವಿತವೃತ್ತಗಳು; ರಾಜ್ಯಶಾಸ್ತ್ರ (1951) ಮೊದಲಾದ ಶಾಸ್ತ್ರಗ್ರಂಥಗಳು; ಪ್ರವೃತ್ತಿ–ನಿವೃತ್ತಿ ಸಮನ್ವಯವನ್ನೂ ಜೀವೋತ್ಕರ್ಷವು ಅಪೇಕ್ಷಿಸುವ ಪ್ರತ್ಯಗ್ದೃಷ್ಟಿಯನ್ನೂ ಪ್ರತಿಪಾದಿಸುವ ಪುರುಷಸೂಕ್ತ (1953) ಮತ್ತು ಈಶೋಪನಿಷತ್ತು (1953) – ಈ ಮೊದಲಾದ ಸಾಹಿತ್ಯ ಕೃತಿಗಳು.

ಭೋಗೇಚ್ಛೆ ಪಾಪವಲ್ಲ, ಜೀವನಕ್ಕೆ ಉಲ್ಲಾಸಕ್ಕೆ ಮಹತ್ತ್ವದ ಸ್ಥಾನ ಸಲ್ಲುತ್ತದೆ. ಸೌಂದರ್ಯಾನುಭವ ಆತ್ಮೋತ್ಕರ್ಷಕ್ಕೆ ಸಾಧಕವೇ ಆಗಬಲ್ಲದು ಎಂಬುದು ಶೃಂಗಾರ ಮಂಗಳಂ ಎಂಬ (1970) ಪದ್ಯಮಾಲಿಕೆಯ ಆಶಯ.

ಸುಖಮುಂ ಸಂಸ್ಕಾರಂ ಜೀ ।
ವಕೆ ದುಃಖದವೋಲೆ ಚಿತ್ತಪರಿಪಾಚನಕಂ ॥
ವಿಕಸಿತಮದರಿಂ ಹೃತ್ಕೋ ।
ರಕಮಾ ಸೌರಭದೆ ಜೀವಕಾತ್ಮಾನುಭವಂ ॥

ಇದೇ ವಾದಧಾರೆ ಶ್ರೀ ಕೃಷ್ಣಪರೀಕ್ಷಣಂ (1971) ಎಂಬ ಗೀತರೂಪಕದಲ್ಲಿಯೂ ಅನುವೃತ್ತವಾಗಿದೆ.

ಬ್ರಹ್ಮಕೆ ಹೃದಯವನಿತ್ತು ಜ ।
ಗನ್ಮಂಗಲಕಾರ್ಯಕೊಡಲನೆಲ್ಲವನಿತ್ತುಂ ॥
ಇಮ್ಮಿದಲೊಡನಾಡುತ ಸ ।
ಚ್ಚಿನ್ಮಯನಂ ಮರೆಯದಿರ್ದೊಡದು ನಿರ್ವಾಣಂ ॥

1953ರಿಂದ ಪತ್ರಿಕೆಗಳಲ್ಲಿ ಧಾರವಾಹಿಯಾಗಿ (1969ರಿಂದ ಗ್ರಂಥರೂಪವಾಗಿ) ಪ್ರಕಟವಾಗುತ್ತಿದ್ದ ಡಿ.ವಿ.ಜಿ.ಯವರ ಜ್ಞಾಪಕ ಚಿತ್ರಶಾಲೆಯ ಎಂಟು ಸಂಪುಟಗಳು 1969–74ರ ಅವಧಿಯಲ್ಲಿ ಪ್ರಕಟವಾದವು. ಹತ್ತಾರು ಮಂದಿ ಪ್ರಸಿದ್ಧಪುರುಷರ, ವಿದ್ವದ್ರಸಿಕರ, ಹಾಗೂ ಸಾಮಾನ್ಯ ವೃತ್ತಿ ವೈಲಕ್ಷಣ್ಯಗಳ ಚಿತ್ರಣಗಳಿಂದಲೂ ಹಾಸ್ಯ ಸನ್ನಿವೇಶಗಳಿಂದಲೂ ತುಂಬಿ, ಡಿ. ವಿ. ಜಿ. ಯವರ ಸ್ವಾರಸ್ಯಗ್ರಹಣಪಟುತೆಗೂ ಕಥನಕೌಶಲಕ್ಕೂ ನಿದರ್ಶನವಾಗಿರುವುವಲ್ಲದೆ, ಸಾಂಪ್ರತಶತಮಾನದ ಸಮಾಜೇತಿಹಾಸ ವೆನ್ನಬಹುದಾದ ಒಂದು ವಿಶಿಷ್ಟ ಪ್ರಕಾರದ ಸಾಹಿತ್ಯರಾಶಿಯಾಗಿ ಪರಿಣಮಿಸಿದೆ.

ಜೀವಾನುಭವದ ರಸಪಾಕ ಸೂತ್ರವಾಗಿ ಹೊರಹೊಮ್ಮಿರುವ ಮನನ ಕಾವ್ಯಧಾರೆ ಮಂಕುತಿಮ್ಮನ ಕಗ್ಗ (1943) ಕನ್ನಡದ ಅತ್ಯಂತ ಜನಪ್ರಿಯ ಕೃತಿಗಳಲ್ಲೊಂದೆನಿಸಿದೆ; ಜೀವನದ ಆಘಾತಗಳನ್ನೆದುರಿಸುವಲ್ಲಿ ಒಂದು ಸ್ಥೈರ್ಯವನ್ನೂ ನಯನೋಪಾಯವನ್ನೂ ಬೋಧಿಸುವ ಕಗ್ಗದ ಸೂಚ್ಯುಕ್ತಿಗಳು ಮನಃಸ್ಪರ್ಶಿಯೂ ಅವಿಸ್ಮರಣೀಯವೂ ಆಗಿದ್ದು, ಡಿ.ವಿ.ಜಿ. ಯವರಿಗೆ ಆಧುನಿಕ ಸರ್ವಜ್ಞ ಎಂಬ ಅಭಿಧಾನವನ್ನು ತಂದುಕೊಟ್ಟಿವೆ. ಯಾವುದೇ ಕಾರಣದಿಂದ ಮನ ಕುಗ್ಗಿದವರಿಗೆ

ಒಲ್ಲೆನೆನದಿರು ಬಾಳನ್, ಒಲವದೇನೆನ್ನದಿರು ।
ಉಲ್ಲಾಸಕೆಡೆಮಾಡು ನಿನ್ನಿನಾದನಿತು ॥
ನಿಲ್ಲು ಕೆಚ್ಚೆದೆಯಿಂದಲನ್ಯಾಯಗಳನಳಿಸೆ ।
ಎಲ್ಲಕಂ ಸಿದ್ಧನಿರು– ಮಂಕುತಿಮ್ಮ ॥

ಮುಂತಾದ ಸ್ನೇಹವಚನಗಳು ಧೈರ್ಯೋತ್ಸಾಹಪ್ರದಗಳಾಗಿವೆ.

ಇದೇ ಚಿಂತನಧೋರಣೆ ಡಿ.ವಿ.ಜಿ. ಯವರ ಶ್ರೀಮದ್ಭಗವದ್ಗೀತಾ ತಾತ್ಪರ್ಯ ಅಥವಾ ಜೀವನಧರ್ಮಯೋಗ (1966) ಎಂಬ ಉಪನ್ಯಾಸ ಗ್ರಂಥದಲ್ಲಿ ಶಾಸ್ತ್ರಪರಿಷ್ಕೃತಿಯಿಂದ ವಿಸ್ತರಿಸಲ್ಪಟ್ಟಿದೆ. ಲೋಕಜೀವನ ಗೌರವಾರ್ಹ; ಸಮ್ಯಗ್ಜೀವನವೇ ಭಗವದಾರಾಧನೆ–ಇದು ಭಗವದ್ಗೀತೆಯ ಪ್ರಧಾನೋಪದೇಶವೆಂದಿದ್ದಾರೆ. ಡಿ.ವಿ.ಜಿ; ಅಂತರಂಗ– ಬಹಿರಂಗ ಸಾಮರಸ್ಯವೂ ದ್ವೈತ–ಅದ್ವೈತಾದಿ ವಿವಿಧ ಮತಸಾಮರಸ್ಯವೂ ಸಾಧ್ಯ ಹಾಗೂ ಅವಶ್ಯವೆಂದು ಪ್ರತಿಪಾದಿಸಿದ್ದಾರೆ.

ವಿವಿಧಮತಗಂಭೀರಂ ಸಾಮರಸ್ಯಪ್ರಕಾರಂ ।
ಗೃಹಿ–ಯತಿಸಮುದಾರಂ ಸರ್ವಜೀವೋಪಚಾರಂ ॥
ಸುರ–ನರಸಹಕಾರಂ ಸ್ವಾತ್ಮಸಾರ್ವಾತ್ಮ್ಯಸಾರಂ ।
ಭವಜಲನಿಧಿಪಾರಂ ಕೃಷ್ಣಗೀತಾವತಾರಂ ॥

ಡಿ.ವಿ.ಜಿ. ಯವರ ಬಹುಮುಖಸೇವೆಗಾಗಿ 1961ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಅವರಿಗೆ ಡಾಕ್ಟರೇಟ್ (ಡಿ.ಲಿಟ್.) ಪದವಿಯನ್ನಿತ್ತು ಗೌರವಿಸಿತು. ಶ್ರೀಮದ್ಭಗವದ್ಗೀತಾ ತಾತ್ಪರ್ಯ ವೆಂಬ ಕೃತಿ 1967ರಲ್ಲಿ ಭಾರತ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಗಳಿಸಿತು. ಇವರು 7–10–1975 ರಂದು ನಿಧನರಾದರು. (ಎಸ್.ಆರ್.ಆರ್.ಎಸ್.)

**ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ :** ಪ್ರಜಾಸೇವೆಯೊಂದನ್ನೇ ತಮ್ಮ ಜೀವಿತಧರ್ಮವೆಂದು ಭಾವಿಸಿ ಸಾರ್ವಜನಿಕ ಜೀವನ ನಡೆಸಿದ ಗೋಪಾಲ ಕೃಷ್ಣ ಗೋಖಲೆಯವರ ಮೇಲ್ಪಂಕ್ತಿಯನ್ನನುಸರಿಸಿ, ದೇಶಸೇವಾವ್ರತವನ್ನು ತೊಟ್ಟು ಕೆಲಸ ಮಾಡಬಲ್ಲ ಜನರನ್ನು ತಯಾರು ಮಾಡಬೇಕೆಂಬ ಡಿ.ವಿ.ಗುಂಡಪ್ಪನವರ ಸಂಕಲ್ಪದ ಚರಿತ್ರೆಯೇ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಚರಿತ್ರೆಯಾಗಿದೆ. ಡಿ.ವಿ.ಜಿ.ಯವರ ಕಾರ್ಯಗೌರವ ಅವರನ್ನು ಪತ್ರಿಕೋದ್ಯಮ, ಸಾಹಿತ್ಯ ರಚನೆ, ಶಾಸನಸಭೆ, ಪೌರಸಭೆ, ರಾಜಕೀಯ ರಂಗಗಳಿಗೆ ಕರೆದೊಯ್ದರೂ ಅವರ ಮೂಲಧ್ಯೇಯ ಅವರ ಎಲ್ಲ ಪ್ರಯತ್ನಗಳಲ್ಲಿಯೂ ಕಾಣಬರುತ್ತದೆ. ಆದ್ದರಿಂದ ಗೋಖಲೆ ಸಂಸ್ಥೆ ಶಾಸನತಃ ಪ್ರಾರಂಭವಾದದ್ದು 1945ರಲ್ಲಿಯಾದರೂ ಅದಕೋಸ್ಕರ ಆದ ಪ್ರಯತ್ನದ ಕಥೆ ಮೊದಲಾದದ್ದು 1915ರಲ್ಲಿ.

ಫೆಬ್ರುವರಿ 1915ರಲ್ಲಿ ಗೋಖಲೆಯವರು ಕಾಲಾಧೀನರಾದ ತರುಣದಲ್ಲಿ ಬೆಂಗಳೂರಿನಲ್ಲಿ ನಡೆದ ಸಾರ್ವಜನಿಕ ಸಭೆಯೊಂದರಲ್ಲಿ ಎಂ. ವಿಶ್ವೇಶ್ವರಯ್ಯನವರು ಗೋಖಲೆಯವರ ರಾಜ್ಯತಂತ್ರ ನಿಪುಣತೆಯನ್ನು ಕೊಂಡಾಡಿದರು. ಆ ಹೊತ್ತಿಗಾಗಲೆ ಗೋಖಲೆಯವರ ಕಾರ್ಯನೀತಿಯನ್ನು ಮೆಚ್ಚಿಕೊಂಡಿದ್ದ ಕೆಲವು ಸ್ನೇಹಿತರು, ಅಂಥ ದೇಶಸೇವಕರ ಕಾರ್ಯವಿಧಾನ, ಮತ್ತು ಧ್ಯೇಯಗಳನ್ನು ಜನಸಾಮಾನ್ಯಕ್ಕೆ ಪರಿಚಯ ಮಾಡಿಸುವುದು ದೇಶದ ಹಿತದೃಷ್ಟಿಯಿಂದ ಕರ್ತವ್ಯವೆಂದು ತಿಳಿದು, ಬೆಂಗಳೂರಿನಲ್ಲಿ ಮೈಸೂರು ಸಮಾಜ ಸೇವಾ ಸಂಘ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಅದೇ ಸಮಯದಲ್ಲಿ ಮದರಾಸಿಗೆ ಬಂದಿದ್ದ ಮಹಾತ್ಮ ಗಾಂಧೀಜಿಯವರು ಈ ಸಂಘದ ಆಹ್ವಾನವನ್ನು ಅಂಗೀಕರಿಸಿ ಬೆಂಗಳೂರಿನಲ್ಲಿ 8–5–1915ರಂದು ಗೋಖಲೆಯವರ ಭಾವಚಿತ್ರವೊಂದನ್ನು ಅನಾವರಣ ಮಾಡಿ, ತಮ್ಮ ಮೇಲೆ ಗೋಖಲೆಯವರಿಂದ ಆದ ಪ್ರಭಾವವನ್ನು ಪ್ರಕಟಪಡಿಸಿದರು. (ಆ ಮೂಲ ಭಾವಚಿತ್ರವೂ ಅದರ ಪ್ರತಿಕೃತಿಯು ಈಗ ಗೋಖಲೆ ಸಂಸ್ಥೆಯಲ್ಲಿದೆ.) ಆ ಸಂಘದ ಕಾರ್ಯಕ್ರಮಗಳಲ್ಲಿ ಮುಖ್ಯವಾದವು; ಉಪನ್ಯಾಸಗಳು, ವಯಸ್ಕರಿಗೂ ಮಕ್ಕಳಿಗೂ ಪಾಠಶಾಲೆಗಳು, ಬಡವರಿಗೂ ರೋಗಿಗಳಿಗೂ ಹಬ್ಬದ ದಿನಗಳಲ್ಲಿ ತಿಂಡಿಯ ಹಂಚಿಕೆ– ಇತ್ಯಾದಿ. ಇನ್‌ಫ್ಲುಯೆಂಜಾ ಜ್ವರ ಸಾಂಕ್ರಾಮಿಕವಾಗಿ ಹರಡಿದಾಗ (1918–19) ಈ ಸಂಘದ ಸದಸ್ಯರು ರೋಗಿಗಳ ಔಷಧೋಪಚಾರದಲ್ಲಿ ನೆರವಾದರು. ಇದರಲ್ಲಿ ಪಿ. ಕೋದಂಡರಾಯರು ಮತ್ತು ಎಚ್. ವಿ. ಆರ್ ಅಯ್ಯಂಗಾರ್ಯರು ಸೇರಿದ್ದರು. 1920ರ ವೇಳೆಗೆ ಈ ಸಂಘದ ನೆನಪೂ ಅಳಿಸಿಹೋಗುತ್ತಾ ಬಂತು.

1944ರಲ್ಲಿ ಡಿ.ವಿ.ಜಿ. ಯವರು ಸ್ನೇಹಿತರನೇಕರ ಬೆಂಬಲದಿಂದಲೂ ಸಹಾನುಭೂತಿ ಯಿಂದಲೂ ಈಗಿನ ಗೋಖಲೆ ಸಂಸ್ಥೆಯನ್ನು ಪ್ರಾರಂಭಿಸುವ ಪ್ರಯತ್ನವನ್ನು ಕೈಗೊಂಡರು. ಜಾತಿಮತ ಭೇದಭಾವನೆಗಳಿಗೆ ಅವಕಾಶ ಕೊಡದೆ, ಯಾವ ರಾಜಕೀಯ ಪಕ್ಷಕ್ಕೂ ಒಳಪಡದೆ, ಜನಸಮುದಾಯದ ಮತ್ತು ಒಟ್ಟು ದೇಶದ ಹಿತದೃಷ್ಟಿಯಿಂದ ಸಾರ್ವಜನಿಕ ವಿಚಾರಗಳನ್ನು ಆಲೋಚನೆ ಮಾಡುವ ಉದ್ದೇಶವಿಟ್ಟುಕೊಂಡ ಸಂಸ್ಥೆಯ ಸ್ಥಾಪನೆಗಾಗಿ 18–2–1945ರಲ್ಲಿ ಡಿ. ವಿ. ಜಿ. ಯವರ ಮನೆಯಲ್ಲಿಯೇ ಪ್ರಾರಂಭ ಸದಸ್ಯರ ಮೊದಲನೆಯ ಸಭೆ ನಡೆಯಿತು. ಮೈಸೂರು ಸೊಸೈಟಿಗಳ ರಿಜಿಸ್ಟ್ರೇಷನ್ ಕಾನೂನಿನ ಪ್ರಕಾರ ಈ ಸಂಸ್ಥೆ 6–4–1945ರಲ್ಲಿ ರಿಜಿಸ್ಟರ್ ಆಯಿತು. ಮೋಕ್ಷಗುಂಡಂ ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್, ಬಿ. ಕೆ. ಗರುಡಾಚಾರ್, ಸಿ. ಪಿ. ರಾಮಸ್ವಾಮಿ ಅಯ್ಯರ್, ಎ. ಆರ್. ಕೃಷ್ಣಶಾಸ್ತ್ರೀ ಮುಂತಾದ ಅನೇಕ ಮಹನೀಯರು ಸಂಸ್ಥೆಯ ಸದಸ್ಯರಾದರು. ಬೆಂಗಳೂರು ಬಸವನಗುಡಿಯಲ್ಲಿ, ಎಂ. ಎನ್. ಕೃಷ್ಣರಾಯರ ಪಾರ್ಕಿನ ಬಳಿಯಿರುವ (ಆಗ್ಗೆ ಪಾಮಡಿ ಸುಬ್ಬರಾಮಶೆಟ್ಟರ ಸ್ವಾಧೀನದಲ್ಲಿದ್ದ) ಕಟ್ಟಡದ ಒಂದು ಭಾಗವನ್ನು ಬಾಡಿಗೆಗೆ ತೆಗೆದುಕೊಳ್ಳಲಾಯಿತು. ಯುವಜನರನ್ನು ರಾಷ್ಟ್ರಕಾರ್ಯಗಳಿಗೆ ಸಿದ್ಧಪಡಿಸಲು ವ್ಯಾಸಂಗಗೋಷ್ಠಿಯೊಂದು 15–12–1947ರಲ್ಲಿ ಪ್ರಾರಂಭವಾಯಿತು. ಜನವರಿ 1948ರಿಂದ ವ್ಯಾಸಂಗಗೋಷ್ಠಿಯ ಸದಸ್ಯರು ಪ್ರತಿ ಭಾನುವಾರ ಸೇರಿ ಗ್ರಂಥವ್ಯಾಸಂಗ ಮಾಡುವ ಪದ್ಧತಿಯನ್ನು ಮೊದಲು ಮಾಡಿದರು. 8–3–1948ರಲ್ಲಿ ನಿಟ್ಟೂರು ಶ್ರೀನಿವಾಸರಾಯರು ವಾಚನಾಲಯವನ್ನೂ 15–8–1948ರಲ್ಲಿ ಬಿ. ಪಿ. ವಾಡಿಯಾ ಅವರು ಪುಸ್ತಕ ಭಂಡಾರವನ್ನೂ ಸಮಾರಂಭಗೊಳಿಸಿದರು. ಜನವರಿ 1949ರಿಂದ ಪಬ್ಲಿಕ್ ಅಫೇರ್ಸ್ (ಸಾರ್ವಜನಿಕ) ಎಂಬ ಮಾಸಪತ್ರಿಕೆ ಇಂಗ್ಲಿಷ್

ಮತ್ತು ಕನ್ನಡ ಭಾಷೆಗಳಲ್ಲಿ ಪ್ರಾರಂಭವಾಯಿತು. ರಾಷ್ಟ್ರಕಧರ್ಮವನ್ನು ಕುರಿತು ಜನರಲ್ಲಿ ಪ್ರಚಾರಮಾಡುವುದೂ ಸಂಸ್ಥೆ ಹಾಗೂ ಅದರ ಸದಸ್ಯರೊಡನೆ ಸಂಪರ್ಕ ಸಾಧನವನ್ನಳವಡಿಸುವುದೂ ಪತ್ರಿಕೆಯ ಧ್ಯೇಯ. ಆಗಾಗ್ಗೆ ವಿಘ್ನಗಳನ್ನು ದಾಟಿ 1963ರಿಂದ ಪತ್ರಿಕೆ ಇಂಗ್ಲಿಷಿನಲ್ಲಿ ಪ್ರತಿ ತಿಂಗಳೂ ಪ್ರಕಟವಾಗುತ್ತಿದೆ. ಕನ್ನಡ ವಿಭಾಗವನ್ನೂ ಮತ್ತೆ ಆರಂಭಿಸುವ ಆಸೆಯುಂಟು.

ಬೆಂಗಳೂರು ಪುರಸಭೆಯವರು 1949ರಲ್ಲಿ ಸಂಸ್ಥೆಯ ಕಟ್ಟಡಕ್ಕಾಗಿ ಒಂದು ನಿವೇಶನವನ್ನು ದಾನವಾಗಿ ಕೊಟ್ಟರು. 26-7-1956ರಲ್ಲಿ ಸಂಸ್ಥೆಯ ನೂತನ ಭವನ ಪ್ರವೇಶೋತ್ಸವ ನಡೆಯಿತು. 1959 ಮತ್ತು 1962ರಲ್ಲಿ ಇನ್ನಷ್ಟು ಸ್ಥಳವನ್ನು ಬೆಂಗಳೂರು ಪುರಸಭೆಯವರು ದಾನವಾಗಿ ಕೊಟ್ಟದ್ದರಿಂದ ಸಂಸ್ಥೆಯನ್ನು ವಿಸ್ತರಿಸಲು ಅನುಕೂಲವಾಯಿತು. ಯಂತ್ರೋದ್ಯಮಿಗಳಾದ ವಿ. ಎಸ್. ನಟರಾಜನ್ ಅವರು ಕಟ್ಟಡದ ಮೊದಲನೆಯ ಮಹಡಿಯ ಮಧ್ಯಭಾಗದ ಸಭಾಂಗಣವನ್ನು ಕಟ್ಟಿಸಿಕೊಟ್ಟರು.

ಕಟ್ಟಡದ ವಿಸ್ತರಣೆಗೆ ಮತ್ತು ಇತರ ವಿಧವಾಗಿ, ಸಹಾಯ ಮಾಡಿರುವವರಲ್ಲಿ ಟಿ. ಸದಾಶಿವಂ, ಎಂ.ಎಸ್. ಸುಬ್ಬಲಕ್ಷ್ಮಿ, ನಾಟಕರತ್ನ ಗುಬ್ಬಿ ವೀರಣ್ಣ, ನಿಜಾಮರ ನ್ಯಾಸನಿಧಿಯಿಂದ ಸಹಾಯ ಬರಲು ನೆರವಾದ ವಿ. ಪಿ. ಮೆನನ್, ಎಂ. ವಿ. ಕೃಷ್ಣಮೂರ್ತಿ. ಶಿವಮೊಗ್ಗದ ಜಿ. ಶ್ರೀನಿವಾಸ ಅಯ್ಯಂಗಾರ್, ಕಿರ್ಲೋಸ್ಕರ್ ಕಂಪನಿಯವರು, ದೀಪಕ್ ಕೇಬಲ್ಸ್ ಕಂಪನಿಯವರು, ತಾತಾ ಟ್ರಸ್ಟ್-ಮೊದಲಾದವರು ಸೇರಿದ್ದಾರೆ. 1965ರಲ್ಲಿ ಸಂಸ್ಥೆ ಶಾಸನತಃ ಸ್ಥಾಪನೆಯಾದ 20ನೆಯ ವರ್ಷದ ಉತ್ಸವದ ಸಂದರ್ಭದಲ್ಲಿ ಮೈಸೂರು ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರವರು 5,000 ರೂ ಗಳ ಸಹಾಯ, ಡಿ. ವಿ. ಜಿ. ಅವರಿಗೆ ಅವರ 'ಭಗವದ್ಗೀತಾ ತಾತ್ಪರ್ಯ' ಗ್ರಂಥಕ್ಕಾಗಿ ಭಾರತ ಸಾಹಿತ್ಯ ಅಕಾಡೆಮಿಯವರು ಕೊಟ್ಟ 5,000 ರೂಗಳ ಗೌರವ ಸಂಭಾವನೆ ಮತ್ತು 1970ರಲ್ಲಿ ದೇಶದ ಜನ ಡಿ. ವಿ. ಜಿ. ಅವರಿಗೆ ಕೊಟ್ಟ ಸುಮಾರು ಒಂದು ಲಕ್ಷ ರೂಪಾಯಿಗಳ ಗೌರವನಿಧಿ- ಇವೆಲ್ಲವೂ ಸಂಸ್ಥೆಯ ಪುರೋಭಿವೃದ್ಧಿಗೆ ವಿನಿಯೋಗವಾಗಿದೆ. ಈ ಸಂಸ್ಥೆ ಸಹಾಯ ಮಾಡಿರುವವರಲ್ಲಿ ಎಲ್ಲ ಜನವರ್ಗದವರೂ ನಾನಾ ಸಾಮಾಜಿಕ ಹಂತಗಳವರೂ ಎಲ್ಲ ಮತ ಕಸುಬಿನವರೂ, ಉದ್ಯೋಗಗಳವರು- ಎಲ್ಲ ಪ್ರಾಂತಗಳವರೂ ಇದ್ದಾರೆ. 2002ರಲ್ಲಿ ಡಿ.ವಿ.ಜಿ. ಸಭಾಂಗಣದ ಉದ್ಘಾಟನೆ ಆಯಿತು.

ಪ್ರಜಾಜನರು ನೆರವೇರಿಸಬೇಕಾದ ಕರ್ತವ್ಯಗಳೂ ಸಾಧಿಸಿಕೊಳ್ಳಬೇಕಾದ ಹಕ್ಕುಗಳೂ ಕೆಲವಿರುತ್ತವೆ. ಇವನ್ನು ಇವರು ಚೆನ್ನಾಗಿ ತಿಳಿದುಕೊಂಡು ರಾಷ್ಟ್ರ ಜೀವನಕ್ಕೂ ಸಹಾಯವಾಗುವುದೇ ರಾಷ್ಟ್ರಕಧರ್ಮ. ಈ ಮಹತ್ತರವಾದ ಧರ್ಮದ ಆಚರಣೆಗೆ ಸಹಾಯವನ್ನೊದಗಿಸುವುದು ಈ ಸಂಸ್ಥೆಯ ಮುಖ್ಯೋದ್ದೇಶ. ಸಮಸ್ತ ಜನಹಿತಕ್ಕೆ ಸಂಬಂಧಪಟ್ಟ ಎಲ್ಲ ಪ್ರಶ್ನೆಗಳನ್ನೂ ಶಾಸ್ತ್ರವಿಹಿತ ದೃಷ್ಟಿಯಿಂದಲೂ ನಿಷ್ಪಕ್ಷಪಾತ ಮನೋಭಾವದಿಂದಲೂ ವಾಸ್ತವಿಕ ಸಂಗತಿಗಳ ಪರಾಮರ್ಶನದ ಮೂಲಕವೂ ವ್ಯಾಸಂಗ ಮಾಡಿಸುವುದು, ಜನಕ್ಕಿರುವ ಕಷ್ಟಗಳನ್ನೂ ಕೊರತೆಗಳನ್ನೂ ಆಗಿಂದಾಗ್ಗೆ ಆಯಾ ಅಧಿಕಾರಿಗಳ ಗಮನಕ್ಕೆ ತರುವುದು - ಒಟ್ಟಿನಲ್ಲಿ ಸಾರ್ವಜನಿಕ ಪ್ರಶ್ನೆಗಳನ್ನು ಕುರಿತು ಜನಾಭಿಪ್ರಾಯವು ವಿವೇಕದಿಂದಲೂ ಸ್ಫುಟವಾಗಿಯೂ ವ್ಯಕ್ತಪಡುವಂತೆ ಮಾಡುವುದಕ್ಕೆ ಸಹಾಯ ಕೊಡುವುದು; ಮತ್ತು ನಾನಾ ಜನವರ್ಗಗಳಲ್ಲಿ ಸ್ನೇಹವನ್ನೂ ಐಕ್ಯಮತವನ್ನೂ ಬೆಳೆಸುವುದು, ಜನದ ನಡೆನುಡಿಗಳಲ್ಲಿ ಸೌಜನ್ಯಸೌಶೀಲ್ಯಗಳು ಅಭಿವೃದ್ಧಿಯಾಗುವಂತೆ ಸಂಸ್ಕೃತಿಯನ್ನು ಪ್ರೋತ್ಸಾಹಿಸುವುದು-ಇವು ಈ ಸಂಸ್ಥೆಯ ಕಾರ್ಯವಿಧಾನಗಳು. ಸಂಸ್ಥೆ ಅಧಿಕಾರಪ್ರಸಕ್ತಿಯ ರಾಜಕೀಯಕ್ಕೆ ಕೈಹಾಕತಕ್ಕದಲ್ಲ.

**ಸಂಸ್ಥೆಯ ಕಾರ್ಯಾಂಗಗಳು :** ಸುಮಾರು ನಾಲ್ಕು ಲಕ್ಷ ರೂಪಾಯಿ ಬೆಲೆಬಾಳುವ ಸಂಸ್ಥೆಯ ಆಸ್ತಿಸ್ವತ್ತುಗಳ ಉಸ್ತುವಾರಿಯನ್ನು ಒಂದು ನ್ಯಾಸ ನಿರ್ವಾಹಕ ಸಮಿತಿ ನಡೆಸುತ್ತದೆ. ಸಂಸ್ಥೆಯ ದೈನಂದಿನ ಕಾರ್ಯಕ್ರಮಗಳನ್ನು ಪ್ರತಿವರ್ಷವೂ ಚುನಾಯಿಸಲ್ಪಡುವ ಕಾರ್ಯ ಸಮಿತಿ ನೋಡಿಕೊಳ್ಳುತ್ತದೆ.

ಸಂಸ್ಥೆಯ ಸ್ವಂತ ಕಟ್ಟಡ ಬೆಂಗಳೂರು ಬಸವನಗುಡಿಯಲ್ಲಿರುವ ಬಸವಣ್ಣನ ಗುಡಿಯ ಪಕ್ಕದ ರಸ್ತೆಯಲ್ಲಿದೆ.

ಸಾರ್ವಜನಿಕನಾಗುವವ ತನ್ನ ಉದ್ದೇಶಕ್ಕಾಗಿ ಒಂದು ಉದ್ಯೋಗವನ್ನಿಟ್ಟುಕೊಂಡು ತನ್ನ ಮಿಕ್ಕ ಕಾಲವನ್ನೂ ಬುದ್ಧಿಯನ್ನೂ ಪ್ರತಿಫಲ ನಿರೀಕ್ಷೆಯಿಲ್ಲದೆ ದೇಶಕ್ಕೆ ಮೀಸಲಿಡಬೇಕು. ರಾಜಕೀಯವನ್ನೇ ಜೀವಿತದ ಕಸುಬನ್ನಾಗಿ ಮಾಡಿಕೊಳ್ಳಬಾರದು- ಎಂಬ ಡಿ.ವಿ.ಜಿ ಯವರ ಅಭಿಪ್ರಾಯದಂತೆ ನಡೆಯಲು ಸಂಸ್ಥೆ ಪ್ರಯತ್ನಪಡುತ್ತಿದೆ.

ಇಲ್ಲಿಯ ಪುಸ್ತಕ ಭಂಡಾರದಲ್ಲಿ ಸಾಹಿತ್ಯ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಅಂತಾರಾಷ್ಟ್ರೀಯ ಕಾನೂನು, ದರ್ಶನಶಾಸ್ತ್ರ ಮುಂತಾದ ವಿಷಯಗಳನ್ನು ಕುರಿತು 30,000 ಕನ್ನಡ, ಇಂಗ್ಲಿಷ್, ಹಿಂದಿ, ತಮಿಳು, ತೆಲುಗು ಪುಸ್ತಕಗಳಿವೆ. ಅನೇಕ ವಿದ್ವಾಂಸ ಮಹನೀಯರು ಗ್ರಂಥದಾನ ಮಾಡಿದ್ದಾರೆ. ಜಿ.ಪಿ. ರಾಜರತ್ನಂ ಅವರು ಪ್ರಾರಂಭಿಸಿದ 'ಶ್ರೀಗಂಧಕುಟಿ' ಎಂಬ ಪರಾಮರ್ಶ ಗ್ರಂಥಶಾಖೆಯಲ್ಲಿ ಹಳಗನ್ನಡ ಕಾವ್ಯಗಳೂ 1862ರಿಂದ ಪ್ರಕಟವಾಗುತ್ತಿದ್ದ ವೃತ್ತಾಂತಬೋಧಿನಿ, ಕರ್ಣಾಟಕ ಪ್ರಕಾಶಿಕೆ ಪತ್ರಿಕೆಗಳ ಸಂಪುಟಗಳೂ ಸರ್ಕಾರದ ಆಡಳಿತ ಮತ್ತು ವಿಶೇಷ ವರದಿಗಳೂ ಇಂಗ್ಲಿಷ್ ಕನ್ನಡ ಮುಖ್ಯ ಪತ್ರಿಕೆಗಳ ಹಳೆಯ ಸಂಚಿಕೆ ಸಂಪುಟಗಳೂ ಶಾಸನ ವರದಿಗಳೂ ತಾಳೆಯೋಲೆ ಗ್ರಂಥಗಳೂ ಇವೆ. ಸಂಸ್ಥೆಯು ವ್ಯವಸ್ಥೆ ಮಾಡುವ ರಾಜಾಜಿ ಸ್ಮಾರಕ ಉಪನ್ಯಾಸದ ಕಾರ್ಯಕ್ರಮದಲ್ಲಿ ನಾನಿ ಫಾಲ್ಕಿ ವಾಲಿ, ಬಿ.ಎ. ನೆಹರು, ಡಾ॥ ಆರ್. ವೆಂಕಟರಾಮನ್, ಎಚ್. ವೈ. ಶಾರದಾ ಪ್ರಸಾದ್, ಸ್ವಾಮಿ ರಂಗನಾಥಾನಂದಜಿ, ಟಿ. ಎನ್. ಶೇಷನ್ ಮೊದಲಾದ ಗಣ್ಯರು ಉಪನ್ಯಾಸ ಮಾಡಿದ್ದಾರೆ. 2001ರ ಸೆಪ್ಟೆಂಬರ್ ತಿಂಗಳಲ್ಲಿ ಭಾರತದ ರಾಜ್ಯಾಂಗವನ್ನು ಕುರಿತ ವಿಚಾರಸಂಕಿರಣದಲ್ಲಿ ನ್ಯಾಯಮೂರ್ತಿ ಎಂ. ಎನ್. ವೆಂಕಟಾಚಲಯ್ಯ, ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾವ್, ಡಾ॥ ಜಿ. ತಿಮ್ಮಯ್ಯ ಮೊದಲಾದ ತಜ್ಞರು ಭಾಗವಹಿಸಿದರು.

ಹೀಗೆ ಡಿ.ವಿ.ಜಿ. ಯವರ ಕಲ್ಪನೆಯಂತೆ ರಾಷ್ಟ್ರಕ ತತ್ತ್ವಧ್ಯೇಯಗಳಿಗೆ ಕೇಂದ್ರಸ್ಥಾನವೂ ಪ್ರತ್ಯಕ್ಷ ನಿದರ್ಶನವೂ ಆಗಬೇಕೆಂದು ಗೋಖಲೆ ಸಂಸ್ಥೆ ಶ್ರಮಿಸುತ್ತಿದೆ. ಡಿ.ವಿ.ಜಿ. ಅವರು ತೀರಿಕೊಂಡನಂತರ ಅವರ ನಿಕಟಸಹವರ್ತಿಗಳಾಗಿದ್ದ ನಿಟ್ಟೂರು ಶ್ರೀನಿವಾಸ ರಾಯರು 2003ರ ವರೆಗೆ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾಗಿ, ಸ್ವಲ್ಪ ಕಾಲ ಸಂಸ್ಥೆಯ ಆಶ್ರಯದಾತರೂ (ಪೇಟ್ರನ್) ಆಗಿದ್ದರು. (ಡಿ.ಆರ್.ವಿ.; ಬಿ.ಎಸ್.ಎಸ್.ಆರ್.)

**ಗುಂಡರ್ಟ್, ಹರ್ಮನ್ :** 1814-93. ಮಲಯಾಳಂ ಭಾಷೆ ಮತ್ತು ಸಾಹಿತ್ಯ ಬೆಳವಣಿಗೆ ಮತ್ತು ಅದರ ಪ್ರಗತಿಗಾಗಿ ಹೆಚ್ಚಿನ ಕೆಲಸ ಮಾಡಿರುವ ವಿದ್ವಾಂಸ. ಜರ್ಮನಿಯಿಂದ ಭಾರತಕ್ಕೆ ಪಾದ್ರಿಯಾಗಿ ಬಂದ ಈತ ತನ್ನ ಜೀವಿತದ ಬಹು ಮುಖ್ಯ ಭಾಗವನ್ನು ಆ ಭಾಷೆ ಮತ್ತು ಸಾಹಿತ್ಯಕ್ಕೆ ಮೀಸಲಾಗಿಟ್ಟು ದುಡಿದಿದ್ದಾನೆ. ಮಲೆಯಾಳಿಗಳು ಈತನನ್ನು ಗುರುಸಮಾನನೆಂದು ಗೌರವಿಸುತ್ತಾರೆ.

ಮಲೆಯಾಳಿ ಭಾಷೆಯಲ್ಲಿರುವ ಅನೇಕ ಪ್ರಥಮಗಳಿಗೆ ಗುಂಡರ್ಟ್ ಕಾರಣನಾಗಿದ್ದಾನೆ. ಈತ ರಚಿಸಿರುವ ಮಲೆಯಾಳಂ-ಇಂಗ್ಲಿಷ್ ನಿಘಂಟು ಶಾಸ್ತ್ರೀಯವೂ ಸಮಗ್ರವೂ ಆಗಿದೆ. ಈತನ ಮಲೆಯಾಳಂ ಭಾಷಾ ವ್ಯಾಕರಣ ಮತ್ತೊಂದು ಅದ್ಭುತ ಸಾಧನೆ. ಮಲೆಯಾಳಂ ಮೊದಲ ಭೂಗೋಳಶಾಸ್ತ್ರದ ಪುಸ್ತಕವನ್ನು ಬರೆದ ಹಾಗೂ ಗಾದೆಗಳನ್ನು ಸಂಗ್ರಹಿಸಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಮಲೆಯಾಳಂ ಭಾಷೆಯನ್ನು ಬರೆಯುವಾಗ ಅಗತ್ಯವಾದ ಲೇಖನ ಚಿಹ್ನೆಗಳನ್ನು ಪ್ರಥಮಬಾರಿಗೆ ಬಳಸಿದ ಈತನೇ. ಹಾಗೆಯೇ ಆ ಭಾಷೆಯಲ್ಲಿ ವೃತ್ತಾಂತ ಪತ್ರಿಕೆಗಳನ್ನು ಪ್ರಥಮ ಬಾರಿಗೆ ಹೊರಡಿಸಲು ಪ್ರಯತ್ನಿಸಿದವನೂ ಈತನೇ. ಗುಂಡರ್ಟ್‌ನ ಕೃತಿಗಳ ಸಂಖ್ಯೆ ಒಟ್ಟು 26 ಎನ್ನಲಾಗಿದೆ. ಮಲೆಯಾಳಂ ಭಾಷೆಯಲ್ಲಿನ ಆಧುನಿಕ ಗದ್ಯ ಒಂದು ನಿರ್ದಿಷ್ಟ ಶೈಲಿಯನ್ನು ಪಡೆದದ್ದು ಈತನಿಂದ ಎನ್ನಲಾಗಿದೆ.



ಗುಂಡರ್ಟ್ ಜರ್ಮನಿಯ ವರ್ಟೆನ್‌ಬರ್ಗ್ ಎಂಬಲ್ಲಿ ಜನಿಸಿದ. ಟ್ಯೂಬಿಂಗೆನ್ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆದು, ಅತ್ಯಂತ ಚಿಕ್ಕ ವಯಸ್ಸಿನಲ್ಲಿಯೇ ಸ್ವಿಟ್ಜರ್‌ಲೆಂಡಿನಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದು ಪಾದ್ರಿಯಾದ. ನೋರಿಸ್ ಗ್ರೀನೆಜ್‌ನೊಂದಿಗೆ ಧರ್ಮಪ್ರಚಾರಕ ಮಂಡಲಿಯನ್ನು ಸೇರಿ ಕೆಲಸ ಮಾಡತೊಡಗಿದ. 1836ನೆಯ ಇಸವಿಯಲ್ಲಿ ಮತ ಪ್ರಚಾರಕ್ಕಾಗಿ ಜರ್ಮನಿಯನ್ನು ಬಿಟ್ಟು ಭಾರತಕ್ಕೆ ಬಂದ. ಸಮುದ್ರ ಮಾರ್ಗವಾಗಿ ಭಾರತಕ್ಕೆ ಪ್ರಯಾಣ ಮಾಡುವಾಗಲೇ ಬಂಗಾಳಿ, ಹಿಂದೂಸ್ತಾನಿ ಮತ್ತು ತೆಲುಗು ಭಾಷೆಗಳನ್ನು ಕಲಿತುಕೊಂಡ. 1836ರಲ್ಲಿ ಚೆನ್ನೈಯನ್ನು ತಲುಪಿದ. ತಿನ್ನೆಲ್ ವೇಲ್ ಮತ್ತು ಚಿತ್ತೂರಿನಲ್ಲಿ ತನ್ನ ಪ್ರಚಾರಕಾರ್ಯವನ್ನು ಆರಂಭಿಸಿದ. ಈ ಅವಧಿಯಲ್ಲಿ ತಮಿಳು ಭಾಷೆಯನ್ನು ಕಲಿತ. ತಮಿಳು ಭಾಷೆಯಲ್ಲಿಯೂ ಈತ ಒಂದು ಕೃತಿಯನ್ನು ರಚಿಸಿರುವುದಾಗಿ ಹೇಳುತ್ತಾರೆ.

ಅಲ್ಲಿಂದ ಗುಂಡರ್ಟ್ ಮೂಲ ಕ್ರೈಸ್ತಧರ್ಮ ಪ್ರಚಾರಕ ಮಂಡಲಿಯ ಸದಸ್ಯನಾಗಿ ಮಂಗಳೂರಿಗೆ ಬಂದ. ಬರುವ ಮಾರ್ಗದಲ್ಲಿ, ಇಂದಿನ ಕೇರಳದ ಒಂದು ಭಾಗವಾದ ತಿರುವನಂತಪುರದ ಆಗಿನ ರಾಜನಾದ ಸ್ವಾತಿ ತಿರುನಾಳ್ ಮಹಾರಾಜನ ಭೇಟಿಯಾಗುವ ಅವಕಾಶ ಆಕಸ್ಮಿಕವಾಗಿ ಒದಗಿತು. ಈತನಿಗೆ ಪ್ರಥಮವಾಗಿ ಮಲಯಾಳಂ ಭಾಷೆಯನ್ನು ಕೇಳುವ ಅವಕಾಶ ದೊರೆತದ್ದು ಅಲ್ಲಿಯೇ. 1839ರ ಏಪ್ರಿಲ್‌ನಲ್ಲಿ ಕೇರಳಕ್ಕೆ ಬಂದು ತಲ್ಲಿಚೇರಿಯ ಇಲ್ಲಿಕ್ಕುಣ್ಣುವಿನಲ್ಲಿ ನೆಲೆಸಿದ. ಅನಂತರ 1859ರ ವರೆಗೂ ಅಂದರೆ ಭಾರತವನ್ನು ಬಿಟ್ಟು ಹೊರಡುವವರೆಗೂ ತನ್ನ ಹೆಚ್ಚು ಕಾಲವನ್ನೆಲ್ಲ ಅಲ್ಲಿಯೇ ಕಳೆದು, ಅದನ್ನು ಮಲಯಾಳಂ ಭಾಷೆಯ ಅಭಿವೃದ್ಧಿಗೆ ವಿನಿಯೋಗಿಸಿದ. ಜರ್ಮನಿಗೆ ಹಿಂತಿರುಗಿದ ಮೇಲೂ ತನ್ನ ತಂದೆಯೊಡನೆ ಸೇರಿ ಮಲಯಾಳಂ ಭಾಷೆಗಾಗಿ ಕೆಲಸ ಮಾಡಿದ. ಈತನ ನಿಘಂಟು ಕೆಲಸ ಪೂರ್ತಿಯಾದದ್ದು ಜರ್ಮನಿಯಲ್ಲೆ. ಶಾಲಾ ಇನ್‌ಸ್ಪೆಕ್ಟರ್ ಆಗಿ ಕೆಲಸ ಮಾಡುತ್ತಿದ್ದಾಗ ಶಾಲೆಯ ಮಕ್ಕಳಿಗೆ ಉಪಯುಕ್ತವಾಗುವಂತೆ ಈತ ಮಲಯಾಳಂನಲ್ಲಿ ಪಾಠಾಮಾಲಾ ಎಂಬ ಪಠ್ಯ ಪುಸ್ತಕವೊಂದನ್ನು ಸಿದ್ಧಪಡಿಸಿದ. ಇದರಲ್ಲಿ ಗದ್ಯ ಭಾಗವನ್ನೆಲ್ಲ ತಾನೇ ಬರೆದು ಸೇರಿಸಿದ್ದಾನಲ್ಲದೆ ಪ್ರಾಚೀನ ಸಾಹಿತ್ಯಕೃತಿಗಳಿಂದ ಪದ್ಯಗಳನ್ನೂ ಹೊಸ ಯುಗದ ಕವನಗಳನ್ನೂ ಸಂಪಾದಿಸಿ ಕೊಟ್ಟಿದ್ದಾನೆ. ಈತ ಬರೆದ ಇತಿಹಾಸ ಪುಸ್ತಕ (ಕೇರಳ ಪಟಿಮ) ಎಂಬುದು ವಾಸ್ಕೋಡ ಗ್ಯಾಮನ ಆಗಮನದ ಕಾಲದಿಂದ ಹಿಡಿದು ಅನಂತರದ 31ವರ್ಷಗಳ ಅವಧಿಯ ಕೇರಳದ ಇತಿಹಾಸದ ಮೇಲೆ ಸಾಕಷ್ಟು ಬೆಳಕು ಚೆಲ್ಲುತ್ತದೆ. 1847ರ ತರುವಾಯ ರಾಜ್ಯ ಸಮಾಚಾರಂ ಮತ್ತು ಪಶ್ಚಿಮೋದಯಂ ಪತ್ರಿಕೆಗಳ ಸಂಪಾದಕನಾಗಿ ಗುಂಡರ್ಟ್ ತನ್ನ ಸ್ವಲ್ಪಕಾಲವನ್ನು ಮೀಸಲಾಗಿರಿಸಿದ. ಈ ಪತ್ರಿಕೆಗಳಲ್ಲಿ ಮೊದಲನೆಯದು ಸಂಪೂರ್ಣವಾಗಿ ಕ್ರೈಸ್ತ ಧರ್ಮ ಪ್ರಸಾರಕ್ಕೆ ಮೀಸಲಾದದ್ದು. ಎರಡನೆಯದು ಇತಿಹಾಸ, ಭೂಗೋಳ, ಖಗೋಳಶಾಸ್ತ್ರ ಮತ್ತು ಇತರ ಅನೇಕ ಅಂದಿನ ಗಮನಾರ್ಹ ವಿಷಯಗಳನ್ನು ಒಳಗೊಂಡದ್ದು. ಈತ ಪತ್ರಿಕೆಯಲ್ಲಿ ಬರೆದ ಲೇಖನಗಳೆಲ್ಲ ಮುಂದೆ ಮಲಯಾಳಂ ರಾಜ್ಯ ಎನ್ನುವ ಕೃತಿಯಲ್ಲಿ ಒಟ್ಟಾಗಿ ಪ್ರಕಟಗೊಂಡವು. ಅನಂತರ ಜಾನ್ ಬನ್ಯನ್ನನ ಪಿಲ್‌ಗ್ರಿಮ್ಸ್ ಪ್ರಾಗ್ರೆಸ್ ಎಂಬ ಪ್ರಸಿದ್ಧ ಗ್ರಂಥವನ್ನು ಈತ ಸಂಚಾರಿ ಕಳುಟಿ ಪ್ರಯಾಣಂ ಎಂಬ ಹೆಸರಿನಲ್ಲಿ ಭಾಷಾಂತರಿಸಿ ಪ್ರಕಟಿಸಿದ. ಗುಂಡರ್ಟ್‌ನ ಅತಿ ಮುಖ್ಯ ಕೃತಿಯಾದ ಮಲಯಾಳಂ-ಇಂಗ್ಲಿಷ್ ನಿಘಂಟು 1872ರಲ್ಲಿ ಪ್ರಕಟಗೊಂಡಿತು. ಇದರಲ್ಲಿ 25 ವರ್ಷಗಳ ಶ್ರಮದ ಫಲವನ್ನು ಕಾಣಬಹುದು. ಎಲ್ಲ ದರ್ಜೆಯ ಜನಗಳ ಆಡುಮಾತು ಮತ್ತು ಪ್ರಚಲಿತ ಸಾಹಿತ್ಯ, ಶಾಸ್ತ್ರಗ್ರಂಥಗಳಿಂದ ಇಲ್ಲಿ ಪದಗಳನ್ನು ಆಯಲಾಗಿದೆ. ಅರ್ಥೈಸುವಲ್ಲಿ ಶಾಸ್ತ್ರೀಯ ಕ್ರಮವನ್ನು ಅನುಸರಿಸಲಾಗಿದೆ. ಈ ನಿಘಂಟಿನ ವಿಶೇಷತೆಯೆಂದರೆ ಇದರಲ್ಲಿ ಎಲ್ಲ ಉಪಭಾಷಾ ರೂಪಗಳೂ ಗ್ರಾಮ್ಯಶಬ್ದಗಳೂ ಪೋರ್ಚುಗೀಸ್, ಪಾರಸಿ, ಹಿಂದೂಸ್ತಾನಿ, ಮತ್ತು ಇತರ ಭಾಷೆಗಳಿಂದ ಎರವಲಾಗಿ ಬಂದ ಪದಗಳೂ ಸೇರಿವೆ. ಪ್ರತಿಯೊಂದು ಪದದ ವ್ಯಾಕರಣ ಸ್ವರೂಪ, ಅದರ ಸಾಮಾನ್ಯ ಅರ್ಥಗಳನ್ನು ಸಕ್ರಮವಾಗಿ ಕೊಟ್ಟು ತಿಳಿಸಲಾಗಿದೆ. ಅನೇಕ ಕಡೆ ಪದಗಳಿಗೆ ಇತರೆ ಭಾಷಾಶಬ್ದಗಳೊಂದಿಗೆ ಇರುವ ಏಕ ಮೂಲವನ್ನು ಪತ್ತೆ ಹಚ್ಚಿ ತೋರಿಸಲಾಗಿದೆ.

ಗುಂಡರ್ಟನಿಗೆ ಬಹು ಭಾಷೆಗಳ ಪರಿಚಯವಿತ್ತಲ್ಲದೆ ಆತ ಅನೇಕ ಭಾಷೆಗಳಲ್ಲಿ ಪೂರ್ಣ ಪಂಡಿತನೂ ಆಗಿದ್ದ. ಜರ್ಮನ್, ಫ್ರೆಂಚ್, ಗ್ರೀಕ್, ಲ್ಯಾಟಿನ್, ಹೀಬ್ರು, ಇಂಗ್ಲಿಷ್, ಪರ್ಷಿಯನ್, ಬಂಗಾಳಿ, ಹಿಂದೂಸ್ತಾನಿ, ತೆಲುಗು, ಮಲಯಾಳಂ, ತಮಿಳು ಇತ್ಯಾದಿ ಹದಿನೆಂಟು ಭಾಷೆಗಳನ್ನು ಆತ ಕಲಿತಿದ್ದ.

ತಲ್ಲಿಚೇರಿಯ ಇಲ್ಲಿಕ್ಕುಣ್ಣುವಿನಲ್ಲಿ ಈತ ಕಳೆದ 20 ವರ್ಷಗಳಲ್ಲಿ ಸ್ವಲ್ಪ ಕಾಲ ಕರ್ನಾಟಕ ಹಾಗೂ ಮಲಯಾಳಂ ಜಿಲ್ಲೆಗಳಲ್ಲಿ ಶಾಲಾ ಇನ್‌ಸ್ಪೆಕ್ಟರಾಗಿ ಕೆಲಸ ಮಾಡಿದ. ಆ ಸಮಯದಲ್ಲಿ ಬೈಬಲ್ ಗ್ರಂಥವನ್ನು ಮಲಯಾಳಂನಲ್ಲಿ ವೇದಪುಸ್ತಕ ಪರಿಭಾಷಾ ಎಂಬ ಹೆಸರಿನಲ್ಲಿ ಅನುವಾದ ಮಾಡಿದ. ಹಾಗೆ ಮಾಡುವಾಗ ಹಳೆಯ ಒಡಂಬಡಿಕೆಯನ್ನು ಗ್ರೀಕ್‌ನಿಂದಲೂ ಹೊಸ ಒಡಂಬಡಿಕೆಯನ್ನು ಹೀಬ್ರುವಿನಿಂದಲೂ ನೇರವಾಗಿ ಈತ ಅವಲಂಬಿಸಿದ್ದಾನೆ. ಆಗ ಈತ ಬಳಸಿದ ಹೀಬ್ರು ಮತ್ತು ಗ್ರೀಕ್ ನಿಘಂಟುಗಳನ್ನು ಇಂದೂ ತಲ್ಲಿಚೇರಿಯ ಇಲ್ಲಿಕ್ಕುಣ್ಣುವಿನ ಇವನ ನಿವಾಸದಲ್ಲಿ ಸಂಗ್ರಹಿಸಿಡಲಾಗಿದೆ.

1843ರಲ್ಲಿ ಗುಂಡರ್ಟ್ ಕೇರಳೋಲ್ ಎಂಬ ಒಂದು ಕೃತಿಯನ್ನು ಪ್ರಕಟಿಸಿದ. ಅನೇಕ ತಾಳೆಗರಿಯ ಹೊತ್ತಗೆಗಳನ್ನೆಲ್ಲ ಅಭ್ಯಸಿಸಿ ಅವುಗಳನ್ನು ಇದರಲ್ಲಿ ವಿಮರ್ಶಿಸಲಾಗಿದೆ. ಇದಾದ ಎರಡುವರ್ಷಗಳ ಒಳಗೆ ರಂಜೊಗೊ ಮಾಲ ಎಂಬ ಹೆಸರಿನಲ್ಲಿ ಒಂದು ಸಾವಿರ ಗಾದೆಗಳ ಸಂಕಲನವೊಂದನ್ನು ಈತ ಹೊರತಂದ. 1851ರ ವೇಳೆಗೆ ಮಲಯಾಳಂ ಭಾಷಾ ವ್ಯಾಕರಣಂ ಗ್ರಂಥದ ಒಂದು ಭಾಗವನ್ನು ಪ್ರಕಟಿಸಿದ. 1860ರಲ್ಲಿ ಮಲಯಾಳಂ ವ್ಯಾಕರಣಕ್ಕೆ ಸಂಬಂಧಿಸಿದಂತೆ ಪ್ರಶ್ನೋತ್ತರ ರೂಪದ ಪುಸ್ತಕವೊಂದನ್ನು ಬೆಳಕಿಗೆ ತಂದ. 1868ರಲ್ಲಿ ಸಂಪೂರ್ಣ ವ್ಯಾಕರಣದ ತಿದ್ದಿದ ಆವೃತ್ತಿ ಹೊರಬಂತು.

ಗುಂಡರ್ಟ್ ಜರ್ಮನಿಯಲ್ಲಿ ನಿಧನಹೊಂದಿದ. ಈತನ ಹೆಂಡತಿ ಇವನಿಗಿಂತ ಮೊದಲೇ ಅಂದರೆ 1855ರಲ್ಲಿ ನಿಧನಳಾಗಿದ್ದಳು. ತನ್ನ ಅಂತಿಮ ಕಾಲದವರೆಗೂ ಒಂದಲ್ಲ ಒಂದು ಭಾಷೆಗೆ ಗುಂಡರ್ಟ್ ಸೇವೆ ಸಲ್ಲಿಸುತ್ತಲೇ ಬಂದ. ಭಾರತದಿಂದ ಜರ್ಮನಿಗೆ ತೆರಳಿದ ಮೇಲೂ ಅಲ್ಲಿಂದ ಎರಡು ಮೂರು ಪತ್ರಿಕೆಗಳನ್ನು ಈತ ನಡೆಸುತ್ತಿದ್ದ. (ಎಸ್.ಎಸ್.ಆರ್.ಐ.)

**ಗುಂಡಿಗೆ ಮತ್ತು ಪುಪ್ಪುಸಗಳ ಶಸ್ತ್ರಚಿಕಿತ್ಸೆ :** ಯಾವುದೇ ಬಾಹ್ಯ ಉಪಕರಣಕ್ಕೆ ಅಪ್ರವೇಶ್ಯವಾಗಿದ್ದ ಎದೆಗೂಡಿನ ಒಳಭಾಗ ಶಸ್ತ್ರಚಿಕಿತ್ಸೆಗೆ ಒಳಪಟ್ಟಿದ್ದು ಶಸ್ತ್ರಗಳಲ್ಲೂ ಶಸ್ತ್ರಚಿಕಿತ್ಸಾ ತಂತ್ರದಲ್ಲೂ ಬಲು ನಾಜೂಕಾದ ಪ್ರಗತಿ ಸಿದ್ಧಿಸಿದ ಬಳಿಕವೇ ಗುಂಡಿಗೆಯ ಮೇಲಿನ ಶಸ್ತ್ರಚಿಕಿತ್ಸೆ ಬಳಕೆಗೆ ಬಂದದು 20ನೆಯ ಶತಮಾನದಲ್ಲಿ; ಗಮನಾರ್ಹವಾಗಿ 1939ರ ತರುವಾಯ.

ಗುಂಡಿಗೆ ಮತ್ತು ಮಹಾರಕ್ತನಾಳಗಳ ಶಸ್ತ್ರಚಿಕಿತ್ಸೆ : ಗುಂಡಿಗೆಗೆ ಪರಕೀಯ ವಸ್ತುವಿನ ಪ್ರವೇಶ ಅಥವಾ ಚೂಪಾದ ವಸ್ತುವಿನಿಂದಾಗುವ ಗಾಯ ಸಾಧಾರಣವಾಗಿ ಪ್ರಾಣಾಂತಿಕವೇ ಆಗುತ್ತದೆ. ಗುಂಡಿಗೆ ಪೊರೆಯಲ್ಲಿ ರಕ್ತ ತುಂಬಿಕೊಂಡು ಗುಂಡಿಗೆಯ ಅವಿಚ್ಛಿನ್ನ ಬಡಿತಕ್ಕೆ ಅಡಚಣೆ ಉಂಟಾಗುವುದೇ ಇದರ ಕಾರಣ. ಒಂದು ವೇಳೆ ಗುಂಡಿಗೆಗೆ ಗಾಯವಾದ ಕೂಡಲೇ ಸಾವು ಸಂಭವಿಸದಿದ್ದರೆ ಅದರ ಚುಚ್ಚುಗಾಯಗಳನ್ನು ಹೊಲಿದು ಸರಿಪಡಿಸುವವರೆಗೂ ಪೊರೆಯಲ್ಲಿ ಸೇರುವ ರಕ್ತವನ್ನು ತೆಗೆದುಹಾಕುವುದರ ಮೂಲಕ ಅದರ ಕಾರ್ಯ ಮುಂದುವರಿಯುವಂತೆ ಮಾಡಬಹುದು. ಈ ದಿಸೆಯಲ್ಲಿ, ಎಂದರೆ ಗುಂಡಿಗೆಯ ಶಸ್ತ್ರಚಿಕಿತ್ಸೆಯಲ್ಲಿ ಮೊದಲ ಯಶಸ್ಸು ವರದಿಯಾದದ್ದು 1896ರಲ್ಲಿ. ಆ ಬಳಿಕ ಇಂಥ ವರದಿಗಳು ವಿಪುಲ ಸಂಖ್ಯೆಯಲ್ಲಿ ಬಂದಿವೆ. 1940ರವರೆಗೂ ಗುಂಡಿಗೆಯ ಎಲ್ಲ ಗಾಯಗಳಿಗೂ ಹೊಲಿಗೆಯೊಂದೇ ಸರಿಯಾದ ಕ್ರಮ ಎಂದು ಭಾವಿಸಲಾಗಿತ್ತು. 1943ರ ವೇಳೆಗೆ ಹೊಸದೊಂದು ಶಸ್ತ್ರಚಿಕಿತ್ಸಕ್ರಮವನ್ನು ಎ. ಬ್ಲಲಾಕ್ ಮತ್ತು ಎ. ಎಂ. ರ‍್ಯಾವಿಚ್ ಸೂಚಿಸಿದರು. ಅವರ ಚಿಂತನೆ ಹರಿದಿದ್ದು ಹೀಗೆ. ಗುಂಡಿಗೆಯ ಗಾಯದಿಂದ ನಿಧಾನವಾಗಿ ರಕ್ತ ಸೋರಿಹೋಗಿ ಗುಂಡಿಗೆಗೆ ರಕ್ತದ ಮರಳಿಕೆಗೆ ಸಾಧ್ಯವಾಗದ್ದರಿಂದ ವ್ಯಕ್ತಿ ಸಾಯುತ್ತಾನೆ. ಈಗ ಗಾಯದಿಂದ ಒಸರುವ ರಕ್ತವನ್ನು ಯಾವುದೇ ವಿಧಾನದಿಂದ ಗುಂಡಿಗೆಗೆ ಮರಳಿಸುವುದು ಸಾಧ್ಯವಾದರೆ ಗಾಯವನ್ನು ಹೊಲಿಯದೇ ಚಿಕಿತ್ಸೆಯನ್ನು ಮುಂದುವರಿಸಬಹುದು; ಗಾಯದಿಂದಾಗುವ ರಕ್ತಸ್ರಾವ ಅಗಾಧವಾಗಿದ್ದು ಅದನ್ನು ತಡೆಗಟ್ಟಲು ಸಾಧ್ಯವೇ ಆಗದಾಗ ಮಾತ್ರ ಹೊಲಿಗೆ ಹಾಕಿ ಗಾಯವನ್ನು ಮುಚ್ಚಬೇಕು.

ಗುಂಡಿಗೆ ಪೊರೆಯೊಳಗಿರುವ ದೊಡ್ಡ ರಕ್ತನಾಳಗಳ ಚುಚ್ಚು ಗಾಯಗಳಿಂದ ಸಾವು ಉಂಟಾಗುವ ಸಾಧ್ಯತೆ ಹೆಚ್ಚು. ಏಕೆಂದರೆ ಗುಂಡಿಗೆ ಭಿತ್ತಿಯ ಗಾಯಗಳು ಮುಚ್ಚಿಕೊಳ್ಳುವಂತೆ ರಕ್ತನಾಳದ ಗಾಯಗಳು ಮುಚ್ಚಿಕೊಳ್ಳುವುದಿಲ್ಲ. ಇದರಿಂದ ಗುಂಡಿಗೆ ಮೇಲಿನ ಪೊರೆಯೊಳಗೆ ರಕ್ತ ಬೇಗ ಬೇಗ ತುಂಬಿಕೊಂಡು ಗುಂಡಿಗೆಯ ಕೆಲಸಕ್ಕೆ ಅಪಾಯಕರ ಅಡ್ಡಿಯನ್ನುಂಟುಮಾಡುತ್ತದೆ. ಪರಕೀಯ ವಸ್ತುಗಳು ಗುಂಡಿಗೆ ಪೇಶಿಯಲ್ಲಿ ಸಿಕ್ಕಿಕೊಂಡು ಅನಿರ್ದಿಷ್ಟಕಾಲ ಅಲ್ಲಿರಬಹುದು. ಗುಂಡಿಗೆ ಭಿತ್ತಿಯ ರಕ್ತನಾಳಗಳಲ್ಲಿ ರಕ್ತಚಲನೆಗೆ ಅಡ್ಡಿಯಾಗದೆ ಪರಕೀಯ ವಸ್ತು ದೊಡ್ಡದಾಗದಿದ್ದಲ್ಲಿ ಗುಂಡಿಗೆಯ ಕೆಲಸಕ್ಕೆ ಚ್ಯುತಿಬರುವುದಿಲ್ಲ. ದೊಡ್ಡ ವಸ್ತುಗಳಿಂದ ಹಾನಿಯಿರುವುದರಿಂದ ಅವನ್ನು ತೆಗೆದುಹಾಕಬೇಕು. ಈ ಶಸ್ತ್ರಕಾರ್ಯದಲ್ಲಿ ಸಾಧಾರಣವಾಗಿ ಹೆಚ್ಚು ಅಪಾಯವಿಲ್ಲ.

ಹೃದಯ ರಕ್ತನಾಳಗಳ ಹುಟ್ಟುವಿಕಲತೆಗಳು. 1 ಮುಚ್ಚಿಕೊಳ್ಳದ ಡಕ್ಟಸ್ ಆರ್ಟೀರಿಯೋಸಸ್: ಇದು ಗರ್ಭಾವ್ಯಸ್ಥೆಯಲ್ಲಿ ಮಹಾಪಧಮನಿ ಮತ್ತು ಫುಪ್ಪುಸ ಅಪಧಮನಿಗಳನ್ನು ಸೇರಿಸುವ ನಾಳ. ಗರ್ಭಸ್ಥ ಶಿಶುವಿನಲ್ಲಿ ಫುಪ್ಪುಸಗಳಿಗೆ ಹೋಗದೆ ಮಹಾಪಧಮನಿಯನ್ನು ಸೇರಲು ಈ ನಾಳಗಳಿರುತ್ತವೆ. ಜನನದ ಬಳಿಕ ಉಸಿರಾಟ ಪ್ರಾರಂಭಿಸಿದ ಮೇಲೆ ಇದು ಮುಚ್ಚಿಕೊಳ್ಳುತ್ತದೆ. ಹೀಗಾಗದೆ ನಾಳ ತೆರೆದಿದ್ದರೆ ರಕ್ತ ಫುಪ್ಪುಸಗಳಿಗೆ ಸಾಕಷ್ಟು ಹೋಗದೆ ದೇಹಕ್ಕೆ ಆಕ್ಸಿಜನ್ನಿನ ಕೊರತೆಯಾಗಿ ಶಿಶುವಿನ ಬಣ್ಣ ನೀಲಿಯಾಗಿ ಗುಂಡಿಗೆಯ ಕಾರ್ಯ ಹೆಚ್ಚುತ್ತದೆ. ಆಗ ಅದು ದೊಡ್ಡದಾಗುತ್ತದೆ. ಕೂಸು ಬೆಳೆದಂತೆ ಹೆಚ್ಚು ಆಟವಾಡಲಾರದು: ಆಡಿದರೆ ಅದಕ್ಕೆ ಉಸಿರುಕಟ್ಟಿದಂತಾಗುವುದು. ಕೆಲವು ವೇಳೆ ರೋಗಕ್ರಿಮಿಗಳು ಈ ನಾಳದಲ್ಲಿ ಬೆಳೆದು ರಕ್ತದ ನಂಜು ಉಂಟಾಗುತ್ತದೆ. ನಾಳ ಉಬ್ಬುತ್ತಾ ಒಂದು ದಿನ ಒಡೆದು ಮಗು ಸಾಯಬಹುದು. ಆದರೆ ಹೀಗಾಗವುದು ಅಪರೂಪ. ಮುಚ್ಚಿಕೊಳ್ಳದ ಡಕ್ಟಸ್ ಆರ್ಟೀರಿಯೋಸಸ್ಸನ್ನು

ಶಸ್ತ್ರಕ್ರಿಯೆಯಿಂದ ಮುಚ್ಚಬೇಕೆಂದು 1907ರಲ್ಲೇ ಸೂಚನೆ ಬಂದಿದ್ದರೂ ಅದು ಸಾಧ್ಯವಾಗಲಿಲ್ಲ. ಈ ಶಸ್ತ್ರಕ್ರಿಯೆ ಯಶಸ್ವಿಯಾಗಿ ನಡೆದದ್ದು 1939ರಲ್ಲಿ. ಅಂದಿನಿಂದ ಇದು ಅನೇಕ ಕಡೆ ತೃಪ್ತಿಕರವಾಗಿ ನಡೆದಿದೆ. ಈ ನಾಳವನ್ನು ದಾರದಿಂದ ಕಟ್ಟಿದರೆ ಅಥವಾ ಕತ್ತರಿಸಿ ಹೊಲಿದರೆ ಫುಪ್ಪಸಗಳಲ್ಲಿ ರಕ್ತಚಲನೆ ಸಮರ್ಪಕವಾಗಿ ಏರುವುದು ನಿಂತು ಎಲ್ಲವೂ ಸರಿಹೋಗುತ್ತವೆ. ಈ ವೇಳೆಗೆ ಗುಂಡಿಗೆ ಸರಿಹೋಗಲಾರದಷ್ಟು ಕೆಡದಿದ್ದರೆ ಆಯುಷ್ಯ ಕಡಿಮೆಯಾಗುವುದಿಲ್ಲ.

2 ಫ್ಯಾಲಟ್‌ನ ಚತುಷ್ಟಯ (ಫ್ಯಾಲಟ್ಸ್ ಟೆಟ್ರಾಲಜಿ) : ಎಂದರೆ ಹುಟ್ಟಿನಿಂದ ನಾಲ್ಕು ಆಕ್ರಮಗಳಿರುತ್ತವೆ. ಈ ರೋಗವನ್ನು ನೀಲಿ ಶಿಶುವಿನ ರೋಗವೆನ್ನುತ್ತಿದ್ದರು. ಇದರ ವಿವರಗಳು ಹೀಗಿವೆ. (1) ಕಿರಿದಾದ ಫುಪ್ಪಸ ಅಪಧಮನಿ. (2) ಎಡಬಲ ಹೃತ್ಕುಕ್ಷಿಗಳ ನಡುವೆ ತಡಿಕೆಯಿಲ್ಲದಿರುವುದು ಅಥವಾ ಅದರಲ್ಲಿ ತೂತಿರುವುದು. (3) ಎರಡೂ ಹೃತ್ಕುಕ್ಷಿಗಳಿಂದ ರಕ್ತ ಅಗಲವಾದ ಮಹಾಪಧಮನಿಯೊಳಗೆ ನುಗ್ಗುವುದು. (4) ಬಲಹೃತ್ಕುಕ್ಷಿ ಭಿತ್ತಿ ಹೆಚ್ಚು ದಪ್ಪವಾಗುವುದು. 1945ರಲ್ಲಿ ಬ್ಲಲಾಕ್ ಮತ್ತು ಟಾಸಿಗ್ ಎಂಬುವರು ಇದಕ್ಕೆ ನಡೆಸಿದ ಶಸ್ತ್ರಕ್ರಮ ಶಸ್ತ್ರವೈದ್ಯದ ಬೆಳೆವಣಿಗೆಯಲ್ಲಿ ಒಂದು ಮೈಲಿಗಲ್ಲಾಯಿತು. ಮೇಲೆ ಹೇಳಿರುವ ನಾಲ್ಕು ಆಕ್ರಮಗಳ ಮುಖ್ಯ ಪರಿಣಾಮ ಫುಪ್ಪಸದಲ್ಲಿ ಕಡಿಮೆ ರಕ್ತ ಚಲನೆ. ಬ್ಲಲಾಕ್ ಕ್ರಮದಲ್ಲಿ ತೋಳಿನ ರಕ್ತನಾಳವನ್ನು (ಸಿಸ್ಟೆಮಿಕ್ ಆರ್ಟರಿ) ಫುಪ್ಪಸ ಅಪಧಮನಿಯ (ಪಲ್ಮನರಿ ಆರ್ಟರಿ) ಒಂದು ಶಾಖೆಗೆ ಹೊಲಿಯುವುದರಿಂದ ಫುಪ್ಪಸ ಅಪಧಮನಿಯ ಮೂಲದಲ್ಲಿ ರಕ್ತಕ್ಕಿರುವ ಅಡಚಣೆ ಪರಿಣಾಮ ತಪ್ಪಿದಂತಾಗಿ, ರಕ್ತ ತೋಳಿನ ರಕ್ತನಾಳದಿಂದ ಫುಪ್ಪಸಗಳಿಗೆ ನುಗ್ಗುತ್ತದೆ. ಇದೇ ಉದ್ದೇಶ್ಯದಿಂದ ಬೇರೆ ತಂತ್ರಗಳನ್ನೊಳಗೊಂಡ ಚಿಕಿತ್ಸೆಗಳು 1946ರಲ್ಲಿ ವರದಿಯಾದವು. ಒಂದು ವಿಶೇಷ ರೀತಿಯ ಉಪಕರಣದಿಂದ ಫುಪ್ಪಸ ರಕ್ತನಾಳ ಮತ್ತು ಅರ್ಯೋಟಗಳನ್ನು ಕೂಡಿಸುವುದು ಈ ತಂತ್ರಗಳಲ್ಲೊಂದು. ಫ್ಯಾಲಟ್ ಚತುಷ್ಟಯದಲ್ಲಿ ಶಸ್ತ್ರಪ್ರಯೋಗದ ಫಲಗಳು ಅದ್ಭುತ ಮತ್ತು ತೃಪ್ತಿಕರ. ಪ್ರಯೋಗವಾದ ಕೂಡಲೆ ಚರ್ಮದ ನೀಲಿಬಣ್ಣ ಮಾಯವಾಗಿ ನೈಸರ್ಗಿಕ ಬಣ್ಣ ಬರುತ್ತದೆ; ಶ್ರಮಸಹಿಷ್ಣುತೆ ಹೆಚ್ಚುತ್ತದೆ ಮತ್ತು ರಕ್ತದಲ್ಲಿ ಆಕ್ಸಿಜನ್ ಪ್ರಮಾಣ ಸರಿಹೋಗುತ್ತದೆ. ಈ ಶಸ್ತ್ರವೈದ್ಯದ ಅಪಾಯ ಕೇವಲ ಶೇ.10ರ ವರೆಗೆ. ಇದರ ಫಲಿತಾಂಶಗಳು ತೃಪ್ತಿಕರವಾಗಿವೆ. ಗುಂಡಿಗೆ–ಫುಪ್ಪಸ ಯಂತ್ರದಿಂದ ಕೃತಕವಾಗಿ ರಕ್ತಪರಿಚಲನೆ ಏರ್ಪಡಿಸಿ ನೇರವಾಗಿ ಗುಂಡಿಗೆಯ ಮೇಲೆ ಶಸ್ತ್ರಚಿಕಿತ್ಸೆ ನಡೆಸಿ ಎಡಬಲಹೃತ್ಕುಕ್ಷಿ ಮಧ್ಯೆ ತಡಿಕೆಯನ್ನು ಕೃತಕವಾಗಿ ಸೃಷ್ಟಿಸುವುದು ಮತ್ತು ಅಗತ್ಯವಾದ ಬದಲಾವಣೆಯನ್ನು ಮಾಡುವುದು ಹೆಚ್ಚು ತೃಪ್ತಿಕರವಾದ ಚಿಕಿತ್ಸೆಯಾಗಿದೆ. ಆದರೆ ಇದು ಸ್ವಲ್ಪ ಅಪಾಯಕಾರಿ ಕ್ರಮ.

3 ಫುಪ್ಪಸ ಅಪಧಮನಿಯ ಕಿರಿದಾದ ಮೂಲ: ಇದು ಹೃದಯ ಮತ್ತು ರಕ್ತನಾಳಗಳ ಇತರ ಕುಂದುಗಳಿಲ್ಲದೆ ಒಂಟಿಯಾಗಿರಬಹುದು. ಇದಿರುವ ಹೆಚ್ಚು ರೋಗಿಗಳಲ್ಲಿ ಹೃತ್ಕರ್ಣಗಳನ್ನು ಬೇರ್ಪಡಿಸುವ ತಡಿಕೆಯಲ್ಲಿ ರಂಧ್ರವಿರುತ್ತದೆ. ಈ ರೋಗದ ಕೆಟ್ಟ ಪರಿಣಾಮಗಳು ಫ್ಯಾಲೋನ ಚತುಷ್ಟಯದಿಂದಾದಂತಿರುತ್ತವೆ. ಏಕೆಂದರೆ ಫುಪ್ಪಸಗಳ ಮೂಲಕ ಆಕ್ಸಿಜನ್ ರಕ್ತವನ್ನು ಸಾಕಷ್ಟು ಸೇರಲಾರದು. ಈ ಸಮಸ್ಯೆಗೆ ನೇರ ಪರಿಹಾರವನ್ನು 1948ರಲ್ಲಿ ಲಂಡನಿನ ಆರ್. ಸಿ ಬ್ರಾಕ್ ಎಂಬಾತ ಕಂಡುಹಿಡಿದ. ಒಂದು ವಿಶೇಷ ರೀತಿಯ ಕತ್ತಿಯಿಂದ ಫುಪ್ಪಸ ಅಪಧಮನಿಯ ಮೂಲವನ್ನು ದೊಡ್ಡದು ಮಾಡುವುದೇ ಈ ಪರಿಹಾರ. ಮೂಲದಲ್ಲಿ ಮಾತ್ರ ಕಿರಿದಾಗಿರುವ ಫುಪ್ಪಸ ಅಪಧಮನಿ ಇರುವ ಫ್ಯಾಲಟ್‌ನ ಚತುಷ್ಟಯ ರೋಗಿಗಳಲ್ಲೂ ಈತನ ವಿಧಾನವನ್ನು ಉಪಯೋಗಿಸಲಾಗಿದೆ. ಫುಪ್ಪಸ ಅಪಧಮನಿ ಕಿರುಮೂಲವನ್ನು ಹೀಗೆ ಹಿಗ್ಗಿಸುವುದರಿಂದ ಬಲ ಹೃತ್ಕುಕ್ಷಿಯಿಂದ ಫುಪ್ಪಸ ರಕ್ತನಾಳಕ್ಕೆ ಸಾಕಷ್ಟು ರಕ್ತ ನುಗ್ಗಿ ಫುಪ್ಪಸಗಳಲ್ಲಿ ರಕ್ತ ಪರಿಚಲನೆ ಸಮರ್ಪಕವಾಗುವುದರಿಂದ ಫಲಿತಾಂಶ ಅದ್ಭುತವಾಗಿರುವುದು. ದೇಹದೋಷ್ಣತೆಯನ್ನು ತಗ್ಗಿಸಿ ಗುಂಡಿಗೆಯನ್ನು ನೋಡಲು ಸಾಧ್ಯವಾಗುವಂತೆ ಎದೆಯನ್ನು ಛೇದಿಸಿ ಗುಂಡಿಗೆ ಮತ್ತು ನಾಳಗಳ ಮೇಲೆ ನೇರಪ್ರಯೋಗ ನಡೆಸುವುದರಿಂದ ಶಸ್ತ್ರಕಾರ್ಯಗಳು ಹೆಚ್ಚು ತೃಪ್ತಿಕರವಾಗುತ್ತವೆ. ಇಲ್ಲಿ ಅಪಾಯ ಕಡಿಮೆ. ಹೃತ್ಕರ್ಣಗಳ ನಡುವೆ ಇರುವ ತೂತನ್ನು ಮುಚ್ಚಿದ ಕೂಡಲೆ ನೀಲಿಬಣ್ಣ ಮಾಯವಾಗಿ ಬಲಹೃತ್ಕರ್ಣ ಮತ್ತು ಬಲಹೃತ್ಕುಕ್ಷಿಗಳ ಮೇಲೆ ಬಿದ್ದಿರುವ ಕೆಲಸದ ಭಾರ ತಗ್ಗುತ್ತದೆ.

4 ಮಹಾಪಧಮನಿಯ ಕೊಆರ್ಕ್ಟೇಷನ್: ಎಂದರೆ ಡಕ್ಟಸ್ ಆರ್ಟೀರಿಯೋಸಸ್ ಸೇರುವಡೆ ಮಹಾಪಧಮನಿಯು ಚಿಕ್ಕದಾಗಿದ್ದು ಜನನದ ಬಳಿಕವೂ ಹಾಗೆಯೇ ಚಿಕ್ಕದಾಗಿರುವುದು. ಇದರಿಂದ ರಕ್ತ ಒತ್ತಡ ತಲೆತೋಳುಗಳಲ್ಲಿ ಹೆಚ್ಚು ಮತ್ತು ಮುಂಡ ಕಾಲುಗಳಲ್ಲಿ ಕಡಿಮೆ ಇರುತ್ತದೆ. ಚಿಕ್ಕದಾಗಿರುವ ಅರ್ಯೋಟ ಭಾಗದ ಮೇಲೆ ಕೆಳಗೆ ಇರುವ ಭಾಗಗಳನ್ನು ಸಂಬಂಧಿಸುವ ರಕ್ತನಾಳಗಳು ಹಿಗ್ಗಿ ದೊಡ್ಡವಾದರೂ ರಕ್ತದ ಒತ್ತಡಗಳ ವ್ಯತ್ಯಾಸವಿದ್ದೇ ಇರುತ್ತದೆ. ಇದರಿಂದ ಗುಂಡಿಗೆಗೆ ಹೆಚ್ಚು ಶ್ರಮವಾಗುವುದು. ರಕ್ತನಾಳಗಳು ಉಬ್ಬಿಕೊಳ್ಳುವುದು ಮತ್ತು ಮಿದುಳಿನಲ್ಲಿ ರಕ್ತಸ್ರಾವವಾಗುವುದು ಸಾಮಾನ್ಯ ಪರಿಣಾಮಗಳು. 1945ರಲ್ಲಿ ಸ್ಟಾಕೋಮಿನ ಸಿ. ಕ್ರಾಫರ್ಡ್ ಎಂಬಾತ ಚಿಕ್ಕದಾಗಿರುವ ಅರ್ಯೋಟ ಭಾಗವನ್ನು ಕತ್ತರಿಸಿಹಾಕಿ ಮಿಕ್ಕ ಅರ್ಯೋಟ ಭಾಗಗಳನ್ನು ಕೂಡಿಸಿ ಹೊಲಿಯುವ ತಂತ್ರವನ್ನು ಪ್ರಪಂಚಕ್ಕೆ ತಿಳಿಸುವವರೆಗೂ ಚಿಕ್ಕ ಅರ್ಯೋಟ ಭಾಗವಿರುವವರ ಆಯುಷ್ಯ ತೀರ ಕಡಿಮೆಯೇ ಇತ್ತು. ಈ ವೈದ್ಯದಲ್ಲಿ ಅಪಾಯ ಶೇ.5 ಕ್ಕಿಂತ ಕಡಿಮೆ.

5 ತಡಿಕೆಗಳ ಕೊರತೆಗಳು : ಬಲ ಎಡ ಹೃತ್ಕರ್ಣಗಳಿಗೂ ಬಲ ಹೃತ್ಕುಕ್ಷಿಗಳಿಗೂ ಸಂಬಂಧವನ್ನು ಕಲ್ಪಿಸುತ್ತವೆ. ಭ್ರೂಣಾವಸ್ಥೆಯಲ್ಲಿ ಈ ತಡಿಕೆಗಳು ಪೂರ್ತಿಯಾಗಿ ಬೆಳೆಯದೆ ಇರುವುದರಿಂದ ಇವು ಆಗುತ್ತವೆ. ಹೃತ್ಕರ್ಣಗಳ ನಡುವೆ ಇರುವ ತಡಿಕೆ ಕೊರತೆಗಿಂತಲೂ ಹೃತ್ಕುಕ್ಷಿಗಳ ನಡುವೆ ಇರುವ ತಡಿಕೆಯ ಕೊರತೆಯಿಂದ ಹೆಚ್ಚು ಕೆಡಕು. ಇದನ್ನು ಶಸ್ತ್ರವೈದ್ಯರಿಂದ ಸರಿಪಡಿಸುವುದೂ ಕಷ್ಟ. ಈ ಕೊರತೆಯಿಂದಾಗಿ ಗುಂಡಿಗೆ ಸಾಧಾರಣವಾಗಿ ಹೆಚ್ಚು ಶ್ರಮದಿಂದ ದಣಿದು ಕೊನೆಗೆ ಪೂರ್ತಿ ಸೋಲುವುದು. 1950ರ ದಶಕದಲ್ಲಿ ಯಶಸ್ವೀ ಶಸ್ತ್ರ ಚಿಕಿತ್ಸೆಯ ವರದಿಗಳು ಕೆಲವಾಗಿದ್ದರೂ ಈ ಕೊರತೆಗಳನ್ನು ಶಸ್ತ್ರಗಳಿಂದ ಸರಿಪಡಿಸುವ ವಿಧಾನಗಳು ಖಚಿತವಾಗಿ ನಿರ್ಧರಿಸಲ್ಪಟ್ಟಿಲ್ಲ. ಗುಂಡಿಗೆಯನ್ನು ಕೊಯ್ಯದೆಯೇ ಸರಿಪಡಿಸುವ ವಿಧಾನವನ್ನು ಮೊತ್ತಮೊದಲು ವರದಿಯಾದದ್ದು 1952ರಲ್ಲಿ. ಪೂರ್ತಿ ಅಥವಾ ಸ್ವಲ್ಪ ಗುಂಡಿಗೆಯನ್ನು ಬಿಚ್ಚಿ ನೇರವಾಗಿ ಕಣ್ಣಿನಿಂದ ನೋಡುತ್ತ ಸರಿಪಡಿಸುವ ವಿಧಾನಗಳನ್ನು ಉಪಯೋಗಿಸಲಾಯಿತು. ತಡಿಕೆ ತೂತುಗಳನ್ನು ಶಸ್ತ್ರಗಳಿಂದ ಮುಚ್ಚುವದರಿಂದಾಗುವ ಪ್ರಯೋಜನ ಪ್ರಶಸ್ತವಾಗಿರಬಹುದು. ಆದರೆ ಹೊಲಿಯಲು ಸಾಕಷ್ಟು ಆಧಾರವಿಲ್ಲದಂಥ ದೊಡ್ಡ ತೂತುಗಳನ್ನು ಸರಿಪಡಿಸುವುದರಿಂದ ಫಲ ತೃಪ್ತಿಕರವಾಗಿಲ್ಲ. ಈ ಶಸ್ತ್ರಚಿಕಿತ್ಸೆಯ ಕಾಲದಲ್ಲಿ ಉಪಯುಕ್ತವಾದ ಅಂಶಗಳಿವು : (1) ದೇಹೋಷ್ಣತೆಯನ್ನು $30^0$ ಸೆಂ.ವರೆಗೆ ತಗ್ಗಿಸುವುದು. (2) ದೇಹಬಾಹಿರ ರಕ್ತಚಲನೆ ಅಂದರೆ ಕೊಳವೆಗಳ ಸಹಾಯದಿಂದ ಆಕ್ಸಿಜನ್ ವಿರಳ ರಕ್ತವನ್ನು ಮಹಾಭಿಧಮನಿಗಳಿಂದ ಹೊರತೆಗೆದು ಆಕ್ಸಿಜನನ್ನು ಕೊಳವೆಗಳ ಸಹಾಯದಿಂದ ಅದರೊಳಗೆ ಗುಳುಗುಳು ಎಂದು ಪ್ರವಹಿಸಿ ಪುನಃ ಅಪಧಮನಿಗಳಿಗೆ ಪಂಪ್ ಮಾಡುವುದು ; ಇದರಿಂದ ರಕ್ತ ಗುಂಡಿಗೆ ಮತ್ತು ಫುಪ್ಪಸಗಳಿಗೆ ಹೋಗದಂತಾಗಿ ಗುಂಡಿಗೆ ಮೇಲಿನ ಶಸ್ತ್ರಪ್ರಯೋಗದಿಂದ ರಕ್ತನಷ್ಟವಾಗದಂತೆ ತಡೆಯಲು ಸಾಧ್ಯ. ಈ ರೀತಿ ಗುಂಡಿಗೆಯನ್ನು ಬಿಚ್ಚಿ ತಡಿಕೆ ತೂತುಗಳನ್ನು ನೇರದೃಷ್ಟಿಯಲ್ಲಿ ಸರಿಪಡಿಸುವುದು 1956ರಿಂದ ಈಚೆಗೆ ಉತ್ತಮ ವಿಧಾನವಾಗಿದೆ.

ಜನನಾಂತರ ಉಂಟಾಗುವ ಕುಂದುಗಳು. 1 ಎಡ ಅರೆಚಂದ್ರಾಕಾರದ ಕವಾಟ ಮತ್ತು ಮೈಟ್ರಲ್ ಕವಾಟಗಳ ಅಶಕ್ತತೆ ಇಲ್ಲವೆ ಚಿಕ್ಕದಾಗುವಿಕೆ: ಕೀಲು ನೋವು ಜ್ವರ (ರ್‍ಯೂಮ್ಯಾಟಿಕ್ ಫೀವರ್) ಬಂದಾಗ ರೋಗಾಣುಗಳ ಮಹಾಪಧಮನಿ ಮತ್ತು ಮೈಟ್ರಲ್ ಕವಾಟಗಳಲ್ಲಿ ರೋಗವನ್ನು ಉಂಟುಮಾಡುವುದರಿಂದ ಕವಾಟಗಳು ಚಿಕ್ಕವಾಗಿ ರಕ್ತ ನುಗ್ಗುವಿಕೆಗೆ ಅಡಚಣೆ, ಇಲ್ಲವೆ ದಳಗಳ ನಾಶ ಅಥವಾ ವಿಕಲತೆ ಉಂಟಾಗಿ ಅವು ಸರಿಯಾಗಿ ಕೆಲಸ ಮಾಡದೆ ರಕ್ತ ಮೈಟ್ರಲ್ ಕವಾಟದ ಮೂಲಕ ಎಡಹೃತ್ಕುಕ್ಷಿಯಿಂದ ಎಡಹೃತ್ಕರ್ಣಕ್ಕೆ ಇಲ್ಲವೆ ಮಹಾಪಧಮನಿಯಿಂದ ಎಡಹೃತ್ಕುಕ್ಷಿಗೆ ಹಿನ್ನುಗ್ಗುವಂತಾಗುವುದು. ಇದರಿಂದಾಗುವ ಮುಖ್ಯ ಕೆಡುಕೆಂದರೆ ಗುಂಡಿಗೆಗೆ ಹೆಚ್ಚು ಶ್ರಮವಾಗಿ ಕೊನೆಗೆ ಅದು ಪೂರ್ತಿ ಸೋತು ನಿಂತು ಹೋಗುವುದು. ಮೈಟ್ರಲ್ (ದ್ವಿದಳ) ಕವಾಟ ಚಿಕ್ಕದಾಗಿರುವುದರ ನಿರ್ಣಯ ಮತ್ತು ಇದನ್ನು ಶಸ್ತ್ರದಿಂದ ಸರಿಪಡಿಸುವ ಪ್ರಯತ್ನದ ವರದಿ 1922ರಲ್ಲೇ ಆಗಿದ್ದರೂ 1948ರಲ್ಲಿ ಕಾಮಿಶ್ಯೂರಾಟಮಿ ಎಂಬ ಶಸ್ತ್ರವಿಧಾನದ ಆವಿಷ್ಕಾರವಾಗುವವರಗೆ ನಿಜವಾದ ತೃಪ್ತಿಕರ ಮಾರ್ಗವಿರಲಿಲ್ಲ. ಬೆರಳು ಅಥವಾ ಶಸ್ತ್ರದಿಂದ ಚಿಕ್ಕದಾದ ಕವಾಟವನ್ನು ಹಿಗ್ಗಿಸುವುದರಿಂದ ಹಲವು ವೇಳೆ ಕವಾಟಕಾರ್ಯ ಸರಿಹೋಗಿ ರೋಗಿ ನಿರೋಗಿಯಾಗುತ್ತಾನೆ. ಶಸ್ತ್ರಕ್ರಮದ ಕಾಲದಲ್ಲಿರುವ ಕವಾಟದ ಮತ್ತು ಗುಂಡಿಗೆಯ ಸ್ಥಿತಿಗಳಿಗೆ ಅನುಸಾರವಾಗಿ ಶಸ್ತ್ರ ವೈದ್ಯದ ಅಪಾಯ ಉಂಟು. ರೋಗದ ತರುಣ ಸ್ಥಿತಿಯಲ್ಲಿ ಅಪಾಯ ಶೇ.5 ಕ್ಕಿಂತ ಕಡಿಮೆ; ರೋಗ ತೀವ್ರವಾಗಿದ್ದರೆ ಅಪಾಯ ಶೇ.25 ಅಥವಾ ಹೆಚ್ಚು ಇರಬಹುದು. 1950ರ ದಶಕದ ಕೊನೆಯ ವರ್ಷಗಳಲ್ಲಿ ಮೈಟ್ರಲ್ ಅಶಕ್ತತೆ ಮತ್ತು ಚಿಕ್ಕದಾದ ಹಾಗೂ ಅಶಕ್ತ ಕವಾಟದ ಶಸ್ತ್ರವೈದ್ಯ ಇನ್ನೂ ಬಾಲ್ಯಾವಸ್ಥೆಯಲ್ಲಿತ್ತು. ದೇಹಬಾಹಿರ ರಕ್ತಚಲನೆ ಮತ್ತು ತಗ್ಗಿಸಿದ ದೇಹೋಷ್ಣತೆಗಳಿಂದ ಗುಂಡಿಗೆಯನ್ನು ಬಿಚ್ಚಿ ಶಸ್ತ್ರವೈದ್ಯ ಮಾಡುವುದು ರೂಢಿಗೆ ಬಂದ ಮೇಲೆ ಆಶಾಭಾವನೆ ಹುಟ್ಟಿತು. ಆ ವೇಳೆಗೆ ಉಪಜ್ಞೆಗೊಂಡು ಬಳಕೆಗೆ ಬಂದ ಪ್ಲಾಸ್ಟಿಕ್ ಕವಾಟದಿಂದ ಅಶಕ್ತ ಮಹಾಪಧಮನಿಯ ಅರೆಚಂದ್ರಾಕಾರ ಕವಾಟದ ರೋಗಿಗಳಿಗೆ ಹೆಚ್ಚು ಒಳ್ಳೆಯದಾಯಿತು. ಪ್ರಯೋಗ ಶಾಲೆಯ ಪ್ರಾಣಿಗಳಲ್ಲಿ ಪ್ಲಾಸ್ಟಿಕ್, ಉಕ್ಕು ಮತ್ತು ಇತರ

ಪದಾರ್ಥಗಳಿಂದ ಮಾಡಿದ ಕವಾಟಗಳು ಹೆಚ್ಚು ಕಡಿಮೆ ತೃಪ್ತಿಕರ ಫಲಗಳು ನೀಡಿದವು. 1950ರ ದಶಕದ ಕೊನೆಯ ವರ್ಷಗಳಲ್ಲಿ ಈ ಕೃತಕ ಕವಾಟಗಳಿಗಿಂತ ಶಸ್ತ್ರವೈದ್ಯ ತನ್ನ ಕಣ್ಣೆದುರು ಕವಾಟಕುಂದುಗಳನ್ನು ಸರಿಪಡಿಸುವುದು ಉತ್ತಮ ಮಾರ್ಗವೆಂದು ಕಂಡುಬಂದಿತು.

2 ಹಿಸುಕುವ ಹೃದಯಪೊರೆ ಉರಿತ (ಕನ್‌ಸ್ಟ್ರಿಕ್ಟಿವ್ ಪೆರಿಕಾರ್ಡೈಟಿಸ್): ರೋಗಕ್ರಿಮಿಗಳು ಗುಂಡಿಗೆ ಮೇಲಿನ ಪೊರೆಯೊಳಗೆ ಸೇರಿ ದೀರ್ಘಕಾಲದ ಊತವನ್ನು ಉಂಟು ಮಾಡಿ ದೃಢಗೊಂಡು ಗುಂಡಿಗೆಯನ್ನು ಬಿಗಿಯಾಗಿ ಸುತ್ತುವರಿದು ಅದರ ವಿಕಾಸಕ್ಕೆ ಆತಂಕವನ್ನು ಉಂಟುವಮಾಡುತ್ತವೆ. ಕೀಲುನೋವುಜ್ವರ ಮತ್ತು ಕ್ಷಯರೋಗಕ್ರಿಮಿಗಳು ಇದಕ್ಕೆ ಬಹುಸಾಮಾನ್ಯ ಕಾರಣಗಳೆಂದು ತಿಳಿಯಲಾಗಿದೆ. ಮೇಲುಪೊರೆಯ ಬಿಗಿಹಿಡಿತದಿಂದಾಗಿ ದೇಹದ ಭಾಗಗಳಿಂದ ಆಕ್ಸಿಜನ್‌ವಿರಳ ರಕ್ತ ಗುಂಡಿಗೆಗೆ ಹಿಂತಿರುಗಲು ಅಡ್ಡಿಯಾಗುವುದರಿಂದ ಕೆಡಕುಂಟಾಗುವುದು. ಕ್ರಮೇಣ ಮೇಲುಪೊರೆ ಚಿಕ್ಕದಾಗುತ್ತಿರಬಹುದು. 1898ರಲ್ಲಿ ಫ್ರಾನ್ಸಿನ ಇ. ಡಿ. ಡೀಲಾರ್ಮ್ ಎಂಬಾತ ದೃಢವಾದ ಮತ್ತು ಬಿಗಿಯುವ ಈ ಮೇಲುಪೊರೆಯನ್ನು ತೆಗೆಯುವುದು ಒಳ್ಳೆಯದೆಂದು ಹೇಳಿದ. ಇದನ್ನು ತೃಪ್ತಿಕರವಾಗಿ ಮಾಡುವುದು 1920ರಲ್ಲಿ ಸಿದ್ಧಿಸಿತು. ಗುಂಡಿಗೆ ಸರಿಯೇ ಆಗಲಾರದಷ್ಟು ಕೆಟ್ಟುಹೋಗಿದ್ದರೆ ಅಂಥ ರೋಗಿಯಲ್ಲಿ ಶಸ್ತ್ರಚಿಕಿತ್ಸೆಯನ್ನು ಸರಿಯಾಗಿ ಮಾಡಿದರೆ ಬಾಳು ಮುಂದುವರಿಯಲು ತೊಂದರೆ ಆಗದು.

ಘುಪ್ಪುಸಗಳ ಶಸ್ತ್ರವೈದ್ಯ. 1 ಘುಪ್ಪುಸದ ಏಡಿಗಂತಿ: ದುರ್ಮಾಂಸಗಳ ಬೆಳವಣಿಗೆಯಲ್ಲಿ ಶೇ.10 ರಷ್ಟು ಕಾಣಿಸುತ್ತದೆ. 1925ರ ತರುವಾಯ ಇದು ಮುಂಚೆಗಿಂತ ಶೇ.40 ಮೇಲ್ಪಟ್ಟು ಹೆಚ್ಚಿತು. ಇದಕ್ಕೆ ಕಾರಣಗಳು ಸರಿಯಾಗಿ ಗೊತ್ತಿಲ್ಲದಿದ್ದರೂ ಶ್ವಾಸನಾಳ ಶಾಖೆಗಳಲ್ಲಿ ಕೆಲವು ರಾಸಾಯನಿಕ ವಸ್ತುಗಳ ಪ್ರಭಾವ ನಿಸ್ಸಂದೇಹವಾಗಿ ಈ ಬೆಳವಣಿಗೆಯನ್ನು ಉಂಟುಮಾಡುತ್ತದೆ ಎಂದು ತಿಳಿದಿದೆ. 1933ರ ವರಗೆ ಘುಪ್ಪುಸದ ಏಡಗಂತಿಗೆ ಚಿಕಿತ್ಸೆಯೇ ಇರಲಿಲ್ಲ. ಆ ವರ್ಷದಲ್ಲಿ ಇ. ಎ. ಗ್ರಾಹಾಂ ಮತ್ತು ಜೆ. ಜೆ. ಸಿಂಗರ್ ಎಂಬುವರು ಏಡಿಗಂತಿ ವ್ಯಾಪಿಸಿದ್ದ ಘುಪ್ಪುಸವನ್ನು ಪೂರ್ತಿಯಾಗಿ ತೆಗೆದುಹಾಕಿ ಮೊದಲ ಜಯವನ್ನು ಪಡೆದರು. ಆ ರೋಗಿ ಒಬ್ಬ ವೈದ್ಯನೇ ಆಗಿದ್ದ. ಆತ ಮುಂದೆ ಏಡಿಗಂತಿಯ ಸೂಚನೆಯೇ ಇಲ್ಲದೆ 25 ವರ್ಷ ಬದುಕಿದ್ದ. ಘುಪ್ಪುಸದ ಏಡಗಂತಿ ಮತ್ತು ಅದರ ಶಸ್ತ್ರವೈದ್ಯದ ಅಧ್ಯಯನ ಬಹಳವಾಗಿ ನಡೆದಿವೆ. ಕೆಲವು ವೇಳೆ, ಅದರಲ್ಲೂ ಮುದುಕರಲ್ಲಿ ಘುಪ್ಪುಸದ ಬಹುಭಾಗವನ್ನು ತೆಗೆಯುವುದರಿಂದ ಕಡಿಮೆ ಅಪಾಯ ಮತ್ತು ಹೆಚ್ಚು ಗುಣ ಕಂಡುಬಂದಿದೆ. ಎಕ್ಸ್‌ಕಿರಣಗಳ ನೆರವಿನಿಂದ ಘುಪ್ಪುಸದ ಏಡಗಂತಿಯನ್ನು ಆರಂಬದಲ್ಲೇ ಗುರುತಿಸುವುದು ಸಾಧ್ಯ. ಹೀಗಾಗಿ ಈ ವ್ಯಾಧಿಯಿಂದ ನರಳುವವರಿಗೆ ಯುಕ್ತ ವೇಳೆ ಸಮರ್ಪಕ ಚಿಕಿತ್ಸೆ ಮಾಡಬಹುದು. 50 ವರ್ಷಕ್ಕಿಂತ ಕಡಿಮೆ ವಯಸ್ಸಾದವರಲ್ಲಿ ಘುಪ್ಪುಸದ ಶಸ್ತ್ರವೈದ್ಯದ ಅಪಾಯ ಶೇ.5 ಕ್ಕಿಂತ ಕಡಿಮೆ ; ಹೆಚ್ಚು ವಯಸ್ಸಿನವರಲ್ಲಿ ಅಪಾಯ ಸುಮಾರು ಶೇ.15.

3 ಘುಪ್ಪುಸದ ಹುಟ್ಟುವಿಕಲತೆ : ಬುಡ್ಡೆಗಳ ರೋಗ ಹುಟ್ಟುವಾಗಲೇ ಇರಬಹುದು. ಅನೈಸರ್ಗಿಕ ಬೆಳವಣಿಗೆಯಿಂದ ಘುಪ್ಪುಸದಲ್ಲಿ ಒಂದು ಅಥವಾ ಹೆಚ್ಚು ಸಣ್ಣ ಅಥವಾ ದೊಡ್ಡ ಬುಡ್ಡೆಗಳಾಗಬಹುದು. ಇದರಿಂದ (1) ಬುಡ್ಡೆಗಳಲ್ಲಿ ರೋಗಕ್ರಿಮಿಗಳು ಸೇರಿ ಕೀವು ಬುಡ್ಡೆಗಳಾಗುವುವು ಅಥವಾ ಶ್ವಾಸನಾಳ ಶಾಖೆಗಳು ಶಿಥಿಲಗೊಂಡು ದೊಗಳೆ ಗಾಳಿಕೊಳವೆಗಳಾಗುವುವು; ಇಲ್ಲವೆ (2) ಬುಡ್ಡೆಗಳು ದೊಡ್ಡವಾಗಿ ಘುಪ್ಪುಸದ ಗಾಳಿಕೊಳವೆಗಳನ್ನು ಅಮುಕುವುದರಿಂದ ಶ್ವಾಸ ಕಾರ್ಯಕ್ಕೆ ಆತಂಕವುಂಟಾಗುವುದು. ಈ ಹುಟ್ಟುಬುಡ್ಡೆಗಳಿಗೂ ಬೆಳೆದವರಲ್ಲಿ ಕಾಲಕ್ರಮೇಣ ಉಂಟಾಗುವ ಬುಡ್ಡೆಗಳಿಗೂ ವ್ಯತ್ಯಾಸ ಉಂಟು. ನಿಧಾನವಾಗಿ ಬೆಳೆಯುವ ಬುಡ್ಡೆಗಳು 40–50 ವರ್ಷ ವಯಸ್ಸು ದಾಟಿದವರಲ್ಲಿ ಕಾಣಬರುತ್ತವೆ. ಘುಪ್ಪುಸದ ಭಾಗವನ್ನು ಅಪಾಯವಿಲ್ಲದೆ ತೆಗೆದುಹಾಕುವ ರೀತಿಯನ್ನು 1931ರಲ್ಲಿ ಕಂಡುಹಿಡಿದ ಬಳಿಕ ಈ ವೈದ್ಯವನ್ನು ಘುಪ್ಪುಸದ ಬುಡ್ಡೆಗಳ ಚಿಕಿತ್ಸೆಗೂ ಉಪಯೋಗಿಸಲಾಯಿತು. ಸರಿಯಾಗಿ ಕೆಲಸ ಮಾಡುವ ಘುಪ್ಪುಸದ ಭಾಗಗಳನ್ನು ಬಿಟ್ಟು ಬುಡ್ಡೆಗಳಿರುವ ಭಾಗಗಳನ್ನು ಮಾತ್ರ ತೆಗೆಯುವುದೇ ಶಸ್ತ್ರವೈದ್ಯದ ಗುರಿ. ಬುಡ್ಡೆರೋಗ ಘುಪ್ಪುಸದ ಕಾಲುಭಾಗಕ್ಕಿಂತ ಕಡಿಮೆ ಭಾಗದಲ್ಲಿರುವುದರಿಂದ ಬುಡ್ಡೆ ಭಾಗವನ್ನು ಮಾತ್ರ ತೆಗೆದುಹಾಕುವುದರಿಂದ ರೋಗಿ ಸಂಪೂರ್ಣ ಗುಣ ಹೊಂದುತ್ತಾನೆ. ಹುಟ್ಟುವಿಕಲತೆ ಮುಖ್ಯವಾಗಿ ಘುಪ್ಪುಸದ ರಕ್ತನಾಳಗಳಲ್ಲಿ ಮಾತ್ರ ಇರಬಹುದು. ಅಪಧಮನಿ ಅಭಿಧಮನಿ ಸಂಯೋಗ ಒಂದು ಸಾಮಾನ್ಯ ವಿಕಲತೆ. ಇದರಿಂದ ಆಕ್ಸಿಜನ್ನಿನ ಕೊರತೆ ಉಂಟಾಗುವುದು. ಈ ರಕ್ತನಾಳಗಳ ಸಂಯೋಗಗಳು ಕ್ರಮೇಣ ದೊಡ್ಡವಾಗುತ್ತ ಕೊನೆಗೆ ಒಡೆದು ರಕ್ತ ಸೋರಿ ಸಾವು ಸಂಭವಿಸಬಹುದು. ಇದಕ್ಕಿರುವ ಒಂದೇ ಮಾರ್ಗವೆಂದರೆ ವಿಕಲಭಾಗಗಳನ್ನು ತೆಗೆದುಹಾಕುವ ಶಸ್ತ್ರವೈದ್ಯ. ಈ ವಿಕಲತೆ ಅಲ್ಲದೆ ಇತರ ನ್ಯೂನತೆ ಇಲ್ಲದೆ ಇಂಥ ರೋಗಿಯಲ್ಲಿ ಶಸ್ತ್ರವೈದ್ಯದ ಅಪಾಯ ಶೇ.5 ಕ್ಕಿಂತ ಕಡಿಮೆ.

4 ಘುಪ್ಪುಸ ಕ್ಷಯ ರೋಗ : ಎದೆಯ ಶಸ್ತ್ರವೈದ್ಯರಿಂದ ಗುಣ ಕಾಣಿಸುವ ರೋಗಗಳಲ್ಲಿ ಘುಪ್ಪುಸ ಕ್ಷಯವೊಂದು. 1940ಕ್ಕಿಂತ ಮುಂಚೆ ಪಕ್ಕೆಲುಬುಗಳ ಭಾಗಗಳನ್ನು ಕತ್ತರಿಸಿಹಾಕಿ ಎದೆಯ ಭಿತ್ತಿ ಒಳಕ್ಕೆ ಹೋಗುವಂತೆ ಮಾಡುವ ಥೊರೆಕೊಪ್ಲಾಸ್ಟಿ ಎಂಬ ಶಸ್ತ್ರವೈದ್ಯ ಕ್ಷೇಮಕರ ಮತ್ತು ಪರಿಣಾಮಕಾರಿಯಾಗಿತ್ತು. ಕೆಲವು ಪ್ಯಾರಾಫಿನ್ ಮೇಣವನ್ನು ತುಂಬುವ ಪರಿಷ್ಕರಿಸಿದ ಥೊರೆಕೊಪ್ಲಾಸ್ಟಿ ಯಶಸ್ವಿ ಆಗುತ್ತಿತ್ತು. ಕ್ಷಯರೋಗಕ್ರಿಮಿಗಳನ್ನು ತಡೆಗಟ್ಟುವ ಮದ್ದುಗಳು ತಯಾರಾಗುವವರೆಗೂ ಘುಪ್ಪುಸದ ರೋಗಪೀಡಿತ ಭಾಗಗಳನ್ನು ತೆಗೆದುಹಾಕುವ ಕ್ರಮ ಮುಂದುವರಿಯಲಿಲ್ಲ. ಇಡೀ ಘುಪ್ಪುಸವನ್ನು ತೆಗೆದುಹಾಕುವುದರಿಂದ ಅಪಾಯ ಸುಮಾರು ಶೇ.45 ಮತ್ತು ಘುಪ್ಪುಸಭಾಗವನ್ನು ತೆಗೆದುಹಾಕುವುದರಿಂದ ಸುಮಾರು ಶೇ.26ರಷ್ಟಿದ್ದಿತು (1942). ರೋಗಕ್ರಿಮಿಗಳನ್ನು ನಾಶಪಡಿಸುವ ಸ್ಟ್ರೆಪ್ಟೊಮೈಸಿನ್ 1944ರಲ್ಲೂ ಪ್ಯಾರ ಅಮೈನೊಸಾಲಿಸಿಲಿಕ್ ಆಮ್ಲ 1946ರಲ್ಲಿ ಐಸೊನಿಕೊಟಿನಿಕ್ ಆಮ್ಲ 1952ರಲ್ಲೂ ಚಾಲ್ತಿಗೆ ಬಂದ ಮೇಲೆ ಶಸ್ತ್ರವೈದ್ಯದ ಸುರಕ್ಷತೆ ಹೆಚ್ಚಿತು; ಮತ್ತು ರೋಗ ಮುಂದುವರಿದಿದ್ದಾಗಲು ಶಸ್ತ್ರಪ್ರಯೋಗ ನಡೆಸುವ ಸಾಧ್ಯತೆ ಹೆಚ್ಚಿತು. ಅಷ್ಟೇ ಅಲ್ಲದೆ ಈ ಮದ್ದುಗಳ ಉಪಯೋಗದಿಂದ ರೋಗ ಹತೋಟಿಗೆ ಬಂದು ಶಸ್ತ್ರವೈದ್ಯ ಬೇಕಾಗುವ ರೋಗಭಾಗಗಳು ಚಿಕ್ಕವಾಗಿರುವ ಸಾಧ್ಯತೆ ಅಧಿಕವಾಯಿತು. ಇಡೀ ಘುಪ್ಪುಸವನ್ನು ತೆಗೆದುಹಾಕುವುದು (ಇದು 1955ರ ಬಳಿಕ ಬಹಳ ಅಪರೂಪವಾಯಿತು) ಹಾಗೂ ಘುಪ್ಪುಸದ ಒಂದು ಹಾಲೆಯನ್ನು ಮಾತ್ರ ತೆಗೆದುಹಾಕುವುದು ಇವುಗಳೇ ಅಲ್ಲದೆ ರೋಗವಿರುವ ಶ್ವಾಸನಾಳದ ಶಾಖೆಗಳ ಭಾಗವನ್ನು ಮಾತ್ರ ಕತ್ತರಿಸಿ ತೆಗೆಯುವ ಶಸ್ತ್ರವೈದ್ಯವೂ ಬೆಳೆಯಿತು. ಇವೆಲ್ಲಕ್ಕಿಂತ ಮುಖ್ಯ ವಿಷಯವೆಂದರೆ ಔಷಧ ಚಿಕಿತ್ಸೆಯಿಂದಲೆ ಒಳ್ಳೆಯ ಫಲ ಸಿಗುವ ಸಾಧ್ಯತೆ ಹೆಚ್ಚಿತು. ಇಡೀ ಘುಪ್ಪುಸವನ್ನು ತೆಗೆದುಹಾಕುವುದು ಬಳಕೆಗೆ ಬಂದ ಮೇಲೆ (1942) ಶೇ.41 ರಷ್ಟು ಮತ್ತು ಘುಪ್ಪುಸದ ಹಾಲೆಯನ್ನು ಮಾತ್ರ ತೆಗೆದುಹಾಕಿದ ಮೇಲೆ ಶೇ.69 ರಷ್ಟು ತೃಪ್ತಿ ಲಭಿಸುತ್ತಿತ್ತು. ರೋಗವಿರುವ ಶ್ವಾಸನಾಳ ಶಾಖೆಗಳ ಭಾಗ ಅಥವಾ ಒಂದು ಹಾಲೆಯನ್ನು ತೆಗೆಯುವುದು 1955ರಲ್ಲಿ ಬಳಕೆಗೆ ಬಂದ ಬಳಿಕ ಶೇ.95 ರಷ್ಟು ಮತ್ತು ಪೂರ್ತಿ ಘುಪ್ಪುಸವನ್ನು ತೆಗೆಯುವುದರಿಂದ ಶೇ.85–ಶೇ.90 ರಷ್ಟು ಒಳ್ಳೆಯ ಫಲ ಸಿಕ್ಕುವಂತಾಯಿತು. ಇಂದು ವ್ಯಾಪಕವಾಗಿ ಕ್ಷಯರೋಗ ಚಿಕಿತ್ಸೆಗೆ ಪ್ರಬಲ ಔಷಧಗಳು ಲಭ್ಯವಿದ್ದು, ಅವುಗಳ ಬಳಕೆಯಿಂದ ರೋಗವನ್ನು ಹತೋಟಿಗೆ ತರಲಾಗುತ್ತದೆ. ಹಾಗಾಗಿ ಘುಪ್ಪುಸದ ಮೇಲೆ ಕೈಗೊಳ್ಳುವ ಶಸ್ತ್ರಚಿಕಿತ್ಸೆ ಅಪರೂಪವೆನಿಸಿದೆ.


5 ಶ್ವಾಸನಾಳ ಶಾಖೆಗಳ ಹಿಗ್ಗುರೋಗ : ರೋಗಕ್ರಿಮಿಗಳು ಗಾಳಿಕೊಳವೆಗಳ ಭಿತ್ತಿಗಳನ್ನು ಶಿಥಿಲಗೊಳಿಸಿ ಕೊಳವೆಗಳು ದೊಗಳೆಯಾಗುವಂತೆ ಮಾಡಿ ಅವುಗಳ ಸುತ್ತಲಿನ ಘುಪ್ಪುಸ ಭಾಗಗಳನ್ನು ಸೇರುತ್ತವೆ. ತರುವಾಯ ಘುಪ್ಪುಸವನ್ನು ತೆಗೆದುಹಾಕುವುದರಿಂದ ಆಗುವ ಅಪಾಯ 1930ರ ಅನಂತರ ಕಡಿಮೆಯಾದ್ದರಿಂದ ಈ ಹಿಗ್ಗುರೋಗಕ್ಕೆ ಶಸ್ತ್ರಚಿಕಿತ್ಸೆಯೊಂದೇ ದಾರಿಯಾಗಿತ್ತು. 1945ರ ಬಳಿಕ ಶಸ್ತ್ರತಂತ್ರದ ಅಪಾಯ ಶೇ.2 ಕ್ಕಿಂತ ಕಡಿಮೆಯಾಯಿತು. ಈಗ ರೋಗವಿರುವ ಶಾಖಾಭಾಗಗಳನ್ನು ಮಾತ್ರ ತೆಗೆಯುವುದು ಸಾಮಾನ್ಯ ಕ್ರಮವಾಗಿದೆ. ರೋಗ ಹಲವು ವೇಳೆ ಬಲ ಎಡ ಘುಪ್ಪುಸಗಳೆರಡರಲ್ಲೂ ವ್ಯಾಪಿಸಿರುವುದರಿಂದ ಈ ಹಂತಗಳಲ್ಲಿ ಒಂದೊಂದು ಘುಪ್ಪುಸ ಭಾಗವನ್ನು ತೆಗೆಯುವುದು ತೃಪ್ತಿಕರ ಫಲವನ್ನು ಕೊಡುತ್ತದೆ.

6 ಘುಪ್ಪುಸ ಕುರು : ಸಲ್ಫೋನಮೈಡ್ ಮತ್ತಿತರ ಬೂಷ್ಟು ಮದ್ದುಗಳ ಉಪಯೋಗ ಪ್ರಾರಂಭವಾದ ಬಳಿಕ ಘುಪ್ಪುಸ ಕುರು ಬಹಳ ಅಪರೂಪವಾಗಿದೆ. ಇದೇ ಅಲ್ಲದೆ ಬಾಯಿ ಮೂಗು ಗಂಟಲು ಶಸ್ತ್ರವೈದ್ಯ ಮುಂದುವರಿದು ಯೋಗ್ಯ ಚಿಕಿತ್ಸೆಯಾಗುತ್ತಿರುವುದು ಘುಪ್ಪುಸ ಕುರು ಅಪರೂಪವಾಗುವುದಕ್ಕೆ ಕಾರಣವಾಗಿದೆ; ಮತ್ತು ಈಗಿನ ಮದ್ದುಗಳಿಂದಲೇ ಘುಪ್ಪುಸ ಕುರುಗಳು ಕರಗುತ್ತವೆ. ಮದ್ದುಗಳಿಗೆ ಜಗ್ಗದ ಕುರುಗಳಿಗೆ ಶಸ್ತ್ರವೈದ್ಯ ಬೇಕು. ಇದು ಕೀವನ್ನು ಕೊಳವೆ ಇತ್ಯಾದಿಗಳ ಸಹಾಯದಿಂದ ಆಚೆಗೆ ಸೋರುವಂತೆ ಮಾಡುವುದು ಅಥವಾ ಘುಪ್ಪುಸದ ರೋಗ ಪೀಡಿತ ಭಾಗವನ್ನು ತೆಗೆದುಹಾಕುವುದರಿಂದ ನಡೆಯುತ್ತದೆ. ಈ ಶಸ್ತ್ರವೈದ್ಯದ ಅಪಾಯ ಶೇ. 5 ಕ್ಕೂ ಕಡಿಮೆ. ಇದರಿಂದ ಬಹು ತೃಪ್ತಿಕರ ಫಲವನ್ನು ಹೊಂದಬಹುದು. (ಎಂ.ಡಿ.)

**ಗುಂಡಿಗೆಯ ಅಂಗರಚನೆ :** ಮನುಷ್ಯ ದೇಹದ ಸಮಸ್ತ ಭಾಗಗಳಲ್ಲೂ ಸದಾ ರಕ್ತ ಪರಿಚಲನೆ ಇರುವಂತೆ ಮಾಡುವ ಅಂಗ ಗುಂಡಿಗೆ. ಇದು ಗುಂಡಿಗೆಸ್ನಾಯು (ಕಾರ್ಡಿಯಕ್ ಮಸಲ್) ಎಂಬ ವಿಶೇಷ ಸ್ನಾಯುವಿನಿಂದ ನಿರ್ಮಿತವಾಗಿದೆ. ಇದರ ಸ್ಥಾನ ಎದೆಯಲ್ಲಿ (ನಿಖರವಾಗಿ ಮೂಳೆಗಳಿಂದ ರಚಿತವಾದ ಎದೆಗೂಡಿನ ಒಳಗೆ),


ಎರಡು ಫುಪ್ಪುಸಗಳ ನಡುವೆ, ಎಡ ಫುಪ್ಪುಸ ಕೊಂಚ ಮರೆಮಾಡಿದಂತೆ, ಮುಂಭಾಗಕ್ಕೆ ಎಡಕ್ಕೆ ಓರೆಯಾಗಿ ವಪೆಯ ಮೇಲೆ ಉಂಟು. ಗುಂಡಿಗೆಯ $\frac{2}{3}$ ಭಾಗ ದೇಹದ ಮಧ್ಯರೇಖೆಯ ಎಡಕ್ಕೂ $\frac{1}{3}$ ಭಾಗ ಬಲಕ್ಕೂ ವ್ಯಾಪಿಸಿದೆ. ಇಡೀ ಗುಂಡಿಗೆ ಮಾವಿನಕಾಯಿಯ ಆಕಾರವಾಗಿದ್ದು ಕೈಮುಷ್ಟಿಗಿಂತಲೂ ಕೊಂಚ ದೊಡ್ಡದಾಗಿರುತ್ತದೆ. ವಯಸ್ಕರಲ್ಲಿ ಇದರ ತೂಕ ಸುಮಾರು 300 ಗ್ರಾಂ. ಮಕ್ಕಳಲ್ಲಿ ಅದು, ಅವರ ಮೈ ತೂಕಕ್ಕೆ ಹೋಲಿಸಿದರೆ, ಹೆಚ್ಚು ತೂಕವಾಗಿರುತ್ತದೆ. 25 ದಿವಸಗಳ ಗರ್ಭಾವಸ್ಥೆಯಲ್ಲಿ ಪ್ರಾರಂಭವಾಗುವ ಗುಂಡಿಗೆಯ ಬಡಿತ, ಜೀವಮಾನ ಪರ್ಯಂತ ಬಡಿಯುತ್ತಲೇ ಇರುತ್ತದೆ. ಗರ್ಭಾವಸ್ಥೆಯಲ್ಲಿ ಬಡಿತದ ದರ ಮಿನಿಟಿಗೆ 130–140; ಹುಟ್ಟಿದ ತರುಣದಲ್ಲಿ ಅದು 90–100 ಆಗಿ, ಬಾಲ್ಯಾವಸ್ಥೆಯಲ್ಲಿ ಕ್ರಮೇಣ ಕಡಿಮೆಯಾಗುತ್ತ ಯೌವನದಿಂದಾಚೆಗೆ ಮಿನಿಟಿಗೆ ಸುಮಾರು 72 ಆಗುತ್ತದೆ. ಗುಂಡಿಗೆಯ ಸುತ್ತ (ಬುಡದ ಹೊರತಾಗಿ) ಕವಚದ ಹಾಗೆ, ಗುಂಡಿಗೆಯ ಹೊರಪೊರೆ (ಪೆರಿಕಾರ್ಡಿಯಂ) ಉಂಟು. ವಾಸ್ತವವಾಗಿ ಇದು ಮೂರು ಪದರಗಳಿಂದಾಗಿದೆ. ಹೊರಪದರ ಗಡಸು, ಉಳಿದೆರಡು ನುಣುಪು. ಈ ಎರಡು ಪದರಗಳಲ್ಲಿ ಹೊರಗಿನದು ಗಡಸು ಪದರಕ್ಕೆ ಅಂಟಿಕೊಂಡಿದೆ. ಒಳಗಿನದು ಗುಂಡಿಗೆಯ ಹೊರಪದರವಾಗಿದೆ. ಇವೆರಡು ಪದರಗಳ ನಡುವೆ ಕೀಲೆಣ್ಣೆಯಂತೆ ನುಣುಪಿಸುವ ಬಹುಸ್ವಲ್ಪ ದ್ರವವಿದ್ದು, ಇದರಿಂದ ಗುಂಡಿಗೆ ತಿಕ್ಕಾಟವಿಲ್ಲದೆ ಹಿಗ್ಗುವುದಕ್ಕೂ ಕುಗ್ಗುವುದಕ್ಕೂ ಸಾಧ್ಯವಾಗಿದೆ.

ಮುಂದಿನಿಂದ ನೋಡಿದರೆ ಗುಂಡಿಗೆಯ ಬಲಗಡೆ ಅಂಚು ಎದೆಮೂಳೆಯ (ಸ್ಟರ್ನಂ) ಬಲ ಅಂಚಿಗಿಂತ ಒಂದು ಬೆರಳಗಲ ಬಲಕ್ಕಿರುತ್ತದೆ. ಹಾಗೆಯೇ ಎಡ ಅಂಚು ಎದೆಮೂಳೆಯ ಎಡ ಅಂಚಿಗಿಂತ ಒಂದು ಬೆರಳಗಲ ಎಡಕ್ಕಿರುತ್ತದೆ. ಗುಂಡಿಗೆಯ



**ಚಿತ್ರ 1. ಗುಂಡಿಗೆಯ ಮುಂಭಾಗ: 1. ಉನ್ನತ ಮಹಾಭಿಧಮನಿ, 2. ಬಲ ಹೃತ್ಕುಕ್ಷಿ, 3. ಮಹಾಪಧಮನಿಯ ಕಮಾನು, 4. ಎಡ ಪುಪ್ಪಸದ ಅಪಧಮನಿ, 5. ಎಡ ಹೃತ್ಕರ್ಣ, 6. ಎಡ ಹೃತ್ಕುಕ್ಷಿ, 7. ಗುಂಡಿಗೆಯ ತುದಿ.**

ಎಡಬಲಭಾಗಗಳಲ್ಲಿ ರಕ್ತವನ್ನು ಪಡೆಯಲು ಒಂದೊಂದು ಹೃತ್ಕರ್ಣ (ಏಟ್ರಿಯಂ) ರಕ್ತವನ್ನು ಹೊರತಳ್ಳಲು ಒಂದು ಹೃತ್ಕುಕ್ಷಿ (ವೆಂಟ್ರಿಕಲ್) ಹೀಗೆ ಒಟ್ಟು ನಾಲ್ಕು ಕೋಶಗಳಿವೆ (ಚಿತ್ರ 1). ಹೃತ್ಕರ್ಣಗಳಿಗೂ ಹೃತ್ಕುಕ್ಷಿಗಳಿಗೂ ನಡುವೆ ಆಳವಾದ ರೇಖೆ ಉಂಟು. ಈ ರೇಖೆಯಲ್ಲಿ ಕೊಬ್ಬು ತುಂಬಿದ್ದು ಗುಂಡಿಗೆಗೆ ಆಕ್ಸಿಜನ್‌ಯುಕ್ತ ರಕ್ತವನ್ನು ಭಾಗಶಃ ಒದಗಿಸುವ ಬಲಗುಂಡಿಗೆ ಅಪಧಮನಿ (ರೈಟ್ ಕರೋನರಿ ಆರ್ಟರಿ) ಇರುತ್ತದೆ. ಎರಡು ಹೃತ್ಕುಕ್ಷಿಗಳ ನಡುವೆಯೂ ಒಂದು ರೇಖೆ ಇದೆ. ಈ ರೇಖೆಯಲ್ಲಿ ಎಡಗುಂಡಿಗೆ ಅಪಧಮನಿಯ ಒಂದು ಮುಖ್ಯಶಾಖೆ ಉಂಟು. ಎರಡು ಹೃತ್ಕರ್ಣಗಳನ್ನು ಪ್ರತ್ಯೇಕಿಸುವ ಯಾವ ಗುರುತೂ ಹೊರಗಿನಿಂದ ಕಾಣಿಸುವುದಿಲ್ಲ. ಏಕೆಂದರೆ ಆ ಸ್ಥಳ ಫುಪ್ಪುಸ ಧಮನಿ (ಪಲ್ಮನರಿ ಆರ್ಟರಿ) ಮತ್ತು ಮಹಾಪಧಮನಿಯ ಆರೋಹಣ ಭಾಗಗಳಿಂದ (ಅಸೆಂಡಿಂಗ್ ಪಾರ್ಟ್ ಆಫ್ ದಿ ಅಯೋರ್ಟ) ಮರೆಮಾಡಲ್ಪಟ್ಟಿದೆ. ಗುಂಡಿಗೆಯ ತುತ್ತತುದಿ ಎಡ ಹೃತ್ಕುಕ್ಷಿಯ ಕೆಳಮೂತಿಯಾಗಿದ್ದು ಎದೆಯ ಎಡಗಡೆ 5–6ನೆಯ



**ಚಿತ್ರ 2. ಗುಂಡಿಗೆಯ ಹಿಂಭಾಗ. 1. ಮಹಾಪಧಮನಿ, 2. ಎಡ ಫುಪ್ಪುಸದ ಅಪಧಮನಿ, 3. ಎಡ ಫುಪ್ಪುಸದ ಅಭಿಧಮನಿಗಳು, 4. ಎಡ ಹೃತ್ಕರ್ಣ, 5. ಎಡ ಹೃತ್ಕುಕ್ಷಿ, 6. ಗುಂಡಿಗೆಯ ಅಭಿಧಮನಿ, 7. ಉನ್ನತ ಮಹಾಭಿಧಮನಿ, 8. ಬಲ ಫುಪ್ಪುಸದ ಅಪಧಮನಿ, 9. ಬಲ ಫುಪ್ಪುಸದ ಅಭಿಧಮನಿ, 10. ಬಲ ಹೃತ್ಕರ್ಣ, 11. ಅವನತ ಮಹಾಭಿಧಮನಿ**

ಪಕ್ಕೆಲಬುಗಳ ನಡುವೆ ಇರುತ್ತದೆ. ರೋಗದಿಂದ ಗುಂಡಿಗೆ ವಿಕಾರವಾದಾಗ ಅಥವಾ ದೊಡ್ಡದಾದಾಗ ಇದು ಜಾಗವನ್ನು ಬದಲಾಯಿಸಿರುತ್ತದೆ. ಎದೆಮೂಳೆಯ ಹಿಂದೆ ಕಾಣುವ ಗುಂಡಿಗೆಯ ಬಲ ಅಂಚು ಬಲ ಹೃತ್ಕರ್ಣದಿಂದಲೂ ಎಡ ಅಂಚು ವಿಶೇಷವಾಗಿ ಎಡ ಹೃತ್ಕುಕ್ಷಿ ಮತ್ತು ಸ್ವಲ್ಪ ಮಾತ್ರ ಎಡ ಹೃತ್ಕರ್ಣದಿಂದಲೂ ಆಗಿವೆ. ಎದೆಮೂಳೆಯ ಹಿಂದೆಯೇ ಇರುವ ಗುಂಡಿಗೆಯ ಮುಂಬದಿಯಲ್ಲಿ ಸುಮಾರು $\frac{2}{3}$ ಭಾಗ ಬಲ ಹೃತ್ಕುಕ್ಷಿಯಿಂದ ಆಗಿದೆ. ಗುಂಡಿಗೆ ಕೆಳ ಅಂಚೂ ಇದರಿಂದಲೇ ಆಗಿದೆ. ಗುಂಡಿಯ ತಳ ಹಿಮ್ಮುಖವಾಗಿರುತ್ತದೆ. ಇದು ಎದೆಪ್ರದೇಶದ 5ನೆಯ ಬೆನ್ನುಮೂಳೆ ಯಿಂದ 8ನೆಯ ಬೆನ್ನುಮೂಳೆವರೆಗೆ (ತೊರ್‍ಯಾಸಿಕ್ ವರ್ಟಿಬ್ರ) ಪಸರಿಸಿರುತ್ತದೆ. ಇದಕ್ಕೂ ಬೆನ್ನು ಮೂಳೆಗೂ ನಡುವೆ ಮಹಾಪಧಮನಿಯ ಅವರೋಹಣ ಭಾಗವೂ ಅನ್ನನಾಳವೂ ಇರುತ್ತವೆ. ಈ ಭಾಗ ಬಹುವಾಗಿ ಎಡ ಹೃತ್ಕರ್ಣದಿಂದಾಗಿದ್ದು ಇಲ್ಲೆ ಬಲಗಡೆಯಿಂದ 2 ಫುಪ್ಪುಸ ಅಭಿಧಮನಿಗಳೂ (ಪಲ್ಮನರಿ ವೇನ್ಸ್) ಎಡಗಡೆಯಿಂದ ಎರಡು ಫುಪ್ಪುಸ ಅಭಿಧಮನಿಗಳೂ ಬಂದು ಎಡಹೃತ್ಕರ್ಣವನ್ನು ಸೇರುತ್ತವೆ. ಇವು ಆಕ್ಸಿಜನ್‌ಯುಕ್ತ ರಕ್ತವನ್ನು ಫುಪ್ಪುಸಗಳಿಂದ ಎಡಹೃತ್ಕರ್ಣಕ್ಕೆ ಒಯ್ಯುತ್ತವೆ (ಚಿತ್ರ 2). ವಪೆಗೆ ತಗುಲಿದ ಹಾಗಿರುವ ಗುಂಡಿಗೆಯ ಭಾಗ 2/3ರಷ್ಟು ಎಡಹೃತ್ಕುಕ್ಷಿಯಿಂದಲೂ 1/3ರಷ್ಟು ಬಲಹೃತ್ಕುಕ್ಷಿಯಿಂದಲೂ ಆಗಿದೆ. ವಪೆ ಗುಂಡಿಗೆಯನ್ನು ಯಕೃತ್ತಿನ ಎಡಭಾಗ ಮತ್ತು ಜಠರದಿಂದ ಪ್ರತ್ಯೇಕಿಸುತ್ತದೆ.

ಬಲಪಕ್ಕದಿಂದ ನೋಡಿದರೆ ಬಲಹೃತ್ಕುಕ್ಷಿಗೂ ಬೆನ್ನುಮೂಳೆಗೂ ನಡುವೆ ಬಲ ಹೃತ್ಕರ್ಣ ಕಾಣಿಸುತ್ತದೆ. ತಲೆ ತೋಳುಗಳು ಮತ್ತು ಎದೆಯ ಮೇಲುಭಾಗದಿಂದ ಆಕ್ಸಿಜನ್‌ವಿರಳರಕ್ತವನ್ನು ಒಯ್ಯುವ ಉನ್ನತಮಹಾಭಿಧಮನಿ (ಸುಪೀರಿಯರ್ ವೀನ ಕೇವ) ಬಲ ಹೃತ್ಕರ್ಣದ ಮೇಲಿನ ಭಾಗಕ್ಕೆ ತೆರೆದುಕೊಳ್ಳುತ್ತದೆ. ಹೀಗೆಯೇ ದೇಹದಲ್ಲಿ ಉಳಿದ ಭಾಗಗಳಿಂದ ರಕ್ತವನ್ನು ಒಯ್ಯುವ ಅವನತಮಹಾಭಿಧಮನಿ (ಇನ್ಫೀರಿಯರ್ ವೀನ ಕೇವ) ಕೆಳಗಿನಿಂದ ವಪೆಯಲ್ಲಿ ತೂರಿ ಬಲಹೃತ್ಕರ್ಣದ ಕೆಳಭಾಗದಲ್ಲಿ ತೆರೆದುಕೊಳ್ಳುತ್ತದೆ. ಕವಾಟವಿರುವ ಗುಂಡಿಗೆಯ ಮಹಾಭಿಧಮನಿ (ಕರೋನರಿ ಸೈನಸ್) ಇಡೀ ಗುಂಡಿಗೆಯ ಸ್ನಾಯುಗಳಿಂದ ಬರುವ ಆಕ್ಸಿಜನ್ ವಿರಳರಕ್ತವನ್ನು ಬಲಹೃತ್ಕರ್ಣಕ್ಕೆ ತಲುಪಿಸುತ್ತದೆ. ಬಲಹೃತ್ಕರ್ಣದಲ್ಲಿ ಉನ್ನತ ಮಹಾಭಿಧಮನಿ ಸೇರುವ ಕಡೆ ಸೈನೊ ಏಟ್ರಿಯಲ್ ಗಿಣ್ಣು ಮತ್ತು ಗುಂಡಿಗೆಯ ಮಹಾಭಿಧಮನಿಯ ಹತ್ತಿರ ಏಟ್ರಿಯೋವೆಂಟ್ರಿಕ್ಯುಲರ್ ಗಿಣ್ಣು ಎಂಬ ಎರಡು ವಿಶಿಷ್ಟ ಮಾಂಸದ ಗಂಟುಗಳು ಬಲಹೃತ್ಕರ್ಣದ ಮಾಂಸಭಿತ್ತಿಯಲ್ಲಿ ಹುದುಗಿಕೊಂಡಿರುತ್ತವೆ. ಇವುಗಳ ಸ್ವಯಂ ಪ್ರಚೋದಿತ ಕಾರ್ಯಕ್ರಮದಿಂದ ಗುಂಡಿಗೆ ನಿಯತವಾದ ತಾಳಕ್ರಮದಲ್ಲಿರುತ್ತದೆ. ಬಲಹೃತ್ಕರ್ಣದ ಹಿಂದಕ್ಕೂ ಎಡಕ್ಕೂ ಎಡಹೃತ್ಕರ್ಣ ಉಂಟು. ಹೀಗಿರುವುದು ಎರಡು ಹೃತ್ಕರ್ಣಗಳನ್ನು ವಿಭಾಗಿಸುವ ನಡುವಣ ತಡಿಕೆ ಓರೆಯಾಗಿರುವುದರ ಪರಿಣಾಮ. ಭ್ರೂಣಾವಸ್ಥೆಯಲ್ಲಿ ಈ ತಡಿಕೆಯಲ್ಲಿ ಅಂಡಾಕಾರದ ಕಂಡಿ (ಫೊರಾಮನ್ ಓವಾಲೀ) ಇದ್ದು ಅದು ಅವನತಮಹಾಭಿಧಮನಿಯಿಂದ ಬಲಹೃತ್ಕರ್ಣವನ್ನು ತಲುಪಿದ ರಕ್ತವನ್ನು ಕೂಡಲೇ ಎಡಹೃತ್ಕರ್ಣಕ್ಕೆ ಹೋಗಗೊಡುತ್ತದೆ. ರಕ್ತದ ಚಲನೆಯನ್ನು ಈ ರೀತಿ ನಿಯಂತ್ರಿಸಲು ಅವನತಮಹಾಭಿಧಮನಿಯ ಬಾಯಲ್ಲಿ ಯೂಸ್ಟೇಕಿಯಸ್ಸನ ಕವಾಟಗಳಿರುತ್ತವೆ. ಜನನವಾದ ಮೇಲೆ ಎರಡು ಹೃತ್ಕರ್ಣಗಳ ಒಳಪೊರೆಗಳೂ ಅಂಡಾಕಾರದ ಕಂಡಿಯನ್ನು ಮುಚ್ಚಿ ತಡಿಕೆಯಲ್ಲಿ ಒಂದು ತಗ್ಗು ಮಾತ್ರ ಇರುವಂತೆ ಕಾಣುತ್ತದೆ. ಯೂಸ್ಟೇಕಿಯಸ್ಸನ ಕವಾಟಗಳ ಉಳಿಕೆಗಳೂ ಅವನತಮಹಾಭಿಧಮನಿಯ ಬಾಯ ಸುತ್ತ ಕಾಣಬರುತ್ತವೆ. ಗುಂಡಿಗೆಯ ಮಿಕ್ಕ ಎಲ್ಲ ಕೋಶಗಳಂತೆ ಬಲಹೃತ್ಕರ್ಣದ ಒಳಗೆ ಕೂಡ ನುಣುಪಾದ ಪೊರೆ ಇದ್ದರೂ ಆ ಪೊರೆಯ ಒಳಗೆ ಇರುವ ಸ್ನಾಯು ತಂತುಗಳ ವಿನ್ಯಾಸದಿಂದ ಅದು ಜುಂಗುಜುಂಗಾಗಿರುವುದು.




ಚಿತ್ರ 3. ಹೃತ್ಕುಕ್ಷಿಗಳ ನೇರದಲ್ಲಿ ಗುಂಡಿಗೆಯ ಅಡ್ಡಛೇದನೆ ಮೇಲಿನಿಂದ ಕಾಣುವಂತೆ: 1. ಬಲ ಹೃತ್ಕುಕ್ಷಿಯ ಕುಹರ, 2. ಎಡ ಹೃತ್ಕುಕ್ಷಿಯ ಕುಹರ, 3. ಹೃತ್ಕುಕ್ಷಿಗಳ ಅಡ್ಡ ತಡಿಕೆ, 4. ಎಡ ಹೃತ್ಕುಕ್ಷಿಯ ದಪ್ಪ ತಡಿಕೆ, 5. ಬಲ ಹೃತ್ಕುಕ್ಷಿಯ ತೆಳು ತಡಿಕೆ, 6. ಗುಂಡಿಗೆಯ ಬಲ ಅಪಧಮನಿಯ ಮುಖ್ಯ ಕವಲು, 7. ಗುಂಡಿಗೆಯ ಎಡ ಅಪಧಮನಿಯ ಹೃತ್ಕುಕ್ಷಿಗಳ ನಡುವಿನ ಕವಲು.

ಬಲಹೃತ್ಕರ್ಣದಿಂದ ಬಲಹೃತ್ಕುಕ್ಷಿಗೆ ರಕ್ತ ಇವುಗಳ ನಡುವೆ ಇರುವ ದ್ವಾರದ ಮೂಲಕ ಹರಿದು ತುಂಬಿಕೊಳ್ಳುತ್ತದೆ. ಬಲಹೃತ್ಕರ್ಣ ಸಂಕುಚಿಸಿದಾಗ ಬಲ ಹೃತ್ಕುಕ್ಷಿ ಪೂರ್ಣವಾಗಿ ತುಂಬಿಕೊಳ್ಳುತ್ತದೆ. ಬಲಹೃತ್ಕರ್ಣ ಹೃತ್ಕುಕ್ಷಿಗಳ ನಡುವಿನ ಈ ದ್ವಾರದಲ್ಲಿ ತ್ರಿದಳ ಕವಾಟ (ಟ್ರೈಕಸ್ಪಿಡ್ ವಾಲ್ವ್) ಉಂಟು. ಇದು ಬಲಹೃತ್ಕರ್ಣದಿಂದ ಬಲಹೃತ್ಕುಕ್ಷಿಗೆ ರಕ್ತ ಹರಿಯಲು ಅವಕಾಶ ಮಾಡಿಕೊಡುತ್ತದಾದರೂ ಬಲಹೃತ್ಕುಕ್ಷಿ ಸಂಕುಚಿಸಿದಾಗ ಇದರ ಮೂರು ದಳಗಳೂ ತೇಲಿ ಸಂಪರ್ಕಗೊಂಡು ದ್ವಾರ ಮುಚ್ಚಿಕೊಳ್ಳುವುದರಿಂದ ರಕ್ತ ಪುನಃ ಹೃತ್ಕರ್ಣಕ್ಕೆ ಬರದಂತೆ ತಡೆಯುತ್ತದೆ. ಕವಾಟದ ದಳಗಳ ಕೆಳಗಿನ ಕುಚ್ಚುಕುಚ್ಚಾದ ಅಂಚುಗಳ ಕಾರ್ಡೆಟೆಂಡಿನೆ ಎಂಬ ತಂತುಗಳಿಂದ, ಬಲ ಹೃತ್ಕುಕ್ಷಿಯ ಒಳಗಿರುವ ಬೆರಳಿನೋಪಾದಿಯ ಸ್ನಾಯುಗಳ ತುದಿಗೆ ಸೇರಿಸಲ್ಪಟ್ಟಿರುವುದರಿಂದ, ಕವಾಟ ಮುಚ್ಚಿಕೊಂಡಾಗ ದಳಗಳು ದೃಢವಾಗಿದ್ದು ರಕ್ತದ ವಾಪಸಾತಿಯ ತಡೆಯನ್ನು ಯಶಸ್ವಿಯಾಗಿ ನೆರವೇರಿಸುತ್ತದೆ. ಬಲಹೃತ್ಕುಕ್ಷಿಯಿಂದ ರಕ್ತ ಫುಪ್ಪಸ ಅಪಧಮನಿಯೊಳಕ್ಕೆ ನೂಕಲ್ಪಡುತ್ತದೆ. ಈ ಅಪಧಮನಿಯ ಪ್ರಾರಂಭದಲ್ಲಿ ಮೂರು ಅರೆಚಂದ್ರಾಕಾರ ದಳಗಳುಳ್ಳ ಅರೆಚಂದ್ರಾಕಾರ ಕವಾಟವಿದ್ದು ಹೃತ್ಕುಕ್ಷಿ ಸಂಕುಚಿಸಿದಾಗ ವಾಟ್ಸಾಲ್ವನ ಸೈನಸ್‌ಗಳೆಂಬ ಸಣ್ಣ ಪೊಟರೆಗಳೊಳಕ್ಕೆ ಬರಿದಾದ ದಳಗಳು ತಳ್ಳಲ್ಪಟ್ಟು ರಕ್ತ ಅಪಧಮನಿಯೊಳಗೆ ಹೋಗಲು ಅವಕಾಶ ಮಾಡಿಕೊಡುತ್ತದೆ. ಹೃತ್ಕುಕ್ಷಿಯ ವಿಕಾಸ (ರಿಲ್ಯಾಕ್ಸೇಷನ್) ಪ್ರಾರಂಭವಾದಾಗ ಕವಾಟದ ದಳಗಳಲ್ಲಿ ರಕ್ತತುಂಬಿ ಅವು ಹಿಂದಕ್ಕೆ ಬಿದ್ದು ಅಪಧಮನಿಯನ್ನು ಅಡ್ಡಕಟ್ಟಿ ರಕ್ತ ಪುನಃ ಹೃತ್ಕುಕ್ಷಿಯೊಳಗೆ ಹೋಗದಂತೆ ತಡೆಯುತ್ತವೆ. ಫುಪ್ಪಸ ಅಪಧಮನಿ ರಕ್ತವನ್ನು ಎರಡು ಫುಪ್ಪಸಗಳಿಗೂ ಒಯ್ಯುತ್ತದೆ. ಅಲ್ಲಿ ರಕ್ತ ಆಕ್ಸಿಜನ್ನನ್ನು ಹೀರಿಕೊಂಡು ಎಡಫುಪ್ಪಸದಿಂದ ಎರಡು, ಬಲ ಫುಪ್ಪಸದಿಂದ ಎರಡು ಫುಪ್ಪಸ ಅಭಿಧಮನಿಗಳ ಮೂಲಕ ಎಡ ಹೃತ್ಕರ್ಣಕ್ಕೆ ಬಂದು ಸೇರುತ್ತದೆ. ಎಡಹೃತ್ಕರ್ಣದಿಂದ ರಕ್ತ ಎಡಹೃತ್ಕುಕ್ಷಿಗೆ ಇವೆರಡರ ನಡುವಣ ದ್ವಾರದ ಮೂಲಕ ಹರಿದು ತುಂಬಿಕೊಳ್ಳುತ್ತದೆ. ಬಲಭಾಗದಲ್ಲಿನಂತೆ ಈ ದ್ವಾರದಲ್ಲೂ ಕವಾಟ ಉಂಟು. ಆದರೆ ಇದರಲ್ಲಿ ಎರಡು ದಳಗಳು ಮಾತ್ರ ಇರುವುದರಿಂದ ಇದನ್ನು ದ್ವಿದಳಕವಾಟವೆಂದು ಕರೆಯಲಾಗಿದೆ. ಇದಕ್ಕೆ ಮೈಟ್ರಲ್ ಕವಾಟವೆಂದು ಕೂಡ ಹೆಸರುಂಟು. ಈ ಕವಾಟ ಸಹ ಎಡಹೃತ್ಕರ್ಣ ಸಂಕುಚಿಸುವಾಗಲೂ ತೆರೆದುಕೊಂಡಿದ್ದು ಎಡಹೃತ್ಕುಕ್ಷಿ ಸಂಪೂರ್ಣ ವಾಗಿ ತುಂಬಿ ಅದರ ಸಂಕುಚನೆ ಪ್ರಾರಂಭವಾದಾಗ ಇದರ ಎರಡು ದಳಗಳೂ ತೇಲಿ ಸಂಪರ್ಕಗೊಂಡು ದ್ವಾರ ಮುಚ್ಚಿಕೊಂಡು ಹೃತ್ಕರ್ಣಕ್ಕೆ ರಕ್ತದ ವಾಪಸಾತಿಯನ್ನು ತಡೆಯುತ್ತದೆ. ಈ ದಳಗಳ ಕುಚ್ಚುಕುಚ್ಚಾದ ಅಂಚು ತಂತುಗಳಿಂದ ಎಡಹೃತ್ಕುಕ್ಷಿಯ ಒಳಗಿರುವ ಬೆರಳಿನೋಪಾದಿಯ ಸ್ನಾಯುಗಳ ತುದಿಗೆ ಸೇರಿಕೊಂಡಿರುವುದರಿಂದ ದೃಢಗೊಳಿಸಲ್ಪಟ್ಟು ರಕ್ತದ ತಡೆ ಯಶಸ್ವಿಯಾಗಿರುತ್ತದೆ. ಎಡಹೃತ್ಕುಕ್ಷಿಯ ಸಂಕುಚನದಿಂದ ರಕ್ತ ಮಹಾಪಧಮನಿಗೆ (ಅಯೋರ್ಟ) ನುಗ್ಗಿಸಲ್ಪಡುತ್ತದೆ. ಮಹಾಪಧಮನಿಯ ಪ್ರಾರಂಭದಲ್ಲೂ ಅರೆಚಂದ್ರಾಕಾರ ಕವಾಟವಿದ್ದು ಎಡಹೃತ್ಕುಕ್ಷಿಯ ವಿಕಾಸ ಪ್ರಾರಂಭವಾದಾಗ ಅಪಧಮನಿಯಿಂದ ರಕ್ತದ ಹಿನ್ನುಗ್ಗುವಿಕೆಯನ್ನು ಅದು ತಡೆಯುತ್ತದೆ. ರಕ್ತ ಮಹಾಪಧಮನಿಯ ಮೂಲಕ ಮುಂದೆ ಹರಿದು ದೇಹದ ಎಲ್ಲ ಕಡೆಗಳಿಗೂ ಪೂರೈಸಲ್ಪಡುತ್ತದೆ. ಗುಂಡಿಗೆಗೇ ರಕ್ತವನ್ನು ಪೂರೈಸುವ ಎಡ, ಬಲ ಎಂಬ ಎರಡು ಗುಂಡಿಗೆ ಅಪಧಮನಿಗಳು ಮಹಾಪಧಮನಿಯ ಪ್ರಾರಂಭದ ಕವಲುಗಳು. ಎಡಬಲ ಹೃತ್ಕುಕ್ಷಿಗಳ ನಡುವೆ ಇರುವ ತಡಿಕೆಯೂ ಸ್ವಲ್ಪಮಟ್ಟಿಗೆ ಓರೆಯಾಗಿರುವುದರಿಂದ ಬಲ ಹೃತ್ಕುಕ್ಷಿ ಸ್ವಲ್ಪ ಮುಂದಕ್ಕೂ ಎಡಹೃತ್ಕುಕ್ಷಿ ಸ್ವಲ್ಪ ಹಿಂದಕ್ಕೂ ಇವೆ. ಈ ತಡಿಕೆ ಕೆಳಭಾಗದಲ್ಲಿ ಸ್ನಾಯುಯುಕ್ತವಾಗಿ ದಪ್ಪವಾಗಿಯೂ ಮಹಾಪಧಮನಿಯ ಉಗಮಸ್ಥಾನದ ಹತ್ತಿರ ಸ್ನಾಯುರಹಿತವಾಗಿ ತೆಳ್ಳಗೂ ಇದೆ. ಅಲ್ಲದೆ ತಡಿಕೆ ಬಲಗಡೆಗೆ ಡೊಂಕಾಗಿ ಉಬ್ಬಿಕೊಂಡಿರುವುದರಿಂದ ಹೃತ್ಕುಕ್ಷಿಗಳ ನೇರದಲ್ಲಿ ಗುಂಡಿಗೆಯನ್ನು ಅಡ್ಡವಾಗಿ ಛೇದಿಸಿದರೆ ಬಲಹೃತ್ಕುಕ್ಷಿ ಅರ್ಧಚಂದ್ರಾಕಾರವಾಗಿದ್ದು ಗುಂಡಗಿರುವ ಎಡಹೃತ್ಕುಕ್ಷಿಯನ್ನು ಆವರಿಸಿದಂತೆ ಕಾಣುವುದು (ಚಿತ್ರ 3). ಹಾಗೆಯೇ ಎಡಹೃತ್ಕುಕ್ಷಿಯ ಭಿತ್ತಿ ಬಲಹೃತ್ಕುಕ್ಷಿಯ ಭಿತ್ತಿಗಿಂತ ಬಹು ದಪ್ಪವಾಗಿರುವುದಾಗಿ ಕಾಣುವುದು. ಹೃತ್ಕುಕ್ಷಿಗಳ ಭಿತ್ತಿ ಬಲಹೃತ್ಕುಕ್ಷಿಯ ಭಿತ್ತಿಗಿಂತಲೂ ತೆಳುವಾಗಿರುತ್ತದೆ. ಹೃತ್ಕರ್ಣ ಹೃತ್ಕುಕ್ಷಿಗಳ ತಡಿಕೆಗಳು ಗುಂಡಿಗೆಯ ಎಡಬಲ ಭಾಗಗಳನ್ನು ನೇರ ಸಂಪರ್ಕವಿಲ್ಲದಂತೆ ಪ್ರತ್ಯೇಕಿಸುತ್ತವೆ.

ಹೃತ್ಕರ್ಣ ಹೃತ್ಕುಕ್ಷಿಗಳ ನಡುವೆ ಯಾವ ನೇರವಾದ ಸಂಬಂಧವೂ ಇಲ್ಲಿ ಕಾಣಿಸುವುದಿಲ್ಲ. ಆದರೂ ಹೃತ್ಕರ್ಣಗಳು ಕುಗ್ಗಿ ಪುನಃ ಹಿಗ್ಗುವುದಕ್ಕೆ ಪ್ರಾರಂಭಿಸಿದ ಮೇಲೆಯೇ ಹೃತ್ಕುಕ್ಷಿಗಳು ಕುಗ್ಗುವುದಕ್ಕೆ ಪ್ರಾರಂಭಿಸುತ್ತವೆ. ಈ ನಿಯಂತ್ರಣ ಕ್ರಮ ಮೇಲೆ ಹೇಳಿದಂತೆ ಸೈನೋ ಏಟ್ರಿಯಲ್ ಮತ್ತು ಏಟ್ರಿಯೋವೆಂಟ್ರಿಕ್ಯುಲರ್ ಗಿಣ್ಣುಗಳಿಂದ ಸಾಧ್ಯವಾಗಿದೆ. ಸೈನೋ ಏಟ್ರಿಯಲ್ ಗಿಣ್ಣಿನಲ್ಲಿ ಗುಂಡಿಗೆಯ ಬಡಿತಕ್ಕೆ ಸ್ವಯಂಪ್ರಚೋದನೆ ಯಾಗುತ್ತದೆ. ಇದು ಎರಡು ಹೃತ್ಕರ್ಣಗಳನ್ನೂ ಒಟ್ಟಿಗೆ ಸಂಕುಚಿಸಿ ಜೊತೆಗೇ ಏಟ್ರಿಯೋವೆಂಟ್ರಿಕ್ಯುಲರ್ ಗಿಣ್ಣನ್ನು ಪ್ರಚೋದಿಸುತ್ತದೆ. ಅಲ್ಲಿಂದ ಪ್ರಚೋದನೆ ಹಿಸ್ಸನ ಬೊಂತೆ (ಬಂಡಲ್ ಆಫ್ ಹಿಸ್) ಎಂಬ ಅವ್ಯಕ್ತವಾದ ವಿಶೇಷ ಸ್ನಾಯುಗಳ ಪಟ್ಟಿಯ ಮೂಲಕ ಮುಂದುವರಿಯುತ್ತದೆ. ಹಿಸ್ಸನ ಬೊಂತೆ ಏಟ್ರಿಯೋವೆಂಟ್ರಿಕ್ಯುಲರ್ ಗಿಣ್ಣಿನಿಂದ ಪ್ರಾರಂಭವಾಗಿ ಹೃತ್ಕುಕ್ಷಿಗಳ ನಡುವಿನ ತಡಿಕೆಯ ಮೇಲುಭಾಗವನ್ನು ಸೇರುತ್ತದೆ. ಅಲ್ಲಿ ಎರಡು ಕವಲಾಗಿ ತಡಿಕೆಯ ಎಡಬಲ ಮೈಮೇಲೆ ಮುಂದುವರಿದು ಗುಂಡಿಗೆಯ ತುದಿಯನ್ನು ಸೇರುತ್ತದೆ. ಅಲ್ಲಿಂದ ಹೃತ್ಕುಕ್ಷಿಗಳ ಎಡ ಬಲ ಅಂಚುಗಳಲ್ಲಿ ಕ್ರಮಿಸುತ್ತ ಅನೇಕ ಎಳೆಗಳಾಗಿ ಗುಂಡಿಗೆಯ ಸ್ನಾಯುವಿನ ಜೀವಕಣಗಳೊಡನೆ ವಿಲೀನವಾಗುತ್ತದೆ. ಇದರಿಂದ ಸ್ನಾಯುಗಳೆಲ್ಲ ಹೊಂದಿಕೊಂಡು ಚೋದನೆಗೆ ಈಡಾಗುವಂತೆ ನೆರವಾಗುತ್ತದೆ ಮತ್ತು ಎರಡು ಹೃತ್ಕರ್ಣಗಳು ಒಟ್ಟಿಗೇ ಸಂಕುಚಿಸಿದ ಮೇಲೆ ಸುಮಾರು 0.1 ಸೆಕೆಂಡು ತಡೆದು ಎರಡು ಹೃತ್ಕುಕ್ಷಿಗಳೂ ಒಟ್ಟಿಗೇ ಸಂಕುಚಿಸುವುದಕ್ಕೆ ಸಾಧ್ಯವಾಗಿದೆ.

ಗುಂಡಿಗೆಗೆ ಪೂರೈಕೆಯಾಗುವ ನರಗಳಲ್ಲಿ ಉಪಾನುವೇದನ (ಪ್ಯಾರಾಸಿಂಪತೆಟಿಕ್) ನರವಾದ ವೇಗಸ್ ನರವೂ ಕೊರಳು ಮತ್ತು ಎದೆಯ ಮೇಲ್ಗಡೆಯ ನರಗಂಟುಗಳಿಂದ (ಗ್ಯಾಂಗ್ಲಿಯ) ಬರುವ ಅನುವೇದನ ನರಕವಲುಗಳೂ ಇವೆ. ಇವು ಗುಂಡಿಗೆಯ

ಮೇಲ್ಮೈಯಲ್ಲಿ ಮತ್ತು ಆಳದಲ್ಲಿ ಹಿಣಿಲುಗಳಾಗಿರುತ್ತವೆ. ಈ ನರಗಳು ಗುಂಡಿಗೆಯ ಬಡಿತವನ್ನು ಸಂದರ್ಭಕ್ಕೆ ಅನುಸಾರವಾಗಿ ನಿಯಂತ್ರಿಸುತ್ತವೆ. (ಕೆ.ಕೆ.ಎಸ್‌ಡಬ್ಲ್ಯು.;ಡಿ.ಎಸ್.ಎಸ್.)

**ಪ್ರಾಣಿಗಳಲ್ಲಿ ಗುಂಡಿಗೆಯ ರಚನೆ :** ತೀರ ಪ್ರಾಥಮಿಕ ದರ್ಜೆಯ ಪ್ರಾಣಿಗಳನ್ನು (ಉದಾಹರಣೆಗೆ ಏಕಾಣು ಜೀವಿಗಳು) ಬಿಟ್ಟು ಇತರ ಎಲ್ಲ ಪ್ರಾಣಿಗಳಿಗೂ ಎರೆಹುಳುಗಳನ್ನೂ ಒಳಗೊಂಡಂತೆ ಅಕಶೇರುಕಗಳಿಗೆ ಸಹ ಗುಂಡಿಗೆ ಉಂಟು. ಪ್ರಾಣಿ ದೇಹದಲ್ಲಿ ರಕ್ತಪರಿಚಲನೆಯ ನಿರಂತರತೆಯನ್ನು ಕೂಡಿಟ್ಟುಕೊಳ್ಳುವುದೇ ಇದು ನಿರ್ವಹಿಸುವ ಕ್ರಿಯೆ. ಪ್ರಸಕ್ತ ಲೇಖನದಲ್ಲಿ ಕಶೇರುಕಗಳಲ್ಲಿ ಗುಂಡಿಗೆಯ ವಿಕಾಸವನ್ನು ವಿವರಿಸಿದೆ.

ಪ್ರಪ್ರಥಮವಾಗಿ ಮಾಂಸಲವಾದ ಒಂದು ಗುಂಡಿಗೆ ಆದಿಮ ಕಶೇರುಕಗಳಲ್ಲಿ ಕಾಣಿಸಿಕೊಂಡಿದೆ. ಚಕ್ರಾಸ್ಯಮೀನುಗಳಲ್ಲಿ ಬಹಳ ಸರಳವಾದ ಮತ್ತು ಮೂಲ ರಚನೆಯನ್ನು ತೋರುವ ಗುಂಡಿಗೆಯನ್ನು ಕಾಣಬಹುದು. ಇದರಲ್ಲಿ ನಾಲ್ಕು ಕೋಣೆಗಳಿದ್ದರೂ ಪ್ರಮುಖವಾದವು ಎರಡು ಮಾತ್ರ – ಹೃತ್ಕರ್ಣ ಮತ್ತು ಹೃತ್ಕುಕ್ಷಿ. ಹೃತ್ಕರ್ಣ ತೆಳುಭಿತ್ತಿನ ಕೋಣೆ. ದೇಹದ ನಾನಾ ಭಾಗಗಳಿಂದ ಬರುವ ಮಲಿನ ರಕ್ತ ಮೊದಲು ಈ ಭಾಗಕ್ಕೆ ಬರುತ್ತದೆ. ಹೀಗೆ ರಕ್ತವನ್ನು ಸಂಗ್ರಹಿಸಿ ತಂದು ಹೃತ್ಕರ್ಣಕ್ಕೆ ಸೇರಿಸುವ ಕ್ರಿಯೆಯಲ್ಲಿ ಸೈನಸ್ ವಿನೋಸಸ್ ಎಂಬ ಇನ್ನೊಂದು ಕೋಣೆ ಪಾತ್ರ ವಹಿಸುತ್ತದೆ. ಹೃತ್ಕರ್ಣದಿಂದ ರಕ್ತ ಮಾಂಸಲವಾದ ಹೃತ್ಕುಕ್ಷಿಗೆ ಹೋಗುತ್ತದೆ. ಅಲ್ಲಿಂದ ಕೋನಸ್ ಎಂಬ ಇನ್ನೊಂದು ಕೋಣೆಯ ಮೂಲಕ ದೇಹದ ವಿವಿಧ ಭಾಗಗಳಿಗೆ ಹರಿಯುತ್ತದೆ. ಗುಂಡಿಗೆಯ ಸುತ್ತ ಸೀಲೋಮಿನಿಂದ ಉದ್ಭವಿಸಿದ ಪೆರಿಕಾರ್ಡಿಯಂ ಎಂಬ ಆವರಣವಿದೆ. ಇದನ್ನು ತೆಳುವಾದ ಭಿತ್ತಿಯೊಂದು ಸುತ್ತುವರಿದಿದೆ. ಪೆರಿಕಾರ್ಡಿಯಮಿನಲ್ಲಿ ಒಂದು ರೀತಿಯ ದ್ರವ ಉಂಟು. ಅದು ಮೃದುಚಾಲಕದ ರೀತಿಯಲ್ಲಿ ವರ್ತಿಸುತ್ತದೆ.

ಪ್ರಾಣಿಯ ಬೆಳೆವಣಿಗೆಯ ಕಾಲದಲ್ಲಿ ಗುಂಡಿಗೆ ಮೂಲತಃ ಒಂದು ರಕ್ತನಾಳದಿಂದ ಆರಂಭವಾಗುತ್ತದೆ. ಈ ರಕ್ತನಾಳ S– ಆಕಾರದಲ್ಲಿ ಬಾಗಿ ವಿಭೇದೀಕರಣಗೊಂಡು ವಿವಿಧ ಕೋಣೆಗಳಾಗಿ ವಿಭಾಗವಾಗಿ ಸಮರ್ಥವಾದ ಪ್ರಬುದ್ಧ ಗುಂಡಿಗೆಯಾಗಿ ರೂಪುಗೊಳ್ಳುತ್ತದೆ. ಕಶೇರುಕಗಳಲ್ಲಿ ಗುಂಡಿಗೆಯ ರಚನೆಯ ವಿಕಾಸವನ್ನು ಕಾಣಬಹುದು.

ಮೀನುಗಳಲ್ಲಿ ಮೇಲೆ ತಿಳಿಸಿದ ನಾಲ್ಕು ಕೋಣೆಗಳೂ ಇದ್ದು ಕೇವಲ ಮಲಿನ ರಕ್ತ ಮಾತ್ರ ಗುಂಡಿಗೆಗೆ ಬರುತ್ತದೆ. ಇದಕ್ಕೆ ಮಲಿನ ರಕ್ತದ ಗುಂಡಿಗೆ ಎಂದು ಹೆಸರು. ಮೀನುಗಳಲ್ಲಿ ಏಕ ರಕ್ತಾಭಿಸರಣೆ ಮಾತ್ರ ಕಂಡುಬರುತ್ತದೆ. ಸೈನಸ್ ವಿನೋಸಸ್ ಮತ್ತು ಹೃತ್ಕರ್ಣದ ಮಧ್ಯೆ ತೆಳುವಾದ ಅಪೂರ್ಣ ಮಾಂಸಲ ಭಿತ್ತಿ ಇದೆ. ಇವೆರಡರ ನಡುವೆ ದ್ವಾರದಲ್ಲಿ ಕವಾಟಗಳಿವೆ. ಸ್ವಲ್ಪ ಒತ್ತಡದಿಂದಲೇ ರಕ್ತ ಹೃತ್ಕರ್ಣದಿಂದ ಹೃತ್ಕುಕ್ಷಿಗೆ ಹರಿಯುತ್ತದೆ. ಹೃತ್ಕುಕ್ಷಿಯ ಮುಂದೆ ಕೋನಸ್ ಆರ್ಟಿಯೋಸಸ್ ಕೋಣೆ ವೆಂಟ್ರಲ್ ಅಯೋರ್ಟ (ವೆಂಟ್ರಲ್ ಮಹಾಪಧಮನಿ) ಅಥವಾ ಬಲ್ಬಸ್ ಆರ್ಟೀರಿಯೋಸಸ್‌ಗೆ ತೆರೆಯುವುದು. ಬಲ್ಬಸ್ ಆರ್ಟೀರಿಯೋಸಸ್ ಟೀಲಿಯಾಸ್ಟ್ ಮೀನುಗಳಲ್ಲಿ ಮಾತ್ರ ಇದೆ. ಆದ್ದರಿಂದ ಈ ಮೀನುಗಳಲ್ಲಿ ಕೋನಸ್ ಮತ್ತು ಅದರಲ್ಲಿನ ಕವಾಟಗಳು ಕಣ್ಮರೆಯಾಗಿವೆ. ಫುಪ್ಪಸ ಮೀನುಗಳ ಗುಂಡಿಗೆಯಲ್ಲಿ ಕೆಲವು ವಿಶೇಷಗಳನ್ನು ಕಾಣಬಹುದು. ಅಪೂರ್ಣ ಅಡ್ಡ ಭಿತ್ತಿಯೊಂದು ಹೃತ್ಕರ್ಣವನ್ನು ವಿಭಾಗಿಸಿದೆ. ಇದರ ಎಡಭಾಗ ಬಲಭಾಗಕ್ಕಿಂತ ಚಿಕ್ಕದು. ಇಲ್ಲಿಗೆ ಈಜುಕೋಶದಿಂದ ಬಂದ ರಕ್ತ ಸೇರುತ್ತದೆ. ಈ ದೃಷ್ಟಿಯಿಂದ ಫುಪ್ಪಸ ಮೀನುಗಳ ಗುಂಡಿಗೆ ಯೂರೊಡಿಲ್ ದ್ವಿಚರಿಗಳ ಗುಂಡಿಗೆಯನ್ನು ಹೋಲುತ್ತದೆ.

ದ್ವಿಚರಿಗಳ ಗುಂಡಿಗೆಯ ರಚನೆ ಮೀನುಗಳ ಗುಂಡಿಗೆಯ ರಚನೆಗಿಂತ ಮುಂದುವರಿದಿದೆ. ದ್ವಿಚರಿಗಳಲ್ಲಿನ ಗುಂಡಿಗೆಯಲ್ಲಿ 3 ಪ್ರಧಾನ ಕೋಣೆಗಳನ್ನು ನೋಡಬಹುದು. ಹೃತ್ಕರ್ಣ ಪೂರ್ಣ ಅಡ್ಡ ಭಿತ್ತಿಯಿಂದ ಎರಡು ಭಾಗವಾಗಿದ್ದು ಎಡಭಾಗಕ್ಕೆ ಶ್ವಾಸಕೋಶಗಳಿಂದಲೂ ಬಲಭಾಗಕ್ಕೆ ದೇಹದ ಮಿಕ್ಕ ಭಾಗಗಳಿಂದಲೂ ರಕ್ತ ಬಂದು ಸೇರುತ್ತದೆ. ಕಿವಿರುಗಳುಳ್ಳ ಯೂರೊಡಿಲ್ ದ್ವಿಚರಿಗಳಲ್ಲಿ ಶ್ವಾಸಕೋಶಗಳು ಕೃಶವಾಗಿದ್ದರೂ ಹೃತ್ಕರ್ಣ ಮಾತ್ರ ಎರಡು ಭಾಗಗಳನ್ನು ಪಡೆದೇ ಇದೆ. ಕೋನಸ್ ಸರಳವಾಗಿದೆ. ಸುರುಳಿ ಕವಾಟವಿಲ್ಲ. ಬಲ್ಬಸ್ ಆರ್ಟೀರಿಯೋಸಸ್ ಅಯೋರ್ಟದ ಬುಡದಲ್ಲಿದೆ. ದ್ವಿಚರಿಗಳ ಗುಂಡಿಗೆ ಮೀನುಗಳ ಗುಂಡಿಗೆಯಂತೆ ಬರಿಯ ಮಲಿನ ರಕ್ತದ ಗುಂಡಿಗೆಯಲ್ಲ. ಇದರಲ್ಲಿ ಮಲಿನ ಮತ್ತು ಶುದ್ಧ ರಕ್ತಗಳೆರಡೂ ಇವೆ. ಮಲಿನ ರಕ್ತವನ್ನು ದೇಹದ ಭಾಗಗಳಿಂದ ಸಂಗ್ರಹಿಸಿ ಶುದ್ಧೀಕರಣಕ್ಕಾಗಿ ಫುಪ್ಪಸಗಳಿಗೆ ಕಳುಹಿಸುತ್ತದೆ. ಫುಪ್ಪಸಗಳಿಂದ ಆಮ್ಲಜನಕವನ್ನು ಹೊತ್ತ ರಕ್ತ ದೇಹದ ವಿವಿಧ ಭಾಗಗಳಿಗೆ ಹಂಚುವುದು. ಆದ್ದರಿಂದ ಇವುಗಳಲ್ಲಿ ದ್ವಿರಕ್ತಾಭಿಸರಣೆ ಇದೆ.

ಕಪ್ಪೆ ಮತ್ತು ನೆಲಗಪ್ಪೆಗಳ ಗುಂಡಿಗೆ ಮಿಕ್ಕ ದ್ವಿಚರಿಗಳ ಗುಂಡಿಗೆಗಿಂತ ರಚನೆಯಲ್ಲಿ ಹೆಚ್ಚು ಮುಂದುವರಿದಿದೆ. ಕಪ್ಪೆಯಲ್ಲಿ ಇರುವ ಹೃತ್ಕರ್ಣದ ಅಡ್ಡಭಿತ್ತಿ ಹೃತ್ಕರ್ಣವನ್ನು ಬಲ ಮತ್ತು ಎಡ ಹೃತ್ಕರ್ಣಗಳೆಂಬ ಎರಡು ಭಾಗ ಮಾಡುತ್ತದೆ. ಹೃತ್ಕರ್ಣದ ಕೆಳಗೆ ಹೃತ್ಕುಕ್ಷಿಯಿದೆ. ಇದು ದಪ್ಪ ಮಾಂಸಲ ಭಿತ್ತಿಯಿಂದಾದುದು. ಗುಂಡಿಗೆಯ ಬೆನ್ನುಭಾಗದಲ್ಲಿರುವ ಸೈನಸ್ ವಿನೋಸಸ್ ಬಲ ಹೃತ್ಕರ್ಣಕ್ಕೆ ಸೈನು ಆರಿಕ್ಯುಲಾರ್ ದ್ವಾರದ ಮೂಲಕ ತೆರೆಯುತ್ತದೆ. ಈ ತೆರಪಿನ ಬಳಿ ಸೈನು ಆರಿಕ್ಯುಲಾರ್ ಕವಾಟವಿದೆ. ಇದು ಇರುವುದರಿಂದ ರಕ್ತ ಸೈನಸ್ ವಿನೋಸಸ್‌ನಿಂದ ಹೃತ್ಕರ್ಣಕ್ಕೆ ಮಾತ್ರ ಹರಿಯಲು ಸಾಧ್ಯ. ಸೈನಸ್ ವಿನೋಸಸ್ ಕೋಣೆಗೆ ಮೂರು ಅಭಿಧಮನಿಗಳು ಬಂದು ಸೇರುತ್ತವೆ. ಮುಂಭಾಗದಿಂದ ಎಡ ಮತ್ತು ಬಲ ಉನ್ನತ ಮಹಾಭಿಧಮನಿಗಳೂ (ಸುಪೀರಿಯರ್ ವೀನ ಕೇವ) ಮತ್ತು ಹಿಂಭಾಗದಿಂದ ಅವನತ ಮಹಾಭಿಧಮನಿಯೂ (ಇನ್ಫೀರಿಯರ್ ವೀನ ಕೇವ) ಸೇರುತ್ತವೆ. ಎಡಹೃತ್ಕರ್ಣಕ್ಕೆ ಪಲ್ಮನರಿ ಅಭಿಧಮನಿ ತೆರೆಯುತ್ತದೆ. ಹೃತ್ಕರ್ಣಗಳೆರಡೂ ಹೃತ್ಕುಕ್ಷಿಗೆ ಆರಿಕ್ಯುಲೊ ವೆಂಟ್ರಿಕ್ಯುಲಾರ್ ರಂಧ್ರದ ಮೂಲಕ ತೆರೆಯುತ್ತವೆ. ಈ ರಂಧ್ರವನ್ನು ಪಟಲಗಳಂತೆ ಇರುವ ಎರಡು ಆರಿಕ್ಯುಲೋ ವೆಂಟ್ರಿಕ್ಯುಲಾರ್ ಕವಾಟಗಳು ಮುಚ್ಚುತ್ತವೆ. ಕವಾಟದ ಮಡಿಕೆಗಳು ತಂತುಸ್ತಂಭಗಳ ಮೂಲಕ ಹೃತ್ಕುಕ್ಷಿಯ ಮಾಂಸಲ ಭಿತ್ತಿಗೆ ನೇತುಬಿದ್ದಿವೆ. ಈ ತಂತುಸ್ತಂಭಗಳಿಗೆ ಕಾರ್ಡ ಟೆಂಡಿನೆ ಎಂದು ಹೆಸರು. ಹೃತ್ಕುಕ್ಷಿಯ ಬುಡದ ಬಲಭಾಗದಿಂದ ಟ್ರಂಕಸ್ ಆರ್ಟೀರಿಯೋಸಸ್ ಎಂಬ ಅಪಧಮನಿ ಹೊರಡುತ್ತದೆ. ಟ್ರಂಕಸ್ ಬುಡಭಾಗವನ್ನು ಕೋನಸ್ ಆರ್ಟೀರಿಯೋಸಸ್ ಅಥವಾ ಪೈಲ್ಯಾಂಜಿಯಂ ಎಂದೂ ತುದಿಭಾಗವನ್ನು ಬಲ್ಬಸ್ ಅಥವಾ ಸೈನಾಂಜಿಯಂ ಭಾಗವೆಂದೂ ಕರೆಯಲಾಗುತ್ತದೆ. ಕೋನಸ್ ಹೃತ್ಕುಕ್ಷಿಯನ್ನು ಸೇರುವ ಸ್ಥಳದಲ್ಲಿ ಮೂರು ಅರ್ಧಚಂದ್ರಾಕಾರದ ಕವಾಟಗಳಿವೆ. ಕೋನಸ್‌ನಲ್ಲಿ ಉದ್ದವಾದ, ಸುರುಳಿ ಸುತ್ತಿದ ಹಾಗೂ ಓರೆಯಾದ ಕವಾಟ ಉಂಟು. ಈ ಕವಾಟ ಕೋನಸನ್ನು ಅಸಮರ್ಪಕವಾದ ಎರಡು ಭಾಗಗಳನ್ನಾಗಿ ವಿಭಾಗಿಸುತ್ತದೆ. ಬಲಭಾಗಕ್ಕೆ ಕೇವಮ್ ಅಯೋರ್ಟಿಕಂ ಎಂದೂ ಎಡಭಾಗಕ್ಕೆ ಕೇವಮ್ ಪಲ್ಮೊಕ್ಯುಟೇನಿಯಂ ಎಂದೂ ಹೆಸರು. ಟ್ರಂಕಸ್ ಆರ್ಟೀರಿಯೋಸಸ್ ಎರಡು ಕವಲಾಗುತ್ತದೆ. ಪ್ರತಿಯೊಂದು ಕವಲೂ ಮತ್ತೆ ಮೂರು ಕವಲುಗಳಾಗಿ ಒಡೆಯುತ್ತದೆ. ಇವೇ ಕರೋಟಿಡ್, ಸಿಸ್ಟಮಿಕ್ ಮತ್ತು ಪಲ್ಮೊಕುಟೇನಿಯಸ್ ಅಪಧಮನಿಗಳು. ಸರೀಸೃಪಗಳ ಗುಂಡಿಗೆಯಲ್ಲಿ ಹೃತ್ಕರ್ಣ ಎರಡು ವಿಭಾಗವಾಗಿದೆ. ಪ್ರಪ್ರಥಮವಾಗಿ ಹೃತ್ಕುಕ್ಷಿಯಲ್ಲಿ ಅಪೂರ್ಣ ಅಡ್ಡ ಭಿತ್ತಿಯೊಂದು ಕಾಣಿಸಿಕೊಳ್ಳುತ್ತದೆ. ಇದರಿಂದಾಗಿ ಹೃತ್ಕುಕ್ಷಿ ಅಪೂರ್ಣವಾಗಿ ಬಲ ಮತ್ತು ಎಡಭಾಗಗಳಾಗಿ ವಿಭಾಗವಾಗಿದೆ. ಅಯೋರ್ಟ ಮತ್ತು ಕೋನಸ್‌ಗಳು ಬುಡಭಾಗದಲ್ಲೇ ಬೇರೆಯಾಗುವುದರಿಂದ ಪಲ್ಮನರಿ ಅಪಧಮನಿ ಹೃದಯದಿಂದ ಪ್ರತ್ಯೇಕ ಧಮನಿಯಾಗಿಯೇ ಹೊರಡುತ್ತದೆ. ಅಯೋರ್ಟದ ಎರಡು ಕವಲುಗಳು ಕೋನಸಿನ ಬುಡದಲ್ಲೇ ಬೇರೆಯಾಗುತ್ತವೆ. ಆದ್ದರಿಂದ ಮೂರು ಅಪಧಮನಿಗಳು ಹೃದಯದಿಂದಲೇ ಹೊರಡುತ್ತವೆ. ಎಲ್ಲ ಅಪಧಮನಿಗಳ ಬುಡದಲ್ಲಿ ಕವಾಟಗಳಿವೆ. ಸೈನಸ್ ವಿನೋಸಸ್ ಸಣ್ಣದಾಗಿದೆ. ಇದು ಬಲ ಹೃತ್ಕರ್ಣದ ಹತ್ತಿರವಿದ್ದು ಅದಕ್ಕೆ ತಾಗಿಕೊಂಡಿದೆ.

ಸಾಮಾನ್ಯವಾಗಿ ಕಾಣಬರುವ ಸರೀಸೃಪವಾದ ಓತಿಕೇತದ ಹೃದಯದಲ್ಲೂ ಮೇಲೆ ತಿಳಿಸಿದ ರಚನೆಯೇ ಕಂಡುಬರುತ್ತದೆ. ಪೂರ್ಣವಾದ ಅಂತರ ಭಿತ್ತಿಯಿಂದಾಗಿ ಹೃತ್ಕುಕ್ಷಿ ಎರಡು ಭಾಗಗಳಾಗಿ ವಿಭಾಗವಾಗಿರುವುದರಿಂದ ಗುಂಡಿಗೆಯಲ್ಲಿ ಒಟ್ಟು ನಾಲ್ಕು ಕೋಣೆಗಳಿವೆ. ಸೈನಸ್ ವಿನೋಸಸ್ ಸಣ್ಣದಾಗಿದೆ. ಈ ಕೋಣೆಗೆ ಮೂರು ಪ್ರಧಾನ ಅಭಿಧಮನಿಗಳಾದ ಕೇವಲ್‌ಗಳು ಮಲಿನ ರಕ್ತವನ್ನು ತರುತ್ತವೆ. ಸೈನಸ್ ವಿನೋಸಸ್ ಬಲಹೃತ್ಕರ್ಣಕ್ಕೆ ಒಂದು ರಂಧ್ರದ ಮೂಲಕ ತೆರೆಯುತ್ತದೆ. ಈ ರಂಧ್ರವನ್ನು ಸೈನು ಆರಿಕ್ಯುಲಾರ್ ಕವಾಟ ಕಾಪಾಡುತ್ತದೆ. ಎಡಹೃತ್ಕರ್ಣಕ್ಕೆ ಪಲ್ಮನರಿ ಅಭಿಧಮನಿ ತೆರೆಯುತ್ತದೆ. ಇದು ಫುಪ್ಪಸಗಳಿಂದ ಶುದ್ಧರಕ್ತವನ್ನು ತರುತ್ತದೆ. ಎರಡು ಹೃತ್ಕರ್ಣಗಳಿಂದಲೂ ಹೃತ್ಕುಕ್ಷಿಗಳಿಗೆ ಬೇರೆ ಬೇರೆಯಾಗಿಯೇ ಹರಿಯುತ್ತದೆ. ಹೃತ್ಕುಕ್ಷಿ ಬಲವಾದ ದಪ್ಪ ಸ್ಪಂಜಿನ ಮಾಂಸ ಭಿತ್ತಿಯಿಂದಾಗಿದೆ. ಬಲಹೃತ್ಕರ್ಣ ಮತ್ತು ಬಲ ಹೃತ್ಕುಕ್ಷಿಗಳಲ್ಲಿ ಮಲಿನರಕ್ತವೂ ಎಡಹೃತ್ಕರ್ಣ ಮತ್ತು ಹೃತ್ಕುಕ್ಷಿಗಳಲ್ಲಿ ಆಕ್ಸಿಜನೀಕೃತವಾದ ರಕ್ತವೂ (ಶುದ್ಧರಕ್ತ) ಇರುತ್ತದೆ. ಹೃತ್ಕುಕ್ಷಿಯ ಅಂತರ ಭಿತ್ತಿ ಅಪೂರ್ಣವಾಗಿದ್ದರೂ ಸಾಧಾರಣವಾಗಿ ಮಲಿನ ರಕ್ತ ಮತ್ತು ಶುದ್ಧರಕ್ತಗಳು ಬೆರೆಯುವುದಿಲ್ಲ. ಟ್ರಂಕಸ್ ಆರ್ಟೀರಿಯೋಸಸ್ ಬುಡದಲ್ಲೇ ಕವಲೊಡೆದಿರುವುದರಿಂದ ಎಲ್ಲ ಮಹಾಪಧಮನಿಗಳು – ಬಲ ಮತ್ತು ಎಡ ಸಿಸ್ಟಮಿಕ್ ಮತ್ತು ಪಲ್ಮನರಿ ಅಪಧಮನಿಗಳು – ಹೃತ್ಕುಕ್ಷಿಯಿಂದಲೇ ಹೊರಡುತ್ತವೆ. ಇವೆಲ್ಲವೂ ಸಂಯೋಜಿತ ಅಂಗಕೋಶದಿಂದ ಆವೃತವಾಗಿವೆ. ಪಲ್ಮನರಿ ಅಪಧಮನಿಯೂ ಬಲಹೃತ್ಕುಕ್ಷಿಯ ಮೇಲ್ಭಾಗದಿಂದ ಹುಟ್ಟುತ್ತದೆ. ಬಲ ಸಿಸ್ಟಮಿಕ್ ಅಪಧಮನಿ ಎಡ ಹೃತ್ಕುಕ್ಷಿಯಿಂದಲೂ ಎಡ ಸಿಸ್ಟಮಿಕ್ ಅಪಧಮನಿ ಬಲ ಹೃತ್ಕುಕ್ಷಿಯಿಂದಲೂ ಹುಟ್ಟುತ್ತವೆ. ಈ ಎರಡು ಸಿಸ್ಟಮಿಕ್ ಅಪಧಮನಿಗಳು ಮುಂಭಾಗಕ್ಕೆ ಹೋಗುವಾಗ ಒಂದರ ಮೇಲೊಂದು ಅಡ್ಡಹಾಯುವುದರಿಂದ ಟ್ರಂಕಸ್ ಆರ್ಟೀರಿಯೋಸಸ್ ಸ್ವಲ್ಪ ತಿರುಚಿಕೊಂಡಿದೆ. ಇದರಿಂದ ಇವುಗಳ ಹಾದಿ ಬೇರೆಯಾಗಿದೆ.

ಅಂದರೆ ಬಲ ಸಿಸ್ಟಮಿಕ್ ಎಡಗಡೆಗೂ ಎಡ ಸಿಸ್ಟಮಿಕ್ ಬಲಗಡೆಗೂ ಹೋಗುತ್ತವೆ. ಅಪಧಮನಿಗಳ ಬುಡಗಳಲ್ಲಿ ಒಂದು ಜೋಡಿ ಅರ್ಧಚಂದ್ರಾಕಾರದ ಕವಾಟಗಳಿವೆ. ಎಡ ಸಿಸ್ಟಮಿಕ್ ಅಪಧಮನಿ ಅಪೂರ್ಣ ಅಂತರ ಭಿತ್ತಿಯ ಮುಂಭಾಗದಲ್ಲೇ ಇರುತ್ತದೆ. ಅಪಧಮನಿಯಲ್ಲಿ ಮಲಿನ ಮತ್ತು ಶುದ್ಧರಕ್ತಗಳು ಬೆರೆತು ಹರಿಯುತ್ತವೆ.

ಇನ್ನೂ ಹೆಚ್ಚಾಗಿ ಮುಂದುವರಿದ ಗುಂಡಿಗೆಯ ರಚನೆಯನ್ನು ಮೊಸಳೆಗಳಲ್ಲಿ ಕಾಣಬಹುದು. ಇಲ್ಲಿ ಹೃತ್ಕರ್ಣ ಮತ್ತು ಹೃತ್ಕುಕ್ಷಿಗಳು ಪೂರ್ಣವಾಗಿ ಬಲ ಮತ್ತು ಎಡ ಭಾಗಗಳಾಗಿ ವಿಭಾಗವಾಗಿದೆ. ಎಡ ಸಿಸ್ಟಮಿಕ್ ಅಪಧಮನಿ ಬಲ ಹೃತ್ಕುಕ್ಷಿಯಿಂದ ಹೊರಡುವುದರಿಂದ ಮಲಿನ ರಕ್ತವನ್ನು ಒಯ್ಯುತ್ತದೆ. ಶುದ್ಧ ರಕ್ತವನ್ನು ಹೊತ್ತ ಬಲ ಸಿಸ್ಟಮಿಕ್ ಮಹಾಪಧಮನಿ ಎಡ ಹೃತ್ಕುಕ್ಷಿಯಿಂದ ಹೊರಡುತ್ತದೆ. ಈ ಎರಡು ಸಿಸ್ಟಮಿಕ್ ಅಪಧಮನಿಗಳಿಗೂ ಅವುಗಳ ಬುಡದಲ್ಲಿರುವ ಪೆನಿಸ್ಸ ರಂಧ್ರ ಸಂಬಂಧ ಕಲ್ಪಿಸುತ್ತದೆ. ಒತ್ತಡ ಹೆಚ್ಚಾಗಿರುವ ಎಡಹೃತ್ಕುಕ್ಷಿ ಸಂಕುಚಿಸಿದಾಗ ಎಡ ಸಿಸ್ಟಮಿಕ್ ಅಪಧಮನಿಗೆ ಸ್ವಲ್ಪ ಆಕ್ಸಿಜನೀಕೃತ ರಕ್ತ ಸೇರುವುದು. ಅದೂ ಅಲ್ಲದೆ ಮೊಸಳೆ ನೀರಿಗೆ ಧುಮುಕಿದಾಗ ಬಲ ಹೃತ್ಕುಕ್ಷಿಯಲ್ಲಿ ಒತ್ತಡ ಹೆಚ್ಚಾಗಿ ರಕ್ತ ಪೆನಿಸ್ಸ ರಂಧ್ರದ ಮೂಲಕ ಬಲದಿಂದ ಎಡಭಾಗಕ್ಕೆ ಹರಿಯುವುದು.

ಪಕ್ಷಿಗಳ ಗುಂಡಿಗೆಯಲ್ಲಿ ಖಚಿತವಾದ ನಾಲ್ಕು ಕೋಣೆಗಳಿವೆ. ಶುದ್ಧ ಮತ್ತು ಮಲಿನ ರಕ್ತದ ಮಿಶ್ರಣಕ್ಕೆ ಯಾವುದೇ ಅವಕಾಶವೂ ಇಲ್ಲ. ಸೈನಸ್ ವಿನೋಸಸ್ ಇಲ್ಲವೆಂದೇ ಹೇಳಬಹುದು. ಇದರ ಬಹುತೇಕ ಭಾಗ ಬಲಹೃತ್ಕರ್ಣದಲ್ಲಿ ಸೇರಿಹೋಗಿದೆ. ಬಲ ಹೃತ್ಕುಕ್ಷಿಯನ್ನು ಸ್ವಲ್ಪ ಸುತ್ತುವರಿದಿದ್ದು ರಕ್ತವನ್ನು ಪಲ್ಮನರಿ ಅಪಧಮನಿಗೆ ಕಳುಹಿಸುತ್ತದೆ. ಎಡಹೃತ್ಕುಕ್ಷಿಯ ದ್ವಾರ ತೆಳುವಾದ ಕವಾಟದಿಂದ ರಕ್ಷಿತವಾಗಿದೆ. ಈ ಕವಾಟದ ಪದರಗಳು ಹೃತ್ಕುಕ್ಷಿಯ ಗೋಡೆಗೆ ತಂತುಸ್ತಂಭಗಳಿಂದ ಅಂಟಿಕೊಂಡಿದೆ. ಬಲಹೃತ್ಕರ್ಣ–ಹೃತ್ಕುಕ್ಷಿಯ ಮಧ್ಯೆ ಇರುವ ಕವಾಟ ಅಗಲವಾದ ಮಾಂಸಲ ಪದರದಿಂದ ಕೂಡಿದೆ. ಬಲ ಹೃತ್ಕರ್ಣಕ್ಕೆ ಉನ್ನತ ಮತ್ತು ಅವನತ ಅಭಿಧಮನಿಗಳೂ ಎಡ ಹೃತ್ಕರ್ಣಕ್ಕೆ ಪಲ್ಮನರಿ ಅಭಿಧಮನಿಯೂ ಬಂದು ಸೇರುತ್ತವೆ. ಪಲ್ಮನರಿ ಅಪಧಮನಿ ಬಲಹೃತ್ಕುಕ್ಷಿಯಿಂದಲೂ ಅಯೋರ್ಟಿಕ್ ಮಹಾಪಧಮನಿ ಎಡಹೃತ್ಕುಕ್ಷಿಯಿಂದಲೂ ಹೊರಡುತ್ತವೆ. ಮೂರು ಅರ್ಧಚಂದ್ರಾಕೃತಿಯ ಕವಾಟಗಳು ಪಲ್ಮನರಿ ಅಪಧಮನಿ ಮತ್ತು ಬಲಹೃತ್ಕುಕ್ಷಿಯ ಮಧ್ಯೆಯೂ ಮತ್ತು ಎಡಹೃತ್ಕುಕ್ಷಿ ಮತ್ತು ಮಹಾಪಧಮನಿಯ ಮಧ್ಯೆಯೂ ಇವೆ. ಪಕ್ಷಿಗಳಲ್ಲಿ ಬಲ ಅಯೋರ್ಟಿಕ್ ಅಪಧಮನಿ (ಸಿಸ್ಟಮಿಕ್) ಮಾತ್ರ ಇದೆ. ಎಡ ಸಿಸ್ಟಮಿಕ್ ಅಪಧಮನಿ ಇಲ್ಲ. ಪಕ್ಷಿಗಳ ಗುಂಡಿಗೆ ಬಹು ವಿಶಿಷ್ಟವಾದರೂ ಇದು ಸರೀಸೃಪ ಮಾದರಿಯ ಗುಂಡಿಗೆಯಿಂದ ಮಾರ್ಪಾಡಾದುದೆಂದು ಹೇಳಲಾಗಿದೆ.

ಸಸ್ತನಿಗಳ ಗುಂಡಿಗೆಯಲ್ಲಿಯೂ ನಾಲ್ಕು ಪ್ರಮುಖ ಕೋಣೆಗಳಿವೆ. ಇದು ಪಕ್ಷಿಗಳ ಗುಂಡಿಗೆಯಷ್ಟೇ ಸಮರ್ಥವಾದುದು. ಹೃತ್ಕರ್ಣದ ಅಂತರಪಟಲ ಮತ್ತು ಹೃತ್ಕುಕ್ಷಿಯ ಅಂತರಪಟಲಗಳು ಹೃತ್ಕರ್ಣ ಮತ್ತು ಹೃತ್ಕುಕ್ಷಿಗಳನ್ನು ಎರಡೆರಡು ಭಾಗಗಳನ್ನಾಗಿ ಮಾಡಿವೆ. ಆದ್ದರಿಂದ ಮಲಿನ ರಕ್ತ ಶುದ್ಧ ರಕ್ತದೊಡನೆ ಮಿಶ್ರವಾಗುವುದಿಲ್ಲ. ಸೈನಸ್ ವಿನೋಸಸ್ ಕೋಣೆ ಶೇಷ ಮಾತ್ರವೂ ಇಲ್ಲದೆ ಬಲ ಹೃತ್ಕರ್ಣದೊಡನೆ ಸೇರಿಹೋಗಿದೆ. ಕೋನಸ್ ಕೂಡ ಇಲ್ಲ. ಇದು ಪಲ್ಮನರಿ ಅಯೋರ್ಟ ಮತ್ತು ಸಿಸ್ಟಮಿಕ್ ಮಹಾಪಧಮನಿಗಳಾಗಿ ಪರಿವರ್ತಿತವಾಗಿದೆ. ಬಲಹೃತ್ಕರ್ಣ ಭಿತ್ತಿಯಲ್ಲಿ ಪದವರ್ಧಕ (ಪೇಸ್‌ಮೇಕರ್) ಅಥವಾ ಸೈನು ಆರಿಕ್ಯುಲಾರ್ ಗೆಣ್ಣಿನ ರಚನೆ ಇದೆ. ಇದು ಸೈನಸ್ ವಿನೋಸಸ್‌ನ ಅಂಗಾಂಶ. ಹೃತ್ಕರ್ಣಗಳು ಸುಲಭವಾಗಿ ಹಿಗ್ಗಬಲ್ಲವು. ರಕ್ತ ನುಗ್ಗಿದಾಗ ಅದರ ಒತ್ತಡವನ್ನು ಸಮರ್ಪಕವಾಗಿ ಹತೋಟಿಯಲ್ಲಿಟ್ಟಿಕೊಳ್ಳುತ್ತವೆ. ಹೃತ್ಕರ್ಣಗಳು ಹೃತ್ಕುಕ್ಷಿಗೆ ತೆರೆಯುವ ಬಳಿ ಜೇಬಿನ ರೀತಿಯ ಕವಾಟಗಳಿವೆ. ಎಡಹೃತ್ಕರ್ಣ ಮತ್ತು ಹೃತ್ಕುಕ್ಷಿಗಳ ನಡುವಣ ದ್ವಾರವನ್ನು ಎರಡು ಪದರಗಳ ಕವಾಟ ರಕ್ಷಿಸುತ್ತದೆ. ಇದೇ ಬೈಕಸ್ಪಿಡ್ ಕವಾಟ (ಮಿಟ್ರಲ್ ಕವಾಟ ಅಥವಾ ದ್ವೈವಲನ). ಬಲ ಹೃತ್ಕರ್ಣ ಮತ್ತು ಬಲ ಹೃತ್ಕುಕ್ಷಿಗಳ ನಡುವಣ ದ್ವಾರದಲ್ಲಿ ಮೂರು ಪದರಗಳ ಕವಾಟವಿದೆ. ಇದನ್ನು ಟ್ರೈಕಸ್ಪಿಡ್ ಕವಾಟವೆಂದು (ತ್ರೈವಲನ) ಕರೆಯುತ್ತಾರೆ. ಈ ಕವಾಟದ ಅಂಚುಗಳು ಹೃತ್ಕುಕ್ಷಿಯ ಏಣುಗಳಿಗೆ ಅಸ್ಥಿರಜ್ಜಿನ ಹುರಿಗಳಿಂದ ಅಂಟಿಕೊಂಡಿವೆ. ಇವೇ ಕಾರ್ಡ ಟೆಂಡಿನೆ ಕವಾಟಗಳು. ಇವು ರಕ್ತ ಹೃತ್ಕರ್ಣದಿಂದ ಹೃತ್ಕುಕ್ಷಿಗೆ ಮಾತ್ರ ಹರಿಯಲು ಬಿಡುತ್ತವೆ. ವಾಪಸು ಹೋಗಲು ಬಿಡುವುದಿಲ್ಲ. ಎಡ ಹೃತ್ಕುಕ್ಷಿಯ ಮುಂಭಾಗದಿಂದ ಸಿಸ್ಟಮಿಕ್ ಅಯೋರ್ಟ ಹೊರಡುತ್ತದೆ. ಪಲ್ಮನರಿ ಅಪಧಮನಿ ಬಲ ಹೃತ್ಕುಕ್ಷಿಯಿಂದ ಹೊರಟು ಎರಡು ಕವಲಾಗಿ ಒಂದೊಂದು ಕವಲೂ ಘುಪ್ಪುಸಕ್ಕೆ ಹೋಗುತ್ತದೆ. ಈ ಅಪಧಮನಿಗಳ ಬುಡಗಳಲ್ಲಿ ಮೂರು ಕವಾಟಗಳಿವೆ. ಇವು ರಕ್ತ ವಾಪಸು ಬರದ ಹಾಗೆ ತಡೆಯುತ್ತವೆ. ಸಸ್ತನಿಗಳಲ್ಲಿ ಎಡ ಸಿಸ್ಟಮಿಕ್ ಮಹಾಪಧಮನಿ ಮಾತ್ರ ಉಂಟು. (ಎನ್.ಎ.ಎ.)

**ಗುಂಡಿಗೆಯ ರೋಗಗಳು :** ಇಂದು ನಾವು ಕಾಣುತ್ತಿರುವ ಗುಂಡಿಗೆಯ ಅನೇಕ ರೋಗಗಳು ಪ್ರಾಚೀನ ಕಾಲದಿಂದಲೂ ಇದ್ದವೆಂಬ ಅಂಶ ಈಜಿಪ್ಟಿನಲ್ಲಿ ಸುಗಂಧದ್ರವ್ಯಗಳಿಂದ ಕಾಯ್ದಿರಿಸಿದ ಶವಗಳ ಪರಿಶೀಲನೆಯಿಂದ ದೃಢಪಡುತ್ತದೆ. ಗುಂಡಿಗೆಯ ಬಗ್ಗೆ ಮತ್ತು ಅದರ ಕಾರ್ಯವೈಪರೀತ್ಯಗಳ ಬಗ್ಗೆ ಗ್ರೀಕರಲ್ಲಿ ತಿಳಿವಳಿಕೆಯಿದ್ದರೂ ಅನಂತರದ ಅನೇಕ ಶತಮಾನಗಳಲ್ಲಿ ಈ ವಿಷಯದಲ್ಲಿ ಅಜ್ಞಾನವೇ ಇದ್ದಿತು. ಭಾರತದಲ್ಲಿ ಎರಡು ಸಹಸ್ರ ವರ್ಷಗಳಷ್ಟು ಪ್ರಾಚೀನವಾದ ಅಥರ್ವವೇದದಲ್ಲಿನ ಶ್ಲೋಕಗಳಲ್ಲಿ ಗುಂಡಿಗೆಯ ರೋಗಗಳು ಮತ್ತು ಅವುಗಳ ನಿವಾರಣೆಗೆ ಅನುಪಾನ ಕ್ರಮದ ಬಗ್ಗೆ ಉಲ್ಲೇಖ ಉಂಟು. 1628ರಲ್ಲಿ ವಿಲಿಯಂ ಹಾರ್ವೆ ರಕ್ತಪರಿಚಲನ ಕ್ರಮವನ್ನು ಪ್ರಾಣಿಗಳಲ್ಲಿ ಖಚಿತವಾಗಿ ಪ್ರಕಟಪಡಿಸಿದ ಮೇಲೆಯೇ ಗುಂಡಿಗೆಯ ಬಗ್ಗೆ ಯೋಗ್ಯ ತಿಳಿವಳಿಕೆ ಮೂಡಿ ಬಂದು ಹೊಸ ಶೋಧಗಳಿಗೆ ಹೆಚ್ಚಿನ ಚಾಲನೆ ದೊರೆತದ್ದು. 19ನೆಯ ಶತಮಾನದಲ್ಲಿ ಬಳಕೆಗೆ ಬಂದ ಎದೆದರ್ಶಕ, ರಕ್ತ ಒತ್ತಡಮಾಪಕ ಮತ್ತು ಎಕ್ಸ್‌ಕಿರಣ ಚಿತ್ರ ಮತ್ತು 20ನೆಯ ಶತಮಾನದಲ್ಲಿ ಬಳಕೆಗೆ ತರಲಾದ ಗುಂಡಿಗೆಯ ವಿದ್ಯುತ್ ಚಿತ್ರಕ, ಗುಂಡಿಗೆ ಪ್ರತಿಧ್ವನಿ ಚಿತ್ರಕ, ಗುಂಡಿಗೆಯೊಳಗೆ ನಳಿಕೆ ತೂರಿಕೆ, ಹಾಗು ರಕ್ತನಾಳ ಚಿತ್ರಣ ಗುಂಡಿಗೆ ಘುಪ್ಪುಸ ಯಂತ್ರ ಮತ್ತು ಹೃದಯದ ಮೇಲೆ ಶಸ್ತ್ರಚಿಕಿತ್ಸಾ ವಿಧಾನಗಳು ಗುಂಡಿಗೆಯ ರೋಗಗಳು ಬಗ್ಗೆ ಹೆಚ್ಚು ಅರಿವನ್ನು ಉಂಟು ಮಾಡಿವೆ. ಗುಂಡಿಗೆ ಮತ್ತು ಅದರೊಡನೆ ನೇರ ಸಂಬಂಧವಿರುವ ರಕ್ತನಾಳಗಳ ಕಾರ್ಯದಲ್ಲಿ ಬದಲಾವಣೆಯಾದಾಗ ಮನುಷ್ಯ ಗುಂಡಿಗೆಯ ರೋಗದಿಂದ ಪೀಡಿತನಾಗುತ್ತಾನೆ. ಇಂದಿನ ನಾಗರಿಕ ಜಗತ್ತಿನಲ್ಲಿ ಗುಂಡಿಗೆಯ ರೋಗದಿಂದ ನರಳುವವರ ಸಂಖ್ಯೆ ಹೆಚ್ಚುತ್ತಿದ್ದು, ಅದರಿಂದಾಗಿ ಸಾವನ್ನಪ್ಪುವವರ ಸಂಖ್ಯೆ ಹೆಚ್ಚಿದೆ. ಗುಂಡಿಗೆಯ ರೋಗಗಳಲ್ಲಿ ಬಹುಪಾಲು ರೋಗಗಳು ನಮ್ಮ ದೇಹದ ಬೆಳವಣಿಗೆಯ ಕಾಲದಲ್ಲಿ ಲಭ್ಯವಾಗುತ್ತವೆ. ಕೆಲವು ಹುಟ್ಟಿನೊಡನೆಯೇ ಬರಬಹುದು. ಅದರಿಂದಾಗಿ ಗುಂಡಿಗೆಯ ರೋಗಗಳನ್ನು ಹುಟ್ಟು (ಆಜನ್ಮ) ಮತ್ತು ಅರ್ಜಿತ ಗುಂಡಿಗೆಯ ರೋಗಗಳೆಂದು ವಿಂಗಡಿಸಲಾಗಿದೆ. ಗುಂಡಿಗೆಯ ಅರ್ಜಿತ ರೋಗಗಳಲ್ಲಿ ಕೀಲುವಾತ ಸಂಬಂಧವಾದ ಹೃದಯರೋಗ, ಜೀವಾಣುಕೃತ ಹೃದಯರೋಗ, ಏರಿದ ರಕ್ತ ಒತ್ತಡ, ಗುಂಡಿಗೆ ನಾಳರೋಗ, ಘುಪ್ಪುಸ ಗುಂಡಿಗೆರೋಗ ಮತ್ತು ಇತರ ಕಾರಣಗಳಿಂದ ಬರುವ ಗುಂಡಿಗೆರೋಗಗಳಿವೆ.

ಗುಂಡಿಗೆಯ ಚಟುವಟಿಕೆಯಲ್ಲಿ ವ್ಯತ್ಯಾಸ ಉಂಟಾದಾಗ ಮನುಷ್ಯ ಗುಂಡಿಗೆ ರೋಗವನ್ನು ಪಡೆಯುತ್ತಾನೆ. ರೋಗ ತನ್ನ ಇರುವಿಕೆಯನ್ನು ವಿಶಿಷ್ಟ ಲಕ್ಷಣಗಳ ಮೂಲಕ ಪ್ರಕಟಪಡಿಸುತ್ತದೆ. ಆದರೂ ಕೆಲವು ಬಾರಿ ಅದು ಯಾವುದೇ ಲಕ್ಷಣಗಳನ್ನು ತೋರ್ಪಡಿಸದೆ ಇರಬಹುದು. ಪ್ರಾಸಂಗಿಕವಾಗಿ ನಡೆಸುವ ವೈದ್ಯಕೀಯ ಪರೀಕ್ಷೆಯ ಕಾಲದಲ್ಲಿ ಗುಂಡಿಗೆಯಲ್ಲಿ ಮರ್ಮರ ಶಬ್ದ ಇಲ್ಲವೆ ದೊಡ್ಡದಾದ ಗುಂಡಿಗೆ ಇರುವುದನ್ನು ಅರಿಯಬಹುದು. ಉಬ್ಬಸ, ಎದೆನೋವು, ಎದೆ ಬಡಿದುಕೊಳ್ಳುವಿಕೆ, ಆಯಾಸ, ಕಾಲುಬಾವು ಕೆಮ್ಮು – ಈ ಪ್ರಮುಖ ಲಕ್ಷಣಗಳ ಮೂಲಕ ಗುಂಡಿಗೆರೋಗ ಪ್ರಕಟವಾಗುತ್ತದೆ. ಗುಂಡಿಗೆಯ ರೋಗದ ಇರುವಿಕೆಯನ್ನು ರೋಗದ ಇತಿಹಾಸ, ದೈಹಿಕ ಪರೀಕ್ಷೆ ಮತ್ತು ಹೃದಯ ಪರೀಕ್ಷೆಯ ಮೂಲಕ ತಿಳಿದುಕೊಳ್ಳಬಹುದು. ರಕ್ತ ಒತ್ತಡಮಾಪನ, ಕಣ್ಣಾಲದರ್ಶನ, ಎಕ್ಸ್ ಕಿರಣ ಪರೀಕ್ಷೆ ಮತ್ತು ಗುಂಡಿಗೆಯ ವಿದ್ಯುಚ್ಚಿತ್ರಣ ಗುಂಡಿಗೆ ಪ್ರತಿಧ್ವನಿ ಚಿತ್ರಣ ಇವು ರೋಗದ ಇರುವಿಕೆಯನ್ನು ದೃಢಪಡಿಸುತ್ತವೆ. ಕೆಲವು ವಿಶಿಷ್ಟ ರೋಗಗಳಲ್ಲಿ ಗುಂಡಿಗೆಯ ವಿವಿಧ ಭಾಗಗಳಲ್ಲಿ ನಳಿಕೆಯೊಂದನ್ನು ಸೇರಿಸಿ ಅಲ್ಲಿನ ರಕ್ತದ ಒತ್ತಡ ಮತ್ತು ಆಕ್ಸಿಜನ್ನಿನ ಪ್ರಮಾಣವನ್ನು ಮತ್ತು ರಕ್ತನಾಳ ಮತ್ತು ಹೃದಯದ ಚಿತ್ರಣವನ್ನು ತಿಳಿದುಕೊಳ್ಳಬಹುದು.

**ಗುಂಡಿಗೆಯ ಆಜನ್ಮ ರೋಗಗಳು :** ತಾಯಗರ್ಭದಲ್ಲಿ ಬೆಳೆಯುತ್ತಿರುವ ಮಗುವಿನ ಗುಂಡಿಗೆಯ ಅಂಗರಚನೆಯಲ್ಲಿ ತೋರಿಬರುವ ವಿಕೃತಿಯಿಂದಾಗಿ ಗುಂಡಿಗೆಯ ಆಜನ್ಮ ರೋಗಗಳು ತಲೆದೋರುತ್ತವೆ. ಗುಂಡಿಗೆಯನ್ನು ಎಡ ಬಲ ಎಂದು ವಿಂಗಡಿಸುವ ಮಧ್ಯದ ತೆರೆಯ ಬೆಳವಣಿಗೆ ಸಮರ್ಪಕವಾಗಿ ಆಗದೆ ರಂಧ್ರವೇರ್ಪಟ್ಟು ಎರಡು ಹೃತ್ಕರ್ಣ ಮತ್ತು ಹೃತ್ಕುಕ್ಷಿಗಳ ಮಧ್ಯೆ ಸಂಪರ್ಕವನ್ನು ಕಲ್ಪಿಸಬಹುದು. ಗುಂಡಿಗೆಯಿಂದ ಹೊರಹೊಮ್ಮುವ ಮಹಾಪಧಮನಿ ಮತ್ತು ಘುಪ್ಪುಸ ಅಪಧಮನಿಗಳ ಮಧ್ಯೆ ರಂಧ್ರ ಉಂಟಾಗಿ ಆಕ್ಸಿಜನ್‌ಯುಕ್ತ ಮತ್ತು ಆಕ್ಸಿಜನ್‌ವಿರಳರಕ್ತಗಳ ಸೇರ್ಪಡೆಯಾಗಬಹುದು. ಮಹಾಪಧಮನಿ ಮತ್ತು ಪುಪ್ಪುಸ ಅಪಧಮನಿಗಳೊಡನೆ ಸಂಪರ್ಕವನ್ನು ಉಂಟು ಮಾಡುವ ನಾಳ ಶಿಶು ಜನ್ಮತಳೆದ ಕೆಲದಿವಸಗಳಲ್ಲಿ ಮುಚ್ಚಲ್ಪಡದಿದ್ದರೆ ಇಲ್ಲವೆ ಮಹಾಪಧಮನಿ ತನ್ನ ಮಾರ್ಗ ಮಧ್ಯದಲ್ಲಿ ಕಿರಿದಾಗಿದ್ದರೆ ಗುಂಡಿಗೆಯ ರೋಗ ಉಂಟಾಗುತ್ತದೆ. ಈ ರೋಗಗಳ ತೀವ್ರತೆ ವಿವಿಧ ಮಟ್ಟಗಳದು. ಸ್ಥಳಪಲ್ಲಟಗೊಂಡು

ಬಲಗಡೆಯಿರುವ ಗುಂಡಿಗೆ ಯಾವುದೇ ಲಕ್ಷಣಗಳನ್ನು ತೋರಿಸದೇ ಇರುತ್ತದೆ. ಆದರೆ ಸ್ಥಳಪಲ್ಲಟಗೊಂಡ ಮಹಾರಕ್ತನಾಳಗಳು ಜೀವದ ಉಳಿವಿಗೇ ಮಾರಕವಾಗಿ ಪರಿಣಮಿಸುತ್ತವೆ. ಗುಂಡಿಗೆಯ ಆಜನ್ಮರೋಗಗಳು ತಮ್ಮ ಲಕ್ಷಣಗಳನ್ನು ಚಿಕ್ಕ ವಯಸ್ಸಿನಲ್ಲಿ ತೋರ್ಪಡಿಸುತ್ತವೆ. ಏದುಸಿರು, ದೈಹಿಕ ದುರ್ಬಲತೆ, ಅಸಮರ್ಪಕ ಬೆಳೆವಣಿಗೆ, ಕೆಮ್ಮು ಮತ್ತು ನೀಲಿ ಛಾಯೆಯ ಚರ್ಮ ಇವೇ ಮುಂತಾದವು ಪ್ರಮುಖ ಲಕ್ಷಣಗಳು. ಕೃತಕ ರೀತಿಯಿಂದ ಆಕ್ಸಿಜನ್ನನ್ನು ಪೂರೈಕೆ ಮಾಡುವ ಗುಂಡಿಗೆ ಫುಪ್ಫುಸ ಯಂತ್ರ ಮತ್ತು ತೆರೆದ ಹೃದಯ ಚಿಕಿತ್ಸೆಯ ಮೂಲಕ ಗುಂಡಿಗೆಯಲ್ಲಿ ತೋರಿಬರುವ ವಿಕೃತಿಗಳನ್ನು ಸರಿಪಡಿಸಬಹುದಾಗಿದೆ.

**ಕೀಲುವಾತ ಸಂಬಂಧದ ಗುಂಡಿಗೆರೋಗ :** ಆರ್ಜಿತ ಗುಂಡಿಗೆರೋಗಗಳಲ್ಲಿ ಕೀಲುವಾತ ಸಂಬಂಧದ ರೋಗ ಪ್ರಮುಖವಾದುದು. ಉಸಿರುನಾಳದ ಮೇಲ್ಭಾಗ ಅಥವಾ ಗಂಟಲಿನಲ್ಲಿ ಬೆಳೆವಣಿಗೆ ಹೊಂದುವ ಸ್ಟ್ರೆಪ್ಟೋಕಾಕಸ್ ಅಣುಜೀವಿಯ ವಿರುದ್ಧ ದೇಹದಲ್ಲಿ ತೋರಿಬರುವ ಪ್ರತಿಕ್ರಿಯೆಯ ಫಲವಾಗಿ ಜ್ವರ, ಒಗ್ಗದಿಕೆಯ ರೂಪದಲ್ಲಿ 5 ರಿಂದ 15 ವರ್ಷದ ಎಳೆಯರಲ್ಲಿ ತೋರಿಬರುವುದು. ಒಗ್ಗದಿಕೆಯ ಪ್ರಭಾವ ಗುಂಡಿಗೆಯ ವಿವಿಧ ಪದರಗಳ ಮತ್ತು ಕವಾಟಗಳ ಮೇಲೆ ಬೀರಲ್ಪಟ್ಟು ಅಲ್ಲಿ ಊತ ಉಂಟಾಗುವುದು. ಕಾಲ ಕಳೆದಂತೆ ಕವಾಟಗಳು ಬಿರುಸಾಗಿ ಅವುಗಳ ಅಂಚು ಸೇರಿಕೊಂಡು ಗುಂಡಿಗೆಯಲ್ಲಿ ರಕ್ತ ಹರಿದುಹೋಗುವ ಮಾರ್ಗವನ್ನು ಕಿರಿದುಗೊಳಿಸುತ್ತವೆ, ಇಲ್ಲವೆ ಕವಾಟಗಳು ಮುರುಟಿಕೊಂಡು ಗುಂಡಿಗೆಯ ಸಂಕುಚನ ಕಾರ್ಯ ಜರಗುವಾಗ ಅವು ಸಂಪೂರ್ಣವಾಗಿ ಮುಚ್ಚದೆ ಮುಂದೆ ಹರಿದು ಹೋಗುತ್ತಿದ್ದ ರಕ್ತ ಹಿಂದಕ್ಕೆ ಪ್ರವಹಿಸುವಂತೆ ಮಾಡುತ್ತದೆ. ಈ ಲಕ್ಷಣಗಳು ಹೃದಯದ ಎಡಭಾಗದಲ್ಲಿರುವ ದ್ವಿದಳ ಕವಾಟ ಮತ್ತು ಮಹಾಪಧಮನಿ ಅರೆಚಂದ್ರಾಕಾರ ಕವಾಟದಲ್ಲಿ ಸಾಮಾನ್ಯವಾಗಿ ತೋರಿಬರುತ್ತವೆ. ಕಿರಿದುಗೊಂಡ ಕವಾಟ ಮತ್ತು ಅವುಗಳ ಅಸಮರ್ಪಕ ಕ್ರಿಯೆಯಿಂದಾಗಿ ಗುಂಡಿಗೆಯ ಕಾರ್ಯ ಅಸಮರ್ಪಕವಾಗುವುದು. ದಿನ ಕಳೆದಂತೆ ಅದು ದೇಹದ ವಿವಿಧ ಅಂಗಭಾಗಗಳಿಗೆ ರಕ್ತವನ್ನು ಪೂರೈಸಲು ಅಸಮರ್ಥವಾಗಿ ಗುಂಡಿಗೆ ಸೋಲುವಿಕೆಯ ಲಕ್ಷಣಗಳನ್ನು ತೋರ್ಪಡಿಸುವುದು. ಹೃದಯ ಪರೀಕ್ಷೆ ಮಾಡಿ ಎದೆಯನ್ನು ಆಲಿಸಿದಾಗ ಮರ್ಮರ ಶಬ್ದಗಳು ಕೇಳಿಬರುತ್ತವೆ. ಎಳೆಯ ವಯಸ್ಸಿನಲ್ಲಿಯೇ ಈ ರೋಗದಿಂದ ಬಳಲಿ ಸಾವನ್ನಪ್ಪುವವರ ಸಂಖ್ಯೆ ಭಾರತದಲ್ಲಿ ಅಧಿಕವಾಗಿದೆ. ದಂಡಾಣು ಜೀವಿಗಳು ದೇಹದಲ್ಲಿ ಒಗ್ಗದಿಕೆಯನ್ನು ಉಂಟು ಮಾಡಿ ಗುಂಡಿಗೆಯನ್ನು ರೋಗಯುಕ್ತವಾಗಿ ಮಾಡುತ್ತವಾದ್ದರಿಂದ ಶೀತಸ್ರಾವ ಜ್ವರವನ್ನು ತೋರ್ಪಡಿಸುವ ಮಕ್ಕಳಿಗೆ ವಿಶ್ರಾಂತಿ, ಸ್ಯಾಲಿಸಿಲೇಟ್ ಎಂಬ ಔಷಧಿ, ದೀರ್ಘಾವಧಿ ಕಾಲ ಪೆನಿಸಿಲಿನ್ ಮುಂತಾದವನ್ನು ಒದಗಿಸಿ ಜೀವಾಣುಗಳ ಬೆಳೆವಣಿಗೆಯನ್ನು ತಪ್ಪಿಸಿ ದೇಹದಲ್ಲಿ ಈ ಒಗ್ಗದಿಕೆಯನ್ನು ಹಿಡಿತದಲ್ಲಿ ತರಬಹುದು. ಗುಂಡಿಗೆಯ ರೋಗವಿರುವ ವ್ಯಕ್ತಿ ಗುಂಡಿಗೆಯ ಸೋಲುವಿಕೆ, ರೋಗಾಣುಗಳ ಬೆಳೆವಣಿಗೆಯಿಂದ ಹೃದಯದ ಒಳಪೊರೆಯುರಿಯೂತ, ರಕ್ತಕರಣೆ ತುಣುಕುಗಳು ಸಡಿಲಗೊಂಡು ದೂರಪ್ರದೇಶಗಳಿಗೆ ಹೋಗಿ ರಕ್ತಪರಿಚಲನೆಗೆ ಅಡ್ಡಿ ಇವುಗಳಿಂದ ಮಡಿಯುವ ಸಂಭಾವ್ಯತೆ ಅಧಿಕ. ಈ ತೊಡಕುಗಳು ಗೋಚರಿಸಿದಾಗ ರೋಗಿಯನ್ನು ಚಿಕಿತ್ಸೆಗೆ ಒಳಪಡಿಸಿ ರೋಗವನ್ನು ಹಿಡಿತದಲ್ಲಿ ತಂದು ಕಿರಿದಾದ ಕವಾಟವನ್ನು ಶಸ್ತ್ರಚಿಕಿತ್ಸೆಯಿಂದ ವಿಶಾಲಗೊಳಿಸಬೇಕು. ಇಲ್ಲವೆ ಅಸಮರ್ಥ ಕವಾಟಗಳ ಬದಲು ಕೃತಕ ಕವಾಟಗಳನ್ನು ಅಳವಡಿಸಬೇಕು.

**ಏರಿದ ರಕ್ತದೊತ್ತಡ :** ನಾಗರಿಕ ಜಗತ್ತಿನ ಕಷ್ಟತರವಾದ ಜೀವನ ಸಾಗಿಸುತ್ತಿರುವ ಅನೇಕರು ಏರಿದ ರಕ್ತದೊತ್ತಡದಿಂದ ಬಳಲುತ್ತಿರುವರು. ಈ ವ್ಯಾಧಿಯಿಂದ ಅನೇಕ ಮಧ್ಯವಯಸ್ಕರು ಸಾವಿಗೀಡಾಗುತ್ತಿದ್ದಾರೆ. ರಕ್ತದೊತ್ತಡ ಸಕಾರಣವಾಗಿ ಇಲ್ಲವೆ ಯಾವ ಕಾರಣವೂ ಗೋಚರಕ್ಕೆ ಬರದೆ ಹೆಚ್ಚಬಹುದು. ಮೂತ್ರಜನಕಾಂಗದ ಊತ, ಅದರ ರಕ್ತಪೂರೈಕೆಗೆ ಅಡ್ಡಿ, ರೋಗಾಣುಗಳ ಸೋಂಕಿನಿಂದುಂಟಾದ ಮೂತ್ರಜನಕಾಂಗದ ರೋಗಗಳು, ಕಿರಿದಾದ ಮಹಾಪಧಮನಿ, ಸುಪ್ರರೀನಲ್ ಗ್ರಂಥಿಯ ವೈಪರೀತ್ಯ, ಗುರಾಣಿಕಗ್ರಂಥಿಯ ಕಾರ್ಯ ವೈಷಮ್ಯ ಮತ್ತು ಗರ್ಭಿಣಿಯರಲ್ಲಿ ಕೆಲವು ವೇಳೆ ಕಾಣಬರುವ ನಂಜು ಇವೇ ಮುಂತಾದವು ರಕ್ತದೊತ್ತಡವನ್ನು ಹೆಚ್ಚಿಸಬಲ್ಲವು. ಈ ತೆರನಾದ ಕಾರಣಗಳು ಕೆಲವು ಜನರಲ್ಲಿ ಮಾತ್ರ ಕಾಣಸಿಗುತ್ತವೆ. ಶೇ. 90 ರಷ್ಟು ರೋಗಿಗಳಲ್ಲಿ ತಿಳಿದುಕೊಳ್ಳಬಹುದಾದ ಕಾರಣ ದೊರೆಯುವುದೇ ಇಲ್ಲ. ಅವರು ಸಾಮಾನ್ಯವಾಗಿ ಮಧ್ಯ ವಯಸ್ಕರು. ಏರಿದ ರಕ್ತದೊತ್ತಡದ ಇರುವಿಕೆ ಅನೇಕರಲ್ಲಿ ಆಕಸ್ಮಿಕವಾಗಿ ಗುರುತಿಸಲ್ಪಡುವುದು. ಬಹುಮಂದಿಗೆ ಇದು ಇದ್ದರೂ ಪ್ರಕಟಿತವಾಗಿ ಯಾವುದೇ ಲಕ್ಷಣಗಳು ವೇದ್ಯವಾಗದಿರಬಹುದು. ಅಂಥವರಲ್ಲಿ ವೈದ್ಯ ಒತ್ತಡ ಹೆಚ್ಚಿರುವುದನ್ನು ತಿಳಿಸಿ ಅದರ ಬಗ್ಗೆ ಹೆದರಿಕೆಯನ್ನು ಉಂಟುಮಾಡಿ ಒತ್ತಡದ ಇನ್ನೂ ಹೆಚ್ಚು ಏರಿಕೆಗೆ ಕಾರಣನಾಗಲೂಬಹುದು. ಇನ್ನೂ ಕೆಲವರು ತಲೆನೋವು, ತಲೆಸುತ್ತು, ಉಬ್ಬಸದಂಥ ಲಕ್ಷಣಗಳನ್ನು ತೋರ್ಪಡಿಸುತ್ತಾರೆ. ಏರಿದ ರಕ್ತದೊತ್ತಡ ತನ್ನ ಪ್ರಭಾವವನ್ನು ಮೂತ್ರಜನಕಾಂಗ ಮತ್ತು ಗುಂಡಿಗೆಯ ಎಡಭಾಗದ ಮೇಲೆ ಬೀರಿ ಅವುಗಳ ಚಟುವಟಿಕೆಗಳಲ್ಲಿ ವ್ಯತ್ಯಾಸವನ್ನು ಉಂಟುಮಾಡುತ್ತದೆ. ಮಿದುಳಿನಲ್ಲಿ ರಕ್ತಸ್ರಾವವನ್ನು ಉಂಟುಮಾಡಿ ಸಾವಿಗೆ ಕಾರಣವಾಗಲೂಬಹುದು. ಏರಿದ ರಕ್ತದೊತ್ತಡವನ್ನು ಸಾಮಾನ್ಯ, ಮಧ್ಯಮ ಮತ್ತು ಪ್ರಬಲವೆಂದು ವಿಭಾಗಿಸಲಾಗಿದೆ. ಸಕಾರಣವಾಗಿ ರಕ್ತದೊತ್ತಡ ಏರಿದ್ದಲ್ಲಿ ಅದು ಮೂಲಭೂತ ಕಾರಣದ ಚಿಕಿತ್ಸೆಗೆ ಮಣಿಯುತ್ತದೆ. ಅನೇಕರಲ್ಲಿ ಏರಿಕೆಯ ಕಾರಣ ತಿಳಿಯದ್ದರಿಂದ ಅದನ್ನು ಇಳಿಸುವ ಔಷಧಿಗಳ ಉಪಯೋಗದಿಂದ (ಮೂತ್ರವರ್ಧಕಗಳು ಬೀಟಾತಡೆಗಳು, ಕಾಲ್ಸಿಯಂ ವಿರೋಧಿವಸ್ತುಗಳು ಆಂಜಿಯೊಟೆನ್ಸಿನ್ ಬದಲಿಸುವ ಕಿಣ್ವ ನಿರೋಧಕಗಳು) ಅದನ್ನು ಕೆಳಕ್ಕಿಳಿಸಿ, ರಕ್ತನಾಳಗಳ ಮೇಲೆ ಉಂಟಾಗುವ ಹಾನಿಯನ್ನು ಕಡಿಮೆ ಮಾಡಬೇಕು.

ಗುಂಡಿಗೆ ಅಪಧಮನಿ (ಕರೋನರಿ ಆರ್ಟರಿ) ಗಡಸಾಗುವುದರಿಂದ ತಲೆದೋರುವ ರೋಗಗಳು : ಗಡಸಾಗುವಿಕೆಯ ಪರಿಣಾಮವಾಗಿ ಗುಂಡಿಗೆಗೆ ರಕ್ತ ಪೂರೈಕೆ ಮಾಡುವ ಗುಂಡಿಗೆ ಅಪಧಮನಿಗಳ ಗಾತ್ರ ಕಿರಿದಾಗಿ ಗುಂಡಿಗೆಗೆ ರಕ್ತ ಪೂರೈಕೆ ಸ್ವಲ್ಪ ಮಟ್ಟಿಗೆ ಇಲ್ಲವೆ ಸಂಪೂರ್ಣವಾಗಿ ತಾತ್ಕಾಲಿಕವಾಗಿ ಅಥವಾ ಬಹುಕಾಲಿಕವಾಗಿ ನಿಲುಗಡೆಗೆ ಬರಬಹುದು. ಇದು ಅತಿ ಅಪಾಯಕರ ಪರಿಸ್ಥಿತಿ. ಗುಂಡಿಗೆ ಅಪಧಮನಿಗಳ ಒಳಪದರಿನಲ್ಲಿ ಶೇಖರವಾಗುವ ಸ್ನಿಗ್ಧಪದಾರ್ಥಗಳ ಫಲವಾಗಿ ಅವುಗಳ ಗಾತ್ರ ಅಲ್ಲಲ್ಲಿ ಕಿರಿದಾಗುವುದು. ಒಳಪದರು ಮೃದುತ್ವವನ್ನು ಕಳೆದುಕೊಂಡು ಒರಟಾಗುವುದು. ಇದರಿಂದಾಗಿ ರಕ್ತಪರಿಚಲನೆ ಸ್ಥಗಿತಗೊಳ್ಳುವ ಸನ್ನಿವೇಶಗಳು ವಿಪುಲವಾಗಿವೆ. ವಯಸ್ಸಾದಂತೆ ಇಂಥ ಬದಲಾವಣೆ ದೇಹದ ಎಲ್ಲ ಭಾಗದ ರಕ್ತನಾಳಗಳಲ್ಲೂ ನಡೆಯುತ್ತಲೇ ಇರುತ್ತದೆ. ಗುಂಡಿಗೆ ಅಪಧಮನಿಯ ರಕ್ತ ಪರಿಚಲನೆ ತಾತ್ಕಾಲಿಕವಾಗಿ ತೀರ ಕಡಿಮೆಯಾದಾಗ ಅದು ಗುಂಡಿಗೆ ನೋವು ಅಥವಾ ಗುಂಡಿಗೆ ಅಪಧಮನಿಯ ತೀವ್ರ ಅರಕ್ತತೆಯ ರೂಪದಲ್ಲಿ ತೋರಿಬರುತ್ತದೆ. ಇಲ್ಲವೆ ಅಲ್ಲಿ ರಕ್ತಕರಣೆಗೊಂಡು ಶಾಶ್ವತವಾಗಿ ರಕ್ತಪರಿಚಲನೆಯ ನಿಲುಗಡೆ ಉಂಟಾಗಿ ಹೃದಯಾಘಾತದ ಲಕ್ಷಣಗಳನ್ನು ತೋರ್ಪಡಿಸುತ್ತದೆ. ದೈಹಿಕ ಶ್ರಮ ಹೆಚ್ಚಿದಾಗ ಗುಂಡಿಗೆನೋವು ಎದೆಯ ಮಧ್ಯಭಾಗದಲ್ಲಿ ಪ್ರಕಟಗೊಳ್ಳುತ್ತದೆ. ರಕ್ತಪೂರೈಕೆಯ ಕೊರತೆಯಿಂದಾಗಿ ಗುಂಡಿಗೆಯ ಸ್ನಾಯುವಿಗೆ ಬೇಕಾದಷ್ಟು ಆಕ್ಸಿಜನ್ ದೊರೆಯುವುದಿಲ್ಲವಾದ್ದರಿಂದ ಈ ಕ್ಷಣಿಕನೋವು ತಲೆದೋರುವುದು. ವಿಶ್ರಾಂತಿಯ ಬಳಿಕ ಅದು ಮಾಯವಾಗುವುದು. ನೈಟ್ರೋಗ್ಲಿಸರೀನ್ ಮಾತ್ರೆಯ ಸೇವನೆಯಿಂದ ನೋವು ಕೂಡಲೇ ಶಮನವಾಗುತ್ತದೆ. ರೋಗ ಬಲಿತಂತೆ ನೋವು ಅನುಭವವಾಗುವ ಅವಧಿ ಹೆಚ್ಚುತ್ತದೆ. ಮೊದಮೊದಲು ಶ್ರಮವಾದಾಗ ಬರುತ್ತಿದ್ದ ನೋವು ಈಗ ವಿಶ್ರಾಂತಿಸುತ್ತಿರುವಾಗಲೂ ಬರುತ್ತದೆ. ಅದು ಗುಂಡಿಗೆ ಅಪಧಮನಿಯ ತೀವ್ರ ಅರಕ್ತತೆಯ ಲಕ್ಷಣವಾಗಿದ್ದು ಮುಂದೆ ಬರಬಹುದಾದ ಹೃದಯಾಘಾತಕ್ಕೆ ನಾಂದಿಯಾಗಿ ಪರಿಣಮಿಸುವುದು. ಆಗ್ಗೆ ಕಟ್ಟುನಿಟ್ಟಿನ ವಿಶ್ರಾಂತಿ ಮತ್ತು ದೀರ್ಘಾವಧಿ ಕಾಲ ಕಿರುಫಲಕ ಅಂಟಿಕೆ ಪ್ರತಿರೋಧಕ ಕರಣೆರೋಧಕ ಔಷಧಿಗಳ ಸೇವನೆಯನ್ನು ಮಾಡುವುದರಿಂದ ಹೃದಯಾಘಾತವನ್ನು ತಡೆಗಟ್ಟುವುದು ಸಾಧ್ಯ. ಹೃದಯಾಘಾತದಲ್ಲಿ ಗುಂಡಿಗೆಯ ಒಂದು ಭಾಗಕ್ಕೆ ರಕ್ತ ಪರಿಚಲನೆಯಲ್ಲಿ ಸಂಪೂರ್ಣ ತಡೆಯುಂಟಾಗಿ ಅದು ನಿರ್ಜೀವವಾಗುವುದು. ನೋವು ರೋಗದ ಪ್ರಮುಖ ಲಕ್ಷಣ. ಅದು ಎದೆಯ ಮಧ್ಯ ತೋರಿ ಬಂದು ದೀರ್ಘಕಾಲ ಶಮನ ಹೊಂದದೆ ಇರುವುದು. ಆವೇಳೆ ದೇಹ ಬೆವರಿ ಬಿಳಿಚಿಕೊಳ್ಳುತ್ತದೆ. ನೋವಿನ ಕರಾಳ ಹಿಡಿತದೊಡನೆ ರಕ್ತಪರಿಚಲನೆಯ ಕುಸಿಯುವಿಕೆ ಅಥವಾ ಗುಂಡಿಗೆಯ ಸೋಲುವಿಕೆ ಲಕ್ಷಣಗಳು ಪ್ರಕಟವಾಗುತ್ತವೆ. ಈ ರೋಗದ ಇರುವಿಕೆಯನ್ನು ಗುಂಡಿಗೆಯ ವಿದ್ಯುತ್ ಹೃದಯ ಚಿತ್ರಣ (ಎಲೆಕ್ಟ್ರೊಕಾರ್ಡಿಯೋಗ್ರಾಂ – ಇಸಿಜಿ) ಕ್ರಿಯಟಿನ್ – ಕಿನೇಸ್–ಎಂಬಿ ಎಂಬ ಕಿಣ್ವ ಮತ್ತು ಟ್ರೊಪೊನಿನ್ ಟಿ ಮತ್ತು ಐ ಎಂಬ ಹೃದಯಕ್ಕೆ ನಿರ್ದಿಷ್ಟವಾದ ಪ್ರೋಟಿನ್‌ಗಳ ಏರಿಕೆ ಇರುವುದರಿಂದ ಖಚಿತಪಡಿಸುತ್ತದೆ. ರೋಗಿ ಮರಳಿ ಚೇತರಿಸಿಕೊಳ್ಳಲು ವಿಶ್ರಾಂತಿ, ನೋವನ್ನು ಶಮನಗೊಳಿಸುವ ಔಷಧಿಗಳು (ಮಾರ್ಫಿಯಾ, ಪೆಥೆಡೀನ್) ಸೇವನೆ ಕಿರುಫಲಕಗಳು ಒಗ್ಗೂಡದಂತೆ ಆಸ್ಪಿರಿನ್ ಕೊಡಬೇಕು. ಆರಕ್ತಗೊಂಡ ಹೃದಯ ಸ್ನಾಯುವಿಗೆ ಪುನಃ ರಕ್ತಪ್ರವಾಹ ಉಂಟಾಗುವಂತೆ ರಕ್ತ ಕರಣೆಯನ್ನು ಭಗ್ನಗೊಳಿಸುವ (ಥಾಂಬೊಲೈಸಿನ್) ಮತ್ತು ರಕ್ತಕರಣೆ ರೋಧಕಗಳನ್ನು ಬೀಟಾತಡೆ ಮತ್ತು ನೈಟ್ರೇಟ್‌ಗಳನ್ನು ಕೊಡಬೇಕು. ನಂತರ ಆಂಜೀಯೋಪ್ಲಾಸ್ಟಿ ಅಥವಾ ಬದಲಿ ರಕ್ತನಾಳ ನಾಟಿಯ ಅವಶ್ಯಕತೆಯನ್ನು ನಿರ್ಧರಿಸಲಾಗುತ್ತದೆ.

ಫುಪ್ಫುಸ ಗುಂಡಿಗೆಯ ರೋಗ : ದೀರ್ಘಕಾಲ ಧೂಮಪಾನ ಮಾಡುವ ವ್ಯಕ್ತಿಯಲ್ಲಿ ಶ್ವಾಸನಾಳದಲ್ಲಿನ ಶ್ಲೇಷ್ಮಗ್ರಂಥಿಗಳ ಸಂಖ್ಯೆ ಅಪರಿಮಿತವಾಗಿ ಅಲ್ಲಿ ಹೆಚ್ಚು ಶ್ಲೇಷ್ಮ ಉತ್ಪಾದನೆಯಾಗಿ ಹೊರಬರುತ್ತದೆ. ಇದು ಕೆಮ್ಮಿನ ರೂಪದಲ್ಲಿ ಪ್ರಕಟಗೊಂಡು

ವರ್ಷ ವರ್ಷ ಬೆಳೆದು ಶ್ವಾಸನಾಳದ ಕವಲುಗಳನ್ನು ಕಿರಿದುಗೊಳಿಸಿ ಉಸಿರು ಒಳಹೋಗದಂತೆ ಮಾಡುವುವು. ಅಲ್ಲಿ ಜೀವಾಣುಗಳ ಬೆಳೆವಣಿಗೆಗೂ ಸಹಾಯಕ ವಾಗುತ್ತದೆ. ಇದರ ಫಲವಾಗಿ ಶ್ವಾಸನಾಳದ ಕವಲುಗಳು ಮತ್ತು ಅವಕ್ಕೆ ಸಂಪರ್ಕ ಪಡೆದ ರಕ್ತನಾಳಗಳಲ್ಲಿ ಅವ್ಯವಸ್ಥೆ ಉಂಟಾಗಿ ರಕ್ತ ಪರಿಚಲನೆಗೆ ತಡೆ ಉಂಟಾಗುತ್ತದೆ. ಆ ಪ್ರದೇಶದಲ್ಲಿ ರಕ್ತಪರಿಚಲನೆಯನ್ನು ಮುಂದುವರಿಸಲು ಬಲ ಹೃತ್ಕುಕ್ಷಿ ಶ್ರಮದಿಂದ ಕೆಲಸ ಮಾಡಬೇಕಾಗುವುದು. ಕ್ರಮೇಣ ಅದು, ದುರ್ಬಲಗೊಂಡು ಸೋತುಹೋಗುತ್ತದೆ. ಆ ಕಾಲದಲ್ಲಿ ಉಬ್ಬಸ, ಕಾಲುಬಾವು ಪ್ರಕಟಗೊಳ್ಳುತ್ತದೆ. ರೋಗ ಬೆಳೆವಣಿಗೆಗೊಳ್ಳದಂತೆ ತಡೆಗಟ್ಟುವಲ್ಲಿ ಧೂಮಪಾನ ನಿರೋಧವೇ ಮುಖ್ಯವಾದದ್ದು. ಚಿಕಿತ್ಸೆಯಿಂದ ಗುಂಡಿಗೆಯ ಸೋಲುವಿಕೆಯ ಲಕ್ಷಣವನ್ನು ಮತ್ತು ಜೀವಾಣುಗಳ ಬೆಳೆವಣಿಗೆಯನ್ನು ತಡೆಗಟ್ಟಬಹುದೇ ವಿನಾ ಘಾತಗೊಂಡ ಶ್ವಾಸನಾಳ ಮತ್ತು ರಕ್ತನಾಳಗಳನ್ನು ಮರಳಿ ಆರೋಗ್ಯಸ್ಥಿತಿಗೆ ತರಲು ಸಾಧ್ಯವಿಲ್ಲ.

ಇತರ ಹೃದಯ ರೋಗಗಳು : ಇವುಗಳಲ್ಲಿ ಜೀವಾಣುವಿನಿಂದ ಗುಂಡಿಗೆಯ ಒಳಪೊರೆಯ ಊತ, ಫರಂಗಿ ರೋಗ, ಗುರಾಣಿಕ ಗ್ರಂಥಿಯ ರೋಗಗಳು, ಆಹಾರಸತ್ತ್ವದ ಕೊರತೆ, ಗುಂಡಿಗೆ ಮೇಲುಪೊರೆಯ ರೋಗಗಳು, ರಕ್ತಹೀನತೆ, ಮಾನಸಿಕ ಅಸ್ಥಿರತೆ ಮತ್ತು ಬಡಿತದ ವೈಪರೀತ್ಯಗಳು ಮುಖ್ಯವಾದವು.

ಜೀವಾಣುವಿನಿಂದ ಗುಂಡಿಗೆಯ ಒಳಪೊರೆಯ ಊತ : ಕೀಲುವಾತ ಸಂಬಂಧವಾದ ಹೃದಯರೋಗ ಮತ್ತು ಆಜನ್ಮ ಹೃದಯರೋಗಗಳಿಂದಾಗಿ ಉಂಟಾಗಿರುವ ವಿಕೃತ ಕವಾಟಗಳು ಮತ್ತು ರಂಧ್ರಗಳು ಸ್ಟ್ರೆಪ್ಟೊಕಾಕಸ್ ವಿರಿಡನ್ಸ್ ಮತ್ತಿತರ ಅಣುಜೀವಿಗಳ ಬೆಳೆವಣಿಗೆಗೆ ಆಸ್ಪದ ಮಾಡಿಕೊಡುತ್ತವೆ. ಈ ರೋಗವನ್ನು ಪೆನಿಸಿಲಿನ್ ಜೀವಾಣು ನಿರೋಧಕವನ್ನು ಕೂಡಲೇ ಹೆಚ್ಚು ಮೊತ್ತದಲ್ಲಿ ದೀರ್ಘಕಾಲ ಕೊಡುವುದರಿಂದ ಹಿಡಿತದಲ್ಲಿ ತರಬಹುದು.

ಫರಂಗಿ ರೋಗ : ಫರಂಗಿ ರೋಗದ ಬೆಳೆವಣಿಗೆಯ ತೃತೀಯ ಹಂತದಲ್ಲಿ ಗುಂಡಿಗೆ ರೋಗಿಷ್ಠವಾಗಬಹುದು. ಎಡಹೃತ್ಕುಕ್ಷಿಯಿಂದ ಉಗಮಿಸುವ ಮಹಾಪಧಮನಿಯ ರೋಗಕ್ಕೆ ಬಲಿಯಾಗುವುದು. ಅಲ್ಲಿ ಉಂಟಾಗುವ ಅವ್ಯವಸ್ಥೆಯ ಫಲವಾಗಿ ಮಹಾಪಧಮನಿ ಹಿಗ್ಗಬಹುದು (ಡೈಲೇಟ್). ಹೀಗೆ ಹಿಗ್ಗಿದ ರಕ್ತನಾಳ ಒಡೆದು ರಕ್ತಸ್ರಾವವನ್ನು ಉಂಟು ಮಾಡಿ ವ್ಯಕ್ತಿಯ ಸಾವಿಗೆ ಕಾರಣವಾಗಬಹುದು. ಈ ಹಿಗ್ಗುವಿಕೆಯಿಂದ ಅರೆಚಂದ್ರಾಕಾರದ ಕವಾಟದ ದಳಗಳು ಮುರುಟಿಕೊಂಡು ಗುಂಡಿಗೆಯ ಸಂಕುಚನಕ್ರಿಯೆಯಲ್ಲಿ ಮಹಾಪಧಮನಿಯನ್ನು ಮುಚ್ಚಲು ಅಸಮರ್ಥವಾಗಿ ಒತ್ತಲ್ಪಿದ ರಕ್ತ ಮರಳಿ ಹರಿದು ಬರುವಂತೆ ಮಾಡುತ್ತವೆ. ಮಹಾಪಧಮನಿಯ ಆದಿಭಾಗದಲ್ಲಿಯೇ ಗುಂಡಿಗೆಯ ಅಪಧಮನಿಗಳು ಉದ್ಭವಗೊಳ್ಳುವ ಪ್ರದೇಶ ಉಂಟು. ರೋಗದ ಫಲವಾಗಿ ಈ ಅಪಧಮನಿಗಳ ದ್ವಾರಗಳು ಕಿರಿದುಗೊಂಡು ಮುಚ್ಚಿಹೋಗುವ ಸಂಭಾವ್ಯತೆಗಳು ವಿಪುಲವಾಗಿವೆ.

ಗುರಾಣಿಕ ಗ್ರಂಥಿಯ (ಥೈರಾಯಿಡ್ ಗ್ಲ್ಯಾಂಡ್) ರೋಗಗಳು : ಗುರಾಣಿಕ ಗ್ರಂಥಿ ಸಿದ್ಧಪಡಿಸುವ ರಸ ಥೈರಾಕ್ಸಿನ್, ಇದರ ಸ್ರಾವ ಹೆಚ್ಚಾದಾಗ ಇಲ್ಲವೆ ಕಡಿಮೆಯಾದಾಗ ಅದು ಗುಂಡಿಗೆಯ ಮೇಲೆ ಪರಿಣಾಮ ಬೀರಬಲ್ಲದು.

ಆಹಾರಸತ್ತ್ವದ ಕೊರತೆ ಮತ್ತು ರಕ್ತಹೀನತೆ : ರಕ್ತಹೀನತೆ ಉಂಟಾದಾಗ ದೇಹದಲ್ಲಿ ಆಕ್ಸಿಜನ್ನಿನ ಪೂರೈಕೆಯನ್ನು ಕಾಯ್ದುಕೊಳ್ಳುವ ಪ್ರಯತ್ನದಲ್ಲಿ ಗುಂಡಿಗೆ ಹೆಚ್ಚು ಬಾರಿ ಸಂಕುಚನಗೊಳ್ಳಬೇಕಾಗುವುದು. ಅದರಿಂದಾಗಿ ಗುಂಡಿಗೆ ಹಿಗ್ಗುವುದು. ಕಬ್ಬಿಣದ ಅಂಶವಿರುವ ರಕ್ತವರ್ಧಕ ರೋಗಕ್ಕೆ ಮದ್ದು. ಜೀವಾತು ಬಿ – 1ರ ಅಭಾವ ಉಂಟಾದಾಗ ಸಹ ದೇಹದಲ್ಲಿ ಜಲಸಂಚಯನವಾಗಿ ಗುಂಡಿಗೆ ದೊಡ್ಡದಾಗಿ ಸೋಲುವಿಕೆಯ ಲಕ್ಷಣಗಳನ್ನು ತೋರಿಸುವುದು.

ಗುಂಡಿಗೆಯ ಮೇಲುಪೊರೆ ರೋಗಗಳು : ಗುಂಡಿಗೆಯ ಸುತ್ತ ಇರುವ ಮೇಲು ಪೊರೆ ಶೀತಸ್ರಾವ, ಕ್ಷಯಜೀವಾಣು. ಕೀವು ಉತ್ಪಾದಕ ಜೀವಾಣುಗಳ ಬೆಳೆವಣಿಗೆ ಮುಂತಾದವುಗಳಿಂದ ಊತಗೊಂಡು ಅಲ್ಲಿ ಜಲಸಂಚಯನವಾಗಬಹುದು. ಹೃದಯಾಘಾತದ ಅನಂತರವೂ ಇಲ್ಲಿ ಊತ ತೋರಿಬರಬಲ್ಲದು.

ಮಾನಸಿಕ ಅಸ್ಥಿರತೆ : ಮಾನಸಿಕ ಅಸ್ಥಿರತೆಯಿಂದ ಗುಂಡಿಗೆಯ ಕಾರ್ಯ ಅಸಮರ್ಪಕವಾಗಿರುವುದರ ಬಗ್ಗೆ ಅನೇಕರಲ್ಲಿ ಆತಂಕ ಮೂಡಿಬಂದು ಅವರು ರೋಗಿಷ್ಠರಾಗುತ್ತಾರೆ. ಆದರೆ, ಪರೀಕ್ಷೆ ಮಾಡುವಾಗ ಗುಂಡಿಗೆಯ ಕಾರ್ಯದಲ್ಲಿ ಯಾವುದೇ ತೊಡಕು ಕಂಡುಬರುವುದಿಲ್ಲ.

ಬಡಿತದ ವೈಪರೀತ್ಯಗಳು : ಸಾಮಾನ್ಯವಾಗಿ ಗಡಿಯಾರದ ರೀತಿಯಲ್ಲಿ ಕ್ರಮವಾಗಿ ಗುಂಡಿಗೆ ನಿರಂತರವಾಗಿ ಬಡಿಯುತ್ತಿರುವುದು. ಯಾವುದೇ ತೆರನಾದ ಹೃದಯರೋಗದಲ್ಲಿ ಬಡಿತದ ಗತಿ ವಿಕೃತವಾಗಬಹುದು. ಕೆಲವು ಬಾರಿ ರೋಗವಿಲ್ಲದೆ ತಾತ್ಕಾಲಿಕವಾಗಿ ಬಡಿತದ ವಿಕೃತಿ ತೋರಿರಬಹುದು. ಬಡಿತದ ವೈಪರೀತ್ಯಗಳು ವಿವಿಧ ರೀತಿಯವುಗಳಾಗಿವೆ. ಆಗಾಗ್ಗೆ ಕಾಣಿಸಿಕೊಂಡು ಗುಂಡಿಗೆ ಬಡಿತ 150ರಿಂದ 200ರ ವರೆಗೆ ಏರಬಹುದು. ಇಲ್ಲವೆ ಜೀವಕ್ಕೆ ಮಾರಕವಾಗಿ 300ಕ್ಕೆ ಏರಿ ಪಟಪಟನೆ ಬಿಡುವಿಲ್ಲದೆ ಬಡಿದುಕೊಳ್ಳಬಹುದು. ಈ ವೈಪರೀತ್ಯಗಳು ದೇಹದ ರಕ್ತಪೂರೈಕೆಯಲ್ಲಿ ತೀವ್ರ ಏರಿಳಿತಗಳನ್ನು ಉಂಟುಮಾಡುತ್ತವೆ. ಹೃದಯರೋಗದಿಂದ ಹೃದಯಸ್ಪಂದನದ ಅಲೆಯ ಮಾರ್ಗದಲ್ಲಿ ತಡೆಯುಂಟಾಗಬಹುದು. ಆಗ ಹೃತ್ಕರ್ಣ ಮತ್ತು ಹೃತ್ಕುಕ್ಷಿಯ ಆಕುಂಚನದಲ್ಲಿ ಏರುಪೇರಾಗುತ್ತದೆ. ಮಿದುಳಿನ ರಕ್ತಪೂರೈಕೆಗೆ ಕ್ಷಣಿಕವಾಗಿ ತಡೆ ಉಂಟಾಗಬಹುದು.

ಗುಂಡಿಗೆಯ ಸೋಲುವಿಕೆ : ಗುಂಡಿಗೆ ತನ್ನ ಕಾರ್ಯವನ್ನು ಸಮರ್ಪಕವಾಗಿ ಮಾಡಲು ಶಕ್ತಿಗುಂದಿ, ದೇಹದ ಬೇರೆ ಬೇರೆ ಅಂಗಗಳಿಗೆ ಅವಶ್ಯಕತೆ ಬೇಕಾದಂತೆ ರಕ್ತಪೂರೈಕೆಯನ್ನು ಮಾಡಲು ಅಸಮರ್ಥವಾದಾಗ ಸೋಲುತ್ತದೆ. ಹೃದಯ ಪರೀಕ್ಷೆ ಮಾಡಿದಾಗ ರೋಗದಿಂದಾದ ವಿಕೃತಿ ಗೋಚರವಾಗುತ್ತದೆ. ಪ್ರಾರಂಭದಲ್ಲಿ ದೇಹದ ಜೀವಕೋಶಗಳಿಗೆ ಬೇಕಾಗುವ ಆಕ್ಸಿಜನ್ನನ್ನು ಪೂರೈಸಲು ಗುಂಡಿಗೆ ಹೆಚ್ಚು ಬಾರಿ ಬಡಿಯುತ್ತದೆ ಮತ್ತು ಹೀಚಿ ದೊಡ್ಡದಾಗುತ್ತದೆ. ಅನಂತರ ಅದು ಶಕ್ತಿ ಗುಂದಿ ದೇಹದ ಬೇಡಿಕೆಯನ್ನು ಪೂರೈಸಲು ಅಸಮರ್ಥವಾಗುತ್ತದೆ. ಆಗ ರೋಗಿಯಲ್ಲಿ ಏದುಸಿರು, ಉಬ್ಬಸ, ಕಾಲಿನಲ್ಲಿ ಬಾವು, ಮೂತ್ರದ ಇಳುವರಿ, ಕತ್ತಿನ ಅಭಿಧಮನಿಗಳ ಹಿಗ್ಗುವಿಕೆ ಮುಂತಾದ ಸೋಲುವಿಕೆಯ ಲಕ್ಷಣಗಳು ಪ್ರಕಟವಾಗುತ್ತವೆ. ಇವು ಏಕಾಏಕಿಯಾಗಿ ಇಲ್ಲವೆ ನಿಧಾನವಾಗಿ ಪ್ರಕಟಗೊಳ್ಳಬಹುದು. ಈ ಲಕ್ಷಣಗಳನ್ನು ವಿಶ್ರಾಂತಿ ಪಡೆಯುವುದರಿಂದ ಮತ್ತು ಸೂಕ್ತ ಔಷಧಿಗಳ ಸೇವನೆಯಿಂದ ಉಪಶಮನಗೊಳಿಸಬಹುದು. (ಪಿ.ಎಸ್.ಎಸ್.)

ಗುಂಡಿಕೆಯೊಳಕ್ಕೆ ನಳಿಕೆತೂರಿಕೆ (ಕ್ಯಾಥೀಟರೈಸೇಷನ್) : ಸೂಕ್ತಗಾತ್ರದ ರಬ್ಬರ್ ಇಲ್ಲವೇ ಪ್ಲಾಸ್ಟಿಕ್ಕಿನ ತೆಳುವಾದ ಬಳುಕುವ ನಳಿಕೆಯನ್ನು ತೊಡೆಬಲ ಮೊಣಕೈಯಲ್ಲಿನ ಅಥವಾ ಅಭಿಧಮನಿಯನ್ನು (ವೇನ್) ಗಾಯಮಾಡಿ ಅದರೊಳಕ್ಕೆ ಹೊಗಿಸಿ ಕ್ರಮೇಣ ಮೇಲೆ ಮೇಲೆ ತಳ್ಳುತ್ತ ಮುಂದುವರಿದಂತೆ ನಳಿಕೆಯ ಕೊನೆ ಗುಂಡಿಗೆಯ ಬಲಭಾಗವನ್ನು ತಲಪುತ್ತದೆ. ಗುಂಡಿಗೆಯನ್ನು ಯಾವುದೇ ಬಾಹ್ಯವಸ್ತು ಸ್ಪರ್ಶಿಸುವುದು ಕೂಡ ಪ್ರಾಣಾಂತಿಕವೇ ಆಗಬಹುದು ಎಂದು ವೈದ್ಯರು ಭಾವಿಸಿದ್ದ ಕಾಲದಲ್ಲಿ ಸ್ವತಃ ತನ್ನ ಮೇಲೆಯೇ ಈ ಪ್ರಯೋಗವನ್ನು ಮಾಡಿ (1929) ಇದರ ಯಶಸ್ಸನ್ನು ಸಾರಿದವ ಜರ್ಮನಿಯ ವೈದ್ಯವಿಜ್ಞಾನಿ ವರ್ನರ್ ಫಾರ್ಸ್ ಮನ್. **(ನೋಡಿ – ಫಾರ್ಸ್‌ಮನ್, ವರ್ನರ್, ಥಿಯೋಡೊರ್ ಆಟೋ)** ಇಡೀ ಪ್ರಯೋಗವನ್ನು ಎಕ್ಸ್‌ಕಿರಣ ಚಿತ್ರದಿಂದ ಕಾಣುವುದು ಸಾಧ್ಯ. ಗುಂಡಿಗೆಯ ಬಲಭಾಗದಿಂದ ನೇರವಾಗಿ ರಕ್ತದ ಮಾದರಿಯನ್ನು ಪರೀಕ್ಷೆಯ ಸಲುವಾಗಿ ಹೊರತೆಗೆಯಲು, ಗುಂಡಿಗೆ ಇಲ್ಲವೆ ಅದರ ದೊಡ್ಡ ರಕ್ತನಾಳದೊಳಗಿನ ರಕ್ತಪರಿಚಲನೆಯದರ ಹಾಗೂ ರಕ್ತದ ಒತ್ತಡವನ್ನು ಅಳೆಯಲು, ಗುಂಡಿಗೆ, ಪುಪ್ಪುಸ ಮತ್ತಿತರ ಅಂಗಗಳ ಕ್ರಿಯೆಯನ್ನು ತಿಳಿಯಲು ನಳಿಕೆತೂರಿಕೆಯ ವಿಧಾನವನ್ನು ಬಳಸುವುದುಂಟು. ಗುಂಡಿಗೆಯ ಶಸ್ತ್ರಕ್ರಿಯೆ ಮಾಡುವ ಮೊದಲು ಅದರ ಪರೀಕ್ಷೆಯನ್ನು ತೊಡೆಯ ಧಮನಿಯ ಮೂಲಕ ನಳಿಕೆತೂರಿಕೆಯ ವಿಧಾನದಿಂದ ಕೂಡ ಮಾಡಬೇಕಾಗುತ್ತದೆ. ನಳಿಕೆತೂರಿಕೆಯಿಂದ ವ್ಯಕ್ತಿಗೆ ಅಪಾಯವಿಲ್ಲ, ನೋವಿಲ್ಲವೆಂದು ಗೊತ್ತಾದ ಬಳಿಕ ಈ ವಿಧಾನ ಬಹುವಾಗಿ ಬಳಕೆಗೆ ಬಂದಿದೆ. ಚಿಕಿತ್ಸೆಯಲ್ಲಿ ರಕ್ತರಸ (ಪ್ಲಾಸ್ಮ) ಇಲ್ಲವೇ ಪೂರ್ತಿ ರಕ್ತವನ್ನು ಕೊಡುವುದರ ಪರಿಣಾಮಗಳನ್ನು ಈ ವಿಧಾನದಿಂದ ಎರಡನೆಯ ಮಹಾಯುದ್ಧ ಕಾಲದಲ್ಲಿ ಕಂಡುಕೊಳ್ಳಲಾಯಿತು. ಹುಟ್ಟಿನಿಂದ ಬಂದ ಗುಂಡಿಗೆಯ ಊನಗಳನ್ನು, ತೀರ ಕಿರಿದಾಗಿರುವ ಸಾಗುದಾರಿಗಳನ್ನು ಮತ್ತು ಗುಂಡಿಗೆಯಲ್ಲಿ ಅಸಹಜ ಕಂಡಿಗಳಿರುವುದನ್ನು ಕಂಡುಹಿಡಿಯಲು ಈ ವಿಧಾನ ಹೆಚ್ಚು ಬಳಕೆಯಲ್ಲಿದೆ. ಕಿರೀಟಕಧಮನಿಯಲ್ಲಿ ರಕ್ತ ಪ್ರವಾಹಕ್ಕೆ ತಡೆಯಿರುವ ಸ್ಥಳ ಮತ್ತು ಅದರ ವ್ಯಾಪಕತೆಯನ್ನು ಅಯೋಡೀನ್‌ಯುಕ್ತ ಅಪಾರಕ ವಸ್ತುವನ್ನು ನೀಡಿ ತಿಳಿದುಕೊಳ್ಳಬಹುದು. ಈ ಬಗೆಯ ಪರೀಕ್ಷೆ ಹೃದಯಾಘಾತದನಂತರ ಹೊರಗಿನಿಂದ ಯಾವುದೇ ವಸ್ತುವನ್ನು ಸೇರಿಸದೆ ಮಾಡುವ ಪರೀಕ್ಷೆಗಳು ಹೃದಯಕ್ಕೆ ಪೆಟ್ಟು ಬಿದ್ದು ಅದು ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂಬುದು ನಿರ್ಧರಿಸಲ್ಪಟ್ಟನಂತರ ಕೈಕೊಳ್ಳಲಾಗುತ್ತದೆ. ಅದು ನಂತರ ಕೈಕೊಳ್ಳಬಹುದಾದ ಆಂಜಿಯೋಪ್ಲಾಸ್ಟಿ, ಇಲ್ಲವೆ ಸ್ಟೆಂಟ್ ಸೇರ್ಪಡೆಗೆ, ಅಥವಾ ಆ ರಕ್ತಗೊಂಡ ಹೃದಯಸ್ನಾಯುವಿಗೆ ರಕ್ತಪೂರೈಕೆಮಾಡಲು ರಕ್ತ ನಾಳನಾಟಿಮಾಡಿ ರಕ್ತಪ್ರವಾಹಕ್ಕೆ ಬದಲಿ ಮಾರ್ಗರಚನೆಯ ಶಸ್ತ್ರಕ್ರಿಯೆಗೆ ಉಪಯುಕ್ತಕರವಾಗುವುದು. (ಡಿ.ಎಸ್.ಎಸ್.)

**ಗುಂಡಿಗೆ ಸುತ್ತುಪೊರೆಯ ರೋಗ :** ಗುಂಡಿಗೆಯ ಆಕುಂಚನ ಹಾಗೂ ಸಂಕುಚನ ಕ್ರಿಯೆ ಸರಾಗವಾಗಿ ನಡೆಯಲೋಸುಗ ಗುಂಡಿಗೆ ಒಂದು ಸೂಕ್ಷ್ಮವೂ ನಯವುಳ್ಳದ್ದೂ ಆದ ಚೀಲವೊಂದರಲ್ಲಿ ಅಡಕವಾಗಿದೆ. ಶೀತಸ್ರಾವದ ಒಗ್ಗದಿಕೆ, ಕ್ಷಯಾಣು, ಕೀವು ಉತ್ಪಾದಕ ಜೀವಾಣುಗಳು ಮತ್ತು ವಿಷಾಣುಗಳು ಇವುಗಳ ಪ್ರಭಾವಕ್ಕೆ ಒಳಗಾಗಿ

ಈ ಚೀಲದಲ್ಲಿ ಊತ ಉಂಟಾಗಬಹುದು. ಆಗ ಇದರ ಎರಡೂ ಪದರುಗಳು ತಮ್ಮ ಹೊಳಪನ್ನು ನಯವನ್ನು ಕಳೆದುಕೊಂಡು ಒರಟಾಗಿ ಅಲ್ಲಿ ಒಸರಿದ ದ್ರವ ಬ್ರೆಡ್ಡಿಗೆ ಬೆಣ್ಣೆ ಹಚ್ಚಿದಂತೆ ತೋರಿಬರುತ್ತದೆ. ಈ ಪ್ರತಿಕ್ರಿಯೆ ಮುಂದುವರಿದು ಅಲ್ಲಿ ಜಲ, ಕೀವು ಇಲ್ಲವೇ ರಕ್ತ ಸಂಚಯನಗೊಳ್ಳಬಹುದು. ಹೃದಯಾಘಾತದ ಬಳಿಕ, ಗುರಾಣಿ ಗ್ರಂಥಿಯ ರಸದೂತದ ಅಭಾವ ರೋಗದಲ್ಲಿ, ಮೂತ್ರ ಜನಕಾಂಗದ ಕ್ರಿಯಾವೈಫಲ್ಯದ ಅಂತಿಮ ಕಾಲದಲ್ಲಿ ಗುಂಡಿಗೆಯ ಮೇಲೆ ತೀವ್ರವಾದ ಪೆಟ್ಟು ಬಿದ್ದಾಗ ಅಥವಾ ಏಡಿಗಂತಿ ರೋಗದ ಫಲವಾಗಿ ಮುಂತಾದ ಸಂದರ್ಭಗಳಲ್ಲಿ ಗುಂಡಿಗೆಯ ಸುತ್ತುಪೊರೆಯ ಚೀಲದ ಊತ ತೋರಿಬರಬಹುದು.

ದೇಹದಲ್ಲಿ ಕಂಡುಬರುವ ಅನೇಕ ತೆರನಾದ ರೋಗಗಳ ಫಲವಾಗಿ ಈ ಚೀಲದ ಊತ ಉಂಟಾದರೂ ಅದಕ್ಕೆ ಎಲ್ಲ ಸಂದರ್ಭಗಳಲ್ಲೂ ತನ್ನದೇ ಆದ ಕೆಲವು ವಿಶಿಷ್ಟ ಗುಣಲಕ್ಷಣಗಳಿರುವವು. ಪ್ರಾರಂಭದಲ್ಲಿ ಎದೆಮೂಳೆಯ ಪ್ರದೇಶದಲ್ಲಿ ನೋವು ಅಥವಾ ಏನೋ ತೂಕದ ವಸ್ತುವನ್ನು ಇಟ್ಟ ಭಾವನೆ ಉಂಟಾಗುತ್ತದೆ. ಎದೆದರ್ಶಕದ ನೆರವಿನಿಂದ ಗುಂಡಿಗೆ ಇರುವ ಸ್ಥಳವನ್ನು ಆಲಿಸಿದಾಗ ಕೆರೆದಂತೆ ಪರಪರ ಶಬ್ದ ಕೇಳಿಬರುವುದು. ಆ ಶಬ್ದ ಗುಂಡಿಗೆಯ ಶಬ್ದಗಳಿಂದ ಬೇರೆಯಾಗಿ ಕೇಳಿಸುತ್ತದೆ. ರೋಗದ ಮುಂದುವರಿಕೆಯ ಫಲವಾಗಿ ಜಲಸಂಚಯನವಾದಾಗ ಗುಂಡಿಗೆಯ ಪ್ರದೇಶದ ಮೇಲೆ ಬೆರಳಿನಿಂದ ಬಡಿದು ನಿರ್ಣಯಿಸಬಹುದಾದ ಮಂದಶಬ್ದದ ಪ್ರದೇಶ ವಿಸ್ತಾರವಾಗುತ್ತದೆ. ಗುಂಡಿಗೆಯ ಶಬ್ದಗಳು ಅಸ್ಪಷ್ಟವಾಗಿ ಕೇಳಿ ಬರುತ್ತವೆ. ಜಲಸಂಚಯನದಿಂದ ಹಿಗ್ಗಿದ ಗುಂಡಿಗೆ ಚೀಲ ಸುತ್ತಲಿನ ಘುಪ್ಪುಸದ ಮೇಲೆ ಒತ್ತಡವನ್ನು ಬೀರಿ ಉಬ್ಬಸ, ಕೆಮ್ಮು ಉಂಟುಮಾಡುವುದು. ಇದು ಅತಿಯಾದಾಗ ಗುಂಡಿಗೆಯ ಕಾರ್ಯಚಟುವಟಿಕೆ ತೀವ್ರ ವ್ಯತ್ಯಸ್ತಗೊಂಡು ಗುಂಡಿಗೆ ಹಿಗ್ಗುವ ಕಾಲದಲ್ಲಿ ಅದರೊಳಕ್ಕೆ ರಕ್ತ ಹರಿದು ಬರಲು ಅಡ್ಡಿಯಾಗುತ್ತದೆ. ಇದರ ಫಲವಾಗಿ ಅಲ್ಲಿಂದ ಹೊರಹೊಮ್ಮುವ ರಕ್ತದ ಮೊತ್ತ ಕಡಿಮೆಯಾಗುತ್ತದೆ. ನಾಡಿ ಬಡಿತ ತೀವ್ರಗೊಳ್ಳುತ್ತದೆ. ಅಪಧಮನಿಗಳಲ್ಲಿ ರಕ್ತದ ಒತ್ತಡ ಕಡಿಮೆಯಾಗಿ ಕತ್ತಿನ ಅಭಿಧಮನಿಗಳಲ್ಲಿ ಅದರ ಒತ್ತಡ ಹೆಚ್ಚುತ್ತದೆ. ಎಕ್ಸ್‌ಕಿರಣ ಚಿತ್ರವನ್ನು ಪರೀಕ್ಷಿಸಿದರೆ ಗುಂಡಿಗೆ ತನ್ನ ಆಕೃತಿಯನ್ನು ಕಳೆದುಕೊಂಡಿರುವುದು ವಿಸ್ತಾರವಾಗಿರುವುದೂ ಕಾಣಿಸುತ್ತದೆ. ಎಲೆಕ್ಟ್ರೊಕಾರ್ಡಿಯೊಗ್ರಾಫಿನಲ್ಲಿ ಹೃತ್ಕುಕ್ಷಿಯ ಸಂಕುಚನದ ಮುಖ್ಯ ಅಲೆ ತಗ್ಗಾಗಿರುತ್ತದೆ. ಎಸ್‌ಟಿ ರೇಖೆ ಮೇಲಕ್ಕೆ ಬಾಗಿ, ಟಿ ಅಲೆ ಅಧೋಮುಖಿಯಾಗಿರುತ್ತದೆ. ಎಕೋಕಾರ್ಡಿಯೋಗ್ರಾಫಿ ರೋಗನಿದಾನದಲ್ಲಿ ತುಂಬ ಉಪಯುಕ್ತ. ಅದರಿಂದ ಸಂಚಯಗೊಂಡ ದ್ರವದ ಪ್ರಮಾಣ ಮತ್ತು ಅದರ ಸ್ಥಳವನ್ನು ಗುರುತಿಸಬಹುದು. ಗುಂಡಿಗೆಯ ಸುತ್ತುಪೊರೆ ಚೀಲದಲ್ಲಿ ಹೆಚ್ಚು ಜಲ ಸಂಚಯನಗೊಂಡು ಗುಂಡಿಗೆಯ ಮೇಲೆ ತುಂಬ ಒತ್ತಡ ಉಂಟಾದಾಗ ಚೀಲದೊಳಗೆ ಸೂಜಿಯನ್ನು ಹಾಕಿ ಅಲ್ಲಿರುವ ದ್ರವವನ್ನು ಹೊರಕ್ಕೆ ತೆಗೆಯಬೇಕು. ಶೀತಸ್ರಾವದಿಂದ ರೋಗ ಬಂದಿದ್ದರೆ ಗುಂಡಿಗೆಯ ಒಳಪದರಗಳು ಮತ್ತು ಕವಾಟಗಳು ಊತದಲ್ಲಿ ಪಾಲ್ಗೊಂಡು ಮರ್ಮರ ಶಬ್ದಗಳನ್ನು ಹೊರಡಿಸುತ್ತವೆ. ಕ್ಷಯರೋಗದಲ್ಲಿ ಗುಂಡಿಗೆಚೀಲ ದಪ್ಪವಾಗಿ ಒರಟಾಗಿ ಅದರ ಕುಗ್ಗುವಿಕೆಗೆ ತಡೆಯನ್ನು ಉಂಟುಮಾಡಬಲ್ಲದು. ರಾಸಾಯನಿಕ ಚಿಕಿತ್ಸೆಯಿಂದ ಕ್ಷಯ ಮತ್ತು ಕೀವುಜನ್ಯ ರೋಗಾಣುಗಳು ದೂರವಾಗುತ್ತವೆ.

ಹೃದಯಾಘಾತದ ಅನಂತರ ಮತ್ತು ಮೂತ್ರಜನಕಾಂಗದ ಕ್ರಿಯಾವೈಫಲ್ಯದ ಫಲವಾಗಿ ತೋರಿಬರುವ ಗುಂಡಿಗೆ ಚೀಲದ ಊತದಲ್ಲಿ ನೋವು ಗೋಚರಿಸುವುದಿಲ್ಲ. ಏಡಿಗಂತಿ ರೋಗದ ಫಲವಾಗಿ ರೋಗೋತ್ಪನ್ನವಾದಾಗ ರಕ್ತ ಸಂಚಯನಗೊಳ್ಳುತ್ತದೆ.

ಕ್ಷಯ ಮತ್ತು ಕೀವುಜನ್ಯ ರೋಗಾಣುಗಳಿಂದ ಬಂದ ಗುಂಡಿಗೆ ಚೀಲದ ಊತದ ಪ್ರಮುಖ ತೊಡಕಾಗಿ ದೀರ್ಘಕಾಲಿಕ ಹಿಸುಕಿದ ಗುಂಡಿಗೆ ಚೀಲದ ತಡೆ ಉಂಟಾಗಬಲ್ಲದು. ಅಲ್ಲಿ ಒಸರಿದ ದ್ರವ ಗಟ್ಟಿಯಾಗಿ, ನಾರೆಳೆ ಸುತ್ತ ಹರಡಿ ಗುಂಡಿಗೆ ಚೀಲದ ಪದರಗಳು ದಪ್ಪವಾಗಿ ತಮ್ಮ ಸ್ಥಿತಿಸ್ಥಾಪಕ ಶಕ್ತಿಯನ್ನು ಕಳೆದುಕೊಳ್ಳುತ್ತವೆ. ಅದರ ಮೇಲೆ ಸುಣ್ಣದ ಕಣಗಳು ನೆಲೆಸಿ ಗುಂಡಿಗೆಯ ಸುತ್ತ ಶಿಲಾರೂಪಿ ಪೊರೆಯಾಗಿ ಗುಂಡಿಗೆಯ ಹಿಗ್ಗುವಿಕೆಗೆ ನಿರಂತರ ಆತಂಕವನ್ನು ತಂದೊಡ್ಡುತ್ತವೆ. ಇದರಿಂದ ಗುಂಡಿಗೆಗೆ ಹರಿದು ಬರುವ ರಕ್ತಪ್ರವಾಹಕ್ಕೆ ಅಡ್ಡಿಯಾಗಿ ಕತ್ತಿನ ಅಭಿಧಮನಿಗಳಲ್ಲಿ ರಕ್ತದ ಒತ್ತಡ ಹೆಚ್ಚುವುದು. ಅಲ್ಲಿನ ಮಹಾ ಅಪಧಮನಿಗಳು ಅಲೆ ತೋರಿಸದೆ ದಪ್ಪವಾಗಿ ಉಬ್ಬಿರುತ್ತವೆ. ಜಲೋದರವಾಗಿ ಹೊಟ್ಟೆಯೂ ದಪ್ಪವಾಗಿರುತ್ತದೆ. ಕಾಲಲ್ಲಿ ಜಲಸಂಚಯನದ ಬಾವು ಹೆಚ್ಚಿರುವುದಿಲ್ಲ. ಕಲಿಜ ದೊಡ್ಡದಾಗಿರುವುದು. ನಾಡಿ ಬಡಿತ ತೀವ್ರಗೊಳ್ಳುತ್ತದೆ. ಉಚ್ಛ್ವಾಸ ಕಾಲದಲ್ಲಿ ನಾಡಿ ಕೈಗೆ ಸಿಕ್ಕದಂತಾಗುವುದು. ಗುಂಡಿಗೆ ಸ್ಥಳದಲ್ಲಿ ಆಲಿಸಿದಾಗ ಅದರ ಶಬ್ದಗಳಲ್ಲಿ ಯಾವ ಬದಲಾವಣೆಯೂ ತಿಳಿದುಬರುವುದಿಲ್ಲ. ಗುಂಡಿಗೆಯ ಗಾತ್ರ ಹೆಚ್ಚುವುದಿಲ್ಲ. ಎಕ್ಸ್ ಕಿರಣ ಚಿತ್ರದಲ್ಲಿ ಗುಂಡಿಗೆ ಚೀಲದಲ್ಲಿ ಸುಣ್ಣಸೇರ್ಪಡೆಯಾಗಿರುವುದನ್ನು ಕಾಣಬಹುದು. ದಪ್ಪವಾದ ಹೃದಯ ಚೀಲದ ಪದರಗಳನ್ನು ಶಸ್ತ್ರಕ್ರಿಯೆಯಿಂದ ಕತ್ತರಿಸಿ ತೆಗೆದು ಹೃದಯದ ಹಿಗ್ಗುವಿಕೆಗೆ ಅನುಕೂಲ ಮಾಡಿಕೊಡುವುದು ಚಿಕಿತ್ಸೆಯ ಮುಖ್ಯ ವಿಧಾನವಾಗಿದೆ. (ಪಿ.ಎಸ್.ಎಸ್.)

**ಗುಂಡುಸ್ತರಗಳು :** 203.2 ಮಿ.ಮೀ.ಗಳಿಗಿಂತ ಹೆಚ್ಚು ಉದ್ದ ವ್ಯಾಸವಿರುವ ಬೌಲ್ಡರ್ ಜಾತಿಯ ಗುಂಡುಶಿಲೆಗಳ ಹರವಿನಿಂದ ಉಂಟಾದ ನದೀ ಪಾತಳಿಗಳು (ಬೌಲ್ಡರ್ ಬೆಡ್ಸ್). ಇವು ಬಲುಮಟ್ಟಿಗೆ ನದಿಯ ಕಾರ್ಯಾಚರಣೆಯಿಂದಾದವು. ಸಾಮಾನ್ಯವಾಗಿ ಇವನ್ನು ಪರ್ವತಗಳ ತಪ್ಪಲು ಪ್ರದೇಶದಲ್ಲಿ ಕಾಣಬಹುದು. ಅದರಲ್ಲೂ ನದಿಗಳು ಪರ್ವತಗಳ ಪ್ರಪಾತಗಳಲ್ಲಿ, ಕಣಿವೆ ಕಂದರಗಳಲ್ಲಿ ರಭಸದಿಂದ ಹರಿದು ಕೆಳಮಟ್ಟದಲ್ಲಿರುವ ಮೈದಾನಪ್ರದೇಶವನ್ನು ಸಂಧಿಸುವ ಸ್ಥಳದಲ್ಲಿ ಗುಂಡುಸ್ತರಗಳು ಶೇಖರವಾಗುತ್ತವೆ. ಅಲ್ಲಿ ನದಿಯ ವೇಗ ಹಠಾತ್ತನೇ ಕಡಿಮೆಯಾಗುವುದೇ ಇದಕ್ಕೆ ಮುಖ್ಯ ಕಾರಣ. ಇಲ್ಲಿ ನದಿಯ ಮೆಕ್ಕಲೂ ಶೇಖರವಾಗಿ ವಿಶಾಲವಾದ ಪ್ರದೇಶದಲ್ಲಿ ಹರಡಿರುತ್ತದೆ. ವಿಹಂಗಮ ನೋಟದಲ್ಲಿ ಈ ಪ್ರದೇಶ ಬೀಸಣಿಗೆಯಾಕಾರವನ್ನು ತಳೆದಿರುತ್ತದೆ. ಇದನ್ನು ಅಲ್ಯೂವಿಯಲ್ ಫ್ಯಾನ್ ಎನ್ನುತ್ತಾರೆ. ಅನೇಕ ವೇಳೆ ಅಕ್ಕಪಕ್ಕದ ಮೆಕ್ಕಲುಮೈದಾನಗಳು ಒಂದುಗೂಡಿ ಇಡೀ ಪರ್ವತಶ್ರೇಣಿಯ ತಪ್ಪಲಿನುದ್ದಕ್ಕೂ ಗುಂಡುಸ್ತರಗಳ ಶಿಲಾಶ್ರೇಣಿಯನ್ನು ಕಾಣಬಹುದು. ಅನೇಕ ವೇಳೆ ಇವು ನೂರಾರು ಇಲ್ಲವೆ ಸಾವಿರಾರು ಮೀಟರುಗಳಷ್ಟು ಮಂದವಾಗಿದ್ದು ಹತ್ತಾರು ಅಥವಾ ನೂರಾರು ಕಿ.ಮೀ. ವಿಸ್ತಾರವಾದ ಪ್ರದೇಶವನ್ನು ಆಕ್ರಮಿಸಿರುತ್ತವೆ.

ಗುಂಡುಸ್ತರ ಮುಖ್ಯವಾದ ಜಲಜಶಿಲೆ. ಈ ಸ್ತರ ಗುಂಡನೆಯ ನುಣುಪಾದ ನಾನಾ ಗಾತ್ರದ ಶಿಲೆಗಳಿಂದ ಕೂಡಿರುತ್ತದೆ. ಇವುಗಳ ಆಕಾರ ವೈವಿಧ್ಯಮಯ. ಇವು ಅಗ್ನಿಶಿಲೆ, ಜಲಜಶಿಲೆ, ಮತ್ತು ರೂಪಾಂತರಿತ ಶಿಲೆಗಳಿಂದ ಉಂಟಾದವು. ಈ ಶಿಲೆಗಳು ವಿಧ್ವಂಸಕ ಕಾರ್ಯಾಚರಣೆಗೆ ಒಳಗಾಗಿ ಛಿದ್ರಗೊಂಡು ಬೀಸುವ ಗಾಳಿಯಿಂದಲೋ ಹರಿಯುವ ನೀರಿನಿಂದಲೋ ದೂರದ ಸ್ಥಳಗಳಿಗೆ ಒಯ್ಯಲ್ಪಡುತ್ತವೆ. ಈ ಸಾಗಾಣಿಕೆಯಲ್ಲಿ ಶಿಲಾಛಿದ್ರಗಳು ಪರಸ್ಪರ ತೇಯಲ್ಪಟ್ಟು ಅಥವಾ ನದಿಯ ಪಾತ್ರದಲ್ಲಿ ತೆವಳಿ ಹೋಗುವಾಗ ಆ ಗಡುಸಾದ ಭೂಭಾಗಕ್ಕೆ ಉಜ್ಜಲ್ಪಟ್ಟು ಅಂಕುಡೊಂಕುಗಳೆಲ್ಲ ಸವೆದು ಹೊರಮೈ ನುಣುಪಾಗುತ್ತದೆ. ಹಿಮನದಿಯ ಕಾರ್ಯಾಚರಣೆಯಿಂದಲೂ ಇದೇ ರೀತಿಯ ಗುಂಡುಶಿಲೆಗಳುಂಟಾಗುತ್ತವೆ. ಆದರೆ ಅವುಗಳ ಮೈಮೇಲೆ ಅಸಂಖ್ಯಾತ ಬಹುಸೂಕ್ಷ್ಮವಾದ ಸಮಾಂತರ ಗೀರುಗಳನ್ನು ಕಾಣಬಹುದು.

ಗುಂಡುಶಿಲೆಗಳ ವ್ಯಾಸ 203.2 ಮಿ.ಮೀ. ಅಂಗುಲಕ್ಕೂ ಹೆಚ್ಚಾದಾಗ ಬೌಲ್ಡರ್ 203.2ಮಿಮೀ ರಿಂದ 51 ಮಿಮೀಗಳಿದ್ದಲ್ಲಿ ಕಾಬ್ಲ್ 51 ಮಿಮೀಗೂ ಕಡಿಮೆಯಿದ್ದಲ್ಲಿ ಪೆಬ್ಲ್ ಎಂದು ವರ್ಗೀಕರಿಸಲಾಗಿದೆ. ಈ ಶಿಲಾಗುಂಡುಗಳನ್ನು ಯಾವುದೋ ಒಂದು ಬಂಧಕ ವಸ್ತು ಒಟ್ಟುಗೂಡಿಸಿ ಶಿಲೆಯಾಗಿ ಮಾರ್ಪಡಿಸುತ್ತದೆ. ಇದು ಸಿಲಿಕ, ಸುಣ್ಣ ಅಥವಾ ಜೇಡುವಸ್ತುವಾಗಿರುತ್ತವೆ. ಹೀಗುಂಟಾದ ಶಿಲೆಯಲ್ಲಿ ಬೌಲ್ಡರುಗಳೇ ಹೆಚ್ಚು ಮೊತ್ತದಲ್ಲಿ ಇದ್ದಾಗ ಆ ಶಿಲೆಯನ್ನು ಗುಂಡುಸ್ತರ ಎನ್ನುತ್ತಾರೆ. (ಬಿ.ವಿ.ಜಿ.)

**ಗುಂಡ್ಲುಪೇಟೆ:** ಚಾಮರಾಜನಗರ ಜಿಲ್ಲೆಯ ಒಂದು ತಾಲ್ಲೂಕು ಹಾಗೂ ಅದರ ಮುಖ್ಯಸ್ಥಳ. ಈ ತಾಲ್ಲೂಕಿನ ದಕ್ಷಿಣದಲ್ಲಿ ಕೇರಳ ಮತ್ತು ತಮಿಳುನಾಡು, ಪೂರ್ವದಲ್ಲಿ ಚಾಮರಾಜನಗರ, ಉತ್ತರದಲ್ಲಿ ನಂಜನಗೂಡು, ಪಶ್ಚಿಮಉತ್ತರದಲ್ಲಿ ಹೆಗ್ಗಡದೇವನಕೋಟೆ ತಾಲ್ಲೂಕು ಇವು ಸುತ್ತುವರಿದಿವೆ. ಕಸಬೆ, ಹಂಗಳ, ಬೇಗೂರು ಮತ್ತು ತೆರಕಣಾಂಬಿ ಹೋಬಳಿಗಳು ಗ್ರಾಮಗಳು 162. ತಾಲ್ಲೂಕಿನ ವಿಸ್ತೀರ್ಣ 14,062ಚ.ಕಿಮೀ. ಜನಸಂಖ್ಯೆ 2,12,895.

ತಾಲ್ಲೂಕಿನ ದಕ್ಷಿಣ ಹಾಗೂ ಪಶ್ಚಿಮ ಭಾಗ ಅರಣ್ಯ ಮತ್ತು ಬೆಟ್ಟಗುಡ್ಡಗಳಿಂದ ಆವೃತವಾಗಿದೆ. ಬಂಡೀಪುರ ಮತ್ತು ಬೇರಂಬಾಡಿ ರಕ್ಷಿತ ಅರಣ್ಯಗಳು ಇರುವುದು ಇಲ್ಲಿಯೇ. ಈ ತಾಲ್ಲೂಕಿನ ಪೂರ್ವ ಮತ್ತು ಉತ್ತರ ಭಾಗಗಳಲ್ಲಿ ಜನವಸತಿ ಹೆಚ್ಚು. ಈ ಜನವಸತಿ ಪ್ರದೇಶಗಳು ಮತ್ತು ಅರಣ್ಯಗಳ ನಡುವೆ ತಾಲ್ಲೂಕಿನ ಪಶ್ಚಿಮ ಮತ್ತು ದಕ್ಷಿಣ ಮೇರೆಗಳಿಗೆ ಸಮಾನಾಂತರವಾಗಿ ಹಬ್ಬಿರುವ ಒಂದು ಬೆಟ್ಟಸಾಲಿದೆ. ಎರಡು ದಿಕ್ಕುಗಳ ಈ ಬೆಟ್ಟದ ಹರವುಗಳು ಗೋಪಾಲಸ್ವಾಮಿ ಬೆಟ್ಟದಲ್ಲಿ ಸಂಧಿಸುತ್ತವೆ. ತಾಲ್ಲೂಕಿನ ದಕ್ಷಿಣ ಗಡಿಯಲ್ಲಿ ಮೋಯರ್ ನದಿ ಹರಿಯುತ್ತದೆ. ಇದೇ ಕರ್ನಾಟಕ ಮತ್ತು ತಮಿಳುನಾಡಿನ ಈ ಭಾಗದ ಗಡಿ ರೇಖೆ. ತಾಲ್ಲೂಕಿನ ಮುಖ್ಯ ನದಿ ಗುಂಡ್ಲುಹೊಳೆ. ಈ ನದಿ ತಾಲ್ಲೂಕಿನ ಮಧ್ಯದಲ್ಲಿ ದಕ್ಷಿಣದಿಂದ ಉತ್ತರಕ್ಕೆ ಹರಿಯುತ್ತದೆ. ಮುಂದೆ ನಂಜನಗೂಡಿನಲ್ಲಿ ಕಪಿಲಾ ನದಿಯನ್ನು ಸೇರುತ್ತದೆ. ತಾಲ್ಲೂಕಿನಲ್ಲಿ ಎರೆಮಣ್ಣು ಇದೆ. ಹೆಚ್ಚು ಭಾಗ ನುರುಜುಭೂಮಿ, ಮಳೆ ಕಡಿಮೆ. ಜೋಳ ಮುಖ್ಯ ಬೆಳೆ. ರಾಗಿ,

ಅವರೆ, ಹರಳು ಇತ್ಯಾದಿಗಳ ವ್ಯವಸಾಯ ಸಹ ಇದೆ. ಕೆರೆಗಳಿಂದ ಸ್ವಲ್ಪಮಟ್ಟಿಗೆ ಬತ್ತದ ಬೆಳೆ ಆಗುತ್ತದೆ. ತೋಟಗಳೂ ಇವೆ. ಇಲ್ಲಿಯ ವೀಳ್ಯದ ಎಲೆ ಪ್ರಸಿದ್ಧ.

ಗುಂಡ್ಲುಪೇಟೆ ಈ ತಾಲ್ಲೂಕಿನ ಕೇಂದ್ರ. ಗುಂಡ್ಲುಹೊಳೆಯ ಎಡದಂಡೆಯ ಮೇಲಿರುವ ಈ ಊರು ಮೈಸೂರು-ಉದಕಮಂಡಲ (ಊಟಿ) ಹೆದ್ದಾರಿಯಲ್ಲಿ ಮೈಸೂರಿನ ದಕ್ಷಿಣಕ್ಕೆ 61ಕಿಮೀ ದೂರದಲ್ಲಿದೆ. ಗುಂಡ್ಲುಪೇಟೆಯಿಂದ ಪೂರ್ವಕ್ಕಿರುವ ಚಾಮರಾಜನಗರಕ್ಕೆ, ಪಶ್ಚಿಮದೆಡೆ ಕೇರಳದ ಸುಲ್ತಾನ ಬತ್ತೇರಿ ಮತ್ತು ಮುಂದೆ ಕಣ್ಣಾನೂರಿಗೆ, ವಾಯವ್ಯದಲ್ಲಿ ಹೆಗ್ಗಡದೇವನಕೋಟೆ ಕಡೆಗೆ ರಸ್ತೆಗಳಿವೆ.



ಪರವಾಸುದೇವ ದೇವಾಲಯ, ಗುಂಡ್ಲುಪೇಟೆ

ಈ ಊರಿನ ಪ್ರಾಚೀನನಾಮ ವಿಜಯಪುರ. ಇದು ತೆರಕಣಾಂಬಿ ಅರಸರ ವಶದಲ್ಲಿ ಬಹಳ ಕಾಲ ಇತ್ತೆಂದು ತೋರುತ್ತದೆ. 1674ರಲ್ಲಿ ಮೈಸೂರಿನ ಚಿಕ್ಕದೇವರಾಜ ಒಡೆಯರು ಈ ಸ್ಥಳ ಬೆಳೆಯಲು ಕಾರಣ. ಇವರು ತಮ್ಮ ಬಾಲ್ಯವನ್ನು ಗುಂಡ್ಲುಪೇಟೆಯ ಸಮೀಪದಲ್ಲಿನ ಹಂಗಳದಲ್ಲಿರುವ ಒಂದು ಕೋಟೆಯಲ್ಲಿ ಬಂಧನದಲ್ಲಿ ಕಳೆಯುತ್ತಿದ್ದಾಗ ಇವರ ತಂದೆ ವಿಧಿವಶರಾಗಲು ಅವರ ಅಂತ್ಯಕ್ರಿಯೆಯನ್ನು ವಿಜಯಪುರದ ಬಳಿ ಇರುವ ಗುಂಡ್ಲುಹೊಳೆ ಬಳಿ ನೆರವೇರಿಸಿ ಮತ್ತೆ ಸೆರೆಮನೆಗೆ ಹಿಂದಿರುಗಿದರು. ಕಾಲಾನಂತರ ತಂದೆಯ ಅಂತ್ಯಕ್ರಿಯೆ ನಡೆದ ಸ್ಥಳದ ಬಳಿ ಒಂದು ಅಗ್ರಹಾರವನ್ನು ಕಟ್ಟಿಸಿ, ವಿಜಯಪುರದ ಕೋಟೆಯನ್ನು ವಿಸ್ತರಿಸಿ ಭದ್ರಪಡಿಸಿ, ತಂದೆಯ ಸಮಾಧಿಯ ಮೇಲೆ ಪರವಾಸುದೇವ ದೇವಾಲಯವನ್ನು ಕಟ್ಟಿಸಿದರು. ಅಂದಿನಿಂದ ವಿಜಯಪುರ ಪೇಟೆ ಸ್ಥಳವಾಗಿ ಬೆಳೆದು ಗುಂಡ್ಲುಪೇಟೆ ಎಂಬ ಹೆಸರನ್ನು ಗಳಿಸಿತು. ಈಗ ಅಗ್ರಹಾರವಾಗಲಿ ಕೋಟೆಯಾಗಲಿ ಉಳಿದಿಲ್ಲ. ಪರವಾಸುದೇವ ದೇವಾಲಯ ಟಿಪ್ಪು ಸುಲ್ತಾನನ ಆಳಿಕೆಯವರೆಗೂ ಉತ್ತಮ ಸ್ಥಿತಿಯಲ್ಲಿತ್ತು. ಅನಂತರದ ವರ್ಷಗಳಲ್ಲಿ ಸರಿಯಾದ ರಕ್ಷಣೆಯಿಲ್ಲದೆ ಪಾಳುಬಿದ್ದಿದೆ. ಕಣಶಿಲೆಯಿಂದ ಕಟ್ಟಿರುವ ಈ ದೇವಾಲಯ ಸಾಕಷ್ಟು ವಿಶಾಲವಾಗಿದ್ದು ಗರ್ಭಗೃಹ, ಪ್ರದಕ್ಷಿಣಾಪಥ, ಸುಕನಾಸಿ, ವಿಶಾಲವಾದ ಮತ್ತು ಚೌಕಟ್ಟಾದ 13 ಕಂಬಗಳಿರುವ ನವರಂಗ ಮತ್ತು ಅದಕ್ಕೆ ಉತ್ತರ ಹಾಗೂ ದಕ್ಷಿಣದ ಕಡೆ ಒಂದೊಂದು ಸಣ್ಣ ಕೋಣೆ ಇವೆ. ದೇವಾಲಯದ ಮುಂದುಗಡೆ ಒಂದು ಮುಖಮಂಟಪವಿತ್ತು. ಈಚೆಗೆ ಅದನ್ನು ವಿಜಯನಾರಾಯಣ ದೇವಾಲಯದ ಮುಂಭಾಗಕ್ಕೆ ಸ್ಥಳಾಂತರಿಸಲಾಗಿದೆ. ದೇವಾಲಯದ ವಿನ್ಯಾಸ, ಅಲಂಕೃತವಾದ ಸುಕನಾಸಿಯ ದ್ವಾರ, ಶಿಲ್ಪಗಳು ಮತ್ತು ಕಂಬಗಳು ವಾಸ್ತುಶಿಲ್ಪದ ದೃಷ್ಟಿಯಿಂದ ವಿಶೇಷವಾದದ್ದು. ಈ ದೇವಾಲಯದ ಎಡಪಾರ್ಶ್ವದಲ್ಲಿ ಪರವಾಸುದೇವನ ದೇವಿಯಾದ ಕಮಲವಲ್ಲಿಯ ದೇವಾಲಯವಿದೆ. ಈ ಎರಡೂ ದೇವಾಲಯಗಳ ವಿಗ್ರಹಗಳನ್ನು ಈಗ ವಿಜಯನಾರಾಯಣ ದೇವಾಲಯಕ್ಕೆ ಸ್ಥಳಾಂತರಿಸಲಾಗಿದೆ.

ವಿಜಯನಾರಾಯಣ ದೇವಾಲಯ ಕೋಟೆಯ ಒಳಗಿದೆ. ಇದನ್ನು ಹೊಯ್ಸಳ ವಿಷ್ಣುವರ್ಧನ ಕಟ್ಟಿಸಿದನೆಂದು ಪ್ರತೀತಿ. ಆದರೆ ಇದು ವಿವಿಧ ಹಂತಗಳ ರಚನೆ. ಮುಖಮಂಟಪ ಈಚಿನದು. ನವರಂಗದ ಮೇಲ್ಛಾವಣಿ ವಿಜಯನಗರ ಶೈಲಿಯಂತೆ ಒಳಭಾಗದಲ್ಲಿ ಸಮತಟ್ಟಾಗಿದ್ದು ಮಧ್ಯದಲ್ಲಿ ಕಮಲವನ್ನು ಕೆತ್ತಲಾಗಿದೆ. ನವರಂಗದ ದಕ್ಷಿಣ ಭಾಗದಲ್ಲಿ ಈಗ ಮೂರು ಕೋಣೆಗಳನ್ನು ಮಾಡಿ ಪರವಾಸುದೇವ ಮತ್ತು ಆತನ ಪತ್ನಿಯರ ವಿಗ್ರಹಗಳನ್ನು ಮತ್ತು ಆಳ್ವಾರರ ವಿಗ್ರಹಗಳನ್ನು ಇಡಲಾಗಿದೆ. 13-14ನೆಯ ಶತಮಾನಕ್ಕೆ ಸೇರಿದ ಮೂಲ ವಿಜಯನಾರಾಯಣ ದೇವಾಲಯ ತಲಕಾಡಿನ ವೈದ್ಯೇಶ್ವರ ದೇವಾಲಯದಂತೆ ಮೂಲತಃ ಗರ್ಭಗೃಹ ಮತ್ತು ಸುಕನಾಸಿಯನ್ನು ಮಾತ್ರ ಹೊಂದಿತ್ತು. ಅನಂತರ ಶ್ರೀರಂಗಪಟ್ಟಣ ಹಾಗೂ ತೊಣ್ಣೂರಿನಲ್ಲಿರುವಂತೆ ಮುಚ್ಚಿರುವ ಪ್ರದಕ್ಷಿಣಾಪಥವನ್ನು ಕಲ್ಪಿಸಲಾಯಿತು. ಗರ್ಭಗೃಹದ ದ್ವಾರ ಪರವಾಸುದೇವ ದೇವಾಲಯದಲ್ಲಿರುವಂತೆಯೇ ಸುಂದರವಾಗಿದೆ. ಇಲ್ಲಿಯ ಮೂರ್ತಿ ಅಭಯ ಮುದ್ರೆಯಲ್ಲಿ ನಿಂತಿದ್ದು ಬಲಗೈಯಲ್ಲಿ ಕಮಲವನ್ನು ಹಿಡಿದಿದೆ. ಇದರ ಹಿಂಭಾಗದಲ್ಲಿರುವ ತೋರಣದಲ್ಲಿ ದಶಾವತಾರವನ್ನು ಕೆತ್ತಲಾಗಿದ್ದು ಈ ಶಿಲ್ಪ ಹೊಯ್ಸಳರ ಶಿಲ್ಪರಚನೆಯ ಅನುಕರಣೆಯಂತೆ ಕಾಣುತ್ತದೆ. ಇದು ವಿಜಯನಗರದ ಆರಂಭ ಕಾಲಕ್ಕೆ ಸೇರಿದ್ದೆಂದು ಹೇಳಬಹುದು. ಇಲ್ಲಿಯ ಪರವಾಸುದೇವ ವಿಗ್ರಹ ಸುಂದರವೂ ಸರಳವೂ ಆಗಿದೆ. ತಲೆಯ ಮೇಲ್ಭಾಗದಲ್ಲಿ ಬಿಚ್ಚಿರುವ ಹೆಡೆಯುಳ್ಳ ಆದಿಶೇಷನ ಸುರುಳಿಯ ಮೇಲೆ ಶಂಖಚಕ್ರ ಧಾರಿಯಾದ ವಾಸುದೇವ ಸುಖಾಸೀನನಾಗಿದ್ದಾನೆ. ಪರವಾಸುದೇವನ ಉತ್ಸವಮೂರ್ತಿಯೂ ಒಳ್ಳೆಯ ಶಿಲ್ಪ. ಹಸ್ತಿನಾವತಿಯಲ್ಲಿದ್ದ ಈ ವಿಗ್ರಹವನ್ನು ಶಿವಸಮುದ್ರಕ್ಕೆ ತಂದು ಅನಂತರ ಇಲ್ಲಿಗೆ ತರಲಾಯಿತೆಂದು ಪ್ರತೀತಿ.



ಪರವಾಸುದೇವ, ಗುಂಡ್ಲುಪೇಟೆಯಲ್ಲಿರುವ ಪರವಾಸುದೇವ ದೇವಾಲಯದಲ್ಲಿನ ಒಂದು ಸುಂದರ ಶಿಲ್ಪ

ಈ ದೇವಾಲಯಕ್ಕೆ ಒಂದೂವರೆ ಕಿಮೀ ಈಶಾನ್ಯದಲ್ಲಿ ರಾಮೇಶ್ವರ ದೇವಾಲಯವಿದೆ. ಈಗ ಶಿಥಿಲವಾಗಿರುವ ಈ ಗುಡಿಯನ್ನು 1337ರಲ್ಲಿ ಕುಮಾರ ಕಂಪಣ್ಣನೆಂಬುವನು ಕಟ್ಟಿಸಿದ. ಇದರ ರಚನೆ ತಲಕಾಡಿನ ವೈದ್ಯೇಶ್ವರ ದೇವಾಲಯ ದಂತಿದೆ. ಚೌಕಟ್ಟಾದ ಗರ್ಭಗೃಹ, ಸುಕನಾಸಿ, ನಾಲ್ಕು ಕಂಬಗಳಿರುವ ನವರಂಗ ಮತ್ತು ಪೂರ್ವ ಹಾಗೂ ದಕ್ಷಿಣ ದಿಕ್ಕುಗಳಲ್ಲಿ ಕೈಸಾಲೆ ಹಾಗೂ ಪ್ರವೇಶ ದ್ವಾರಗಳಿವೆ. ಈ ದೇವಾಲಯವನ್ನು ಕಣಶಿಲೆಯಿಂದ ಕಟ್ಟಿ ಗೋಪುರವನ್ನು ಮಾತ್ರ ಇಟ್ಟಿಗೆಯಿಂದ ರಚಿಸಲಾಗಿದೆ. ದೇವಾಲಯದ ಅಧಿಷ್ಠಾನ ಪಟ್ಟಿಕೆಗಳ ಮೇಲೆ ಅನೇಕ ಕನ್ನಡ ಶಾಸನಗಳಿವೆ.

(ಎಂ.ಎಸ್.ಕೆ.)

**ಗುಂತಗೋಳ ಪಾಳೆಯಗಾರರು :** 1491-1948. ಮೂಲತಃ ಕಂಚಿಯಿಂದ ಬಂದ ಇವರು ಬಿಜಾಪುರದ ಆದಿಲ್‌ಶಾಹಿಗಳ ಆಡಳಿತಾವಧಿಯಲ್ಲಿ (1489-1686) ಒಂದು ಸಂಸ್ಥಾನವನ್ನು ಸ್ಥಾಪಿಸಿ ಬ್ರಿಟಿಷ್ ಮತ್ತು ಹೈದರಾಬಾದ್ ನಿಜಾಮರ

ದಬ್ಬಾಳಿಕೆಯ ಮಧ್ಯೆ ಸಮರ್ಥವಾಗಿ ಆಳಿಕೆ ನಡೆಸಿದ್ದರು. ಗುಂತಗೋಳ ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನಿಂದ 30 ಕಿಮೀ ದೂರದಲ್ಲಿದೆ.

ಇವರ ಮೊದಲ ರಾಜಧಾನಿ ಜಲದುರ್ಗ. ಅನಂತರ ಗುಂತಗೋಳಕ್ಕೆ ಬಂದು ನೆಲೆಸಿದರು. ಈ ಸ್ಥಳೀಯ ಪ್ರಭುಗಳ ಮೂಲಪುರುಷ ಕಾಳಭೈರವನಾಯಕ. ಇವನ ಅನಂತರ ಅಮರಪ್ಪನಾಯಕ, ಬಸಪ್ಪನಾಯಕ, ಶ್ರೀನಿವಾಸನಾಯಕ, ರಾಯಪ್ಪನಾಯಕ, ನರಸಿಂಹನಾಯಕ ಆಳಿಕೆ ಮಾಡಿದರು. ಇವರಿಗೆ ಬಹರಿಬಹಾದ್ದೂರ್, ನಾಯಕಾಚಾರ್ಯ, ಮಹಾನಾಯಕ ಎಂಬ ಬಿರುದುಗಳನ್ನು ಆದಿಲ್‌ಶಾಹಿಗಳು ನೀಡಿದ್ದರು. ಇವರ ಆಡಳಿತಕ್ಕೆ ಸು. 130 ಹಳ್ಳಿಗಳು ಸೇರಿದ್ದವು. ಪಾಟೀಲ, ಕುಲಕರ್ಣಿ, ನಾಡಗೌಡ, ದೇಸಾಯಿ ಎಂಬ ಅಧಿಕಾರಿಗಳು ಸ್ಥಳೀಯ ಆಡಳಿತವನ್ನು ನಿರ್ವಹಿಸುತ್ತಿದ್ದರು. ಇವರಲ್ಲಿ ಕಾಲಾಪುರದ ನಾಡಗೌಡರು, ನೀರಲಕೇರಿಯ ನಾಡಗೌಡರು, ಬೆಲ್ಲದ ಮರಡಿಯ ದೇಸಾಯಿಗಳು ಪ್ರಮುಖರಾಗಿದ್ದರು.

ಇವರ ಕುಲದೇವರು ಕಂಚಿಯ ಏಕಾಮ್ರೇಶ್ವರ. ಆರಾಧ್ಯದೈವ ಗೋನಾವಾಟ್ಲದ ವೇಣುಗೋಪಾಲ. ಇವರ ರಾಜಗುರುಗಳು ದೇವರಭೂಪೂರದ ಜಗದಂಡ ಮಹಾಸ್ವಾಮಿಗಳು. ಚಿತ್ತರಗಿ ಇಳಕಲ್ಲು ಮಹಾಂತಸ್ವಾಮಿಗಳ ಮಠ, ಶ್ರೀ ಹಿರೇಮಠ, ಶ್ರೀಕಿದ್‌ಮತಿಮಠಗಳಿಗೆ ಭಕ್ತರಾಗಿದ್ದರು. ರಾಜಾ ರಾಯಪ್ಪನಾಯಕ ಆಧ್ಯಾತ್ಮಿಕ ಪುರುಷನೂ ನರಸಿಂಹನಾಯಕ ಕಲಾಪ್ರೇಮಿಯೂ ಅಮರೇಶ್ವರ ಕಲಾ ಸಂಘವನ್ನು ಹುಟ್ಟು ಹಾಕಿದ. ಇವನ ಆಸ್ಥಾನದಲ್ಲಿ ಬಸಣ್ಣ ಜಾವೂರ ಎಂಬ ಪ್ರಸಿದ್ಧ ರಂಗ ಕಲಾವಿದನಿದ್ದ. ಅಮರೇಶ್ವರ, ಗೋನವಾಟ್ಲದ ಗೋಪಾಲಸ್ವಾಮಿ, ಮಾಳಗುಂಡಮ್ಮ, ವೀರಯೋಧ, ಕಾಳಭೈರವ, ಶರಣ ಗಂಗಪ್ಪಯ್ಯ ಮೊದಲಾದ ದೇವಾಲಯಗಳನ್ನು, ಅಮರೇಶ್ವರ ಬಾವಿ, ದರ್ಬಾರ ಬಾವಿ, ರಾಜರ ಕೆರೆ, ಗಿರಿಸೀಮೆ ಕೆರೆಗಳನ್ನು ನಿರ್ಮಿಸಿದ. ಇವನ ಸುಸಜ್ಜಿತವಾದ ಅರಮನೆಯನ್ನು ಗುಂತಗೋಳದಲ್ಲಿ ಇಂದಿಗೂ ಕಾಣಬಹುದು. ಈ ಪ್ರಭುಗಳು ಕೋಟೆಯನ್ನು ನಿರ್ಮಿಸಿದ್ದರು. ಕೋಟೆಯ ಕಾವಲುಗಾರನ ಹೆಂಡತಿ ಮಾಳಗುಂಡಮ್ಮಳೆಂಬ ಮಹಿಳೆ ಸಂಸ್ಥಾನದ ರಕ್ಷಣೆಗಾಗಿ ಹೋರಾಡಿ ಮಡಿದ ಕತೆ ಜನಪದ ಸಾಹಿತ್ಯದಲ್ಲಿ ಜನಜನಿತವಾಗಿದೆ. ಈ ವಂಶಸ್ಥರು ಗುಡಗುಂಟಿ, ಗುಂತಗೋಳದಲ್ಲಿ ಇಂದಿಗೂ ನೆಲೆಸಿದ್ದಾರೆ.

**ಗುಂಥರ್, ಜಾನ್ :** 1901–70. ಹೆಸರಾಂತ ಗ್ರಂಥಕರ್ತ, ಅಮೆರಿಕದ ಪತ್ರಿಕೋದ್ಯಮಿ. ಷಿಕಾಗೋ ನಗರದಲ್ಲಿ 1901ರ ಆಗಸ್ಟ್ 30ರಂದು ಹುಟ್ಟಿದ. ಅದೇ ಊರಿನ ಪಬ್ಲಿಕ್ ಸ್ಕೂಲಿನಲ್ಲಿ ವಿದ್ಯಾಭ್ಯಾಸವಾಯಿತು. ಆಗಿನಿಂದಲೇ ಬರೆಯುವ ಹವ್ಯಾಸಕ್ಕೆ ಬಿದ್ದು ಡೆಯ್ಲಿಮರೂನ್ ಎಂಬ ಶಾಲಾಪತ್ರಿಕೆಯ ಸಂಪಾದಕನೂ ಆಗಿದ್ದ. ರಷ್ಯದ ಕ್ರಾಂತಿಯನ್ನು ಕುರಿತು ಈತ ಬರೆದ ಲೇಖನಗಳು ಪತ್ರಿಕೆಯಲ್ಲಿ ಪ್ರಕಟವಾದವು. ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಬುಕ್‌ಮನ್ ಮತ್ತು ಸ್ಮಾರ್ಟ್ ಸೆಟ್ ಎಂಬ ಜನಪ್ರಿಯ ಮಾಸಿಕಗಳ ಪ್ರತಿಸಂಚಿಕೆಯುಲ್ಲೂ ಈತನ ಲೇಖನಗಳು ಇರುತ್ತಿದ್ದುವು. ಷಿಕಾಗೋ ವಿಶ್ವವಿದ್ಯಾಲಯದ ಪದವೀಧರನಾದ ಮೇಲೆ 1924ರಲ್ಲಿ ಷಿಕಾಗೋ ಡೆಯ್ಲಿನ್ಯೂಸ್ ಪತ್ರಿಕೆಯ ಲಂಡನ್ ಶಾಖೆಯಲ್ಲಿ ವರದಿಗಾರನಾಗಿ ನೇಮಕಗೊಂಡು ಇಂಗ್ಲೆಂಡಿಗೆ ಪಯಣ ಬೆಳೆಸಿದ. ಪ್ರತಿಭೆ ಹಾಗೂ ಲೇಖನಸಾಮರ್ಥ್ಯಗಳು ಪ್ರಕಾಶವಾಗುವಂಥ ಅನುಕೂಲವಾದ ಸಂದರ್ಭಗಳೇ ಒದಗಿ ಬಂದುದರಿಂದ ಗುಂಥರನ



ಅದೃಷ್ಟ ಕುದುರಿತು. ಇಂಗ್ಲೆಂಡ್ ಮತ್ತು ಯುರೋಪ್‌ಗಳಲ್ಲಿನ ಪ್ರಮುಖ ರಾಜಧಾನಿಗಳಲ್ಲಿ 1924 ರಿಂದ 1936ರ ವರೆಗಿನ ಹನ್ನೆರಡು ವರ್ಷಕಾಲ ಡೆಯ್ಲಿನ್ಯೂಸ್ ಪತ್ರಿಕೆಯ ವರದಿಗಾರನಾಗಿ ಕೆಲಸಮಾಡಿದ. ಈತ ಬರ್ಲಿನ್, ವಿಯನ್ನ, ಮಾಸ್ಕೊ, ರೋಮ್, ಪ್ಯಾರಿಸ್ ಮುಂತಾದ ಪ್ರಮುಖ ಕೇಂದ್ರಗಳಲ್ಲಿರುವಾಗಲೇ ಜಾಗತಿಕ ಭವಿಷ್ಯವನ್ನೇ ಬದಲಾಯಿಸುವಂಥ ರಾಜಕೀಯ ಸನ್ನಾಹಗಳು ಯುರೋಪಿನಲ್ಲಿ ನಡೆದಿದ್ದವು. ಅನುಕೂಲವಾದ ಸನ್ನಿವೇಶಗಳಲ್ಲಿ ಜನನಾಯಕರಾಗಿ ಮೇಲೆ ಬಂದು ಪ್ರಚಂಡ ಸರ್ವಾಧಿಕಾರಿಗಳಾಗಿದ್ದ ಹಿಟ್ಲರ್, ಮುಸ್ಸೋಲಿನಿ, ಸ್ಟ್ಯಾಲಿನ್ – ಈ ತ್ರಿಮೂರ್ತಿಗಳ ಬಗ್ಗೆ ತಿಳಿಯಲು ಇಡೀ ಜಗತ್ತೇ ಅತ್ಯಂತ ಕುತೂಹಲಿಯಾಗಿತ್ತು. ಎರಡನೆಯ ಮಹಾಯುದ್ಧದ ಆಸ್ಫೋಟನೆಗೆ ಸಿದ್ಧವಾಗುತ್ತಿದ್ದ ಯುರೋಪಿನ ಮಹತ್ತರ ರಾಜಕೀಯ ಪರಿಸ್ಥಿತಿಯನ್ನೆಲ್ಲ ಪ್ರತ್ಯಕ್ಷದರ್ಶಿಯಾಗಿ ವರದಿಮಾಡುವ ವಿಶೇಷ ಅವಕಾಶ ಗುಂಥರನಿಗೆ ದೊರಕಿತು. ಈ ಸಂಬಂಧವಾಗಿ ಪೋರ್ಚುಗಲ್ ಒಂದು ಬಿಟ್ಟು ಉಳಿದೆಲ್ಲ ಭಾಗಗಳಲ್ಲೂ ಈತ ಪ್ರವಾಸ ಮಾಡಬೇಕಾಗಿ ಬಂತು. ಆಗ ಸಂಗ್ರಹಿಸಿದ ಸುದ್ದಿ ಸಮಾಚಾರಗಳನ್ನೇ ರುಚಿಗಟ್ಟಾದ ಶೈಲಿಯಲ್ಲಿ ಮಿತ್ರ ಸಂಭಾಷಣೆಯಷ್ಟು ಸರಸವಾಗಿ ಇನ್‌ಸೈಡ್ ಯುರೋಪ್ ಎಂಬ ತನ್ನ ಬೃಹತ್ ಗ್ರಂಥದಲ್ಲಿ ಗುಂಥರ್ ನೆಯ್ದಿದ್ದಾನೆ (1936). ರಾಜಕೀಯ ಸಂಗತಿಗಳನ್ನು ವಿಶ್ಲೇಷಿಸಿ ಅನೇಕ ರಹಸ್ಯಗಳನ್ನೂ ಮುಂದಿನ ಆಗು ಹೋಗುಗಳನ್ನೂ ಸಮಂಜಸವಾಗಿ ಊಹಿಸುವಂಥ ಈ ರಂಜಕವಾದ ಪುಸ್ತಕ ಪ್ರಕಟವಾದ ಕೂಡಲೇ ಪ್ರಚಂಡ ಲೋಕಪ್ರಿಯತೆಯನ್ನು ಪಡೆಯಿತು. ಇದರ ಸುಮಾರು ಐದುಲಕ್ಷ ಪ್ರತಿಗಳು ಮಾರಾಟವಾದವು. ಜಗತ್ತಿನ ಹದಿನಾಲ್ಕು ಮುಖ್ಯ ಭಾಷೆಗಳಿಗಿದು ಅನುವಾದಗೊಂಡಿತು.

ಇದೇ ಅವಧಿಯಲ್ಲಿ ಗುಂಥರನ ಮದುವೆ ಆಯಿತು. ಗುಂಥರ್ ತುಂಬ ಸರಸಿ, ಸ್ನೇಹಶೀಲ. ಒಳ್ಳೆಯ ಆರೋಗ್ಯಭಾಗ್ಯವನ್ನು ಪಡೆದಿದ್ದ. ಭೋಜನ, ಪೇಯಗಳಲ್ಲಿ ರಸಜ್ಞನೆನಿಸಿದ್ದ.

ಪತ್ರಿಕಾವೃತ್ತಿಯಲ್ಲಿ ಬಂದ ಯಶಸ್ಸಿನ ಪರಿಣಾಮವಾಗಿ ಅನೇಕ ಕಡೆಗಳಿಂದ ಗುಂಥರನಿಗೆ ಕೆಲಸದ ಕರೆ ಬರತೊಡಗಿದವು. ಬಾನುಲಿ ಬಾತ್ಮೀದಾರನಾಗಿ, ಸಮರದ ಸುದ್ದಿಗಾರನಾಗಿ ಗುಂಥರ್ ಕೆಲಕಾಲ ಪ್ರಪಂಚ ಪರ್ಯಟನೆ ಮಾಡಿಬಂದ. ಇನ್‌ಸೈಡ್ ಯುರೋಪ್ ಮಾದರಿಯಲ್ಲೇ ಏಷ್ಯ ರಾಜಕೀಯ ಪರಿಸ್ಥಿತಿಯನ್ನೂ ವರ್ಣರಂಜಕವಾಗಿ ಚಿತ್ರಿಸಿ ಇನ್‌ಸೈಡ್ ಏಷ್ಯ ಎಂಬ ಪುಸ್ತಕವನ್ನು ಬರೆದ (1939). ಇದೇ ಸರಣಿಯಲ್ಲಿ ಇನ್‌ಸೈಡ್ ಲ್ಯಾಟಿನ್ ಅಮೆರಿಕ (1941) ಇನ್‌ಸೈಡ್ ಯು. ಎಸ್. ಎ. (1947), ಇನ್‌ಸೈಡ್ ರಷ್ಯ ಟು ಡೇ (1958), ಇನ್‌ಸೈಡ್ ಯುರೋಪ್ ಟು ಡೇ (1961) ಎಂಬ ಪುಸ್ತಕಗಳು ಇವನ ಲೇಖನಿಯಿಂದ ಹೊರಬಂದುವು. ಈ ಸರಣಿಯ ಪುಸ್ತಕಗಳು ಪಡೆದಷ್ಟು ಜನಪ್ರಿಯತೆಯನ್ನು ಈತನೇ ಬರೆದ ಕಾದಂಬರಿ, ಜೀವನಚರಿತ್ರೆ ಮುಂತಾದ ಹಲವಾರು ಇತರ ಪುಸ್ತಕಗಳು ಪಡೆಯಲಿಲ್ಲ. ಎ ಫ್ರ್ಯಾಗ್ಮೆಂಟ್ ಆಫ್ ಆಟೊಬಯಾಗ್ರಫಿ (1962) ಎಂಬುದು ಈತನ ಆತ್ಮಕಥೆ. ಈ ಪುಸ್ತಕ ಮತ್ತು ಡೆತ್ ಬಿ ನಾಟ್ ಪ್ರೌಡ್ ಎಂಬ ಪುಸ್ತಕ ತುಂಬ ಆತ್ಮೀಯವೂ ಹೃದಯಂಗಮವೂ ಆಗಿ ಗುಂಥರನ ವ್ಯಕ್ತಿತ್ವವನ್ನು ನಿರೂಪಿಸುತ್ತವೆ. 1964ರಲ್ಲಿ ದಿ ಲಾಸ್ಟ್ ಸಿಟಿ ಎಂಬ ಪುಸ್ತಕವನ್ನೂ 1965ರಲ್ಲಿ ಪ್ರೊಸೆಷನ್ ಎಂಬ ಪುಸ್ತಕವನ್ನೂ ಈತ ಬರೆದ. ಅನುಭವದ ಪರಿಪಕ್ವತೆಯನ್ನು ಈ ಕೃತಿಗಳಲ್ಲಿ ಕಾಣಬಹುದು. ವೃದ್ಧಾಪ್ಯದಲ್ಲಿ ನ್ಯೂಯಾರ್ಕ ನಗರದಲ್ಲಿದ್ದುಕೊಂಡು ಗುಂಥರ್ ಬ್ರಿಟಿಷ್, ಅಮೆರಿಕನ್ ಮತ್ತು ಯುರೋಪಿಯನ್ ಅಗ್ರಪತ್ರಿಕೆಗಳಿಗೆ ಕಾಲೋಚಿತ ಲೇಖನಗಳನ್ನು ಬರೆದ. ಈತ 1970ರ ಮೇ 29ರಂದು ನ್ಯೂಯಾರ್ಕ್‌ನಲ್ಲಿಯೆ ನಿಧನನಾದ.

ಪತ್ರಿಕೋದ್ಯಮದಲ್ಲಿ ಈತನಷ್ಟು ಲೋಕವಿಖ್ಯಾತಿಯನ್ನು ಪಡೆದ ಭಾಗ್ಯಶಾಲಿಗಳು ಅಪೂರ್ವ. (ಕೆ.ಬಿ.ಪಿ.)

**ಗುಂಥರ್, ಯೋಹಾನ್ ಕ್ರಿಶ್ಚನ್ :** 1695–1723. 18ನೆಯ ಶತಮಾನದ ಆದಿಯಲ್ಲಿದ್ದ ಜರ್ಮನ್ ಕವಿ. ಉತ್ತಮ ಭಾವಗೀತೆಗಳನ್ನು ಬರೆದು ಹೆಸರಾದವ. ಸೈಲೀಸಿಯದ ಸ್ಟ್ರೀಗನ್‌ನಲ್ಲಿ ಹುಟ್ಟಿದ ಈತ ವೈದ್ಯನ ಮಗ. ತನ್ನ ವೃತ್ತಿಯನ್ನೇ ಮಗನೂ ಅವಲಂಬಿಸಲೆಂದು ತಂದೆ ಈತನನ್ನು ವೈದ್ಯಶಿಕ್ಷಣಕ್ಕಾಗಿ ವಿಟ್ಟೆನ್ ಬರ್ಗ್ ಕಾಲೇಜಿಗೆ ಕಳಿಸಿದ. ಗುಂಥರನಿಗಾದರೊ ಸಾಹಿತ್ಯದ ಕಡೆಗೇ ಒಲವು; ವೈದ್ಯಕೀಯ ಅಧ್ಯಯನದಲ್ಲಿ ಎಳ್ಳಷ್ಟೂ ಆಸಕ್ತಿ ಯಿರಲಿಲ್ಲ. ಈತನಲ್ಲಿ ಸಹಜವಾಗಿದ್ದ ಕಾವ್ಯ ಪ್ರತಿಭೆ ಪ್ರಕಟವಾಗತೊಡಗಿತು. ಭಗ್ನ ಪ್ರೇಮವನ್ನೇ ವಸ್ತುವನ್ನಾಗಿ ಮಾಡಿಕೊಂಡು ಅನೇಕ ಸುಂದರ ಭಾವಗೀತೆಗಳನ್ನು ರಚಿಸಿದ.

ಅಧ್ಯಯನದಲ್ಲಿ ಬೇಸರ ಹೊಂದಿದ್ದ ಈತನ ಮನಸ್ಸು ವಿಲಾಸ ಜೀವನದ ಕಡೆ ತಿರುಗಿತು. ಅನೇಕ ದುಶ್ಚಟಗಳು ಅಂಟಿಕೊಂಡವು. ಓದಿನಲ್ಲಿ ಯಾವ ಪ್ರಗತಿಯನ್ನೂ ಸಾಧಿಸದೆ 2 ವರ್ಷ ವ್ಯರ್ಥವಾಗಿ ಕಳೆದ ಮೇಲೆ ಲೀಪ್ಜಿಗ್ ನಗರಕ್ಕೆ ತೆರಳಿದ. ಅಲ್ಲಿ ಈತನ ಕವಿತಾ ಸಾಮರ್ಥ್ಯವನ್ನು ಗುರುತಿಸಿದ ಹಿರಿಯ ಸಾಹಿತಿ ಜೆ. ಬಿ. ಮೆಂಕೆಯ ಸ್ನೇಹವಾಗಿ ಅವನಿಂದ ಅಪಾರ ಪ್ರೋತ್ಸಾಹ ದೊರೆಯಿತು. ದಿ ಪೀಸ್ ಆಫ್ ಪಾಸರೋವಿಟ್ಸ್ ಎಂಬ ಕವಿತೆ (1718) ಈತನಿಗೆ ಹೆಚ್ಚಿನ ಗೌರವವನ್ನು ತಂದಿತು. ಮೆಂಕೆ ಪ್ರತಿಭಾಶಾಲಿಯಾದ ಈ ಕವಿಗೆ ಪೋಲೆಂಡಿನ ದೊರೆ ಎರಡನೆಯ ಅಗಸ್ಟಸ್‌ನ ಕೃಪಾಶ್ರಯವನ್ನು ದೊರಕಿಸಿಕೊಡಲು ಪ್ರಯತ್ನಿಸಿದ. ಆದರೆ ಕವಿಯ ಚಾರಿತ್ರ್ಯದ ಬಗ್ಗೆ ಆರೋಪಗಳನ್ನು ಕೇಳಿದ್ದ ರಾಜ ತನ್ನ ಕೃಪಾದೃಷ್ಟಿ ಹರಿಸಲಿಲ್ಲ. ಇದರಿಂದಾಗಿ